ಮಂಗಳವಾರ, ಜನವರಿ 2, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 2 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಾಲ ಮರಳಿ ಕೇಳಿದ ಪರಿಶಿಷ್ಟನ ಮೇಲೆ ಹಲ್ಲೆ 7

ಮೈಸೂರಿನ 'ಬಾಲರಾಮ'ನಿಗೆ ಪಟ್ಟ? 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,271 ▲	21,741 ▲	₹65,260 (ಬೆಂಗಳೂರು) ▲	₹75,800 (ಬೆಂಗಳೂರು)	83.21 ▼

ರಾಮನ್ ಸಂಶೋಧನಾ ಸಂಸ್ಥೆ–ಇಸ್ರೊದಿಂದ ಜಂಟಿ ಯತ್ನ • ಎಕ್ಸ್‌ಪೊಸ್ಯಾಟ್ ಉಡಾವಣೆ ಯಶಸ್ವಿ

ಕಪ್ಪುರಂಧ್ರ ಅಧ್ಯಯನಕ್ಕೆ ಮುನ್ನುಡಿ

ಶ್ರೀಹರಿಕೋಟ (ಆಂಧ್ರಪ್ರದೇಶ) (ಪಿಟಿಐ): ಬಾಹ್ಯಾಕಾಶದಲ್ಲಿ ಸೂಪರ್‌ನೋವಾ ಸ್ಫೋಟದ ಬಳಿಕ ಉಳಿಯುವ ನಕ್ಷತ್ರಗಳು, ನ್ಯೂಟ್ರಾನ್ ನಕ್ಷತ್ರಗಳು ಮತ್ತು ಕಪ್ಪುರಂಧ್ರಗಳ ಕುರಿತ ಅಧ್ಯಯನಕ್ಕೆ ಎಕ್ಸ್‌ಪೊಸ್ಯಾಟ್ (ಎಕ್ಸ್‌–ರೇ ಪೋಲಾರಿಮೆಟ್ರಿ ಉಪಗ್ರಹ) ಉಡಾವಣೆಯಲ್ಲಿ ಇಸ್ರೊ ಯಶಸ್ಸು ಕಂಡಿದೆ. ಈ ಮೂಲಕ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಹೊಸ ವರ್ಷದ ಸಂಭ್ರಮವನ್ನು ಆಚರಿಸಿದೆ.

ಬೆಂಗಳೂರಿನ ರಾಮನ್ ಸಂಶೋಧನಾ ಸಂಸ್ಥೆಯು ಎಕ್ಸ್‌–ರೇ ಪೋಲಾರಿಮೆಟ್ರಿ ಸಾಧನವನ್ನು ಅಭಿವೃದ್ಧಿಪಡಿಸಿದೆ. ಈ ಉಪಗ್ರಹದ ಯಶಸ್ವಿ ಉಡಾವಣೆಯ ಮೂಲಕ, ಕಪ್ಪುರಂಧ್ರಗಳು, ನ್ಯೂಟ್ರಾನ್ ನಕ್ಷತ್ರಗಳ ಸಂಶೋಧನೆಗೆ ಮುಂದಾಗಿರುವ 2ನೇ ದೇಶ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಗಿದೆ.

ಇಸ್ರೊ ಪಾಲಿನ ವಿಶ್ವಾಸಾರ್ಹ ಉಡಾವಣಾ ವಾಹನ ಪಿಎಸ್‌ಎಲ್‌ವಿ ಬೆನ್ನೇರಿ ಸಾಗಿದ ಉಪಗ್ರಹಗಳ ಪೈಕಿ ಮಹಿಳೆಯರೇ ಸಿದ್ಧಪಡಿಸಿದ ಒಂದು ಉಪಗ್ರಹ ಕೂಡ ಸೇರಿದೆ. ಇದು ದೇಶದ ಪಾಲಿಗೆ ಒಂದು ಸ್ಫೂರ್ತಿ ಎಂದು ಇಸ್ರೊ ಹೇಳಿದೆ. ಎಕ್ಸ್‌ಪೊಸ್ಯಾಟ್ ಉಪಗ್ರಹವನ್ನು ಹೊತ್ತ ಪಿಎಸ್‌ಎಲ್‌ವಿ–ಸಿ58, ಉಪಗ್ರಹವನ್ನು ಭೂಮಿಯಿಂದ 650 ಕಿ.ಮೀ. ಎತ್ತರದಲ್ಲಿನ ಕಕ್ಷೆಗೆ ಸೇರಿಸಿತು.

ಎಕ್ಸ್‌ಪೊಸ್ಯಾಟ್ ಉಪಗ್ರಹವು ಬಾಹ್ಯಾಕಾಶದಲ್ಲಿನ ಎಕ್ಸ್‌–ರೇ ಮೂಲಗಳ ವರ್ತನೆಯ ಕುರಿತು ಅಧ್ಯಯನ ನಡೆಸುವ ಉದ್ದೇಶವನ್ನೂ ಹೊಂದಿದೆ. ಇಂತಹ ಸಂಶೋಧನೆಗೆ ಇಸ್ರೊ ಹಾರಿಬಿಟ್ಟಿರುವ ಮೊದಲ ಉಪಗ್ರಹ ಇದು. ಈ ಬಗೆಯ ಸಂಶೋಧನೆಯನ್ನು ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನಾಸಾ 2021ರ ಡಿಸೆಂಬರ್‌ನಲ್ಲಿ ಕೈಗೊಂಡಿತ್ತು.

5ನೇ ಪುಟ ನೋಡಿ

ಮುಖ್ಯಾಂಶಗಳು

- ಬ್ರಹ್ಮಾಂಡದ 50 ಸಂಭಾವ್ಯ ಮೂಲಗಳಿಂದ ಹೊರ ಹೊಮ್ಮುವ ಮತ್ತು ಧ್ರುವೀಕರಣಗೊಳ್ಳುವ ಕ್ಷಕಿರಣಗಳ ಅಧ್ಯಯನ
- 469 ಕೆ.ಜಿ ತೂಕದ ಈ ಉಪಗ್ರಹದ ಕಾರ್ಯಾವಧಿ 5 ವರ್ಷಗಳು
- ಬಾಹ್ಯಾಕಾಶದಲ್ಲಿ ಮೂರನೇ ಅಧ್ಯಯನದ ಯೋಜನೆ



ಪಿಎಸ್‌ಎಲ್‌ವಿ ಸಿ 58 ಉಪಗ್ರಹ ಉಡಾವಣಾ ವಾಹನವು ಶ್ರೀಹರಿಕೋಟದ ಬಾಹ್ಯಾಕಾಶ ಕೇಂದ್ರದಿಂದ ಆಕಾಶಕ್ಕೆ ಚಿಮ್ಮಿದ ಕ್ಷಣ ಪಿಟಿಐ ಚಿತ್ರ

ಯಶಸ್ವಿ ಉಡಾವಣೆಯ 3 ಹಂತಗಳು

1. ಶ್ರೀಹರಿಕೋಟದ ಬಾಹ್ಯಾಕಾಶ ಕೇಂದ್ರದಿಂದ ನಭಕ್ಕೆ ಚಿಮ್ಮಿದ ಉಡಾವಣಾ ವಾಹನವು 21 ನಿಮಿಷಗಳಲ್ಲಿ ಭೂಮಿಯಿಂದ 650 ಕಿ.ಮೀ. ಎತ್ತರದ ನಿಗದಿತ ಕಕ್ಷೆಗೆ ಎಕ್ಸ್‌ಪೊಸ್ಯಾಟ್ ಉಪಗ್ರಹವನ್ನು ಸೇರಿಸಿತು
2. ಆ ಬಳಿಕ ನಭದಲ್ಲೇ ವೈಜ್ಞಾನಿಕ ಪ್ರಯೋಗಗಳನ್ನು ನಡೆಸುವ ಉದ್ದೇಶದ ಮತ್ತೊಂದು ಉಪಗ್ರಹವನ್ನು ಅಲ್ಲಿಂದ ಕೆಳಕ್ಕೆ ಅಂದರೆ, ಭೂಮಿಯಿಂದ 350 ಕಿ.ಮೀ ಎತ್ತರದ ಕಕ್ಷೆಯಲ್ಲಿ ನೆಲೆಗೊಳಿಸಿತು
3. ಅತ್ಯಂತ ಸಂಕೀರ್ಣ ಎನಿಸಿರುವ ಈ ಪ್ರಡಕ್ರಿಯೆಯ ಮೂಲಕ ಉಡಾವಣಾ ವಾಹನದ ನಾಲ್ಕನೇ ಹಂತವನ್ನು ಚಾಲನೆಗೊಳಿಸಿ, ಬಳಿಕ ಕೆಳ ಹಂತದ ಕಕ್ಷೆಗೆ ಇಳಿಸಲಾಯಿತು

ರಾಮನ್ ಸಂಸ್ಥೆಯ ನಂಟು

ಸೂಪರ್‌ನೋವಾ ಅಂದರೆ ನಕ್ಷತ್ರವೊಂದು ಸಿಡಿಯುವ ಹಂತ. ಆ ನಕ್ಷತ್ರ ಸಿಡಿದ ಬಳಿಕ ಉಳಿಯುವ ತಿರುಳಿನಿಂದ ಒಂದೋ ಕಪ್ಪು ರಂಧ್ರ, ಇಲ್ಲವೇ ನ್ಯೂಟ್ರಾನ್ ನಕ್ಷತ್ರ ಸೃಷ್ಟಿಯಾಗುತ್ತದೆ. ಈ ಖಗೋಳ ವಿದ್ಯಮಾನಗಳನ್ನು ಅಧ್ಯಯನ ಮಾಡುವುದೇ ಭಾರತದ ಗುರಿ. ರಾಮನ್ ಸಂಶೋಧನಾ ಸಂಸ್ಥೆ ಇದರ ಅಧ್ಯಯನಕ್ಕಾಗಿ ಎಕ್ಸ್‌–ರೇ ಪೋಲಾರಿಮೆಟ್ರಿ ಉಪಗ್ರಹವನ್ನು ಅಭಿವೃದ್ಧಿಪಡಿಸಿದೆ.

ಅಮೆರಿಕಾದ ನಾಸಾ ಹೊರತುಪಡಿಸಿದರೆ ಬೇರೆ ಯಾವುದೇ ದೇಶ ಈ ಸಾಹಸಕ್ಕೆ ಕೈಹಾಕಿಲ್ಲ. ಚಂದ್ರಯಾನ–3, ಆದಿತ್ಯ ಎಲ್–1 ಬಳಿಕ ಇದು (ಎಕ್ಸ್‌ಪೊಸ್ಯಾಟ್) ಮೂರನೇ ಖಗೋಳ ವಿಜ್ಞಾನ ಅಧ್ಯಯನ ಯೋಜನೆ. ಈ ಮೂಲಕ ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಸಾಮರ್ಥ್ಯವನ್ನು ವಿಶ್ವಕ್ಕೆ ಪರಿಚಯಿಸುವ ಕೆಲಸ ನಡೆದಿದೆ ಎಂದು ಇಸ್ರೊ ವಿಜ್ಞಾನಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

5ನೇ ಪುಟ ನೋಡಿ

ಭೂಕಂಪ... ಜಪಾನ್‌ನಲ್ಲಿ ಸೋಮವಾರ ಸಂಭವಿಸಿದ ಸರಣಿ ಭೂಕಂಪನದಿಂದಾಗಿ ಕರಾವಳಿ ಭಾಗದ ವಾಜಿಮಾದಲ್ಲಿ ರಸ್ತೆ ಬಿರುಕುಬಿಟ್ಟಿದೆ. ಭೂಕುಸಿತವಾಗಿದೆ –ಎಎಫ್‌ಪಿ ಚಿತ್ರ

ವರದಿ ಪುಟ 11

ಡಿ.31: ₹193 ಕೋಟಿ ಮೌಲ್ಯದ ಮದ್ಯ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೊಸ ವರ್ಷದ ಸಂಭ್ರಮಾಚರಣೆಯ ದಿನವಾದ ಭಾನುವಾರ (ಡಿ. 31) ಒಂದೇ ದಿನ ₹193 ಕೋಟಿ ಮೌಲ್ಯದ ಮದ್ಯ ಮಾರಾಟವಾಗಿದೆ.

ಬೆಲೆ ಏರಿಕೆ ಮಧ್ಯೆಯೂ ಪಾನಪ್ರಿಯರು ದೊಡ್ಡ ಸಂಖ್ಯೆಯಲ್ಲಿ ಮದ್ಯ ಖರೀದಿಸಿದ್ದಾರೆ. ದೇಶೀಯವಾಗಿ ತಯಾರಾದ (ಐಎಂಎಲ್) ಒಟ್ಟು 26.61 ಲಕ್ಷ ಲೀಟರ್ ಮದ್ಯ (3.07 ಲಕ್ಷ ಬಾಕ್ಸ್), 15.21 ಲಕ್ಷ ಲೀಟರ್ ಬಿಯರ್ (1.95 ಲಕ್ಷ ಬಾಕ್ಸ್) ಮಾರಾಟವಾಗಿವೆ ಎಂದು ಅಬಕಾರಿ ಇಲಾಖೆ ಮಾಹಿತಿ ನೀಡಿದೆ.

'ಡಿಸೆಂಬರ್ ಕೊನೆಯ ದಿನ ರಜೆ ಇದ್ದ ಕಾರಣ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 14ರಷ್ಟು ಕಡಿಮೆ ಖರೀದಿ ನಡೆದಿದೆ ಎಂದು ನಮೂದಾಗಿದೆ. ವಾಸ್ತವದಲ್ಲಿ ಸಗಟು ಖರೀದಿದಾರರು ಶನಿವಾರವೇ (ಡಿ.30) ಮುಂಗಡ ಪಾವತಿಸಿದ್ದಾರೆ. ಅದನ್ನು ಕೊನೆಯ ದಿನಕ್ಕೆ ಪರಿಗಣಿಸುತ್ತೇವೆ. 2022ರ ಡಿಸೆಂಬರ್‌ಗೆ ಹೋಲಿಸಿದರೆ 2023ರ ಡಿಸೆಂಬರ್‌ನಲ್ಲಿ ₹548 ಕೋಟಿ ಮೌಲ್ಯದ ಹೆಚ್ಚುವರಿ ಮದ್ಯ ಮಾರಾಟವಾಗಿದೆ' ಎಂದು ಅಬಕಾರಿ ಇಲಾಖೆ ಹೆಚ್ಚುವರಿ ಆಯುಕ್ತ ನಾಗರಾಜ್ ಹೇಳಿದರು.

2023ರಲ್ಲಿ ಮದ್ಯದ ಬೆಲೆ ಹೆಚ್ಚಾದರೂ, ಮಾರಾಟದಲ್ಲಿ ಗಣನೀಯವಾಗಿ ಏರಿಕೆಯಾಗಿದೆ. 2022ಕ್ಕೆ ಹೋಲಿಸಿದರೆ 2023ರಲ್ಲಿ 86.04 ಲಕ್ಷ ಲೀಟರ್ ಮದ್ಯ, 39.56 ಲಕ್ಷ ಲೀಟರ್ ಬಿಯರ್ ಹೆಚ್ಚು ಮಾರಾಟವಾಗಿದೆ. ಒಟ್ಟು ₹3,496 ಕೋಟಿ ಮೌಲ್ಯದ ಮದ್ಯ ಹೆಚ್ಚುವರಿ ಮಾರಾಟ ಆಗಿದೆ. 2022ರಲ್ಲಿ ₹26,982 ಕೋಟಿ ಮೌಲ್ಯದ ಮಾರಾಟ ನಡೆದಿತ್ತು. 2023ರಲ್ಲಿ ₹30,620 ಕೋಟಿಗೆ ತಲುಪಿದೆ.

ಮದ್ಯದ ಬೆಲೆ ಹೆಚ್ಚಳದ ಕಾರಣ ಬಹುತೇಕರು ದುಬಾರಿ ಬೆಲೆ ಮದ್ಯಗಳಿಗಿಂತ ಕಡಿಮೆ ದರದ ಮದ್ಯಗಳನ್ನೇ ಹೆಚ್ಚಾಗಿ ಖರೀದಿಸಿದ್ದಾರೆ.

2,511 ನ್ಯಾಯಾಂಗ ನಿಂದನೆ ಪ್ರಕರಣ ಬಾಕಿ

ಸಿಎಸ್‌ಗೆ ಪಟ್ಟಿ ನೀಡಿದ ಎಜಿ • ಇಲಾಖೆಗಳ ಮುಖ್ಯಸ್ಥರಿಗೆ ಪತ್ರ ಬರೆದ ಸಿಎಸ್

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ 2,511 ನ್ಯಾಯಾಂಗ ನಿಂದನೆ ಪ್ರಕರಣಗಳು ಹೈಕೋರ್ಟ್ ಮತ್ತು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ (ಕೆಎಟಿ) ಬಾಕಿ ಇವೆ.

ಬಾಕಿ ಇರುವ ನ್ಯಾಯಾಂಗ ನಿಂದನಾ ಪ್ರಕರಣಗಳ ಪಟ್ಟಿ ಸಹಿತ ಮುಖ್ಯ ಕಾರ್ಯದರ್ಶಿ (ಸಿ.ಎಸ್) ರಜನೀಶ್ ಗೋಯಲ್ ಅವರಿಗೆ ಡಿ. 11ರಂದು ಪತ್ರ ಬರೆದಿರುವ ಅಡ್ವೊಕೇಟ್ ಜನರಲ್ (ಎಜಿ) ಕೆ. ಶಶಿಕಿರಣ್ ಶೆಟ್ಟಿ, 'ಹಲವು ಬಾರಿ ಪತ್ರಗಳು, ಸಿಸಿಎಂಎಸ್ (ಕೋರ್ಟ್ ಕೇಸ್ ಮಾನಿಟರಿಂಗ್ ಸಿಸ್ಟಂ) ಮುಖಾಂತರ ಮಾಹಿತಿ ಒದಗಿಸಿದ್ದರೂ ಸಂಬಂಧಿಸಿದ ಅಧಿಕಾರಿಗಳು, ಪ್ರತಿವಾದಿಗಳು ಪ್ರತಿಕ್ರಿಯಿಸಿಲ್ಲ. ಅಲ್ಲದೆ, ನಿಗದಿತ ಅವಧಿಯ ಒಳಗೆ ಪ್ರಮಾಣಪತ್ರ, ಪ್ರತಿ ಪ್ರಮಾಣಪತ್ರ ಸಲ್ಲಿಸಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಎಜಿ ಅವರ ಪತ್ರದ ಸಹಿತ ಎಲ್ಲ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿ ಗಳಿಗೆ ಡಿ. 27ರಂದು ಪತ್ರ ಬರೆದಿರುವ ಸಿಎಸ್, 'ಹೈಕೋರ್ಟ್ ಮತ್ತು ಕೆಎಟಿಯಲ್ಲಿ ಬಾಕಿ ಇರುವ ನ್ಯಾಯಾಂಗ ನಿಂದನಾ ಪ್ರಕರಣಗಳ ಕುರಿತು ಕ್ರಮ ತೆಗೆದುಕೊಳ್ಳಬೇಕು' ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

5ನೇ ಪುಟ ನೋಡಿ

ಬಾಕಿ ಇರುವ ನ್ಯಾಯಾಂಗ ನಿಂದನಾ ಪ್ರಕರಣಗಳು

ಹೈಕೋರ್ಟ್ ಪೀಠಗಳು

ಬೆಂಗಳೂರು ಪ್ರಧಾನ ಪೀಠ: 825 (1998ರಿಂದ 2023)

ಧಾರವಾಡ: 107 (2016ರಿಂದ 2023)

ಕಲಬುರಗಿ: 85 (2014ರಿಂದ 2023)

ಕೆಎಟಿ ಪೀಠಗಳಲ್ಲಿ ಬಾಕಿ ಇರುವ ನ್ಯಾಯಾಂಗ ನಿಂದನಾ ಪ್ರಕರಣಗಳು

ವರ್ಷ	ಬೆಂಗಳೂರು	ಬೆಳಗಾವಿ	ಕಲಬುರಗಿ
2017-2023	1,387	47	40

ಸಿಎಸ್ ಪ್ರತಿವಾದಿ

ರಾಜ್ಯ ಹೈಕೋರ್ಟ್, ಮುಖ್ಯ ಕಾರ್ಯದರ್ಶಿಯನ್ನು ಪ್ರತಿವಾದಿಯಾಗಿ ಮಾಡಿರುವ 49 ನ್ಯಾಯಾಂಗ ನಿಂದನಾ ಪ್ರಕರಣಗಳು ಬಾಕಿ ಇವೆ. ಅವುಗಳಲ್ಲಿ ಕೌಂಟರ್ ಅಫಿಡವಿಟ್ ಸಲ್ಲಿಸಿಲ್ಲ. ಈ ಪೈಕಿ 2021ರಲ್ಲಿ 1, 2022ರಲ್ಲಿ 12, 2023ರಲ್ಲಿ 36 ಪ್ರಕರಣಗಳಿವೆ. ಇನ್ನು ಹೈಕೋರ್ಟ್‌ನ ಧಾರವಾಡ ಪೀಠದಲ್ಲಿ 6, ಕಲಬುರಗಿ ಪೀಠದಲ್ಲಿ 2 ಪ್ರಕರಣಗಳಲ್ಲಿ ಮುಖ್ಯ ಕಾರ್ಯದರ್ಶಿಯವರೇ ಪ್ರತಿವಾದಿಯಾಗಿರುವ ನ್ಯಾಯಾಂಗ ನಿಂದನಾ ಪ್ರಕರಣಗಳು ಬಾಕಿ ಇವೆ ಎಂದು ಪತ್ರದಲ್ಲಿ ಎಜಿ ತಿಳಿಸಿದ್ದಾರೆ.

ಮೂರ್ತಿ ಪ್ರತಿಷ್ಠಾಪನೆ ಮಧ್ಯಾಹ್ನ 12.20ಕ್ಕೆ

ಅಯೋಧ್ಯೆ (ಪಿಟಿಐ): ಅಯೋಧ್ಯೆಯಲ್ಲಿ ನಿರ್ಮಿಸಿರುವ ರಾಮ ಮಂದಿರದಲ್ಲಿ ರಾಮನ ಮೂರ್ತಿಯ ಪ್ರತಿಷ್ಠಾಪನೆ ಜ.22ರ ಮಧ್ಯಾಹ್ನ 12.20ಕ್ಕೆ ನಡೆಯಲಿದೆ ಎಂದು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ತಿಳಿಸಿದರು.

'ಪ್ರತಿಷ್ಠಾಪನೆ ಬಳಿಕ ನಿಮ್ಮ ಸ್ಥಳಗಳಲ್ಲಿ ಆರತಿ, ಪ್ರಸಾದ ವಿತರಣೆ ಮಾಡಬಹುದು. ಸೂರ್ಯಾಸ್ತದ ಬಳಿಕ ದೀಪಗಳನ್ನು ಹಚ್ಚಿರಿ' ಎಂದರು.

ಯೂನುಸ್‌ಗೆ ಸಜೆ

ಢಾಕಾ (ಎಎಫ್‌ಪಿ): ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಮೊಹಮ್ಮದ್ ಯೂನುಸ್ ಅವರನ್ನು ಕಾರ್ಮಿಕ ಕಾಯ್ದೆ ಉಲ್ಲಂಘಿಸಿದ್ದ ಪ್ರಕರಣದಲ್ಲಿ ಸ್ಥಳೀಯ ನ್ಯಾಯಾಲಯ ದೋಷಿ ಎಂದು ತೀರ್ಪು ನೀಡಿದೆ. 12

'ವೈದ್ಯ ವೃತ್ತಿಗೆ ಅನರ್ಹ'

ಬೆಂಗಳೂರು: 'ಸಮುದಾಯ ವೈದ್ಯಕೀಯ ಸೇವೆ ಮತ್ತು ಅವಶ್ಯಕ ಔಷಧಿಗಳು ವಿಷಯದಲ್ಲಿ ಡಿಪ್ಲೊಮಾ ಪಡೆದವರನ್ನು ವೈದ್ಯರು ಎಂದು ಪರಿಗಣಿಸಲು ಸಾಧ್ಯವಿಲ್ಲ' ಎಂಬ ಸರ್ಕಾರದ ನಿರ್ಧಾರವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ. 7

ಜಿಎಸ್‌ಟಿ ವರಮಾನ ಸಂಗ್ರಹ

ಕೋಟಿಗಳಲ್ಲಿ (ಡಿಸೆಂಬರ್ 2023)



₹ 1.64 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ 2023ನೇ ಹಣಕಾಸು ವರ್ಷದ ಡಿಸೆಂಬರ್‌ನಲ್ಲಿ ₹1.64 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ.

10ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೈಲಾಸ ಜೀವನ

ಮಲ್ಟಿಪರ್ಪಸ್ ಆಯುರ್ವೇದಿಕ್ ಕ್ರೀಮ್

| ಪಾದಗಳ ಬಿರಿತ | ಮೊಡವೆಗಳು |

| ಕೈ ಕಾಲು ಮತ್ತು ಕಣ್ಣುಗಳ ಉರಿತ |

| ಸುಡುವಿಕೆ | ಕೊಯ್ತ |

ಮೊದಲಾದವಕ್ಕೆ ಗುಣಕಾರಿ

Available in: 12g, 20g Tube, 30g, 60g, 120g, 230g Bottle

Manufacturer: ASUM, Pune. 020-24486865 | Customer Care: Prashant: 91300 26070 | asumkj@gmail.com | www.asum.com |

Also available on amazon netmeds.com India Ki Pharmacy

anunaad.com

MedPlus

50–80%* ರಿಯಾಯತಿ ದರದಲ್ಲಿ

ಮೆಡ್‌ಪ್ಲಸ್ ಬ್ರಾಂಡ್ ಔಷಧಿಗಳು

ಸುಮಾರು 9.5 ಲಕ್ಷಕ್ಕೂ ಅಧಿಕ ಗ್ರಾಹಕರು, ಔಷಧಿಗಳ ಖರೀದಿಯಲ್ಲಿ ಸುಮಾರು 74.5 ಕೋಟಿಗೂ ಅಧಿಕ ಉಳಿತಾಯ ಮಾಡಿದ್ದಾರೆ!

ಇನ್ನು ನೀವು ಯಾವಾಗ ಉಳಿತಾಯ ಆರಂಭಿಸುವಿರಿ?

ನಮ್ಮ ವೈದ್ಯರು ಬರೆದು ಕೊಡುವ ಔಷಧಿಗಳೂ ದೊರೆಯುತ್ತವೆಯೆ?
ಹೌದು, ಮೆಡ್‌ಪ್ಲಸ್‌ನಲ್ಲಿ, ನಿಮಗೆ ಬರೆದುಕೊಡಲಾಗಿರುವ ಔಷಧಿಗಳ 80% ರಷ್ಟು ಔಷಧಿಗಳು ದೊರೆಯುತ್ತವೆ. ಈ ಔಷಧಿಗಳ ಶ್ರೇಣಿಯಲ್ಲಿ ಅಧಿಕ ರಕ್ತದೊತ್ತಡ, ಮಧುಮೇಹ, ಥೈರಾಯ್ಡ್, ಕೊಲೆಸ್ಟರಾಲ್, ಹೃದಯ ಕಾಯಿಲೆ ಮುಂತಾದ ಔಷಧಿಗಳ ಜೊತೆಗೆ ನೋವು, ಶೀತ, ಜ್ವರ, ಅಲರ್ಜಿ ಮತ್ತು ಸೋಂಕುಗಳ ಔಷಧಿ ಕೂಡ ಲಭ್ಯವಿರುತ್ತವೆ.

ಈ ಔಷಧಿಗಳ ಗುಣಮಟ್ಟ ಹೇಗಿರುತ್ತದೆ? ನಮ್ಮ ವೈದ್ಯರು ಶಿಫಾರಸ್ಸು ಮಾಡಿರುವ ಔಷಧಿಯಷ್ಟೆ ಗುಣಮಟ್ಟದ್ದಾಗಿರುತ್ತದೆಯೆ?
ದೇಶದ ಅತ್ಯುತ್ತಮ ಬ್ರಾಂಡ್‌ಗಳ ಔಷಧಿಗಳನ್ನು ಉತ್ಪಾದಿಸುವ ಸೌಲಭ್ಯಗಳಲ್ಲಿಯೇ# ಮೆಡ್‌ಪ್ಲಸ್ ಬ್ರಾಂಡ್‌ನ ಔಷಧಿಗಳನ್ನು ಉತ್ಪಾದಿಸಲಾಗುತ್ತದೆ. ಈ ಔಷಧಿಗಳನ್ನು ಮಾರುಕಟ್ಟೆಯಲ್ಲಿ ಲಭ್ಯವಿರುವ ಉತ್ತಮ ಔಷಧಿಗಳ ಮಾನದಂಡಗಳಿಗೆ ಅನುಗುಣವಾಗಿಯೇ ಮತ್ತು ಅವುಗಳಷ್ಟೆ ಉತ್ತಮವಾಗಿ ತಯಾರಿಸಲಾಗುತ್ತದೆ. #ಇದನ್ನು ನೀವು ಔಷಧಿಗಳ ಸ್ಟ್ರಿಪ್‌ನ ಮೇಲೆ ಉಲ್ಲೇಖಿಸಲಾಗಿರುವ ಉತ್ಪಾದಕರ ಹೆಸರನ್ನು ಪರಿಶೀಲಿಸುವ ಮೂಲಕ ತಿಳಿಯಬಹುದು.

ಗುಣಮಟ್ಟ ಒಂದೇ ಆಗಿದ್ದರೆ, 50–80% ರಿಯಾಯತಿ ದರದಲ್ಲಿ ನೀಡುವುದು ಹೇಗೆ ಸಾಧ್ಯ?
ಮಾರುಕಟ್ಟೆ ಖರ್ಚು ಹಾಗೂ ವಿತರಣಾ ವೆಚ್ಚದ ಕಾರಣಗಳಿಂದಾಗಿ ನೀವು ನಿಯಮಿತವಾಗಿ ಖರೀದಿಸುವ ಔಷಧಿಗಳು ದುಬಾರಿ ಎನಿಸುತ್ತವೆ. ಆದರೆ, ಮೆಡ್‌ಪ್ಲಸ್‌ನಲ್ಲಿ ಆ ರೀತಿಯ ಯಾವುದೇ ಹೆಚ್ಚುವರಿ ಮಾರುಕಟ್ಟೆ ಮತ್ತು ವಿತರಣಾ ವೆಚ್ಚಗಳಿರುವುದಿಲ್ಲ. ಹೀಗಾಗಿ 50–80% ರಿಯಾಯತಿ ದರದಲ್ಲಿ ಔಷಧಿಗಳನ್ನು ನೀಡಲು ಸಾಧ್ಯವಾಗುತ್ತದೆ.

ಇದು, ತಮ್ಮ ಸ್ವಂತ ಬ್ರಾಂಡ್‌ನ ಔಷಧಗಳನ್ನು ಮಾರಾಟ ಮಾಡುವುದಕ್ಕೆ ಫಾರ್ಮಸಿ ಕಂಪನಿಗಳು ಕಂಡುಕೊಂಡ ಸಹಜ ಪದ್ಧತಿಯೆ?
ಹೌದು, ವಿಶ್ವದಾದ್ಯಂತ ವಿಶೇಷವಾಗಿ ಯುಎಸ್ ರಾಷ್ಟ್ರಗಳಲ್ಲಿ ವಾಲ್‌ಗ್ರೀನ್ಸ್ ಮತ್ತು ಸಿವಿಎಸ್ ಎಂಬ ಫಾರ್ಮಸಿ ಸರಣಿಗಳು ತಮ್ಮದೇ ಸ್ವಂತ ಬ್ರಾಂಡ್‌ನ ಔಷಧಿಗಳನ್ನು ಮಾರಾಟ ಮಾಡುತ್ತವೆ. ಔಷಧಿಯೊಂದರ ಪೇಟೆಂಟ್ ಪೂರ್ಣಗೊಂಡ ಬಳಿಕ, ಇಂತಹ ಕಂಪನಿಗಳು ತಮ್ಮದೇ ಬ್ರಾಂಡ್‌ನಲ್ಲಿ ಅವುಗಳನ್ನು ಮಾರಾಟ ಮಾಡುತ್ತವೆ. ಹಿಂದಿನ ದಿನಗಳಲ್ಲಿ, ಭಾರತದಲ್ಲಿ, ಯಾವುದೇ ಕಂಪನಿಯು ತನ್ನ ಸ್ವಂತದ ಬ್ರಾಂಡ್‌ಗಳನ್ನು ತಯಾರಿಸುವಷ್ಟು, ಸಂಯುಕ್ತ ರಾಷ್ಟ್ರ ಮಾದರಿಯ ಗಾತ್ರ ಮತ್ತು ಪರಿಮಾಣ ಹೊಂದಿರಲಿಲ್ಲ. ಇದೀಗ, 4000 ಮಳಿಗೆಗಳನ್ನು ಮತ್ತು 4500 ಕೋಟಿಗೂ ಅಧಿಕ ವಹಿವಾಟು ಗಾತ್ರ ಮತ್ತು ಪರಿಮಾಣ ಹೊಂದಿರುವ ಮೆಡ್‌ಪ್ಲಸ್‌ಗೆ, ತನ್ನ ಸ್ವಂತ ಬ್ರಾಂಡ್ ತಯಾರಿಸುವ ಅವಕಾಶ ಲಭಿಸಿದೆ.

ನೀವು ಮೆಡ್‌ಪ್ಲಸ್‌ಗೆ ಭೇಟಿ ನೀಡಿದಾಗ, ಪರ್ಯಾಯ ಔಷಧಿಗಳನ್ನು ಕೇಳಿ ಪಡೆಯಿರಿ ಮತ್ತು ಸಾಕಷ್ಟು ಉಳಿತಾಯ ಮಾಡಿರಿ!

ಇಂದೇ ನಿಮ್ಮ ಸಮೀಪದ ಸ್ಟೋರ್‌ಗೆ ಭೇಟಿ ಕೊಡಿ ಅಥವಾ ಕರೆ ಮಾಡಿ 040–6700 6732

ವಾರ್ಷಿಕ ರೂ. 50/– ಚಂದಾದಾರಿಕೆ ಕೊಡುಗೆ ಸೀಮಿತ ಅವಧಿಗೆ ಮಾತ್ರ (ಸಾಮಾನ್ಯ ದರ ವಾರ್ಷಿಕ ರೂ.499/–)

*ಷ&ನಿ ಅನ್ವಯ ಡಿಪಿಸಿಒ ಉತ್ಪನ್ನಗಳ ಮೇಲಿನ ರಿಯಾಯತಿ ಭಿನ್ನವಾಗಿರುತ್ತದೆ.

ಮಂಗಳವಾರದ ಉಷ್ಣಾಂಶ 28° ಗರಿಷ್ಠ 16° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಮಂಜು ಕವಿದ ವಾತಾವರಣ ಇರಲಿದೆ.

ಹವಾಮಾನ ಬುಧವಾರ 28° 17° | ಗುರುವಾರ 28° 17° | ಶುಕ್ರವಾರ 28° 17°

ಸೂರ್ಯೋದಯ: 6:42 ಸೂರ್ಯಾಸ್ತ : 6:05 ಚಂದ್ರೋದಯ: ರಾ. 11:20 ಚಂದ್ರಾಸ್ತ: ಬೆ.11:09 ಸೋಮವಾರದ ಹವಾಮಾನ : ಗರಿಷ್ಠ 28° ಕನಿಷ್ಠ 17° ಪ್ರಜಾವಾಣಿ

ಜಪಾನೀಸ್ ಭಾಷಾ ಕೋರ್ಸ್ ಪ್ರಾರಂಭ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ನೂತನವಾಗಿ ಜಪಾನ್ ಭಾಷಾ ಕೋರ್ಸ್‌ಗೆ ಅರ್ಜಿ ಆಹ್ವಾನಿಸಲಾಗಿದೆ.

ನಿರ್ದಿಷ್ಟ ಕೌಶಲಗಳ ಕೆಲಸಗಾರರು ಮತ್ತು ವೃತ್ತಿಪರರಿಗಾಗಿ ಜಪಾನೀಸ್ ಭಾಷೆಯ ಒಂದು ವರ್ಷದ ಪದವಿ ಡಿಪ್ಲೊಮಾ ಕೋರ್ಸ್ ಅನ್ನು ಪ್ರಾರಂಭಿಸಲಾಗಿದೆ. ಜಪಾನೀಸ್ ವ್ಯವಹಾರಿಕ ಭಾಷೆ, ವ್ಯಾಪಾರ, ಜಪಾನೀಸ್ ಕೆಲಸದ ಸಂಸ್ಕೃತಿ, ಅಲ್ಲಿನ ಸಮಾಜ ಮತ್ತು ಇತಿಹಾಸ ಸೇರಿದಂತೆ ಸಾಮಾನ್ಯ ವಿಷಯಗಳ ಬಗ್ಗೆ ತರಬೇತಿ ನೀಡಲಾಗುತ್ತದೆ.

ಈ ಕೋರ್ಸ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಭಾರತ ಮತ್ತು ಜಪಾನ್ ದೇಶದ ಕಂಪನಿಗಳಲ್ಲಿ ಉದ್ಯೋಗ ಅವಕಾಶಗಳಿವೆ. 30 ಸೀಟ್‌ಗಳು ಮಾತ್ರ ಇದ್ದು, ಮೊದಲ ಬಂದವರಿಗೆ ಆದ್ಯತೆ ನೀಡಲಾಗುವುದು ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಲಿಂಗರಾಜ ಗಾಂಧಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಹಿತಿಗೆ ಸಂಪರ್ಕಿಸಿ: 080-29572019

10 ತಿಂಗಳ ಅವಧಿಯಲ್ಲಿ 17 ಬಾರಿ ಮೀನುಗಳ ಮಾರಣ ಹೋಮ

ವಿಷಕಾರಿ ನೀರು: ಜಲಚರಕ್ಕೆ ಅಪಾಯ

• ಆದಿತ್ಯ ಕೆ.ಎ.

ಬೆಂಗಳೂರು: ದಿನದಿಂದ ದಿನಕ್ಕೆ ನಗರದ ಕೆರೆಗಳಿಗೆ ಕಲುಷಿತ ನೀರು ಸೇರ್ಪಡೆಯ ಪ್ರಮಾಣ ಹೆಚ್ಚುತ್ತಿದ್ದು, ಜಲಚರಗಳಿಗೆ ಕಂಟಕವಾಗಿ ಪರಿಣಮಿಸುತ್ತಿದೆ. ಕೆರೆಗಳ ಸ್ಥಿತಿಗತಿ ಅಧ್ಯಯನ ನಡೆಸಿರುವ 'ಆ್ಯಕ್ಷನ್ ಏಡ್ ಸಂಸ್ಥೆ'ಯು ಜಲಚರಗಳಿಗೆ ಕಂಟಕ ಆಗುತ್ತಿರುವ ಕೆರೆಗಳನ್ನು ಪತ್ತೆ ಮಾಡಿದೆ.

ಈ ಕೆರೆಗಳಲ್ಲಿ ಪದೇಪದೇ ಮೀನುಗಳು ಸಾವನ್ನಪ್ಪುತ್ತಿರುವ ಘಟನೆಗಳು ನಡೆಯುತ್ತಿದ್ದು, ಕೆರೆಗಳಲ್ಲಿ ನೀರಿನ ಗುಣಮಟ್ಟ ಕುಸಿದಿರುವುದನ್ನೂ ಸಂಸ್ಥೆ ಪತ್ತೆ ಹಚ್ಚಿದೆ.

ಇದೇ ವರ್ಷದ ಫೆಬ್ರುವರಿ 8ರಿಂದ ನವೆಂಬರ್ 24ರ ವರೆಗೆ ನಗರದ 13 ಪ್ರಮುಖ ಕೆರೆಗಳಲ್ಲಿ, 17 ಬಾರಿ ಮೀನುಗಳ ಮಾರಣಹೋಮ ನಡೆದಿದೆ. ಮೀನುಗಳ ಸತ್ತ ಪ್ರಕರಣಗಳ ವರದಿ ಆಧರಿಸಿ, 2017ರಿಂದ 2022ರ ವರೆಗೆ 'ಆ್ಯಕ್ಷನ್ ಏಡ್ ಸಂಸ್ಥೆ' ಅಧ್ಯಯನ ನಡೆಸಿತ್ತು. ಆ ಅವಧಿಯಲ್ಲೂ 32 ಬಾರಿ ಮೀನುಗಳ ಮಾರಣ ಹೋಮ ನಡೆದಿತ್ತು.

ಈಗ ಕೇವಲ 10 ತಿಂಗಳ ಅವಧಿಯಲ್ಲಿ 17 ಬಾರಿ ಕೆರೆಗಳಲ್ಲಿ ಮೀನುಗಳು ಸತ್ತಿವೆ. ಜಲಚರಗಳಿಗೆ ಕಲುಷಿತ ನೀರು ಕಂಟಕವಾಗಿ ಪರಿಣಮಿಸಿದ್ದು, ಆತಂಕ ಹೆಚ್ಚಿಸಿದೆ. ನಾನಾ ಕಾರಣಕ್ಕೆ ಈ ಕೆರೆಗಳಲ್ಲಿ ನೀರು ಮತ್ತಷ್ಟು ಕಪ್ಪಿಟ್ಟಿರುವುದನ್ನು ಪತ್ತೆ ಹಚ್ಚಲಾಗಿದೆ.

ಕೊಳಚೆ ನೀರು ಕೆರೆಯ ಒಡಲು ಸೇರಿದ ಮೇಲೆ ವಿಷವಾಗುತ್ತಿದೆ.

ಕೆರೆಯಲ್ಲಿ ಸತ್ತಿರುವ ಮೀನುಗಳು

ಕೊತ್ತನೂರು ಕೆರೆಯಲ್ಲಿ ಹತ್ತು ತಿಂಗಳ ಅವಧಿಯಲ್ಲಿ ಮೂರು ಬಾರಿ ಮೀನುಗಳು ಸಾಮೂಹಿಕವಾಗಿ ಸತ್ತಿವೆ. ಸೀತಾರಾಮನಪಾಳ್ಯ ಕೆರೆಯಲ್ಲಿ ಏಪ್ರಿಲ್ 8ರಂದು ಅಪಾರ ಪ್ರಮಾಣದಲ್ಲಿ ಮೀನುಗಳು ಮೃತಪಟ್ಟಿದ್ದವು. ಅದಾದ ತಿಂಗಳ ಅವಧಿಯಲ್ಲೇ ಚೆಳೆಕೆರೆಯಲ್ಲಿ ಸಾಮೂಹಿಕವಾಗಿ ಚಲಚರಗಳು ಸತ್ತಿದ್ದವು. ಉಲ್ಲಾಳ ಕೆರೆ ಹಾಗೂ ಸ್ಯಾಂಕಿ ಕೆರೆಯಲ್ಲೂ ಜೀವಿಗಳಿಗೆ ಅಪಾಯವಿದೆ ಎಂಬುದು ಅಧ್ಯಯನದಲ್ಲಿ ತಿಳಿದುಬಂದಿದೆ.

ಮೀನುಗಳಿಗೆ ಅಲ್ಲದೇ ಇತರೆ ಜಲಚರಗಳಿಗೂ ವಿಷಕಾರಿ ನೀರು ಅಪಾಯ ತರುತ್ತಿದೆ. ಮೀನುಗಳ ಸಾಮೂಹಿಕ ಸಾವಿನಲ್ಲಿ ಶೇ 50ರಷ್ಟು ಪ್ರಕರಣಗಳು ಕೊಳಚೆ ನೀರು ಕೆರೆ ಸೇರುತ್ತಿರುವುದರಿಂದಲೇ ಆಗಿದೆ ಎಂದು ಸಂಸ್ಥೆಯ ಪ್ರತಿನಿಧಿಗಳು ಹೇಳುತ್ತಾರೆ.

ರಾಜಕಾಲುವೆ ನೀರು ಕೆರೆಗೆ: ಕಲುಷಿತ ನೀರನ್ನು ಶುದ್ಧೀಕರಿಸದೇ ಕೆರೆಗೆ ಹರಿಸಲಾಗುತ್ತಿದೆ. ಜತೆಗೆ ವಿಷಕಾರಿ ಪದಾರ್ಥಗಳು, ಪ್ಲಾಸ್ಟಿಕ್, ಕೈಗಾರಿಕೆ ಹಾಗೂ ಮನೆ ತ್ಯಾಜ್ಯವನ್ನು ಕೆರೆಗಳಿಗೆ ನೇರವಾಗಿ ಬಿಡಲಾಗುತ್ತಿದೆ. ಎರಡು ವರ್ಷಗಳಿಂದ ಅದರ ಪ್ರಮಾಣ ಹೆಚ್ಚಿದ್ದು ಇದರಿಂದ ಸಮಸ್ಯೆ ಇನ್ನಷ್ಟು ಬಿಗಡಾಯಿಸುತ್ತಿದೆ ಎಂದು ಆ್ಯಕ್ಷನ್ ಏಡ್ ಸಂಸ್ಥೆಯ ಬಿ.ರಾಘವೇಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

'ಮಳೆಗಾಲದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೆರೆಗೆ ಕಲುಷಿತ ಸೇರುತ್ತಿದೆ. ಕಳೆ ಬೆಳೆಯಲು ಕೆರೆಯಲ್ಲಿ ಪೂರಕ ವಾತಾವರಣ ಸೃಷ್ಟಿಯಾಗುತ್ತಿದ್ದು ಜಲಚರಗಳ ವಾಸಕ್ಕೆ ನೀರು ಯೋಗ್ಯವಾಗಿಲ್ಲ. ಮನುಷ್ಯರ ಕೃತ್ಯಗಳೇ ಜಲಚರಗಳಿಗೆ ಅಪಾಯ ತರುತ್ತಿರುವುದು ಗೊತ್ತಾಗಿದೆ. ರಾಜಕಾಲುವೆ ನೀರು ಕೆರೆಗೆ ಸೇರುತ್ತಿರುವುದನ್ನು ತಡೆದರೆ ಮೀನುಗಳ ಜೀವಕ್ಕೆ ತರುತ್ತಿರುವ ಅಪಾಯ ತಪ್ಪಿಸಲು ಸಾಧ್ಯವಿದೆ' ಎಂದು ಅವರು ಹೇಳುತ್ತಾರೆ.

ಬಿಡಿಎ, ಬಿಬಿಎಂಪಿ ಸಮನ್ವಯತೆಯಿಂದ ಕೆಲಸ ಮಾಡಿದರೆ ಕೆರೆಗಳಿಗೆ ಕಲುಷಿತ ನೀರು ಸೇರುವುದನ್ನು ತಡೆಯಲು ಸಾಧ್ಯವಿದೆ. ಆದರೆ, ಸಂಸ್ಥೆಯಿಂದ ಮನವಿ ಮಾಡಿದರೂ ಅವರು ಸ್ಪಂದಿಸುತ್ತಿಲ್ಲ.

ಬಿ.ರಾಘವೇಂದ್ರ, ಆ್ಯಕ್ಷನ್ ಏಡ್ ಸಂಸ್ಥೆ

ಅಪಾಯದ ಕೆರೆಗಳು?

- ಕೊತ್ತನೂರು ಕೆರೆ
- ಇಬ್ಲೂರು ಕೆರೆ
- ಸೀತಾರಾಮಪಾಳ್ಯ ಕೆರೆ
- ಚೆಳೆಕೆರೆ
- ಮಡಿವಾಳ ಕೆರೆ
- ಕುಂಡ್ಲಹಳ್ಳಿ ಕೆರೆ
- ದೊಡ್ಡಕಲ್ಲಸಂದ್ರ ಕೆರೆ
- ಭಟ್ರಹಳ್ಳಿ ಕೆರೆ
- ಸೋಮಸುಂದರ ಪಾಳ್ಯ ಕೆರೆ
- ಕೊತ್ತನೂರು ಕೆರೆ
- ಅಂಬಲಿಪುರ ಕೆರೆ
- ಉಲ್ಲಾಳ ಕೆರೆ
- ಸ್ಯಾಂಕಿ ಕೆರೆ

ಯಡಿಯೂರಪ್ಪಗೆ 'ವೀರಶೈವ ಧರ್ಮ ಕೇಸರಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಭಾರತವು ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತವಾಗಿರುವ ದೇಶ. ನಮ್ಮ ಧರ್ಮ, ಸಂಸ್ಕೃತಿ, ಆಚಾರ, ವಿಚಾರಗಳಿಗೆ ಜಗತ್ತಿನಲ್ಲಿ ಸರಿಸಾಟಿ ಇಲ್ಲ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಬಾಗಲಗುಂಟೆಯಲ್ಲಿ ಆಯೋಜಿಸಲಾದ ಹಿಮವತ್ ಕೇದಾರ ಪೀಠದ ಭೀಮಾಶಂಕರಲಿಂಗ ಶಿವಾಚಾರ್ಯ ಸ್ವಾಮೀಜಿಯವರ ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜೆ ಮತ್ತು ಧರ್ಮ ಜನ ಜಾಗೃತಿ ಸಮಾರಂಭದಲ್ಲಿ 'ವೀರಶೈವ ಧರ್ಮ ಕೇಸರಿ ಪ್ರಶಸ್ತಿ' ಸ್ವೀಕರಿಸಿ ಮಾತನಾಡಿದರು.

'ವಿದೇಶಗಳಲ್ಲಿ ಒಂದು ಭಾಷೆ, ಒಂದು ಸಂಸ್ಕೃತಿ ಇರುತ್ತದೆ. ಆದರೆ, ನೂರಾರು ಭಾಷೆ, ಸಮುದಾಯಗಳು ಇದ್ದರೂ ಸಂಸ್ಕೃತಿ ಉಳಿಸಿ ಕೊಂಡಿರುವುದು ನಮ್ಮ ದೇಶದ ಹೆಮ್ಮೆ' ಎಂದರು.

ಶಾಸಕ ಎಸ್. ಮುನಿರಾಜು, ಸಚಿವ ಈಶ್ವರ್ ಖಂಡ್ರೆ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ.ಮರಿಸ್ವಾಮಿ, ಅಬಕಾರಿ ಅಧಿಕಾರಿ ಡಾ. ಹಿರೇಮಠ, ಸಾಹಿತಿ ವೈ.ಬಿ.ಎಚ್. ಜಯದೇವ್, ಸಂಘದ ಅಧ್ಯಕ್ಷ ಕಾಯಕಯೋಗಿ ಬಸವರಾಜಣ್ಣ, ಮಾಜಿ ಮೇಯರ್ ಗಂಗಾಂಬಿಕೆ, ನಟ ಕೆ.ವಿ. ನಾಗರಾಜಮೂರ್ತಿ ಮತ್ತು ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬಾಗಲಗುಂಟೆಯಲ್ಲಿ ನಡೆದ ಧರ್ಮ ಜನಜಾಗೃತಿ ಸಮಾರಂಭದಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರಿಗೆ 'ವೀರಶೈವ ಧರ್ಮ ಕೇಸರಿ ಪ್ರಶಸ್ತಿ' ಪ್ರದಾನ ಮಾಡಲಾಯಿತು

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Accounts & Finance

WANTED FEMALE Accounts Assistant with Tally Knowledge B.COM Below 40 Years Known Kannada English Hindi in and around Rajajinagar Contact: 9108458798/ 080-23384085

PERSONAL

Change of Name

I, CP_BABU S/o.C_T Poulose R/a_SMQ P-319/54,HQ TC(U) JC_Nagar post Bangalore-560006 have`changed my Name from CP BABU to C_P BABU vide`affidavit dated:30.12.2023 before`Notary N.`Peruvazhuthi Bengaluru

MOHAMMED ASHRUFF SHAIK AHMED, NO- 6, Opp Bharth Hardware, Madivala, Bengaluru-68. Have changed my name to ASHRAFF AHMED vide affidavit dated-01/01/2024

I, NELAVAN JAGADEESHAN, R/a,Flat No.401 Varasiddhi Residency. 3rd Cross, 3rd Block, Prakruthi Township, St.Vincent Pallotti School, Babusapalya, Bangalore-43, I, have changed my name to J.NEELAVAN S/o. Jagadeeshan Arumugam Vide affidavit dated:29/12/2023 Sworn before Notary:Y.R Chandrasekar, Bangalore

Missing

LOST CAT
LIZIE IS MISSING SINCE 22 NOV MORNING

If you have any information, please contact us
80950 48620
Handsome Reward Amount

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

DH DECCAN HERALD Classifieds More value, more impact
ಪ್ರಜಾವಾಣಿ
JOB HUNT
JOB
Get your HIRING NEEDS answered
Get the right people for your company...Book your Ad with us now !
www.dhclassifieds.com BOOK NOW
For more details contact:
+91 9845114560 | +91 9886213331 | +91 9900428036 | +91 9731810277 | +91 9901641752 | 080-45557163/164

ಶಿವಗಂಗೆ: ಜನದಟ್ಟಣೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ವರ್ಷದ ಮೊದಲ ದಿನವಾದ ಸೋಮವಾರ ನೆಲಮಂಗಲ ತಾಲ್ಲೂಕಿನ ಯಾತ್ರಾ ಸ್ಥಳ ಶಿವಗಂಗೆ ಬೆಟ್ಟದಲ್ಲಿ ಭಕ್ತರಿಂದ ತುಂಬಿ ಹೋಗಿತ್ತು.

ಹೊಸ ವರ್ಷದ ಹಿನ್ನೆಲೆಯಲ್ಲಿ ಸಾರ್ವಜನಿಕರ ಸುರಕ್ಷತಾ ಹಾಗೂ ಕಾನೂನು ಸುವ್ಯವಸ್ಥೆಗಾಗಿ ಡಿ.30 ರ ಸಂಜೆ 6ರಿಂದ ಜ.1ರ ಮಧ್ಯರಾತ್ರಿ 12ರ ವರೆಗೆ ಶಿವಗಂಗೆ ಬೆಟ್ಟಕ್ಕೆ ಸಾರ್ವಜನಿಕರ ಪ್ರವೇಶ ನಿಷೇಧಿಸಿ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದರು.

ಆದರೆ ಸೋಮವಾರ ಬೆಳಿಗ್ಗಿನಿಂದಲೇ ಪ್ರವಾಸಿಗರು ಬೆಟ್ಟಕ್ಕೆ ಆಗಮಿಸಿದರು. 25 ಸಾವಿರಕ್ಕೂ ಹೆಚ್ಚು ಭಕ್ತರು ಶಿವಗಂಗಾ ಕ್ಷೇತ್ರಕ್ಕೆ ಭೇಟಿ ನೀಡಿದರು.

ಹೊಸ ವರ್ಷದ ಪ್ರಯುಕ್ತ ಇಲ್ಲಿನ ಮೂಲ ದೇವರಾದ ಗಂಗಾಧರೇಶ್ವರ ಸ್ವಾಮಿಗೆ ವಿಶೇಷವಾದ ಅಲಂಕಾರವನ್ನು ಮಾಡಲಾಗಿತ್ತು. ಭಕ್ತರು ಕೇವಲ ಗಂಗಾಧರೇಶ್ವರ, ಹೊನ್ನಾದೇವಿ, ದೊಡ್ಡಗಣಪಗೆ ಪೂಜೆ ಸಲ್ಲಿಸಿದರು. ಪಾತಾಳ ಗಂಗೆಯ ದರ್ಶನ ಮಾತ್ರ ಪಡೆದರು.

ಶ್ರೀ ಗಂಗಾಧರೇಶ್ವರ ಸ್ವಾಮಿ

ಕಾರ್ಯನಿರ್ವಹಣಾಧಿಕಾರಿ ಕೆ.ರಮ್ಯ, ಪಾರುಪತ್ತೇದಾರ್ ಎಸ್. ಸುಮಾ. ಪ್ರಧಾನ ಅರ್ಚಕರಾದ ಎಸ್.ಕೆ. ಶ್ಯಾಮ್ ಪ್ರಸಾದ್ ದೀಕ್ಷಿತ್ ಮತ್ತು ತಂಡ ಪೂಜಾ ಕಾರ್ಯಗಳನ್ನು ನೇರವೇರಿಸಿತು.

ಪೊಲೀಸ್ ಅಧಿಕಾರಿಗಳಾದ ಬಿ.ರಾಜು, ವಿಜಯಕುಮಾರಿ ಬಂದೋಬಸ್ತ್ ಉಸ್ತುವಾರಿ ವಹಿಸಿದ್ದರು.

ಪಿಇಎಸ್ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಜ. 3ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೀಪಲ್ಸ್ ಎಜುಕೇಷನ್ ಸೊಸೈಟಿ (ಪಿಇಎಸ್) ವಿಶ್ವವಿದ್ಯಾಲಯ ಸ್ಥಾಪನೆಯಾಗಿ 50 ವರ್ಷಗಳು ತುಂಬಿರುವ ಹಿನ್ನೆಲೆಯಲ್ಲಿ ಇದೇ 3 ರಿಂದ 6ರವರೆಗೆ ಸುವರ್ಣ ಮಹೋತ್ಸವವನ್ನು ಆಚರಿಸಲಾಗುತ್ತಿದೆ ಎಂದು ಪಿಇಎಸ್ ವಿಶ್ವ ವಿದ್ಯಾಲಯದ ಸಮಕುಲಾಧಿಪತಿ ಜವಹರ್ ದೊರಸ್ವಾಮಿ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಜ. 3ರಂದು ಸುವರ್ಣ ಮಹೋತ್ಸವಕ್ಕೆ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ ಚಾಲನೆ ನೀಡಲಿದ್ದಾರೆ. ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಆನಂದ ರುಘುನಾಥನ್, ಇನ್‌ಮೊಬಿ ಸಂಸ್ಥೆಯ ಸಂಸ್ಥಾಪಕ ನವೀನ್ ತಿವಾರಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು.

'ಜ.4ರಂದು ನಡೆಯುವ ಕಾರ್ಯಕ್ರಮದಲ್ಲಿ 'ತುಘಲಕ್' –ತಮಿಳು ವಾರಪತ್ರಿಕೆಯ ಸಂಪಾದಕ ಸ್ವಾಮಿನಾಥನ್ ಗುರುಮೂರ್ತಿ, ಸಿಸ್ಕೊ ಫಾರ್ ಸ್ಟಾರ್ಟ್‌ಅಪ್‌ನ ಮುಖ್ಯಸ್ಥೆ ಶೃತಿ ಕಣ್ಣನ್ ಭಾಗವಹಿಸಲಿದ್ದಾರೆ. ಜ. 5ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ಆರ್ಥಿಕ ಸಲಹಾ ಸಮಿತಿಯ ಸದಸ್ಯ ಸಂಜೀವ್ ಸನ್ಯಾಲ್ ಭಾಗವಹಿಸಲಿದ್ದಾರೆ. ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರೊಂದಿಗೆ ಸಂಸದ ತೇಜಸ್ವಿ ಸೂರ್ಯ ಅವರು ಸಂವಾದ ನಡೆಸಲಿದ್ದಾರೆ' ಎಂದು ವಿವರಿಸಿದರು.



'ಜ. 6ರ ಕಾರ್ಯಕ್ರಮದಲ್ಲಿ ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಅವರೊಂದಿಗೆ ಇಂಕ್(ಐಎನ್‌ಕೆ) ಸಂಸ್ಥಾಪಕಿ ಲಕ್ಷ್ಮಿ ಪ್ರಾತುರಿ ಅವರೊಂದಿಗೆ ಸಂವಾದ ನಡೆಸಲಿದ್ದಾರೆ. ಪ್ರತಿದಿನ ಸಂಜೆ 7.30ರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ' ಎಂದು ತಿಳಿಸಿದರು.

'1972ರ ಅ.11ರಂದು ಪ್ರೊ. ಎಂ.ಆರ್. ದೊರೆಸ್ವಾಮಿಯವರು ಬೆಂಗಳೂರಿನ ಹನುಮಂತನಗರದ ಬಾಡಿಗೆ ವ್ಯಾಯಾಮ ಶಾಲೆಯಲ್ಲಿ 40 ವಿದ್ಯಾರ್ಥಿಗಳೊಂದಿಗೆ ಆರಂಭಿಸಿದ ಪಿಇಎಸ್ ಪದವಿ ಪೂರ್ವಕಾಲೇಜು, ಇಂದು ಪಿಇಎಸ್ ವಿಶ್ವವಿದ್ಯಾಲಯವಾಗಿ ಶೈಕ್ಷಣಿಕ ರಂಗದಲ್ಲಿ ಉತ್ತಮ ಹೆಸರುಗಳಿಸಿದೆ. ಸದ್ಯ ಪಿಇಎಸ್ ಶಿಕ್ಷಣ ಸಂಸ್ಥೆಯಲ್ಲಿ 25 ಸಾವಿರ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಎರಡೂವರೆ ಸಾವಿರ ಅಧ್ಯಾಪಕರು ಕಾರ್ಯನಿರ್ವಹಿಸುತ್ತಿದ್ದಾರೆ' ಎಂದು ಜವಹರ್ ತಿಳಿಸಿದರು.

ಮಂಗಳವಾರ, ಜನವರಿ 2, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 2 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶೋಭಾ ಯಾತ್ರೆ
ಅಯೋಧ್ಯೆಯಲ್ಲಿ ಸೋಮವಾರ ನಡೆದ ಶೋಭಾ ಯಾತ್ರೆಯಲ್ಲಿ ಉತ್ತರಾಖಂಡದ ಭಕ್ತರು ಕಾಣಿಸಿಕೊಂಡಿದ್ದು ಹೀಗೆ

330 ಚಾಲಕರ ವಿರುದ್ಧ ಎಫ್‌ಐಆರ್ 4
ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಅಸ್ತು 2B
8 ಕ್ಷೇತ್ರ: ಮನೆ ಬಾಗಿಲಿಗೆ ಬಂತು ಸರ್ಕಾರ 3
ವಿಷಕಾರಿ ನೀರು: ಜಲಚರಕ್ಕೆ ಅಪಾಯ 2

ಕಾರ್ಯಸಾಧ್ಯತಾ ಅಧ್ಯಯನಕ್ಕೆ ಅನುದಾನ ಒದಗಿಸಲು ಸರ್ಕಾರಕ್ಕೆ ಬಿಎಂಆರ್‌ಸಿಎಲ್ ಮನವಿ

ಉಪನಗರಗಳಿಗೆ ಮೆಟ್ರೊ: ಪ್ರಸ್ತಾವ

• ನವೀನ್ ಮಿನೇಜಸ್

ಬೆಂಗಳೂರು: ಬೆಂಗಳೂರಿಗೆ ಹೊಂದಿಕೊಂಡಿರುವ ಉಪನಗರಗಳಿಗೆ 'ನಮ್ಮ ಮೆಟ್ರೊ' ಸಂಪರ್ಕವನ್ನು ವಿಸ್ತರಿಸಲು ಬಿಎಂಆರ್‌ಸಿಎಲ್ ನಿರ್ಧರಿಸಿದ್ದು, 129 ಕಿ.ಮೀ. ಉದ್ದದ ಈ ಸಂಪರ್ಕ ಜಾಲದ ಕಾರ್ಯಸಾಧ್ಯತೆಯ ಅಧ್ಯಯನ ನಡೆಸಲು ಪ್ರಸ್ತಾವವನ್ನು ಸರ್ಕಾರದ ಮುಂದಿಟ್ಟಿದೆ.

ಮೆಟ್ರೊಗೆ ಸರ್ಕಾರ ನೀಡಿದ ಅನುಮೋದಿತ ಸಮಗ್ರ ಸಂಚಾರ ಯೋಜನೆಯ (ಕಾಂಪ್ರಹೆನ್ಸಿವ್ ಮೊಬಿಲಿಟಿ ಪ್ಲಾನ್–ಸಿಎಂಪಿ) ಪ್ರಕಾರ ಉಪನಗರಗಳಿಗೆ ವಿಸ್ತರಿಸುವಂತಿಲ್ಲ. ಆದರೂ ಇಂಥದ್ದೊಂದು ಪ್ರಸ್ತಾವವನ್ನು ಬಿಎಂಆರ್‌ಸಿಎಲ್, ಸರ್ಕಾರದ ಮುಂದೆ ಇಟ್ಟಿದೆ. ಈಗಿರುವ ಹಸಿರು ಮತ್ತು ನೇರಳೆ ಮಾರ್ಗಗಳ ಕೊನೇ ನಿಲ್ದಾಣದಿಂದ ವಿಸ್ತರಿಸುವುದು ಮತ್ತು ಅವುಗಳಿಗೆ ಸಂಪರ್ಕಿಸುವ ಅರ್ಧ ವರ್ತುಲ ಮಾರ್ಗ ನಿರ್ಮಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ನೇರಳೆ ಮತ್ತು ಹಸಿರು ಮಾರ್ಗಗಳನ್ನು ಬಿಡದಿ (ಮೈಸೂರು ರಸ್ತೆ), ಹಾರೋಹಳ್ಳಿ (ಕನಕಪುರ ರಸ್ತೆ), ಅತ್ತಿಬೆಲೆ (ಹೊಸೂರು ರಸ್ತೆ) ಮತ್ತು ಕುಣಿಗಲ್‌ಗೆ ನಾಲ್ಕು ದಿಕ್ಕುಗಳಲ್ಲಿ ವಿಸ್ತರಿಸುವುದು. ಜಿಗಣಿ, ಆನೇಕಲ್, ಅತ್ತಿಬೆಲೆ, ಸರ್ಜಾಪುರ ಮತ್ತು ವರ್ತೂರು ಭಾಗಗಳನ್ನು ಹೊಸ ಅರ್ಧವರ್ತುಲ ಮಾರ್ಗದ ಮೂಲಕ ಸಂಪರ್ಕಿಸುವ ಚಿಂತನೆ ಇದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಈ ಯೋಜನೆ ಬಿಬಿಎಂಪಿ ವ್ಯಾಪ್ತಿಯಿಂದ ಹೊರಗೆ ಬರುತ್ತಿದೆ. ಆದರೂ ಕಾರ್ಯಸಾಧ್ಯತೆಯ ಅಧ್ಯಯನ ನಡೆಸಲು ರಾಜ್ಯ ಸರ್ಕಾರದಿಂದ ಅನುದಾನ ಕೋರಿದೆ. ವಿವಿಧ ಸಂಘಟನೆಗಳು, ಪ್ರಾತಿನಿಧಿಕ ಸಂಸ್ಥೆಗಳ ಸಲಹೆಯಂತೆ ಈ ಯೋಜನೆಗೆ ಮುಂದಾಗಿರುವುದಾಗಿ ಮೆಟ್ರೊ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಬಿಡದಿ ಅಲ್ಲದೇ ಹಾರೋಹಳ್ಳಿ, ಅತ್ತಿಬೆಲೆವರೆಗೆ ಮೆಟ್ರೊ ವಿಸ್ತರಿಸುವ ಬಗ್ಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿಕೆ ನೀಡಿದ್ದರು. ಈ ಮಾರ್ಗಗಳನ್ನು ಒಳಗೊಂಡೇ ಅಧ್ಯಯನ ಮಾಡಲಾಗುವುದು ಎಂದು ಹೇಳಿದ್ದಾರೆ.

ಡಿ.ಕೆ. ಶಿವಕುಮಾರ್ ಅವರು ಇತ್ತೀಚೆಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಿ ಸುರಂಗ ರಸ್ತೆಗಳು ಮತ್ತು ಮೆಟ್ರೊ ಯೋಜನೆಗಳು ಸೇರಿದಂತೆ ಬೆಂಗಳೂರಿನ ಬೃಹತ್ ಮೂಲಸೌಕರ್ಯ ಯೋಜನೆಗಳಿಗೆ ಅನುದಾನ ಕೇಳಿದ್ದರು. ಅದರಲ್ಲಿ ನಾಲ್ಕು ದಿಕ್ಕುಗಳಲ್ಲಿ ಮೆಟ್ರೊ ವಿಸ್ತರಿಸುವ ಮತ್ತು ಅರೆ ವರ್ತುಲ ಮಾರ್ಗ ನಿರ್ಮಿಸುವ ಯೋಜನೆಯನ್ನೂ ಪ್ರಸ್ತಾಪಿಸಿ ಬೆಂಬಲ ಕೋರಿದ್ದರು.

ತಿರಸ್ಕಾರ ಸಾಧ್ಯತೆ?: ಸರ್ಕಾರದಿಂದ ಅನುಮೋದಿತ ಸಮಗ್ರ ಸಂಚಾರ ಯೋಜನೆಯ ಭಾಗವಾಗಿ ಈ ಯೋಜನೆ ಇಲ್ಲದೇ ಇರುವುದರಿಂದ ಕೇಂದ್ರ ಸರ್ಕಾರ ಈ ಯೋಜನೆಯನ್ನು ತಿರಸ್ಕರಿಸುವ ಸಾಧ್ಯತೆಯೂ ಇದೆ.

ನಗರದೊಳಗಿನ ಪ್ರಯಾಣಕ್ಕಾಗಿ ಇರುವ ಮೆಟ್ರೊ ರೈಲುಗಳನ್ನು, ಉಪನಗರಗಳಿಗೆ ವಿಸ್ತರಿಸುವುದು ಕಷ್ಟ ಮತ್ತು ಅಗತ್ಯವಿಲ್ಲದ ಯೋಜನೆ. ಉಪನಗರಗಳನ್ನು ಸಂಪರ್ಕಿಸಲು ರೈಲ್ವೆಯ ಉಪನಗರ ಯೋಜನೆ ಇರುವಾಗ ದುಬಾರಿಯಾಗಿರುವ ಮೆಟ್ರೊ ಬೇಕಾಗಿಲ್ಲ. ದೂರದ ಪ್ರದೇಶದಿಂದ ಮೆಟ್ರೊದಲ್ಲಿ ಎರಡು–ಮೂರು ತಾಸು ಪ್ರಯಾಣ ಮಾಡುವುದು ಕಷ್ಟ ಎಂದು ರೈಲ್ವೆ ಹೋರಾಟಗಾರ ಸಂಜೀವ್ ದ್ಯಾಮಣ್ಣನವರ್ ಪ್ರತಿಕ್ರಿಯಿಸಿದ್ದಾರೆ.

ನಮ್ಮ ಮೆಟ್ರೊ ಅಂಕಿ ಅಂಶ

ಹಂತ 1	ಹಂತ 2	ಹಂತ 2ಎ ಮತ್ತು 2ಬಿ	ಹಂತ 3 (ನೀಲನಕ್ಷೆಯಲ್ಲಿ)	ಹಂತ 3ಎ (ನೀಲನಕ್ಷೆಯಲ್ಲಿ)
42.30 ಕಿ.ಮೀ. (ಕಾರ್ಯಾಚರಣೆ)	75 ಕಿ.ಮೀ. (ಭಾಗಶಃ ಕಾರ್ಯಾಚರಣೆ)	58.20 ಕಿ.ಮೀ. (ನಿರ್ಮಾಣ ಹಂತದಲ್ಲಿ)	44.65 ಕಿ.ಮೀ. (ಪಶ್ಚಿಮ ಹೊರ ವರ್ತುಲ ರಸ್ತೆ, ಮಾಗಡಿ ರಸ್ತೆ)	37 ಕಿ.ಮೀ. (ಹೆಬ್ಬಾಳ–ಸರ್ಜಾಪುರ)

ಕಾರ್ಯಸಾಧ್ಯತಾ ಅಧ್ಯಯನ ಅಂಕಿ ಅಂಶ

- **15** ಕಿ.ಮೀ ಚಲ್ಲಘಟ್ಟದಿಂದ ಬಿಡದಿ
- **24** ಕಿ.ಮೀ ರೇಷ್ಮೆ ಮಂಡಳಿಯಿಂದ ಹಾರೋಹಳ್ಳಿ
- **11** ಕಿ.ಮೀ ಬೊಮ್ಮಸಂದ್ರದಿಂದ ಅತ್ತಿಬೆಲೆ
- **11** ಕಿ.ಮೀ ಮಾದಾವರದಿಂದ ಕುಣಿಗಲ್ ಕ್ರಾಸ್
- **68** ಕಿ.ಮೀ., ಕಾಳೇನ ಅಗ್ರಹಾರದಿಂದ ಕಾಡುಗೋಡಿ (ಆನೇಕಲ್, ಸರ್ಜಾಪುರ, ವರ್ತೂರು ಮಾರ್ಗವಾಗಿ)

ರಸ್ತೆಗೆ ಹಾಲು...
ರಾಮನಗರ ತಾಲ್ಲೂಕಿನ ಅಣ್ಣಹಳ್ಳಿ ಹಾಲು ಉತ್ಪಾದಕ ಸಹಕಾರ ಸಂಘಕ್ಕೆ ನೂತನ ಕಾರ್ಯದರ್ಶಿ ನೇಮಕ ಖಂಡಿಸಿ ಹಾಗೂ ಬಮೂಲ್ ನಿರ್ದೇಶಕ ಪಿ. ನಾಗರಾಜ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಗ್ರಾಮದ ಹಾಲು ಉತ್ಪಾದಕರು ರಾಮನಗರದ ಐಜೂರು ವೃತ್ತದಲ್ಲಿ ಸೋಮವಾರ ರಸ್ತೆಗೆ ಹಾಲು ಚೆಲ್ಲಿ, ಹಸುಗಳನ್ನು ತಂದು ಪ್ರತಿಭಟನೆ ನಡೆಸಿದರು

ಮಾಲ್ ಆಫ್ ಏಷ್ಯಾ: ಇಂದು ಅರ್ಜಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಲ್ ಆಫ್ ಏಷ್ಯಾ'ಕ್ಕೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಿ ನಗರ ಪೊಲೀಸ್ ಆಯುಕ್ತರು ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಲಾದ ರಿಟ್ ಅರ್ಜಿಗೆ ಸಂಬಂಧಿಸಿದಂತೆ ಹೈಕೋರ್ಟ್, 'ಇದೇ 2ರವರೆಗೆ ಪೊಲೀಸರು ಬಲವಂತದ ಕ್ರಮ ಕೈಗೊಳ್ಳಬಾರದು' ಎಂದು ಆದೇಶಿಸಿದೆ.

ಮುಂಬೈನಲ್ಲಿ ತನ್ನ ಕೇಂದ್ರ ಕಚೇರಿ ಹೊಂದಿರುವ, 'ಮಾಲ್ ಆಫ್ ಏಷ್ಯಾ'ದ 'ಸ್ಪಾರ್ಕಲ್ ಒನ್ ಮಾಲ್ ಡೆವಲಪರ್ಸ್ ಲಿಮಿಟೆಡ್' ಕಂಪನಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ.ಎಸ್. ಕಮಾಲ್ ಅವರಿದ್ದ ಏಕಸದಸ್ಯ ನ್ಯಾಯಪೀಠವು 2023ರ ಡಿ.31ರಂದು ವಿಚಾರಣೆ ನಡೆಸಿತು.

ಪ್ರಕರಣವೇನು?: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಂಪರ್ಕಿಸುವ ಬಳ್ಳಾರಿ ರಸ್ತೆಯ ಬ್ಯಾಟರಾಯನಪುರದಲ್ಲಿರುವ 'ಮಾಲ್ ಆಫ್ ಏಷ್ಯಾ' 2023ರ ಅ. 22ರಿಂದ ಕಾರ್ಯಾರಂಭ ಮಾಡಿದೆ.

'ಮಾಲ್‌ನಲ್ಲಿ ವಾಹನಗಳ ಪಾರ್ಕಿಂಗ್ ಸೌಲಭ್ಯ, ಸಂಚಾರ ನಿಯಂತ್ರಣವೂ ಸೇರಿದಂತೆ ನೀವು ಕೈಗೊಂಡಿರುವ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮಾಹಿತಿ ನೀಡಿ' ಎಂದು ನಗರ ಪೊಲೀಸರು 2023ರ ಅಕ್ಟೋಬರ್ 11ರಂದು ಮಾಲ್‌ನ ಆಡಳಿತ ಮಂಡಳಿಗೆ ನೋಟಿಸ್ ನೀಡಿದ್ದರು. ಈ ನೋಟಿಸ್‌ಗೆ ಅಕ್ಟೋಬರ್ 20ರಂದು ಪ್ರತಿಕ್ರಿಯಿಸಿದ್ದ ಮಾಲ್‌ನ ಆಡಳಿತ ಮಂಡಳಿ, 'ಅಗತ್ಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ' ಎಂದು ತಿಳಿಸಿತ್ತು.

ವಾಹನ ದಟ್ಟಣೆ, ಸಂಚಾರ ಅಸ್ತವ್ಯಸ್ತತೆ ಹಿನ್ನೆಲೆಯಲ್ಲಿ ನಗರ ಪೊಲೀಸ್ ಆಯುಕ್ತರು, 'ಮಾಲ್‌ಗೆ 2023ರ ಡಿ.31ರಿಂದ 2024ರ ಜನವರಿ 15ರವರೆಗೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಬೇಕು' ಎಂದು ಸೂಚಿಸಿ, ಅಪರಾಧ ಪ್ರಕ್ರಿಯಾ ದಂಡ ಸಂಹಿತೆ (ಸಿಆರ್‌ಪಿಸಿ) ಕಲಂ 144ರ ಅಡಿ, 'ಮಾಲ್ ಮುಂಭಾಗದ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ' ಎಂದು ಡಿಸೆಂಬರ್ 30ರಂದು ಆದೇಶಿಸಿದ್ದರು. ಇದನ್ನು ಪ್ರಶ್ನಿಸಿ ಮಾಲ್ ಆಡಳಿತ ಮಂಡಳಿ ಹೈಕೋರ್ಟ್ ಮೆಟ್ಟಿಲೇರಿದೆ.

6 ಲಕ್ಷ ಆಸ್ತಿ: 'ಎಸ್‌ಎಂಎಸ್ ನೋಟಿಸ್'

₹500 ಕೋಟಿ ತೆರಿಗೆ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ವ್ಯಾಪ್ತಿಯಲ್ಲಿ 6 ಲಕ್ಷ ಆಸ್ತಿ ಮಾಲೀಕರು ತೆರಿಗೆಯನ್ನು ಉಳಿಸಿಕೊಂಡಿದ್ದಾರೆ. ಇವರಿಗೆಲ್ಲ ಬಿಬಿಎಂಪಿ 'ಎಸ್‌ಎಂಎಸ್ ನೋಟಿಸ್' ಕಳುಹಿಸುತ್ತಿದ್ದು, ಸುಮಾರು ₹500 ಕೋಟಿ ಸಂಗ್ರಹಿಸುವ ಗುರಿ ಹೊಂದಿದೆ.

'ನೀವು ಆಸ್ತಿ ತೆರಿಗೆಯನ್ನು ಈವರೆಗೂ ಪಾವತಿಸಿಲ್ಲ. ಬಾಕಿ ಉಳಿಸಿಕೊಂಡರೆ ಬಿಬಿಎಂಪಿ ಕಾಯ್ದೆ–2020ರಂತೆ ಕ್ರಮ ಕೈಗೊಳ್ಳಲಾಗುತ್ತದೆ. ಈ ಕಾಯ್ದೆಯಂತೆ ಚರಾಸ್ತಿಗಳನ್ನು ಜಪ್ತಿ ಮತ್ತು ಮಾರಾಟ ಮಾಡಬಹುದು, ಸ್ಥಿರಾಸ್ತಿಗಳನ್ನು ವಶಕ್ಕೆ ಪಡೆದುಕೊಳ್ಳಬಹುದು. ಸ್ಥಿರಾಸ್ತಿ ವಶಕ್ಕೆ ಪಡೆದುಕೊಂಡಿರುವುದನ್ನು ಉಪ ನೋಂದಣಾಧಿಕಾರಿ ವಿತರಿಸುವ ಋಣಭಾರ ಪ್ರಮಾಣಪತ್ರದಲ್ಲಿ (ಎನ್‌ಕಂಬ್ರನ್ಸ್ ಸರ್ಟಿಫಿಕೇಟ್) ನಮೂದಿಸಬಹುದು. ಬ್ಯಾಂಕ್ ಖಾತೆಗಳನ್ನು ವಶಪಡಿಸಿಕೊಂಡು, ಪಾವತಿ ಮಾಡಿಕೊಳ್ಳಬಹುದು ಮತ್ತು ಕ್ರಿಮಿನಲ್ ಪ್ರಕರಣ ದಾಖಲಿಸಬಹುದು' ಎಂದು 'ಎಸ್‌ಎಂಎಸ್ ನೋಟಿಸ್'ನಲ್ಲಿ ತಿಳಿಸಲಾಗಿದೆ.

ಆನ್‌ಲೈನ್‌ನ ಲಿಂಕ್ ನೀಡಲಾಗಿದ್ದು, ಆ ಮೂಲಕ ಆಸ್ತಿ ತೆರಿಗೆ ಪಾವತಿಸಿ ಎಂದು ಹೇಳಲಾಗಿದೆ.

'ನಗರದಲ್ಲಿ ಒಂದು ಅಥವಾ ಅದಕ್ಕಿಂತ ಹೆಚ್ಚು ವರ್ಷಗಳಿಂದ ಆಸ್ತಿ ತೆರಿಗೆಯನ್ನು ಪಾವತಿಸಿಲ್ಲದವರಿಗೆ ಎಸ್‌ಎಂಎಸ್ ಸಂದೇಶಗಳನ್ನು ಮೂರು ತಿಂಗಳಿಂದ ಕಳುಹಿಸಲಾಗುತ್ತಿದೆ. ಆದರೂ 6 ಲಕ್ಷಕ್ಕೂ ಹೆಚ್ಚು ಮಂದಿ ಇನ್ನೂ ಪಾವತಿಸಿಲ್ಲ. ಹೀಗಾಗಿ, ಬಿಬಿಎಂಪಿ ಕಾಯ್ದೆ 2020 ಪ್ರಕಾರ ಯಾವ ರೀತಿ ಕ್ರಮ ಕೈಗೊಳ್ಳಬಹುದು ಎಂಬುದನ್ನು ಇದೀಗ ಕಳುಹಿಸಲಾಗುತ್ತಿರುವ ಎಸ್‌ಎಂಎಸ್‌ನಲ್ಲಿ ಆಸ್ತಿ ಮಾಲೀಕರಿಗೆ ವಿವರಿಸಲಾಗಿದೆ' ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ವಾಣಿಜ್ಯ ಕಟ್ಟಡಗಳ ತೆರಿಗೆ ಬಾಕಿಯಿರುವ ಕಟ್ಟಡಗಳಿಗೆ ಬೀಗ ಹಾಕುವ ಬಗ್ಗೆ ಕೆಲವು ಅಧಿಕಾರಿಗಳು ತಪ್ಪು ಮಾಹಿತಿ ನೀಡುತ್ತಿರುವ ಅರಿವಿಗೆ ಬಂದಿದೆ. ಇಂತಹ ಅಧಿಕಾರಿ ಅಥವಾ ಸಿಬ್ಬಂದಿ ಮೇಲೆ ಇಲಾಖಾ ವಿಚಾರಣೆ ನಡೆಸಿ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಹೇಳಿದರು.

'ರಾಜ್ಯ ಹಾಗೂ ಕೇಂದ್ರ ಸರ್ಕಾರದ ಕಟ್ಟಡಗಳ ಆಸ್ತಿ ತೆರಿಗೆ ಬಾಕಿ ಇದ್ದು, ಅದರ ಪ್ರಮಾಣವನ್ನು ಪಟ್ಟಿ ಮಾಡಲಾಗುತ್ತಿದೆ. ಈ ತೆರಿಗೆಯನ್ನೂ ಪಾವತಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತದೆ' ಎಂದು ತಿಳಿಸಿದರು.

ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು

ಬಾಗಿಲಿಗೆ ಬಂತು ಸರ್ಕಾರ
ಸೇವೆಗೆ ಇರಲಿ ಸಹಕಾರ

ಅಹವಾಲು ನಿಮ್ಮದು, ಪರಿಹಾರ ನಮ್ಮದು

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬರುವ ಬಿಬಿಎಂಪಿ, ಬಿಡಿಎ, ಬಿಎಂಆರ್‌ಡಿಎ ಬಿಎಂಆರ್‌ಸಿಎಲ್, ಬಿಎಂಟಿಸಿ, ಜಲಮಂಡಳಿ, ಕಂದಾಯ, ಬೆಸ್ಕಾಂ ಹಾಗೂ ಗ್ಯಾರಂಟಿ ಯೋಜನೆಗಳ ಸಮಸ್ಯೆ ಬಗ್ಗೆ ಅಹವಾಲು ಸಲ್ಲಿಸಬಹುದು.

ದಿನಾಂಕ	ವಿಧಾನಸಭಾ ಕ್ಷೇತ್ರ	ಸ್ಥಳ
ಜನವರಿ 03 2024	ಕೆ ಆರ್ ಪುರ ಮಹದೇವಪುರ	ಡಾ. ಬಿ ಆರ್ ಅಂಬೇಡ್ಕರ್ ಕ್ರೀಡಾಂಗಣ, ದೂರವಾಣಿ ನಗರ, ಕೆ ಆರ್ ಪುರ ಮುಖ್ಯರಸ್ತೆ, ಬೆಂಗಳೂರು-560016.
ಜನವರಿ 05 2024	ಯಲಹಂಕ ದಾಸರಹಳ್ಳಿ ಬ್ಯಾಟರಾಯನಪುರ	ಡಾ. ಬಿ ಆರ್ ಅಂಬೇಡ್ಕರ್ ಭವನ, 16ನೇ "ಎ" ಮುಖ್ಯರಸ್ತೆ, ಎನ್.ಇ.ಎಸ್. ಬಸ್ ನಿಲ್ದಾಣದ ಹತ್ತಿರ, ಯಲಹಂಕ ನ್ಯೂಟೌನ್, ಬೆಂಗಳೂರು-560064.
ಜನವರಿ 06 2024	ಶಿವಾಜಿನಗರ ಹೆಬ್ಬಾಳ ಪುಲಕೇಶಿನಗರ	ಆರ್.ಬಿ.ಎ.ಎನ್.ಎಮ್.ಎಸ್ ಹೈಸ್ಕೂಲ್ ಮೈದಾನ, ಸೆಂಟ್ ಜಾನ್ಸ್ ರಸ್ತೆ, ಶಿವನ್ ಚೆಟ್ಟಿ ಗಾರ್ಡನ್, ಬೆಂಗಳೂರು-560042.

ಸೂಚನೆ: ಅಹವಾಲು ಸಲ್ಲಿಸಲು ಬರುವ ನಾಗರಿಕರು ತಮ್ಮ ಆಧಾರ್ ಕಾರ್ಡ್ ಅಥವಾ ಪಡಿತರ ಚೀಟಿ ತರಲು ಕೋರಿದೆ.

ಬೆಳಗ್ಗೆ 9.30 ರಿಂದ

ಶ್ರೀ ಡಿ ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

2013ರಲ್ಲಿ ಜ್ಯೋತಿಷಿ ಚಂದ್ರಶೇಖರ್ ಭಟ್ ಮನೆ ಮೇಲೆ ಐಟಿ ದಾಳಿ ಪ್ರಕರಣ

ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಾಳಿ ವೇಳೆ ವಶಪಡಿಸಿಕೊಂಡ ಮೂಲ ದಾಖಲೆಗಳನ್ನು ಹಿಂದಿರುಗಿಸದೆ ವಿನಾಕಾರಣ ತೊಂದರೆ ಉಂಟು ಮಾಡಿ ತಪ್ಪೆಸಗಿದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಮತ್ತು ಅರ್ಜಿದಾರರಿಗೆ ಉಂಟಾದ ಹಾನಿ ಅಥವಾ ಪರಿಹಾರವನ್ನು ತಪ್ಪೆಸಗಿದ ಅಧಿಕಾರಿಗಳಿಂದಲೇ ಭರಿಸಬೇಕು' ಎಂಬ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಎತ್ತಿಹಿಡಿದಿದೆ.

'ಆರ್‌.ಟಿ.ನಗರದ ಜ್ಯೋತಿಷಿ ಚಂದ್ರಶೇಖರ ಸ್ವಾಮೀಜಿ ಮನೆಯ ಮೇಲೆ 2013ರಲ್ಲಿ ದಾಳಿ ನಡೆಸಿ ವಶಪಡಿಸಿಕೊಂಡ ಮೂಲ ದಾಖಲೆಗಳನ್ನು 10 ವರ್ಷ ಕಳೆದರೂ ಹಿಂದಿರುಗಿಸದೆ ತಪ್ಪೆಸಗಿದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಏಕಸದಸ್ಯ ನ್ಯಾಯಪೀಠ ಆದೇಶಿಸಿತ್ತು.

ಈ ಆದೇಶವನ್ನು ಪ್ರಶ್ನಿಸಿ ಬೆಂಗಳೂರಿನ ಆದಾಯ ತೆರಿಗೆ ಇಲಾಖೆಯ ಮಹಾ ನಿರ್ದೇಶಕ, ಪ್ರಧಾನ ಆಯುಕ್ತ, ಹೆಚ್ಚುವರಿ ಆಯುಕ್ತ ಮತ್ತು ಆದಾಯ ತೆರಿಗೆ ಉಪ ಆಯುಕ್ತರು ಮೇಲ್ಮನವಿ ಸಲ್ಲಿಸಿದ್ದರು. 'ಏಕಸದಸ್ಯ ನ್ಯಾಯಪೀಠ ನಮ್ಮ ವಿರುದ್ಧ ಕಟುವಾದ ನಿರ್ದೇಶನ ನೀಡಿದ್ದು, ಈ ಸಂಬಂಧದ ವಿವರಗಳನ್ನು ಆದೇಶದಿಂದ ಅಳಿಸಿ ಹಾಕಬೇಕು' ಎಂದು ಕೋರಿದ್ದರು.

ಈ ಮೇಲ್ಮನವಿ ವಜಾಗೊಳಿಸಿದ್ದ ನ್ಯಾಯಮೂರ್ತಿ ಪಿ.ಎಸ್‌.ದಿನೇಶ್ ಕುಮಾರ್ ಮತ್ತು ಸಿ.ಎಂ.ಪೂಣಚ್ಚ ಅವರಿದ್ದ ವಿಭಾಗೀಯ ನ್ಯಾಯಪೀಠವು, ನ್ಯಾಯಮೂರ್ತಿ ಕೃಷ್ಣ ಎಸ್‌.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ಸಮ್ಮತಿಯ ಮುದ್ರೆ ಒತ್ತಿದೆ. ಸ್ವಾಮೀಜಿ ಪರ ಹೈಕೋರ್ಟ್ ವಕೀಲ ಎನ್‌.ಅಜಯ್ ಕುಮಾರ್ ಮತ್ತು ಮೇಲ್ಮನವಿಯಲ್ಲಿ ಶ್ರೀಧರ ಪ್ರಭು ವಾದ ಮಂಡಿಸಿದ್ದರು.

ಮೂಲ ದಾಖಲೆ ಹಿಂದಿರುಗಿಸಲು ಕೋರಿದ್ದ ಅರ್ಜಿ

ರಾಜ್ಯ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಚಂದ್ರಶೇಖರ ಸ್ವಾಮೀಜಿ ಮನೆ ಮೇಲೆ 2013ರ ಮೇ 4ರಂದು ದಾಳಿ ನಡೆಸಿ, ಸ್ಥಿರಾಸ್ತಿಗೆ ಸಂಬಂಧಿಸಿದ ಹಲವು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದ್ದರು. ದಾಳಿ ನಡೆಸಿ ಒಂದು ದಶಕ ಕಳೆದರೂ ಆ ದಾಖಲೆಗಳನ್ನು ಸ್ವಾಮೀಜಿಗೆ ಹಸ್ತಾಂತರ ಮಾಡಿರಲಿಲ್ಲ. ಈ ಸಂಬಂಧ ಸ್ವಾಮೀಜಿ, 2023ರ ಜೂನ್ 28ರಂದು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿ, 'ನನ್ನಿಂದ ವಶಪಡಿಸಿಕೊಂಡಿರುವ ಮೂಲ ದಾಖಲೆಗಳನ್ನು ಹಿಂದಿರುಗಿಸಲು ಆದಾಯ ತೆರಿಗೆ ಇಲಾಖೆಗೆ ನಿರ್ದೇಶಿಸಬೇಕು' ಎಂದು ಕೋರಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಕೃಷ್ಣ ಎಸ್‌.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠವು, ಆದಾಯ ತೆರಿಗೆ ಇಲಾಖೆ ಮಹಾ ನಿರ್ದೇಶಕರು, ಪ್ರಧಾನ ಆಯುಕ್ತರು, ಹೆಚ್ಚುವರಿ ಆಯುಕ್ತರು ಮತ್ತು ಉಪ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತ್ತು. 2023ರ ಆಗಸ್ಟ್

30ರಂದು ಅರ್ಜಿ ವಿಚಾರಣೆ ನಡೆಸಿದಾಗ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ನ್ಯಾಯಪೀಠಕ್ಕೆ ಮೆಮೊ ಸಲ್ಲಿಸಿದ್ದರು.

'2013ರ ಮೇ 4ರಂದು ದಾಳಿ ನಡೆಸಿದ ಸಂದರ್ಭದಲ್ಲಿ ಚಂದ್ರಶೇಖರ ಸ್ವಾಮೀಜಿ ಮನೆಯಿಂದ ವಶಪಡಿಸಿಕೊಂಡ ದಾಖಲೆಗಳನ್ನು ಈಗಾಗಲೇ ಹಿಂದಿರುಗಿಸಲಾಗಿದೆ. ಆದ್ದರಿಂದ, ಅರ್ಜಿ ವಿಚಾರಣೆ ಮುಂದುವರಿಸುವ ಅಗತ್ಯವಿಲ್ಲ' ಎಂದು ಮೆಮೊದಲ್ಲಿ ತಿಳಿಸಿದ್ದರು. ಈ ಹೇಳಿಕೆಯನ್ನು ದಾಖಲಿಸಿಕೊಂಡಿದ್ದ ಏಕಸದಸ್ಯ ನ್ಯಾಯಪೀಠ, ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ದಾಖಲೆ ಹಿಂದಿರುಗಿಸಲು ತಾಳಿದ್ದ ವಿಳಂಬ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು.

'ದಾಳಿ ಸಂದರ್ಭದಲ್ಲಿ ವಶಪಡಿಸಿಕೊಂಡ ದಾಖಲೆಗಳನ್ನು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಕಾಲಮಿತಿ ಕಾಯ್ದೆಯಡಿ ನಿರ್ದಿಷ್ಟ ಸಮಯದವರೆಗೆ ಮಾತ್ರ ತಮ್ಮ ವಶದಲ್ಲಿ ಇರಿಸಿಕೊಳ್ಳಲು ಅವಕಾಶವಿದೆ. ಆದರೆ, ಈ ಪ್ರಕರಣವನ್ನು ಗಮನಿದಾಗ, 2013ರಲ್ಲಿ ವಶಪಡಿಸಿಕೊಂಡ ದಾಖಲೆಗಳನ್ನು 10 ವರ್ಷ ಕಳೆದರೂ ಹಿಂದಿರುಗಿಸದೆ ಅರ್ಜಿದಾರ ಸ್ವಾಮೀಜಿಗೆ ತೊಂದರೆ ನೀಡಲಾಗಿದೆ. ಈ ಮೂಲಕ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ತಪ್ಪೆಸಗಿದ್ದಾರೆ' ಎಂಬ ಅಭಿಪ್ರಾಯವನ್ನು ದಾಖಲಿಸಿ ಅರ್ಜಿ ವಿಲೇವಾರಿ ಮಾಡಿತ್ತು. ಅಂತೆಯೇ, 'ಅಧಿಕಾರಿಗಳು ಎಸಗಿದ ತಪ್ಪಿಗೆ ಪರಿಹಾರ ಪಡೆಯಲು ಸ್ವಾಮೀಜಿ ಮುಂದಾದಲ್ಲಿ ಅದಕ್ಕಿರುವ ಎಲ್ಲ ಅವಕಾಶಗಳು ಮುಕ್ತವಾಗಿವೆ' ಎಂದು ಸ್ವಾಮೀಜಿಗೆ ನಿರ್ದೇಶಿಸಿತ್ತು.

ತಾಯಿ ಬಿಟ್ಟು ಹೋದ ಮಗುವಿನ ಗುರುತು ಪತ್ತೆ

ಗುಂಡ್ಲುಪೇಟೆ: ಪಟ್ಟಣದ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಮಹಿಳೆಯೊಬ್ಬರು ಡಿ.20ರಂದು ಬಿಟ್ಟು ಹೋಗಿದ್ದ ಹೆಣ್ಣುಮಗುವಿನಗುರುತುಪತ್ತೆಯಾಗಿದೆ.

ಭಾನುವಾರ ಹಾಸನದಿಂದ ಬಂದಿದ್ದ ತಂದೆ, ಮಗು ಆಶ್ರಯ ಪಡೆದಿದ್ದ ಕೊಳ್ಳೇಗಾಲದ ಜೀವನ ಜ್ಯೋತಿ ಟ್ರಸ್ಟ್‌ಗೆ ಭೇಟಿ ನೀಡಿ ಮಗುವಿನ ದಾಖಲೆಗಳನ್ನು ಹಾಜರು ಪಡಿಸಿದರು. ಮಗುವನ್ನು ಸೋಮವಾರ ಹಾಸನ ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿಗೆ ಹಸ್ತಾಂತರಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆಯ ವಿವರ: ಡಿ.20ರಂದು ಗುಂಡ್ಲುಪೇಟೆ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಮಹಿಳೆಯೊಬ್ಬರು ಕಲ್ಲೀಗೌಡನಹಳ್ಳಿಯ ಮಹದೇವಮ್ಮ ಅವರ ಬಳಿ ಮಗು ಕೊಟ್ಟು, ಶೌಚಾಲಯಕ್ಕೆ ಹೋಗಿ ಬರುವುದಾಗಿ ಹೇಳಿದವರು ವಾಪಸ್ ಆಗಿರಲಿಲ್ಲ.

LIC
भारतीय जीवन बीमा निगम
LIFE INSURANCE CORPORATION OF INDIA
ಭಾರತೀಯ ಜೀವ ವಿಮಾ ನಿಗಮ
ಒಎಸ್/ಎಸ್ಟೇಟ್ಸ್ ಡಿಪಾರ್ಟ್‌ಮೆಂಟ್
ಡಿವಿಜನಲ್ ಕಚೇರಿ-1, ಅಂಚೆ ಪೆಟ್ಟಿಗೆ ಸಂ. 6694,
2ನೇ ಮಹಡಿ, ಜೀವನ್ ಪ್ರಕಾಶ್ ಬಿಲ್ಡಿಂಗ್, ಜೆ.ಸಿ.ರಸ್ತೆ,
ಬೆಂಗಳೂರು–560002. ದೂರವಾಣಿ: 22966509.
ನಮ್ಮ ಗ್ರಾಹಕರ ಮಾಹಿತಿಗಾಗಿ ಪ್ರಕಟಣೆ
ನಮ್ಮ ಪಾಲಿಸಿಗಳನ್ನು ಹೊಂದಿರುವ ಅಮೂಲ್ಯ ಪಾಲಿಸಿದಾರರೇ ಮತ್ತು ಸಾಮಾನ್ಯ ಸಾರ್ವಜನಿಕರೇ, ಭಾರತೀಯ ಜೀವ ವಿಮಾ ನಿಗಮದ ಬನಶಂಕರಿ ಸ್ಯಾಟಲೈಟ್ ಕಚೇರಿಯನ್ನು, ಅತಿ ಶೀಘ್ರದಲ್ಲಿ ಕೆಳಕಂಡ ವಿಳಾಸದಲ್ಲಿರುವ ಹೊಸ ಪ್ರಾಂಗಣಕ್ಕೆ ವರ್ಗಾಯಿಸುತ್ತಿದ್ದೇವೆ ಎಂದು ತಿಳಿಸಲು ಹರ್ಷಿಸುತ್ತೇವೆ.
ಭಾರತೀಯ ಜೀವ ವಿಮಾ ನಿಗಮ,
"ಎ.ಕೆ.ಆರ್ಕೇಡ್", 583, ಬನಶಂಕರಿ 3ನೇ ಸ್ಟೇಜ್, 2ನೇ ಫೇಸ್,
6ನೇ ಬ್ಲಾಕ್, ಬೆಂಗಳೂರು–560085.
ದಿನಾಂಕ: 02–01–2024 ಸೀ. ಡಿವಿಜನಲ್ ಮ್ಯಾನೇಜರ್

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101
ದೂರವಾಣಿ ಸಂಖ್ಯೆ: ಕಛೇರಿ: 08156–295427 ಫ್ಯಾಕ್ಸ್: 08156–295427 ಇಮೇಲ್: eemidcbpura@gmail.com
ಅಲ್ಪಾವಧಿ ಟೆಂಡರ್ ಅಧಿಸೂಚನೆ
ಸಂಖ್ಯೆ : ಕಾನಟ/ತಾಂಶಾ/ತಾಂಸ ಟೆಂಡರ್ ಪ್ರಕಟಣೆ ಸಂಖ್ಯೆ: 02/2023–24, ದಿನಾಂಕ : 30/12/2023
4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ ಯೋಜನೆ ಅಡಿಯಲ್ಲಿ
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ, ಗೌರಿಬಿದನೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕೆ.ಡಬ್ಲ್ಯೂ 2 ನಿಬಂಧನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1, 2, ಮತ್ತು 3ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 16/01/2024 ಸಾಯಂಕಾಲ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 19/01/2024 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ-ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–270427 ಮತ್ತು ಇ-ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 91–8068948777 ಮತ್ತು 91–8046010000 ರಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಕರ್ನಾಟಕ ಸರ್ಕಾರ
ಆಯುಕ್ತರ ಕಾರ್ಯಾಲಯ
ನಗರ ಭೂ ಸಾರಿಗೆ ನಿರ್ದೇಶನಾಲಯ,
ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ
ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್. ರಸ್ತೆ,
ಶಾಂತಿನಗರ, ಬೆಂಗಳೂರು–560027, ದೂರವಾಣಿ : 080–22226627/6628,
ಫ್ಯಾಕ್ಸ್ : 080–22226630, ಇಮೇಲ್ : dultbangalore@gmail.com,
dult@karnataka.gov.in Web: https://dult.karnataka.gov.in
ಸಂಖ್ಯೆ: DULT-TECH/54/2023/1064 ದಿನಾಂಕ : 01.01.2024
ಇ–ಟೆಂಡರ್ ಅಧಿಸೂಚನೆ
ನಗರ ಭೂ ಸಾರಿಗೆ ನಿರ್ದೇಶನಾಲಯವು ಬೆಂಗಳೂರು ನಗರದ ATIMS ಯೋಜನೆಗಾಗಿ QLM, ATCC ಮತ್ತು VMS ಕಂಬಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ 7 ದಿನಗಳ ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆಯನ್ನು ಪ್ರಕಟಿಸಿದೆ (ಟೆಂಡರ್ ಸಂಖ್ಯೆ. DULT/2023-24/UC/WORK_INDENT1/CALL-2), ಈ ಟೆಂಡರ್ ಪ್ರಕ್ರಿಯೆಯಲ್ಲಿ ಬಿಡ್ ಸಲ್ಲಿಸುವ ಕೊನೆಯ ದಿನಾಂಕ 08.01.2024 ಹೆಚ್ಚಿನ ಮಾಹಿತಿಗಳನ್ನು https://kppp.karnataka.gov.in. ನಿಂದ ಪಡೆದುಕೊಳ್ಳಬಹುದು.
ಸಹಿ/–
ಆಡಳಿತಾಧಿಕಾರಿ
ನಗರ ಭೂ ಸಾರಿಗೆ ನಿರ್ದೇಶನಾಲಯ
ನಗರಾಭಿವೃದ್ಧಿ ಇಲಾಖೆ, ಬೆಂಗಳೂರು
ವಾಸಾಸಂಇ/ವಾಪ್ರ/2815/ಶಿರಡಿ ಸಾಯಿ/2023–24

'ಕಾಂಗ್ರೆಸ್ ನಾಯಕರ ಭೇಟಿ ಮಾಡಿಲ್ಲ'

ರಾಷ್ಟ್ರಕವಿ ಕುವೆಂಪು ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ವಿ. ಸೋಮಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಪಕ್ಷದ ನಾಯಕರನ್ನು ನಾನು ಭೇಟಿ ಮಾಡಿಲ್ಲ. ಲೋಕಸಭೆಗೆ ಟಿಕೆಟ್ ಕೇಳಿಲ್ಲ' ಎಂದು ಮಾಜಿ ಸಚಿವ ವಿ. ಸೋಮಣ್ಣ ಹೇಳಿದರು.

ವಿಜಯನಗರದಲ್ಲಿರುವ ತಮ್ಮ ಕಾರ್ಯಾಲಯದಲ್ಲಿ ವಿ.ಸೋಮಣ್ಣ ಪ್ರತಿಷ್ಠಾನ ವತಿಯಿಂದ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಜಯಂತಿ ಮತ್ತು ಹೊಸ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿ, ಕುವೆಂಪು ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

'ದೊಡ್ಡವರ ಮಾತು ಕೇಳಿ ನೋವು ಮಾಡಿಕೊಂಡೆ. ನನ್ನ ಈ ಪರಿಸ್ಥಿತಿ ಕಾರಣರಾದವರ ಹತ್ತಿರ ವರಿಷ್ಠರು ಚರ್ಚೆ ಮಾಡಿ ಗೊಂದಲ ಬಗೆಹರಿಸಬೇಕು. ಕಾಂಗ್ರೆಸ್ ಪಕ್ಷದಿಂದ ನನಗೆ ಯಾವುದೇ ತೊಂದರೆಯಾಗಿಲ್ಲ' ಎಂದು ತಿಳಿಸಿದರು.

'ರಾಜಕೀಯ ನಿಂತ ನೀರಲ್ಲ. ನಾನು ಮಾಡಿದ ತಪ್ಪಿಗೆ ಕಾರ್ಯಕರ್ತರು

ವಿ.ಸೋಮಣ್ಣ ಪ್ರತಿಷ್ಠಾನ ವತಿಯಿಂದ ಕುವೆಂಪು ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ನೋವು ಅನುಭವಿಸುತ್ತಿದ್ದಾರೆ. ನಾನು ಮಾಡಿರುವ ಕೆಲಸಗಳು ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದಿವೆ' ಎಂದರು.

'ರಾಜಕೀಯದಲ್ಲಿ ಅನನುಕೂಲತೆ ಸಹಜ. ಬದ್ಧತೆಯ ನಡವಳಿಕೆ ಜೀವನದಲ್ಲಿ ಬಹಳ ಮುಖ್ಯ. ಬದ್ಧತೆಯಿಂದ ನಡೆದುಕೊಂಡಾಗ ನೋವು ಸಹಜ. ಆದರೆ ಅದರ ಮಾರ್ಗ ಬಿಡಬಾರದು' ಎಂದು ಹೇಳಿದರು.

'ರಾಮಜನ್ಮ ಭೂಮಿ ಆಗಬಾರದು ಎಂದು ಹೋರಾಟ ಮಾಡಿದ್ದ ವ್ಯಕ್ತಿಯೇ ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮೋದಿ ಆಡಳಿತದಲ್ಲಿ ಭವ್ಯ ಭಾರತ ನಿರ್ಮಾಣವಾಗಲಿದೆ. ಅವರು ಮತ್ತೊಮ್ಮೆ ಪ್ರಧಾನಿ ಆಗಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಾಜಿ ಸಚಿವರಾದ ಶಿವನಗೌಡ ನಾಯಕ್, ವಿಧಾನಪರಿಷತ್ ಸದಸ್ಯರಾದ ಅ. ದೇವೇಗೌಡ, ವಿ. ಸೋಮಣ್ಣ ಪ್ರತಿಷ್ಠಾನದಅಧ್ಯಕ್ಷೆಶೈಲಜಾಸೋಮಣ್ಣ, ಕೋಶಾಧ್ಯಕ್ಷರಾದ ನವೀನ್ ಸೋಮಣ್ಣ, ಕನ್ನಡ ಪರ ಹೋರಾಟಗಾರ ಫಾಲನೇತ್ರ, ಮಂಡಲ ಬಿಜೆಪಿ ಅಧ್ಯಕ್ಷ ವಿಶ್ವನಾಥಗೌಡ, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ದಾಸೇಗೌಡ, ರೂಪಲಿಂಗೇಶ್ವರ್, ಬಿಜೆಪಿ ಮುಖಂಡರಾದ ಕ್ರಾಂತಿ ರಾಜು, ಸಿ.ಎಂ. ರಾಜಪ್ಪ ಭಾಗವಹಿಸಿದ್ದರು.

ಮುಖ್ಯಾಂಶಗಳು

- ದೊಡ್ಡವರ ಮಾತು ಕೇಳಿ ನೋವು ಮಾಡಿಕೊಂಡೆ
- ನನ್ನ ತಪ್ಪಿನಿಂದಾಗಿ ಕಾರ್ಯ-ಕರ್ತರಿಗೆ ನೋವು
- ಕಾಂಗ್ರೆಸ್ ಪಕ್ಷದಿಂದ ನನಗೆ ಯಾವುದೇ ತೊಂದರೆ ಆಗಿಲ್ಲ
- ರಾಜಕೀಯ ನಿಂತ ನೀರಲ್ಲ

ದೇವರ ದರ್ಶನ ಹೊಸವರ್ಷದ ಮೊದಲ ದಿನ ಜನಗಳು ವಿಜಯ ನಗರದ ಮಾರುತಿ ಮಂದಿರದಲ್ಲಿ ದರ್ಶನ ಪಡೆದರು.

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಹೊಸ ವರ್ಷಾಚರಣೆಯ ರಾತ್ರಿ ತಾಲ್ಲೂಕಿನ ವಿವಿಧೆಡೆ ನಡೆದ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದು, ಒಬ್ಬರು ಗಾಯಗೊಂಡಿದ್ದಾರೆ.

ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ತಪಸೀಹಳ್ಳಿ ಬಳಿ ಲಾರಿ ಹಾಗೂ ಕಾರಿನ ನಡುವೆ ಡಿಕ್ಕಿ ಸಂಭವಿಸಿ ಕಾರಿನಲ್ಲಿದ್ದ ಇಬ್ಬರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಗೌರಿಬಿದನೂರು ತಾಲ್ಲೂಕಿನ ಕೆಂಕರೆ ಗ್ರಾಮದ ಭರತ್‌ಕುಮಾರ್(24), ನಿತಿನ್(19) ಮೃತರು.

ಬೈಕ್ ಅಪಘಾತ: ತಾಲ್ಲೂಕಿನ ಮಧುರೆ ಬಳಿ ದ್ವಿಚಕ್ರ ವಾಹನ ನಿಯಂತ್ರಣ ತಪ್ಪಿ ಸವಾರ ಗಾಯಗೊಂಡಿದ್ದಾರೆ. ಮೆಳೆಕೋಟೆಯ ದಿಲೀಪ್ ಗಾಯಗೊಂಡವರು. ಕರ್ತವ್ಯದಲ್ಲಿದ್ದ ಪೊಲೀಸರು ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬೆಟ್ಟ ಹತ್ತುವಾಗ ಹೃದಯಾಘಾತ- ವೃದ್ಧ ಸಾವು

ಮೇಲುಕೋಟೆ (ಮಂಡ್ಯ): ಹೊಸ ವರ್ಷಾಚರಣೆಗಾಗಿ ಇಲ್ಲಿನ ಯೋಗಾನರಸಿಂಹ ಸ್ವಾಮಿ ಬೆಟ್ಟ ಹತ್ತುವ ವೇಳೆ, ರಾಮನಗರ ಜಿಲ್ಲೆಯ ಕೆಂಚ-ಗಾರನಹಳ್ಳಿಯ ನಿವಾಸಿ ಶಾರದ (70) ಎಂಬುವವರು ಹೃದಯಾಘಾತದಿಂದ ಮೃತಪಟ್ಟರು.

ಏಕಾಂಗಿಯಾಗಿ ಮೇಲುಕೋಟೆ ದೇವರ ದರ್ಶನಕ್ಕೆ ಬಂದು ಪಂಚಕ-ಲ್ಯಾಣಿಯಲ್ಲಿ ತೀರ್ಥ ಪ್ರೋಕ್ಷಣೆ ಬಳಿಕ ಕಲ್ಯಾಣಮ್ಮನಿಗೆ ಪೂಜೆ ಸಲ್ಲಿಸಿದ್ದರು. ನಂತರ, ಬೆಟ್ಟ ಹತ್ತುವಾಗ ಅರ್ಧದಲ್ಲೇ ಹೃದಯಾಘಾತ ಸಂಭವಿಸಿದ್ದು, ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಕೊನೆಯುಸಿರೆಳೆದರು.

ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಶವವನ್ನು ಸಂಜೆ ವೇಳೆ ಕುಟುಂಬಸ್ಥರಿಗೆ ಹಸ್ತಾಂತರಿಸಿದರು.

ಹಣ ದ್ವಿಗುಣ: ₹5.83 ಲಕ್ಷ ವಂಚನೆ

ಚಿಕ್ಕಬಳ್ಳಾಪುರ: ಹೂಡಿಕೆ ಮಾಡಿದರೆ ಹೆಚ್ಚು ಆದಾಯ ಬರುತ್ತದೆ, ಹಣ ದ್ವಿಗುಣಗೊಳಿಸಲಾಗುತ್ತದೆ ಎನ್ನುವ ಜಾಹೀರಾತು ನಂಬಿ ಗೌರಿಬಿದನೂರು ತಾಲ್ಲೂಕಿನ ಹಾಲಗಾನಹಳ್ಳಿ ಗ್ರಾಮದ ಎನ್.ಶಿವಶಂಕರ್ ಅವರು ₹ 5.83 ಲಕ್ಷ ಕಳೆದುಕೊಂಡಿದ್ದಾರೆ. ಈ ಬಗ್ಗೆ ನಗರದ ಸಿಇಎನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. 'ಹೂಡಿಕೆ ಮಾಡಿದರೆ ಹಣ ದ್ವಿಗುಣವಾಗುತ್ತದೆ ಎಂದು ಇನ್‌ಸ್ಟಾ-ಗ್ರಾಮ್‌ನಲ್ಲಿ ಜಾಹೀರಾತು ಬರುತ್ತಿತ್ತು. ಮನೆಯಲ್ಲಿ ಇದ್ದುಕೊಂಡು ಹಣ ಹೂಡಿಕೆ ಮಾಡಿ ಸಂಪಾದನೆ ಮಾಡಲು ತೀರ್ಮಾನಿಸಿದೆ. ಮೊದಲಿಗೆ ₹ 49 ಸಾವಿರ ಹೂಡಿಕೆ ಮಾಡಿದೆ. ನಂತರ ಹಂತ ಹಂತವಾಗಿ ಹೂಡಿಕೆ ಮಾಡಿದೆ. ಒಟ್ಟು ₹ 5.83 ಲಕ್ಷವನ್ನು ಆನ್ ಲೈನ್ ಮೂಲಕ ಹೂಡಿಕೆ ಮಾಡಿಸಿಕೊಂಡು ವಂಚಿಸಿರುವವರನ್ನು ಪತ್ತೆ ಮಾಡಿ ಕಾನೂನು ಕ್ರಮಕೈಗೊಳ್ಳುವಂತೆ' ಅವರು ದೂರಿನಲ್ಲಿ ಕೋರಿದ್ದಾರೆ.

ಚಿತ್ರಾವಳಿ

ಹೊಸವರ್ಷದ ಮೊದಲ ದಿನವಾದ ಸೋಮವಾರ ಬಸವನಗುಡಿ ರಸ್ತೆಯಲ್ಲಿರುವ ದೊಡ್ಡ ಗಣಪತಿ ದೇವಸ್ಥಾನದಲ್ಲಿ ಭಕ್ತರು ಗಣಪತಿಯ ದರ್ಶನ ಪಡೆಯಲು ಸಾಲುಗಟ್ಟಿ ನಿಂತಿದ್ದರು

ಹಲಸೂರಿನ ಸೋಮೇಶ್ವರ ದೇವಸ್ಥಾನದಲ್ಲಿ ಸೋಮವಾರ ದೇವರ ದರ್ಶನಕ್ಕಾಗಿ ಭಕ್ತರು ಸರತಿಯಲ್ಲಿ ನಿಂತಿದ್ದರು.

ಪ್ರಜಾವಾಣಿ ಚಿತ್ರ: ಎಸ್‌ಕೆ. ದಿನೇಶ್

ನಗರದಲ್ಲಿ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷರಾದ ಬಿ.ಎಸ್‌ ಶಿವಣ್ಣ ಮಳವಳ್ಳಿ ಅವರು ಸೋಮವಾರ ಮೆಡಿಕಲ್, ಎಂಜಿನಿಯರಿಂಗ್, ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಿಸುವ ಮೂಲಕ ಹೊಸ ವರ್ಷಾಚರಣೆಯನ್ನು ಆಚರಿಸಿದರು

ನಕ್ಸಲ್ ನಿಗ್ರಹ ಕಾರ್ಯಾಚರಣೆ: ಮಗು ಸಾವು

ರಾಯಪುರ (ಪಿಟಿಐ): ಛತ್ತೀಸಗಡದ ಬಿಜಾಪುರದಲ್ಲಿ ಸೋಮವಾರ ನಕ್ಸಲರು ಮತ್ತು ಭದ್ರತಾ ಸಿಬ್ಬಂದಿ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಆರು ತಿಂಗಳ ಮಗು ಮೃತಪಟ್ಟಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಮಟ್ವಂಡಿ ಗ್ರಾಮದ ಬಳಿಯ ಅರಣ್ಯ ಪ್ರದೇಶದಲ್ಲಿ ಜಿಲ್ಲಾ ಮೀಸಲು ಪಡೆಯು ನಕ್ಸಲ್ ನಿಗ್ರಹ ಕಾರ್ಯಾಚರಣೆ ಕೈಗೊಂಡಿದ್ದು, ಈ ವೇಳೆ ಹೆಣ್ಣು ಮಗು ಗುಂಡಿಗೆ ಬಲಿಯಾಗಿದ್ದು, ಮಗುವಿನ ತಾಯಿ ಮತ್ತು ಇಬ್ಬರು ಯೋಧರು ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಕಾರ್ಯಾಚರಣೆ ಮುಂದುವರಿದಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉಲ್ಫಾ ಒಪ್ಪಂದದಿಂದ ಸ್ಥಳೀಯ ಜನರಿಗೆ ಹೆಚ್ಚಿನ ಸುರಕ್ಷತೆ –ಸಿ.ಎಂ

ಗುವಾಹಟಿ: ಉಲ್ಫಾದ ಕೆಲ ಸಂಘಟನೆಗಳ ಜೊತೆ ಒಪ್ಪಂದವಾಗಿರುವುದು ರಾಜ್ಯದಲ್ಲಿ ಸ್ಥಳೀಯರಿಗೆ ಹೆಚ್ಚಿನ ಸುರಕ್ಷತೆ ಒದಗಿಸಲಿದ್ದು, ಅವರಿಗೆ ರಾಜಕೀಯ ಪ್ರಾತಿನಿಧ್ಯ ಮತ್ತು ಭೂಮಿಯ ಹಕ್ಕುಗಳು ಸಿಗಲಿವೆ ಎಂದು ಮುಖ್ಯಮಂತ್ರಿ ಹಿಮಂತಾ ಬಿಸ್ವ ಶರ್ಮಾ ಸೋಮವಾರ ಹೇಳಿದರು.

ಹೊಸ ವರ್ಷದ ನಿಮಿತ್ತ ಔಪಚಾರಿಕವಾಗಿ ಮಾಧ್ಯಮ ಪ್ರತಿನಿಧಿಗಳ ಜೊತೆಗೆ ಮಾತನಾಡಿದ ಅವರು, ಅಸ್ಸಾಂನ ಸಾರ್ವಭೌಮತೆಗೆ ಒತ್ತಾಯಿಸಲು ಉಲ್ಫಾ ರಚನೆಯಾಗಿತ್ತು. ಯಾರೊಬ್ಬರಿಗೂ ಸಾರ್ವಭೌಮತೆ ಸಿಗುವುದಿಲ್ಲ. ಆದರೆ, ಈ ಒಪ್ಪಂದವು ಅಸ್ಸಾಂ ಜನರಿಗೆ ಸಂವಿಧಾನದ ಅನುಸಾರ ಹೆಚ್ಚಿನ ಸುರಕ್ಷತೆ ಒದಗಿಸಲಿದೆ ಎಂದು ಹೇಳಿದರು.

ಕ್ಷೇತ್ರ ಪುನರ್ವಿಂಗಡಣೆ ಪ್ರಕಾರ, ಬ್ರಹ್ಮಪುತ್ರ ಕಣಿವೆ ವ್ಯಾಪ್ತಿಯಲ್ಲಿ 96 ಮತ್ತು ಬರಾಕ್ ಕಣಿವೆ ಭಾಗದ ಎಂಟು ಕ್ಷೇತ್ರಗಳಲ್ಲಿ ಪ್ರಾತಿನಿಧ್ಯ ಅಸ್ಸಾಂನ ಸ್ಥಳೀಯ ನಿವಾಸಿಗಳಿಗೆ ಖಾತರಿಯಾಗಿ ರಾಜಕೀಯ ಪ್ರಾತಿನಿಧ್ಯ ಒದಗಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಉಲ್ಫಾ ಮುಖಂಡ, ಪರೇಶ್ ಬರೂಚ್ ಸಂಪರ್ಕದಲ್ಲಿದ್ದು, ಅವರು ಇನ್ನೂ ಶಾಂತಿ ಪ್ರಕ್ರಿಯೆಗೆ ದಾಖಲಾಗಬೇಕಿದೆ. ಅವರ ಜೊತೆ ಚರ್ಚಿಸುತ್ತೇನೆ. ಬೇಗನೆ ಅವರುಮಾತುಕತೆಗೆ ಸಿದ್ಧರಿರಲಿರಲಾರರು. ಅವರ ಪತ್ತೆಗೆ ಕ್ರಮವಹಿಸಬಾರದು ಎಂದು ಪೊಲೀಸರಿಗೆ ಸೂಚಿಸುತ್ತೇನೆ ಎಂದರು.

'ಆತ ರಾಜ್ಯದಿಂದ ಹೊರಗಿದ್ದು, ಈಗ ಯಾವ ರಾಜ್ಯದಲ್ಲಿದ್ದಾನೆ ಎಂದು ತಿಳಿದಿಲ್ಲ. ಆದರೆ, ಕನಿಷ್ಠ 15 ದಿನ ರಾಜ್ಯದಲ್ಲಿದ್ದು, ಅಸ್ಸಾಂನಲ್ಲಿ ಆಗಿರುವ ಅಭಿವೃದ್ಧಿ ಗಮನಿಸಬೇಕು ಎಂದು ಅವರಿಗೆ ತಿಳಿಸಲು ಬಯಸುತ್ತೇನೆ ಎಂದು ಮುಖ್ಯಮಂತ್ರಿ ಹೇಳಿದರು.

ಪುರಸಭಾ ಕಾರ್ಯಾಲಯ, ಬಂಗಾರಪೇಟೆ
web:bangarpettown.mrc.gov.in, Email Id:itstaff_ulb_bangarpet@yahoo.co.in
Phone:08153-253222
ಸಂಖ್ಯೆ:ಪುಸಬಂ/ಆ.ಶಾ/ಟೆಂಡರ್01/2023–24 ದಿನಾಂಕ:27.12.2023
ಟೆಂಡರ್ ಪ್ರಕಟಣೆ
2023–24ನೇ ಸಾಲಿನ ಎಸ್.ಎಫ್.ಸಿ. ಅನುದಾನ ಮತ್ತು ಪುರಸಭೆ ನಿಧಿಯಲ್ಲಿ ಕೆಟಿಪಿಪಿ ಆಧ್ಯಾದೇಶ 1999 ನಿಯಮ 2000 ರನ್ವಯ ಟೆಂಡರ್‌ಗಳನ್ನು ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗಳ ವಿವರಗಳನ್ನು https://www.kppp.karnataka.gov.in ವೆಬ್‌ಸೈಟ್‌ನಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ವಿವರ: (1) DMA/2023-24/SE0798/CALL-2, ಅಂದಾಜು ಮೊತ್ತ: ರೂ.17.85 ಲಕ್ಷಗಳು. ಇಎಂಡಿ: ರೂ. 44,625/–. ಅವಧಿ: 1 ವರ್ಷ. (2) DMA/2023-24/SE0797/CALL-2, ಅಂದಾಜು ಮೊತ್ತ: ರೂ. 54.91 ಲಕ್ಷಗಳು. ಇಎಂಡಿ: ರೂ. 1,09,820/–. ಅವಧಿ: 1 ವರ್ಷ. (3) DMA/2023-24/SE0718/CALL-2, ಅಂದಾಜು ಮೊತ್ತ: ರೂ. 36.95 ಲಕ್ಷಗಳು. ಇಎಂಡಿ: ರೂ. 73,900/–. ಅವಧಿ: 1 ವರ್ಷ. (4) DMA/2023-24/SE0787/CALL-2, ಅಂದಾಜು ಮೊತ್ತ: ರೂ. 5.00 ಲಕ್ಷಗಳು. ಇಎಂಡಿ: ರೂ. 12,500/–. ಅವಧಿ: 3 ತಿಂಗಳು. (5) DMA/2023-24/SE1642, ಅಂದಾಜು ಮೊತ್ತ: ರೂ. 13.00 ಲಕ್ಷಗಳು. ಇಎಂಡಿ: ರೂ. 32,500/–. ಅವಧಿ: 1 ವರ್ಷ. (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 11.01.2024 ಸಂಜೆ 17:30 ಘಂಟೆಯುವರೆಗೆ. (2) ಟೆಂಡರ್‌ನ ತಾಂತ್ರಿಕ ಬಿಡ್ ದಸ್ತಾವೇಜುಗಳನ್ನು https://www.kppp.karnataka.gov.in ನಲ್ಲಿ ತೆರೆಯುವ ದಿನಾಂಕ: 12.01.2024 ರಂದು ಬೆಳಿಗ್ಗೆ 10.30 ಗಂಟೆಗೆ. (3) ಟೆಂಡರ್‌ನ ಆರ್ಥಿಕ ಬಿಡ್ ದಸ್ತಾವೇಜುಗಳನ್ನು https://www.kppp.karnataka.gov.in ನಲ್ಲಿ ತೆರೆಯುವ ದಿನಾಂಕ: 13.01.2024 ರಂದು ಬೆಳಿಗ್ಗೆ 11.00 ಗಂಟೆಗೆ.
ಸಹಿ/–
(ಶ್ರೀಮತಿ ರಶ್ಮಿ ಯು. KAS)
ತಹಶೀಲ್ದಾರ್ ಬಂಗಾರಪೇಟೆ ತಾಲ್ಲೂಕು
ಹಾಗೂ ಆಡಳಿತಾಧಿಕಾರಿಗಳು
ಪುರಸಭೆ, ಬಂಗಾರಪೇಟೆ
ಸಹಿ/–
(ಶ್ರೀಮತಿ ಮೀನಾಕ್ಷಿ ಎಂ., KMAS)
ಮುಖ್ಯಾಧಿಕಾರಿ ಶ್ರೇಣಿ–1
ಪುರಸಭೆ, ಬಂಗಾರಪೇಟೆ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:290/ಕೆಎಸ್‌ಎಂಸಿಎ/2023–24

₹800ಕ್ಕೆ ಒಪ್ಪಿರುವ ಅರಣ್ಯ ಇಲಾಖೆ, ಬಗೆಹರಿಯದ ಬಿಕ್ಕಟ್ಟು

ಹೊಗೇನಕಲ್ ಜಲಪಾತ: ತೆಪ್ಪ ಶುಲ್ಕ ನಿಗದಿಗೆ 10ರ ಗಡುವು

• ಬಿ. ಬಸವರಾಜು

ಹನೂರು: ಜಿಲ್ಲೆಯ ಗಡಿಭಾಗದಲ್ಲಿ-ರುವ, ತಾಲ್ಲೂಕಿನ ಹೊಗೇನಕಲ್ ಜಲಪಾತದಲ್ಲಿ ತೆಪ್ಪ ಓಡಿಸುವವರು ತೆಪ್ಪದ ಶುಲ್ಕವನ್ನು ಹೆಚ್ಚು ಮಾಡಲು ಇದೇ 10ರವರೆಗೆ ಗಡುವು ನೀಡಿದ್ದು, ಅರಣ್ಯ ಇಲಾಖೆ ಶುಲ್ಕ ಹೆಚ್ಚು ಮಾಡದಿದ್ದರೆ ತೆಪ್ಪ ಓಡಾಟವನ್ನು ಸ್ಥಗಿತ-ಗೊಳಿಸಲು ತೀರ್ಮಾನಿಸಿದ್ದಾರೆ.

ಹೊಗೇನಕಲ್ ಜಲಪಾತ ವೀಕ್ಷಣೆಗೆ ಜಿಲ್ಲೆ ಹಾಗೂ ಹೊರ ಜಿಲ್ಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಾರೆ. ಪ್ರತಿನಿತ್ಯ ಹಾಗೂ ವಾರದ ಕೊನೆ ಹಾಗೂ ವಿಶೇಷ ದಿನಗಳಲ್ಲಿ ಹೆಚ್ಚಾಗಿ ಆಗಮಿಸುವ ಪ್ರವಾಸಿಗರು ತೆಪ್ಪದಲ್ಲಿ ತೆರಳಿ ಜಲಪಾತವನ್ನು ಕಣ್ತುಂಬಿಕೊಳ್ಳುತ್ತಾರೆ.

'ತೆಪ್ಪದ ದರ ಪರಿಷ್ಕರದೆ ಹಲವು ವರ್ಷಗಳಾಗಿವೆ. ತಮಿಳುನಾಡಿನಲ್ಲಿ ನಾಲ್ಕು ಜನರಿಗೆ ₹1,500 ನಿಗದಿಪಡಿ-ಸಲಾಗಿದೆ. ನಮ್ಮಲ್ಲಿ ₹500 ಮಾತ್ರ ಇದೆ. ಅದನ್ನು ಜಾಸ್ತಿ ಮಾಡಬೇಕು' ಎಂದು ತೆಪ್ಪ ನಿರ್ವಾಹಕರು ಒತ್ತಾಯಿಸುತ್ತಿದ್ದಾರೆ.

ಸದ್ಯ ಒಬ್ಬರಿಗೆ ₹125 ನಿಗದಿ

ಹನೂರು ತಾಲ್ಲೂಕಿನ ಹೊಗೇನಕಲ್ ಜಲಪಾತದ ಬಳಿ ತೆಪ್ಪದಲ್ಲಿ ಸಾಗುತ್ತಿರುವ ಪ್ರವಾಸಿಗರು

ಪಡಿಸಲಾಗಿದೆ. ಒಂದು ತೆಪ್ಪದಲ್ಲಿ ನಾಲ್ಕು ಜನರಿಗಷ್ಟೇ ತೆರಳಲು ಅವಕಾಶ. ಇಲ್ಲಿ ತೆಪ್ಪ ನಡೆಸುವವರು ಇದನ್ನೇ ಜೀವನಾಧಾರವಾಗಿ ಮಾಡಿಕೊಂಡಿದ್ದಾರೆ. ಶುಲ್ಕ ಹೆಚ್ಚು ಮಾಡಬೇಕು ಎಂಬ ಒತ್ತಾಯ ಮಾಡಿದ್ದು, ಈ ಸಂಬಂಧ ಕಾವೇರಿ ವನ್ಯಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳಿಗೂ ಮನವಿ ಸಲ್ಲಿಸಿದ್ದಾರೆ.

ತೆಪ್ಪ ಓಡಾಟ ಸ್ಥಗಿತ: 'ತೆಪ್ಪದ ದರ ಏರಿಕೆ ಮಾಡುವಂತೆ ಸ್ಥಳೀಯ ಅರಣ್ಯಾಧಿಕಾರಿಗಳಿಗೆ ಮನವಿ ಮಾಡಿದ್ದೆವು. ಆದರೆ, ಅವರು ಸ್ಪಂದಿಸದಿದ್ದಾಗ ನಾವು ತೆಪ್ಪ ಓಡಾಟವನ್ನು ಸ್ಥಗಿತಗೊಳಿಸಿ ಪ್ರತಿಭಟನೆಯನ್ನು ಮಾಡಿದ್ದೆವು. ಜೊತೆಗೆ 15 ದಿನಗಳ ಕಾಲ ತೆಪ್ಪ ಓಡಾಟ ನಿಲ್ಲಿಸಿದ್ದೆವು. ತಮಿಳುನಾಡು ಭಾಗದಲ್ಲಿ ಅಲ್ಲಿನ ಸರ್ಕಾರ ಹೆಚ್ಚುವರಿ ದರ ನಿಗಧಿ ಮಾಡಿದೆ. ಅದರಂತೆ ನಮ್ಮಲ್ಲೂ ಸೂಕ್ತ ದರ ನಿಗದಿ ಮಾಡುವಂತೆ ಒತ್ತಾಯಿಸಿದ್ದೇವೆ. ಅಧಿಕಾರಿಗಳು ಭರವಸೆ ನೀಡಿದ್ದಾರೆ' ಎಂದು ಹೊಗೇನಕಲ್ ಬೋಟ್ ಮ್ಯಾನ್ ಸಂಘದ ಕಾರ್ಯದರ್ಶಿ ಪಳನಿಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

'ತಮಿಳುನಾಡು ಭಾಗದಲ್ಲಿ ಅಲ್ಲಿನ ಸರ್ಕಾರ ಪ್ರತಿ ಬೋಟಿಗೆ ₹1500 ನಂತೆ ಶುಲ್ಕ ನಿಗದಿ ಮಾಡಿದೆ. ಅದರಂತೆ ನಮ್ಮಲ್ಲೂ ನಿಗದಿ ಮಾಡಬೇಕು ಎಂದು ಡಿಸಿಎಫ್ ಅವರಿಗೆ ಮನವಿ ಮಾಡಿದ್ದೇವೆ. ₹800 ನಿಗದಿ ಮಾಡಲು ಅಧಿಕಾರಿಗಳು ಒಪ್ಪಿದ್ದಾರೆ. ಆದರೆ, ಅದಕ್ಕೆ ನಾವು ಒಪ್ಪಿಲ್ಲ. ಜಿಲ್ಲಾಧಿಕಾರಿಗಳು ₹1500 ನಿಗದಿ ಮಾಡಿಕೊಡುವುದಾಗಿ ಭರವಸೆ ನೀಡಿದ್ದಾರೆ. ಜ.10ರವರೆಗೆ ದರ ಅಂತಿ-ಮಗೊಳಿಸದಿದ್ದರೆ ತೆಪ್ಪ ನಡೆಸುವುದನ್ನು ಸ್ಥಗಿತಗೊಳಿಸಲಾಗುವುದು' ಎಂದು ಸಂಘದ ಅಧ್ಯಕ್ಷ ರತ್ನವೇಲು ತಿಳಿಸಿದರು.

> **ತೆಪ್ಪ ನಡೆಸುವವರು ಶುಲ್ಕ ಏರಿಕೆ ಮಾಡುವಂತೆ ಮನವಿ ಸಲ್ಲಿಸಿದ್ದಾರೆ. ಅದನ್ನು ಹಿರಿಯ ಅಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ. ಅನುಮತಿ ಸಿಕ್ಕರೆ ಶುಕ್ಲ ನಿಗದಿ**
> **ಎಂ.ಎನ್. ಅಂಕರಾಜು,**
> ಎಸಿಎಫ್, ಕಾವೇರಿ ವನ್ಯಧಾಮ

ಸುರಕ್ಷಾ ಕವಚ ಇಲ್ಲದೇ ಓಡಾಟ

ಒಂದು ತೆಪ್ಪದಲ್ಲಿ ನಾಲ್ಕು ಜನರನ್ನು ಮಾತ್ರ ಕರೆದುಕೊಂಡು ಹೋಗಬೇಕು ಎಂದಿದ್ದರೂ, ತೆಪ್ಪ ನಡೆಸುವವರು ಅದಕ್ಕಿಂತ ಹೆಚ್ಚು ಜನರನ್ನು ಕರೆದುಕೊಂಡು ಹೋಗುತ್ತಾರೆ ಎಂಬ ಆರೋಪ ಇದೆ. ಪ್ರವಾಸಿಗರಿಗೆ ಸುರಕ್ಷಾ ಕವಚನ್ನು ನೀಡುತ್ತಿಲ್ಲ ಎಂದು ಆರೋಪಿಸುತ್ತಾರೆ ಪ್ರವಾಸಿಗರು.

ಸುರಕ್ಷಾ ಕವಚದ ನಿರ್ವಹಣೆ ಸಮರ್ಪಕವಾಗಿಲ್ಲ. ಹಳೆಯದಾಗಿದ್ದು ಅದನ್ನು ಕೆಲವು ಧರಿಸುವಂತಿರುವುದಿಲ್ಲ ಎಂಬುದು ಪ್ರವಾಸಿಗರ ದೂರು.

ಬೆನ್ನಲ್ಲೇ ಪ್ರವಾಸಿಗರಿಗೆ ರಕ್ಷ ಕವಚ ನೀಡದೇ ತೆಪ್ಪದಲ್ಲಿ ಕರೆದುಕೊಂಡು ಹೋಗುತ್ತಿದ್ದಾರೆ ಎಂಬ ಆರೋಪವೂ ಕೇಳಿ ಬಂದಿದೆ. ನಿಯಮವಾಗಿ ಒಂದು ತೆಪ್ಪದಲ್ಲಿ ನಾಲ್ಕು ಜನರಿಗೆ ಮಾತ್ರ ಅವಕಾಶ ಆದರೆ ಇಲ್ಲಿ ಹಣದ ಆಸೆಗೆ ಒಂದು ತೆಪ್ಪದಲ್ಲಿ ಎಂಟರಿಂದ ಹತ್ತು ಮಂದಿಯವರೆಗೂ ಕರೆದುಕೊಂಡು ಹೋಗಲಾಗುತ್ತಿದೆ. ಜತೆಗೆ ಪ್ರವಾಸಿಗರಿಗೆ ಯಾವುದೇ ರಕ್ಷ ಕವಚವನ್ನು ನೀಡುತ್ತಿಲ್ಲ ಎಂದು ಪ್ರವಾಸಿಗರು ಆರೋಪಿಸುತ್ತಾರೆ.

ಜ.3, 5 ಮತ್ತು 6ರಂದು ಬಿಬಿಎಂಪಿಯಿಂದ ಆಯೋಜನೆ; ಎಲ್ಲ ಇಲಾಖೆಗಳ ಅಹವಾಲು ಸ್ವೀಕಾರ

8 ಕ್ಷೇತ್ರ: 'ಬಾಗಿಲಿಗೆ ಬಂತು ಸರ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಿಕರ ಅಹವಾಲು ಆಲಿಸುವ 'ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ' ಕಾರ್ಯಕ್ರಮದ ಮೊದಲ ಹಂತದಲ್ಲಿ ಎಂಟು ವಿಧಾನಸಭೆ ಕ್ಷೇತ್ರಗಳಲ್ಲಿ ಜ.3, 5 ಮತ್ತು 6ರಂದು ಬಿಬಿಎಂಪಿ ಕಾರ್ಯಕ್ರಮಗಳನ್ನು ಆಯೋಜಿಸಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ನಾಗರಿಕರು ನಿಗದಿತ ದಿನದಂದು ಬೆಳಿಗ್ಗೆ 9.30ರಿಂದ ಸಂಜೆ 5ರವರೆಗೆ ಅಹವಾಲು ಸಲ್ಲಿಸಬಹುದು. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಆಸನಗಳ ವ್ಯವಸ್ಥೆ, ಕುಡಿಯುವ ನೀರು, ತಾತ್ಕಾಲಿಕ ಶೌಚಾಲಯ ಹಾಗೂ ಮಧ್ಯಾಹ್ನ ಲಘು ಉಪಾಹಾರದ ವ್ಯವಸ್ಥೆ

ಮಾಡಲಾಗಿರುತ್ತದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ದೂರುಗಳನ್ನು ಸಮಗ್ರ ಸಾರ್ವಜನಿಕ ಕುಂದುಕೊರತೆಗಳ ಪರಿಹಾರ ವ್ಯವಸ್ಥೆ (ಐಪಿಜಿಆರ್‌ಎಸ್) ಸಾಫ್ಟ್‌ವೇರ್ ನಲ್ಲಿ ದಾಖಲಿಸಲು ಪಾಲಿಕೆ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ನಾಗರಿಕರ ಸಂಪೂರ್ಣ ವಿವರ ಹಾಗೂ ದೂರುಗಳು ಯಾವ ಇಲಾಖೆಗೆ ಸಂಬಂಧಿಸಿದ್ದು ಎಂಬುದನ್ನು ದಾಖಲಿಸಲಾಗುತ್ತದೆ. ವೈ-ಫೈ, ಕಂಪ್ಯೂಟರ್, ಪ್ರಿಂಟರ್ ಹಾಗೂ ಸ್ಕ್ಯಾನರ್‌ಗಳ ವ್ಯವಸ್ಥೆಯೊಂದಿಗೆ 15 ಕೌಂಟರ್‌ಗಳನ್ನು ಸ್ಥಾಪಿಸಲಾಗಿರುತ್ತದೆ.

ಕಾರ್ಯಕ್ರಮದ ಸ್ಥಳದಲ್ಲಿ ಸಹಾಯ ಕೇಂದ್ರ ಸ್ಥಾಪಿಸಲಾಗುತ್ತಿದ್ದು, ಮಾಹಿತಿ ಒದಗಿಸುವ ನಾಮಫಲಕಗಳನ್ನು ಸಹ ಅಳವಡಿಸಲಾಗಿರುತ್ತದೆ. ಅಹವಾಲುಗಳನ್ನು ನೀಡಲು ಅನುವಾಗಲೆಂದು ನಾಗರಿಕರು ಟೋಕನ್‌ಗಳನ್ನು ಪಡೆಯಲು 10 ಕೌಂಟರ್‌ಗಳ ವ್ಯವಸ್ಥೆ ಮಾಡಲಾಗುತ್ತದೆ. ಅಂಗವಿಕಲರು ಮತ್ತು ಹಿರಿಯ ನಾಗರಿಕರಿಗೆ ಪ್ರತ್ಯೇಕ ಕೌಂಟರ್ ವ್ಯವಸ್ಥೆ ಇರುತ್ತದೆ. ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರನ್ನು ಭೇಟಿಯಾಗಲು ಅವಕಾಶವಿದೆ. ಸ್ಥಳೀಯ ಶಾಸಕರನ್ನೂ ಆಹ್ವಾನಿಸಲಾಗಿದೆ ಎಂದು ತಿಳಿಸಲಾಗಿದೆ.

ಎಲ್ಲೆಲ್ಲಿ ಕಾರ್ಯಕ್ರಮ?

ದಿನ	ವಿಧಾನಸಭೆ ಕ್ಷೇತ್ರ	ಸ್ಥಳ
ಜನವರಿ 3	ಕೆ.ಆರ್ ಪುರ, ಮಹದೇವಪುರ	ಐಟಿಐ ಕ್ರೀಡಾಂಗಣ, ದೂರವಾಣಿ ನಗರ, ಕೆ.ಆರ್. ಪುರ
ಜನವರಿ 5	ಯಲಹಂಕ, ಬ್ಯಾಟರಾಯನಪುರ, ದಾಸರಹಳ್ಳಿ	ಡಾ. ಬಿ.ಆರ್ ಅಂಬೇಡ್ಕರ್ ಭವನ, ಯಲಹಂಕ ನ್ಯೂ ಟೌನ್
ಜನವರಿ 6	ಹೆಬ್ಬಾಳ, ಶಿವಾಜಿನಗರ, ಪುಲಕೇಶಿನಗರ	ಆರ್‌ಬಿಎನ್‌ಎಂಎಸ್ ಹೈಸ್ಕೂಲ್ ಮೈದಾನ, ಸೇಂಟ್ ಜಾನ್ಸ್ ರಸ್ತೆ, ಶಿವನ್ ಚೆಟ್ಟಿ ಗಾರ್ಡನ್

ಒಂದೇ ಸೂರಿನಡಿ ವಿವಿಧ ಇಲಾಖೆಗಳು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಬಿವೃದ್ಧಿ ಪ್ರಾಧಿಕಾರ, ಬೆಸ್ಕಾಂ, ಜಲಮಂಡಳಿ, ಬಿಎಂಆರ್‌ಸಿಎಲ್ (ನಮ್ಮ ಮೆಟ್ರೊ), ಕೊಳೆಗೇರಿ ಅಭಿವೃದ್ಧಿ ಮಂಡಳಿ, ಪೊಲೀಸ್ ಇಲಾಖೆ, ಬಿಎಂಟಿಸಿ, ಕಂದಾಯ ಇಲಾಖೆಗಳ ಅಧಿಕಾರಿಗಳು ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಇರಲಿದ್ದಾರೆ.



ಬ್ರಿಗೇಡ್ ರಸ್ತೆಯಲ್ಲಿ ರಾಶಿ ಬಿದ್ದಿದ್ದ ತ್ಯಾಜ್ಯ

ಹೊಸ ವರ್ಷ: ನಗರದ ಸಿಬಿಡಿ ರಸ್ತೆಗಳಲ್ಲಿ 8 ಟನ್ ತ್ಯಾಜ್ಯ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷ ಆಚರಣೆ ಸಂದರ್ಭದಲ್ಲಿ ನಗರದ ಸಿಬಿಡಿ ರಸ್ತೆಗಳಲ್ಲಿ ಉತ್ಪಾದನೆಯಾದ 8 ಟನ್ ತ್ಯಾಜ್ಯವನ್ನು ಬಿಬಿಎಂಪಿ ಸಿಬ್ಬಂದಿ ಸೋಮವಾರ ಮುಂಜಾನೆಯೇ ತೆರವುಗೊಳಿಸಿದ್ದಾರೆ.

ಎಂ.ಜಿ ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ರೆಸಿಡೆನ್ಸಿ ರಸ್ತೆ, ರಿಚ್ಮಂಡ್ ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ, ಕಸ್ತೂರ್ ಬಾ ರಸ್ತೆಗಳಲ್ಲಿ ಸೋಮವಾರ ನಸುಕಿನ 3.30ರಿಂದ 6.30ರ ಅವಧಿಯಲ್ಲಿ ಸ್ವಚ್ಛತಾ ಕಾರ್ಯ ನಡೆಸಿದ್ದಾರೆ. ತ್ಯಾಜ್ಯವನ್ನು ಬೀದಿಗಳಿಂದ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಶಾಂತಿನಗರ ವಿಭಾಗದ ಘನತ್ಯಾಜ್ಯ ವಿಭಾಗದ 3 ಮೇಲ್ವಿಚಾರಕರು, 80ಕ್ಕೂ ಹೆಚ್ಚು ಪೌರಕಾರ್ಮಿಕರು ಸ್ವಚ್ಛತಾ ಕಾರ್ಯ ಮಾಡಿದರು. ಒಂದು ಕಾಂಪ್ಯಾಕ್ಟರ್ ಹಾಗೂ ಏಳು ಆಟೊ ಟಿಪ್ಪರ್‌ಗಳನ್ನು ಬಳಸಲಾಯಿತು.

ಸಿಬಿಡಿ ರಸ್ತೆಗಳು ಹಾಗೂ ಪಾದಚಾರಿ ಮಾರ್ಗಗಳಲ್ಲಿ ಎಸೆದಿದ್ದ ಪ್ಲಾಸ್ಟಿಕ್ ಕವರ್, ಪ್ಲಾಸ್ಟಿಕ್ ತ್ಯಾಜ್ಯ, ಚಪ್ಪಲಿಗಳು, ಮದ್ಯದ ಬಾಟಲಿಗಳು ಸೇರಿದಂತೆ ಇನ್ನಿತರೆ ಅನುಪಯುಕ್ತ ವಸ್ತುಗಳನ್ನು ಬೇರ್ಪಡಿಸಿ ಸಂಗ್ರಹಿಸಲಾಗಿದೆ. ಮರು ಬಳಕೆಯ ಸುಮಾರು 2 ಟನ್ ತ್ಯಾಜ್ಯವನ್ನು ಒಣ ತ್ಯಾಜ್ಯ ಸಂಗ್ರಹಣಾ ಘಟಕಕ್ಕೆ ಕಳುಹಿಸಲಾಗಿದೆ ಎಂದು ಘನತ್ಯಾಜ್ಯ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅಪ್ಪುರಾಜ್ ತಿಳಿಸಿದರು.

ಅನಾಥಾಶ್ರಮ ಮಕ್ಕಳಿಗೆ ಹಣ್ಣು ವಿತರಣೆ

ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಹೊಸ ವರ್ಷದ ಸಂಭ್ರಮಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸವರ್ಷದ ನಿಮಿತ್ತ ನಗರದ ಬಹುತೇಕ ವಿಭಾಗದ ಡಿಸಿಪಿ, ಎಸಿಪಿ ಹಾಗೂ ಇನ್‌ಸ್ಪೆಕ್ಟರ್‌ಗಳು ಸೋಮವಾರ ಅನಾಥಾಶ್ರಮ, ವೃದ್ಧಾಶ್ರಮ ಹಾಗೂ ಅಂಗವಿಕಲ ಕೇಂದ್ರಗಳಿಗೆ ತೆರಳಿ, ಅಲ್ಲಿನ ನಿವಾಸಿಗಳಿಗೆ, ಮಕ್ಕಳಿಗೆ, ಹಾಲು, ಹಣ್ಣು, ಬ್ರೆಡ್, ಸಿಹಿ ತಿನಿಸುಗಳನ್ನು ವಿತರಿಸಿದರು.

ಹೊಸ ವರ್ಷಕ್ಕೆ ಹಿರಿಯ ಅಧಿಕಾರಿಗಳಿಗೆ ಸಿಹಿ ಅಥವಾ ಹೂವು ಗುಚ್ಛ ನೀಡಿ ಶುಭ ಕೋರುವುದು ಇಲಾಖೆಯಲ್ಲಿ ನಡೆದು ಬಂದ ಸಂಪ್ರದಾಯ. ಹೂವು ಗುಚ್ಛ ತರುವುದು ಬೇಡ. ಅದರ ಬದಲಿಗೆ ಅನಾಥಾಶ್ರಮ, ವೃದ್ಧಾಶ್ರಮಗಳಿಗೆ ಸಹಾಯ ಮಾಡುವಂತೆ ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಅವರು ವರ್ಚುವಲ್ ಸಭೆಯಲ್ಲಿ ಮನವಿ ಮಾಡಿದ್ದರು.

ಕಮಿಷನರ್ ಅವರ ಮಾತುಗಳಿಂದ ಪ್ರೇರಣೆಗೊಂಡ ಪೊಲೀಸ್ ಅಧಿಕಾರಿಗಳು, ಸೋಮವಾರ ತಮ್ಮ ವಿಭಾಗದ ವ್ಯಾಪ್ತಿಯಲ್ಲಿರುವ ಅನಾಥಾಶ್ರಮಗಳಿಗೆ ತೆರಳಿ ಮಕ್ಕಳಿಗೆ ಹಣ್ಣು ವಿತರಿಸಿದರು. ಪೊಲೀಸ್ ಕಮಿಷನರ್ ದಯಾನಂದ್ ಅವರೂ ಕೆಲವು ಅನಾಥಾಶ್ರಮಗಳಿಗೆ ತೆರಳಿ ಮಕ್ಕಳಿಗೆ ಹಣ್ಣು ವಿತರಿಸಿದರು. ಅದರ ಫೋಟೊಗಳನ್ನು ತಮ್ಮ 'ಎಕ್ಸ್' ಖಾತೆಯಲ್ಲಿ

ಪೊಲೀಸ್ ಕಮಾಂಡ್ ಸೆಂಟರ್‌ನಲ್ಲಿ ಹೊಸ ವರ್ಷಾಚರಣೆ ಹಮ್ಮಿಕೊಳ್ಳಲಾಗಿತ್ತು

ಹಂಚಿಕೊಂಡಿದ್ದಾರೆ.

ವರ್ಷಾಚರಣೆ ಸಂಭ್ರಮ: ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಹೊಸ ವರ್ಷಾಚರಣೆ ಸಂಭ್ರಮ ಮನೆ ಮಾಡಿತ್ತು.

ಪೊಲೀಸ್ ಕಮಾಂಡ್ ಸೆಂಟರ್ ಹಾಗೂ ಸಿಎಆರ್ ಕಾರ್ಯಾಲಯಕ್ಕೆ ಆ್ಯಸಿಡ್ ದಾಳಿ ಪ್ರಕರಣದ ಸಂತ್ರಸ್ತರು ಹಾಗೂ ಕೋವಿಡ್ ಸಂದರ್ಭದಲ್ಲಿ ಮೃತಪಟ್ಟ ಪೊಲೀಸ್ ಸಿಬ್ಬಂದಿಯ ಕುಟುಂಬಸ್ಥರನ್ನು ಆಹ್ವಾನಿಸಿ, ಹೊಸ ವರ್ಷವನ್ನು ಆಚರಿಸಲಾಯಿತು.

ಕಮಿಷನರ್ ಬಿ.ದಯಾನಂದ್ ಮಾತನಾಡಿ, 'ಪೊಲೀಸ್ ಇಲಾಖೆ ಹಣವಂತರಿಗೆ ಮಾತ್ರವೆಂಬ ಅಪವಾದವಿದೆ. ಆದರೆ, ಇಲಾಖೆ ನಿಜವಾಗಿ ತಲುಪಬೇಕಿರುವುದು ಸಮಾಜದ ಕಟ್ಟಕಡೆಯ ವ್ಯಕ್ತಿಗಳಿಗೆ. ಪೊಲೀಸ್ ಇಲಾಖೆ ಸದಾ ನಮ್ಮೊಂದಿಗೆ ಇರಲಿದೆ ಎಂಬ ಭಾವನೆ ಮೂಡಿಸುವ ಪ್ರಯತ್ನಗಳನ್ನು ಮಾಡುತ್ತಿದ್ದೇವೆ' ಎಂದು ಹೇಳಿದರು.

ನೇತ್ರದಾನಕ್ಕೆ ಕಮಿಷನರ್ ಒಪ್ಪಿಗೆ

ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಅವರು ನೇತ್ರದಾನಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ನಾರಾಯಣ ನೇತ್ರಾಲಯ ಐ ಫೌಂಡೇಷನ್ ಸಿಬ್ಬಂದಿ ಸೋಮವಾರ ದಯಾನಂದ್ ಅವರಿಗೆ ನೇತ್ರದಾನಕ್ಕೆ ಸಂಬಂಧಿಸಿದ ನೋಂದಣಿಯ ಪ್ರಮಾಣಪತ್ರ ವಿತರಣೆ ಮಾಡಿದರು.

ಅಂಧತ್ವ ತೊಡೆದುಹಾಕುವ ಕಾರ್ಯದಲ್ಲಿ ನೇತ್ರದಾನ ಪ್ರಮುಖ ಹೆಜ್ಜೆಯಾಗಿದೆ ಎಂದು ಫೌಂಡೇಷನ್ ಟ್ರಸ್ಟಿ ಡಾ.ನರೇನ್ ಶೆಟ್ಟಿ ತಿಳಿಸಿದ್ದಾರೆ. ದಯಾನಂದ್ ಅವರು 'ಎಕ್ಸ್' ಖಾತೆಯಲ್ಲಿ ಪ್ರಮಾಣಪತ್ರ ಹಂಚಿಕೊಂಡಿದ್ದಾರೆ. ಹೊಸವರ್ಷದ ದಿನದಿಂದ ಪೊಲೀಸ್ ಇಲಾಖೆಯ ಕೆಲವು ಅಧಿಕಾರಿಗಳೂ ನೇತ್ರದಾನಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ಅವರಿಗೂ ಪ್ರಮಾಣ ಪತ್ರ ವಿತರಣೆ ಮಾಡಲಾಗಿದೆ.

ಹುಬ್ಬಳ್ಳಿ: ಮಾತುಕತೆ ಧರಣಿ ಹಿಂದಕ್ಕೆ

ಹುಬ್ಬಳ್ಳಿ: 1992ರ ಗಲಭೆ ಪ್ರಕರಣದ ಹಿನ್ನೆಲೆಯಲ್ಲಿ ಶ್ರೀಕಾಂತ ಪೂಜಾರಿ ಅವರ ಬಂಧನ ಖಂಡಿಸಿ ನಗರದ ಶಹರ ಪೊಲೀಸ್ ಠಾಣೆ ಎದುರು ಧರಣಿ ನಡೆಸಿದ್ದ ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು, ಡಿಸಿಪಿ ರಾಜೀವ್ ಎಂ. ಅವರು ಭರವಸೆ ನೀಡಿದ ಬಳಿಕ ಧರಣಿ ವಾಪಸ್ ಪಡೆದರು.

ಡಿಸಿಪಿ ರಾಜೀವ್ ಎಂ. ಅವರು ಪೊಲೀಸ್ ಅಧಿಕಾರಿಗಳ ಜೊತೆ ಸೇರಿ ಪ್ರತಿಭಟನಕಾರರ ಮನವೊಲಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, '1992ರ ಗಲಭೆ ಪ್ರಕರಣದಲ್ಲಿ ಭಾಗಿಯಾದವರ ಸತ್ಯಾಸತ್ಯತೆ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ' ಎಂದರು.

'ಪ್ರಕರಣಕ್ಕೆ ಸಂಬಂಧಿಸಿ ಇನ್‌ಸ್ಪೆಕ್ಟರ್ ಅವರು ಆರೋಪಿ ಬಂಧನಕ್ಕೆ ಮೊದಲು ವಾರಂಟ್ ನೀಡದ ಹಾಗೂ ತೆಗೆದುಕೊಂಡ ಕ್ರಮಗಳ ಕುರಿತು ಆಂತರಿಕ ತನಿಖೆ ನಡೆಸುತ್ತೇವೆ. ಕ್ರಮ ತಪ್ಪಾಗಿದ್ದರೆ ಮೇಲಧಿಕಾರಿಗಳಿಗೆ ವರದಿ ಸಲ್ಲಿಸುತ್ತೇವೆ. ಕೆಲವು ಪ್ರಕರಣದಲ್ಲಿ ಅಧಿಕಾರಿಗಳು ವಿವೇಚನೆಯಿಂದ ಕಾರ್ಯ ನಿರ್ವಹಿಸಬೇಕಾಗುತ್ತದೆ. ಇನ್ನು ಮುಂದೆ ಈ ರೀತಿ ಆಗದಂತೆ ಎಚ್ಚರಿಕೆ ಹೆಜ್ಜೆ ಇಡುತ್ತೇವೆ' ಎಂದು ತಿಳಿಸಿದರು.

'ಆರೋಪಿಯನ್ನು ಬಂಧಿಸಿರುವ ಸಂದರ್ಭ ತಪ್ಪಾಗಿತ್ತು ಎಂದು ಇನ್‌ಸ್ಪೆಕ್ಟರ್ ಹೇಳಿರುವುದಾಗಿ ಡಿಸಿಪಿ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಧರಣಿ ಹಿಂಪಡೆದಿದ್ದೇವೆ' ಎಂದು ವಿಶ್ವ ಹಿಂದೂ ಪರಿಷತ್ ಮುಖಂಡ ಸಂಜಯ್ ಬಡಸ್ಕರ್ ತಿಳಿಸಿದರು.

ಪಟ್ಟಿ ವಿನಿಮಯ

ನವದೆಹಲಿ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ತಮ್ಮಲ್ಲಿನ ಪರಮಾಣು ಸ್ಥಾವರಗಳ ಪಟ್ಟಿಯನ್ನು ಸೋಮವಾರ ವಿನಿಮಯ ಮಾಡಿಕೊಂಡಿವೆ.

ಉಭಯ ರಾಷ್ಟ್ರಗಳು ಮಾಡಿ ಕೊಂಡಿರುವ ಒಪ್ಪಂದದಡಿಯಲ್ಲಿ ಈ ಪಟ್ಟಿ ವಿನಿಮಯವಾಗಿದೆ. ಪಟ್ಟಿ ವಿನಿಮಯ ಪ್ರಕ್ರಿಯೆ 1992ರಿಂದ ಪ್ರಾರಂಭವಾಗಿದೆ. 'ನವದೆಹಲಿ ಮತ್ತು ಇಸ್ಲಾಮಾಬಾದ್‌ನಲ್ಲಿ ರಾಜತಾಂತ್ರಿಕ ಮಾರ್ಗಗಳ ಮೂಲಕ ಈ ಪ್ರಕ್ರಿಯೆಯನ್ನು ಏಕಕಾಲದಲ್ಲಿ ನಡೆಸಲಾಯಿತು' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

1988ರ ಡಿಸೆಂಬರ್ 31ರಂದು ಉಭಯ ರಾಷ್ಟ್ರಗಳು ಈ ಒಪ್ಪಂದಕ್ಕೆ ಸಹಿ ಹಾಕಿವೆ. 1991ರ ಜನವರಿ 27ರಂದು ಒಪ್ಪಂದ ಜಾರಿಗೆ ಬಂದಿದೆ. ಪ್ರತಿ ವರ್ಷದ ಜನವರಿ 1ರಂದು ಎರಡೂ ದೇಶಗಳು ತಮ್ಮ ದೇಶದಲ್ಲಿ ಸ್ಥಾಪಿತವಾಗಿರುವ ಅಣು ಸ್ಥಾವರಗಳ ಕುರಿತ ಪಟ್ಟಿಯನ್ನು ವಿನಿಮಯ ಮಾಡಿಕೊಳ್ಳಬೇಕು ಎಂಬ ನಿಯಮವನ್ನು ಒಪ್ಪಂದ ಒಳಗೊಂಡಿದೆ.

ಸೋಂಪುರ ನಾಡ ಕಚೇರಿಗೆ ಉದ್ಘಾಟನೆ ಭಾಗ್ಯವಿಲ್ಲ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಮಾಸಿದ ಕಟ್ಟಡದ ಬಣ್ಣ, ಕಟ್ಟಡದ ಸುತ್ತಲೂ ಬೆಳೆದ ಗಿಡಗಳು ಹಾಗೂ ಪಾರ್ಥೇನಿಯಂ ಕಳೆ, ರಾತ್ರಿ ವೇಳೆ ಮೂತ್ರ ಮಾಡುವವರ, ಕುಡುಕರ ತಾಣ...

ಇದು ಇನ್ನೂ ಉದ್ಘಾಟನೆಯಾಗದ, ನೆಲಮಂಗಲ ತಾಲ್ಲೂಕಿನ ಸೋಂಪುರ ಉಪ ತಹಶೀಲ್ದಾರ್ ಕಾರ್ಯಾಲಯ ನೂತನ ಕಟ್ಟಡದ ದುಃಸ್ಥಿತಿ.

ದಶಕಗಳಿಂದ ಬಾಡಿಗೆ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಾಡಕಚೇರಿಯನ್ನು ಸ್ವಂತ ಕಟ್ಟಡಕ್ಕೆ ಸ್ಥಳಾಂತರ ಮಾಡಬೇಕೆಂಬ ಉದ್ದೇಶದಿಂದ ಈ ಕಟ್ಟಡವನ್ನು ನಿರ್ಮಿಸಲಾಗಿದೆ.

ಸೋಂಪುರ ನಾಡ ಕಚೇರಿ ಆರಂಭವಾದಾಗಿನಿಂದ ದಾಬಸ್‌ಪೇಟೆ ಪೊಲೀಸ್ ಠಾಣೆ ಮುಂಭಾಗದ ಖಾಸಗಿ ಕಟ್ಟಡದಲ್ಲಿ ಬಾಡಿಗೆಯಲ್ಲಿ ಕಚೇರಿ ಕಾರ್ಯ ನಿರ್ವಹಿಸುತ್ತಿದೆ.

> **ಕಟ್ಟಡಕ್ಕೆ ಅಗತ್ಯವಾದ ವಿದ್ಯುತ್, ಶೌಚಾಲಯಕ್ಕೆ ನೀರಿನ ಸಂಪರ್ಕ ಇಲ್ಲದೆ ಇದ್ದು, ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಂಡು, ಶೀಘ್ರದಲ್ಲಿ ನೂತನ ಕಟ್ಟಡಕ್ಕೆ ನಾಡ ಕಚೇರಿ ಸ್ಥಳಾಂತರ ಮಾಡುತ್ತೇವೆ**
> **ಶಶಿಧರ್,** ಉಪ ತಹಶೀಲ್ದಾರ್

'ಲಕ್ಷಾಂತರ ರೂಪಾಯಿ ಹಣ ಖರ್ಚು ಮಾಡಿ ಕಟ್ಟಡ ನಿರ್ಮಿಸಿ, ಈಗಲೂ ಬಾಡಿಗೆ ಕಟ್ಟದಲ್ಲಿ ಕಾರ್ಯ ನಿರ್ವಹಿಸಿದರೆ, ಸರ್ಕಾರದ ಹಣ ಪೋಲಾಗುವುದಿಲ್ಲವೆ' ಎಂದು ವಕೀಲ ಮಾರುತಿ ಪ್ರಶ್ನಿಸುತ್ತಾರೆ.

'ಸಾರ್ವಜನಿಕರ ತೆರಿಗೆ ಹಣದಿಂದ ಕಟ್ಟಿದ ಕಟ್ಟಡ ಕಸದ ತಾಣವಾಗಿದೆ' ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ತಾಲ್ಲೂಕು ಅಧ್ಯಕ್ಷ ರಾಜೇಶ್ ಬೇಸರ ವ್ಯಕ್ತಪಡಿಸುತ್ತಾರೆ.

ಸೋಂಪುರ ಉಪ ತಹಶೀಲ್ದಾರ್ ಕಟ್ಟಡ

ನೂತನ ಹೆಸರಿನಡಿ ವಾಸವಿ ಎಂಎಸ್‌ಸಿಎಂ ಕೋ-ಆಪರೇಟಿವ್ ಬ್ಯಾಂಕ್

'ಉದ್ಯಮಕ್ಕೆ ಸಹಕಾರಿ ಬ್ಯಾಂಕ್ ಪ್ರೋತ್ಸಾಹ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಹಕಾರಿ ಬ್ಯಾಂಕ್‌ಗಳು ದೇಶದ ಸದೃಢ ಆರ್ಥಿಕತೆಯ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತಿವೆ. ಈ ಬ್ಯಾಂಕ್‌ಗಳ ನೆರವಿನಿಂದ ಹಲವಾರು ಮಂದಿ ಸಣ್ಣ ಉದ್ಯಮ ಪ್ರಾರಂಭಿಸಿ, ಜೀವನ ಕಟ್ಟಿಕೊಳ್ಳುತ್ತಿದ್ದಾರೆ' ಎಂದು ಮಲ್ಲೇಶ್ವರದ ವಾಸವಿ ಪೀಠದ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ತಿಳಿಸಿದರು.

ದಿ ಮೈಸೂರು ಸಿಲ್ಕ್ ಕ್ಲಾತ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಇನ್ನು ಮುಂದೆ 'ವಾಸವಿ ಎಂಎಸ್‌ಸಿಎಂ ಕೋ–ಆಪರೇಟಿವ್ ಬ್ಯಾಂಕ್' ಹೆಸರಿನಲ್ಲಿ ಕಾರ್ಯನಿರ್ವಹಿಸಲಿದೆ. ಬ್ಯಾಂಕ್, ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ನೂತನ ಹೆಸರು ಹಾಗೂ ಲಾಂಛನವನ್ನು ಅನಾವರಣ ಮಾಡಲಾಯಿತು.

ಈ ಸಂದರ್ಭದಲ್ಲಿ ಸಾನ್ನಿಧ್ಯವಹಿಸಿ ಮಾತನಾಡಿದ ಅವರು, 'ರಸ್ತೆ ಬದಿ ವ್ಯಾಪಾರ ವ್ಯವಹಾರ ಮಾಡುತ್ತಿದ್ದವರು ಸಹಕಾರಿ ಬ್ಯಾಂಕ್‌ಗಳ ನೆರವಿನಿಂದ ಆರ್ಥಿಕವಾಗಿ ಸದೃಢರಾಗುತ್ತಿದ್ದಾರೆ. ಈ ಬ್ಯಾಂಕ್‌ಗಳಲ್ಲಿ ಸಾಲ ಪಡೆದು, ಹೊಸ ಹೊಸ ಉದ್ಯಮಗಳನ್ನು ಪ್ರಾರಂಭ ಮಾಡುತ್ತಿರುವುದು ಉತ್ತಮ ಬೆಳವಣಿಗೆ. ಬ್ಯಾಂಕ್‌ಗಳ ಆಡಳಿತ ಮಂಡಳಿ ವ್ಯವಹಾರದಲ್ಲಿ ನೈತಿಕತೆಯನ್ನು ಕಾಪಾಡಿಕೊಳ್ಳಬೇಕು' ಎಂದು ಹೇಳಿದರು.

'ನಮ್ಮ ದೇಶದ ಬಗ್ಗೆ ವಿದೇಶಿಗರ ಪರಿಕಲ್ಪನೆ ಈಗ ಬದಲಾಗಿದೆ. ಮೊದಲು ಭಾರತ ಎಂದರೆ ಕೇವಲ ಹಳ್ಳಿಗಳ ದೇಶ ಅಂದುಕೊಂಡಿದ್ದರು. ಈಗ ಬೆಂಗಳೂರು ಸೇರಿ ಇಲ್ಲಿನ ನಗರಗಳ ಬಗ್ಗೆ ಮಾತನಾಡುತ್ತಾರೆ. ಇಲ್ಲಿನ ಕಲೆ ಮತ್ತು ಸಂಸ್ಕೃತಿಗೂ ವಿಶ್ವದೆಲ್ಲೆಡೆ ಮನ್ನಣೆ ದೊರೆತಿದೆ. ಬೀಜ ಬಿತ್ತಿದರೆ ಲಕ್ಷದಷ್ಟು ಫಲ ಸಿಗುವ ಕಾಲ ಈಗ ದೇಶಕ್ಕೆ ಬಂದಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, 'ಹಿಂದೆ ಚಿಕ್ಕದಾಗಿ ಪ್ರಾರಂಭವಾದ ವಿಜಯಾ, ಕರ್ಣಾಟಕ ಬ್ಯಾಂಕ್ ಬಳಿಕ ದೊಡ್ಡದಾಗಿ ಬೆಳೆದವು. ಆಡಳಿತ ಮಂಡಳಿ ಮೇಲೆ ನಂಬಿಕೆಯಿಟ್ಟು ಜನರು ಠೇವಣಿ ಇಟ್ಟಿರುತ್ತಾರೆ. ಆದ್ದರಿಂದ ಗ್ರಾಹಕರ ವಿಶ್ವಾಸ ಕಾಪಾಡಿಕೊಂಡು ಹೋಗಬೇಕು. ಆರ್ಯವೈಶ್ಯ ಸಮಾಜದವರು ಈಗಲೂ ವಿಶ್ವ ಪ್ರಸಿದ್ಧವಾದ ಅಗರಬತ್ತಿ, ವಸ್ತ್ರ ಉದ್ಯಮದಲ್ಲಿ ತೊಡಗಿಕೊಂಡಿದ್ದು, ವಿದ್ಯಾ ಕ್ಷೇತ್ರದಲ್ಲಿಯೂ ಸಾಕಷ್ಟು ಕೆಲಸ ಮಾಡುತ್ತಿದ್ದಾರೆ' ಎಂದು ಹೇಳಿದರು.

ಬ್ಯಾಂಕ್‌ನ ಅಧ್ಯಕ್ಷ ಎನ್.ಎಸ್. ಶ್ರೀನಿವಾಸಮೂರ್ತಿ, 'ರಾಜ್ಯದ ಎಲ್ಲೆಡೆ ಈ ಬ್ಯಾಂಕಿನ ಸೇವೆ ವಿಸ್ತರಿಸುವ ಉತ್ಸಾಹವನ್ನು ನಾವು ಹೊಂದಿದ್ದೇವೆ. ಕಳೆದ 56 ವರ್ಷಗಳಿಂದ ರಾಜ್ಯದ ಸಹಕಾರ ಕ್ಷೇತ್ರದಲ್ಲಿ ಶಿಸ್ತುಬದ್ಧವಾಗಿ ನಡೆದುಕೊಂಡು ಬಂದಿದ್ದೇವೆ. ರೇಷ್ಮೆ ಬಟ್ಟೆ ತಯಾರಕರ ಹಿತದೃಷ್ಟಿಯಿಂದ ಪ್ರಾರಂಭವಾದ ಈ ಬ್ಯಾಂಕ್, ಒಂದು ಲಕ್ಷಕ್ಕೂ ಅಧಿಕ ಸದಸ್ಯರಿಗೆ ಬ್ಯಾಂಕಿಂಗ್ ಸೇವೆಯನ್ನು ಒದಗಿಸಿದೆ' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬ್ಯಾಂಕಿನ ನೂತನ ಹೆಸರು ಹಾಗೂ ಲಾಂಛನವನ್ನು ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಅನಾವರಣ ಮಾಡಿದರು. ಸಂಸದರಾದ ತೇಜಸ್ವಿ ಸೂರ್ಯ, ಪಿ.ಸಿ. ಮೋಹನ್, ವಿಧಾನ ಪರಿಷತ್ ಸದಸ್ಯ ಡಿ.ಎಸ್. ಅರುಣ್ ಹಾಗೂ ಬ್ಯಾಂಕಿನ ಅಧ್ಯಕ್ಷ ಎನ್.ಎಸ್. ಶ್ರೀನಿವಾಸಮೂರ್ತಿ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಮಂಗಳವಾರ • ಜನವರಿ 2, 2024 ಪ್ರಜಾವಾಣಿ

ನಗರದಲ್ಲಿ ಹೊಸ ವರ್ಷದ ಪಾರ್ಟಿ ಮುಗಿಸಿಕೊಂಡು ತೆರಳುವಾಗ ಸಂಭವಿಸಿದ ಮೂರು ಅಪಘಾತಗಳು

ಪ್ರತ್ಯೇಕ ಅಪಘಾತ: ಟೆಕಿ ಸೇರಿ ಮೂವರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷದ ಪಾರ್ಟಿಗಳನ್ನು ಮುಗಿಸಿಕೊಂಡು ಮನೆಗೆ ತೆರಳುವಾಗ ಸಂಭವಿಸಿದ ಮೂರು ಪ್ರತ್ಯೇಕ ಅಪಘಾತಗಳಲ್ಲಿ ಟೆಕಿ ಸೇರಿದಂತೆ ಮೂವರು ಮೃತಪಟ್ಟಿದ್ದಾರೆ. ಐವರು ಗಾಯಗೊಂಡಿದ್ದಾರೆ.

ಬೆಳ್ಳಂದೂರು ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಏಕಮುಖ ಸಂಚಾರ ರಸ್ತೆಯಲ್ಲಿ ಆಟೊ ಮತ್ತು ಕಾರು ನಡುವೆ ಸಂಭವಿಸಿದ ಅಪಘಾತದಲ್ಲಿ ಒಬ್ಬರು ಮೃತಪಟ್ಟು ನಾಲ್ವರು ಗಾಯಗೊಂಡಿದ್ದಾರೆ.

ಬೆಳ್ಳಂದೂರು ನಿವಾಸಿ ರವಿ ಕಾರ್ತಿಕೇಯ (29) ಮೃತ ಟೆಕಿ.

ಅವರ ಸ್ನೇಹಿತರಾದ ಅರ್ಬಾಜ್ ಖಾನ್, ಜೇವಾ, ಗಾರ್ಗಿ ಗುಪ್ತಾ ಹಾಗೂ ಆಟೊ ಚಾಲಕ ಶಾಕೀಬ್ ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೃತ ರವಿ ಕಾರ್ತಿಕೇಯ ಹರಿಯಾಣದವರು. ಭಾನುವಾರ ರಾತ್ರಿ ಹೊಸ ವರ್ಷದ ನಿಮಿತ್ತ ಮೂವರು ಸಾಫ್ಟ್‌ವೇರ್ ಎಂಜಿನಿಯರ್ ಸ್ನೇಹಿತರ ಜತೆಗೆ ಪಾರ್ಟಿ ಮಾಡಿದ್ದರು. ಪಾರ್ಟಿ ಮುಗಿಸಿಕೊಂಡು ಸ್ನೇಹಿತರ ಜತೆಗೆ ತೆರಳುತ್ತಿದ್ದಾಗ ಅಪಘಾತವಾಗಿದೆ. ಹರಳೂರು- ಕಸವನಹಳ್ಳಿ ರಸ್ತೆಯಲ್ಲಿ ಏಕಮುಖ ಸಂಚಾರವಿದ್ದರೂ ಆಟೊ ಚಾಲಕ ವಿರುದ್ಧ ದಿಕ್ಕಿನಿಂದ ಹೊರಟ್ಟಿದ್ದ. ಆಗ ವೇಗವಾಗಿ ಬಂದ ಕಾರೊಂದು ಆಟೊಗೆ ಡಿಕ್ಕಿಯಾಗಿದೆ ಎಂದು ಪೊಲೀಸರು ಹೇಳಿದರು.

ಡಿವೈಡರ್‌ಗೆ ಡಿಕ್ಕಿ-ಬೈಕ್ ಸವಾರ ಸಾವು: ಹೆಣ್ಣೂರು ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬೈಕ್ ನಿಯಂತ್ರಣಕ್ಕೆ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿಯಾದ ಪರಿಣಾಮ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕಾಚರಕನಹಳ್ಳಿ ನಿವಾಸಿ ಚೇತನ್(22) ಮೃತ ಸವಾರ. ಹೊಸ ವರ್ಷದ ಪಾರ್ಟಿ ಮುಗಿಸಿಕೊಂಡು ಸೋಮವಾರ ಮುಂಜಾನೆ 4 ಗಂಟೆ ಸುಮಾರಿಗೆ ದ್ವಿಚಕ್ರ ವಾಹನದಲ್ಲಿ ಮನೆಗೆ ತೆರಳುತ್ತಿದ್ದರು, ಆಗ ಕೊತ್ತನೂರು ಮುಖ್ಯರಸ್ತೆಯಲ್ಲಿ ಅತಿವೇಗವಾಗಿ ದ್ವಿಚಕ್ರ ವಾಹನ ಚಾಲನೆ ಮಾಡಿದ ಪರಿಣಾಮ ನಿಯಂತ್ರಣ ತಪ್ಪಿದ ದ್ವಿಚಕ್ರ ವಾಹನ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ಹೇಳಿದರು.

ವಿದ್ಯುತ್ ಕಂಬಕ್ಕೆ ಡಿಕ್ಕಿ: ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣೆಯಲ್ಲಿ ಬೈಕ್‌ವೊಂದು ವಿದ್ಯುತ್ ಕಂಬಕ್ಕೆ ಡಿಕ್ಕಿಯಾದ ಪರಿಣಾಮ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಿಂಬದಿ ಸವಾರ ಗಾಯಗೊಂಡಿದ್ದಾರೆ.

ಸಿದ್ದಾಪುರ ನಿವಾಸಿ ಧೀರಜ್(21) ಮೃತ ಸವಾರ.

ಈತನ ಸ್ನೇಹಿತ ರಾಕೇಶ್ ಗಾಯಗೊಂಡಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ನಲ್ಲೂರಹಳ್ಳಿ ರಸ್ತೆಯಲ್ಲಿ ಈ ಅಪಘಾತ ಸಂಭವಿಸಿದೆ.

ಉತ್ತರ ಪ್ರದೇಶದ ಮೂಲದ ಧೀರಜ್ ಹಾಗೂ ಆತನ ಸ್ನೇಹಿತ ರಾಕೇಶ್ ಸಿದ್ದಾಪುರದಲ್ಲಿ ಬಾಡಿಗೆ ರೂಮ್‌ನಲ್ಲಿ ನೆಲೆಸಿದ್ದರು.

ಹೊಸ ವರ್ಷದ ಹಿನ್ನೆಲೆಯಲ್ಲಿ ಇಬ್ಬರು ರಾತ್ರಿ ಸ್ನೇಹಿತರ ಜತೆ ಸೇರಿಕೊಂಡು ಪಾರ್ಟಿ ಮಾಡಿದ್ದಾರೆ. ಬಳಿಕ ಪಾರ್ಟಿ ಮುಗಿಸಿಕೊಂಡು ದ್ವಿಚಕ್ರ ವಾಹನದಲ್ಲಿ ರೂಮ್ ಕಡೆಗೆ ಹೊರಟ್ಟಿದ್ದರು. ಆಗ ಅಪಘಾತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುಖ್ಯಾಂಶಗಳು
- ಬೆಳ್ಳಂದೂರು ಠಾಣೆ ವ್ಯಾಪ್ತಿಯಲ್ಲಿ ಆಟೊ-ಕಾರು ನಡುವೆ ಡಿಕ್ಕಿ
- ಹೆಣ್ಣೂರು ಠಾಣೆ ವ್ಯಾಪ್ತಿಯಲ್ಲಿ ಬೈಕ್ ರಸ್ತೆ ವಿಭಜಕಕ್ಕೆ ಡಿಕ್ಕಿ
- ವೈಟ್‌ಫೀಲ್ಡ್ ಠಾಣೆ ವ್ಯಾಪ್ತಿಯಲ್ಲಿ ಬೈಕ್ ವಿದ್ಯುತ್ ಕಂಬಕ್ಕೆ ಡಿಕ್ಕಿ

ಹೊಸ ವರ್ಷಾಚರಣೆ ಪಾರ್ಟಿ ವೇಳೆ ಯುವಕನ ಕೊಲೆ

ಬೆಂಗಳೂರು: ಹನುಮಂತನಗರ ಠಾಣೆ ವ್ಯಾಪ್ತಿಯ ಶ್ರೀನಿವಾಸನಗರದ ಬಸ್ ನಿಲ್ದಾಣದ ಬಳಿ ಭಾನುವಾರ ಮಧ್ಯರಾತ್ರಿ ಯುವಕನನ್ನು ಕೊಲೆ ಮಾಡಿ ದುಷ್ಕರ್ಮಿಗಳು ಪರಾರಿಯಾಗಿದ್ದಾರೆ.

ಶ್ರೀನಿವಾಸನಗರದ ನಿವಾಸಿ ವಿಜಯ್ ಕುಮಾರ್(21) ಕೊಲೆಯಾದ ಯುವಕ. ಹನುಮಂತನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಪತ್ತೆಗೆ ಶೋಧ ಕಾರ್ಯ ಮುಂದುವರಿದಿದೆ.

'ವಿಜಯ್‌ಕುಮಾರ್ ಭಾನುವಾರ ರಾತ್ರಿ ಹೊಸ ವರ್ಷದ ಸಂಭ್ರಮಾಚರಣೆಗೆ ಸ್ನೇಹಿತರ ಜತೆಗೆ ತೆರಳಿದ್ದರು. ಎಲ್ಲರೂ ಬಾರ್‌ವೊಂದರಲ್ಲಿ ಮದ್ಯ ಸೇವಿಸಿ ಪಾರ್ಟಿ ನಡೆಸಿದ್ದರು. ಅದಾದ ಮೇಲೆ ರಸ್ತೆಯೊಂದರಲ್ಲಿ ಹೊಸ ವರ್ಷದ ಸಂಭ್ರಮ ಆಚರಿಸಿ ಎಲ್ಲರೂ ಅಟೆಯಿಂದಲ್ಲಿ ಮನೆಗೆ ತೆರಳುತ್ತಿದ್ದರು. ಆಗ ಸ್ನೇಹಿತರ ನಡುವೆಯೇ ಗಲಾಟೆ ನಡೆದಿದೆ' ಎಂದು ಪೊಲೀಸರು ಹೇಳಿದ್ದಾರೆ.

'ಬಳಿಕ ಶ್ರೀನಿವಾಸನಗರದ ಬಸ್ ನಿಲ್ದಾಣದ ಬಳಿ ವಿಜಯಕುಮಾರ್ ಅವರಿಗೆ ಇರಿದು, ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಬಸ್ ನಿಲ್ದಾಣದ ಮುಂಭಾಗ ಮೃತದೇಹ ಎಸೆದು ಪರಾರಿಯಾಗಿದ್ದಾರೆ. ತೀವ್ರ ರಕ್ತಸ್ರಾವದಿಂದ ವಿಜಯ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ವಿಚಾರ ತಿಳಿದ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಅಲ್ಲದೆ, ಘಟನಾ ಸ್ಥಳದ ಸಿ.ಸಿ ಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಸಂಗ್ರಹಿಸಿ ಆರೋಪಿಗಳ ಪತ್ತೆ ಕಾರ್ಯ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

ಅಪಘಾತ: ವರ್ಷದಲ್ಲಿ 909 ಮಂದಿ ಸಾವು

ಬೆಂಗಳೂರು: ನಗರ ವ್ಯಾಪ್ತಿಯಲ್ಲಿ ಕಳೆದ ವರ್ಷ ಸಂಭವಿಸಿದ ಅಪಘಾತ ಪ್ರಕರಣಗಳಲ್ಲಿ 909 ಮಂದಿ ಮೃತಪಟ್ಟಿದ್ದಾರೆ.

ನಗರದಾದ್ಯಂತ 2023ರಲ್ಲಿ ಸಂಭವಿಸಿದ ಅಪಘಾತ ಪ್ರಕರಣಗಳ ಅಂಕಿ-ಅಂಶ ಪಟ್ಟಿಯನ್ನು ನಗರ ಸಂಚಾರ ಪೊಲೀಸರು ಬಿಡುಗಡೆ ಮಾಡಿದ್ದಾರೆ.

12 ತಿಂಗಳ ಅವಧಿಯಲ್ಲಿ 880 ಗಂಭೀರ ಸ್ವರೂಪದ ಅಪಘಾತಗಳು ಸಂಭವಿಸಿವೆ. 4,095 ಸಣ್ಣಪುಟ್ಟ ಅಪಘಾತಗಳು ಸಂಭವಿಸಿವೆ. 4,201 ಮಂದಿ ಗಾಯಗೊಂಡಿದ್ದರು.

ಸಂಪರ್ಕರಹಿತ ನಿಯಮದ ಅಡಿ 2,49,624 ಪ್ರಕರಣಗಳನ್ನು ದಾಖಲಿಸಲಾಗಿದೆ. ತಂತ್ರಜ್ಞಾನದ ನೆರವಿನಿಂದ 87,25,321 ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಸಂಚಾರ ನಿಯಮ ಉಲ್ಲಂಘಿಸಿದವರಿಂದ ₹184.83 ಕೋಟಿ ದಂಡ ಸಂಗ್ರಹಿಸಲಾಗಿದೆ. ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿದವರ ವಿರುದ್ಧ 7,055 ಪ್ರಕರಣ, ಮದ್ಯ ಸೇವಿಸಿ ವಾಹನ ಚಾಲನೆ ಮಾಡಿ ಅಪಘಾತ ಉಂಟು ಮಾಡಿದವರ ವಿರುದ್ಧ 16 ಪ್ರಕರಣಗಳು ದಾಖಲಾಗಿವೆ.

ನಿವೃತ್ತನಾದ ಮಾವುತನಿಗೆ ಹಾರ ಹಾಕಿ ಗೌರವಿಸಿದ ಆನೆ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಮಹತೋಭಾರ ಕುಕ್ಕೆ ಶ್ರೀಸುಬ್ರಹ್ಮಣ್ಯ ದೇವಸ್ಥಾನದ ಆನೆ 'ಯಶಸ್ವಿ'ಯ ಮಾವುತರಾಗಿದ್ದ ಶ್ರೀನಿವಾಸ ಗೌಡ ಧರ್ಮಸ್ಥಳ ಭಾನುವಾರ ನಿವೃತ್ತರಾದರು.

ಯಶಸ್ವಿಯು ಶ್ರೀನಿವಾಸ ಅವರಿಗೆ ಹಾರ ಹಾಕಿ ಸೊಂಡಿಲನ್ನು ಅವರ ತಲೆಯ ಮೇಲಿರಿಸಿ ಗೌರವ ಸಲ್ಲಿಸಿತು.

ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಆನೆ ಮಾವುತರಾಗಿ ಸುಮಾರು 15ವರ್ಷ ಅವರು ಸೇವೆ ಸಲ್ಲಿಸಿದ್ದರು. ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮೋಹನರಾಂ ಸುಳ್ಳಿ ಶ್ರೀನಿವಾಸ ಅವರನ್ನು ಸನ್ಮಾನಿಸಿದರು. ದೇವಳದ ಕಾರ್ಯನಿರ್ವಹಣಾಧಿಕಾರಿ ನಿಂಗಯ್ಯ ಇದ್ದರು.

330 ಚಾಲಕರ ವಿರುದ್ಧ ಎಫ್‌ಐಆರ್

ಬೆಂಗಳೂರು: ಹೊಸ ವರ್ಷಾಚರಣೆ ವೇಳೆ ಮದ್ಯ ಸೇವಿಸಿ, ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ನಗರ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿದ್ದು, 330 ಚಾಲಕರ ವಿರುದ್ಧ ಕೇಂದ್ರ ಮೋಟಾರು ವಾಹನ ಕಾಯ್ದೆ (ಐಎಂವಿ) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿಶೇಷ ಕಾರ್ಯಾಚರಣೆಯ ವೇಳೆ 7,620ಕ್ಕೂ ಹೆಚ್ಚು ವಾಹನಗಳನ್ನು ತಪಾಸಣೆ ನಡೆಸಲಾಯಿತು. ಅದರಲ್ಲಿ ಮದ್ಯ ಸೇವಿಸಿ ಚಾಲನೆ ಮಾಡುತ್ತಿದ್ದವರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಭಾನುವಾರ ರಾತ್ರಿಯಿಂದ ಸೋಮವಾರ ಬೆಳಿಗ್ಗೆ 7 ಗಂಟೆ ವರೆಗೆ ಕಮಿಷನರೇಟ್ ವ್ಯಾಪ್ತಿಯಲ್ಲಿ ಒಟ್ಟು 14 ಅಪಘಾತಗಳು ನಡೆದಿವೆ. 10 ಅಪಘಾತಗಳಲ್ಲಿ ಚಾಲಕರು ಹಾಗೂ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯವಾಗಿವೆ. ಅವರು ಅಪಾಯದಿಂದ ಪಾರಾಗಿದ್ದಾರೆ. ನಾಲ್ಕು ಅಪಘಾತ ಪ್ರಕರಣಗಳಲ್ಲಿ ಸವಾರರಿಗೆ ಗಂಭೀರವಾದ ಗಾಯಗಳಾಗಿವೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಕೇರಳದ ಪೊಲೀಸ್ ಅಧಿಕಾರಿ ಪುತ್ರನಿಗೆ ಥಳಿತ: ಆಡುಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯ ಡೇರಿ ಸರ್ಕಲ್ ಬಳಿ ಹೊಸ ವರ್ಷಾಚರಣೆಯ ಪಾರ್ಟಿ ಮುಗಿಸಿಕೊಂಡು ಸ್ನೇಹಿತರ ಜೊತೆಗೆ ತೆರಳುತ್ತಿದ್ದ ಕೇರಳದ ಪೊಲೀಸ್ ಅಧಿಕಾರಿಯ ಪುತ್ರ ಸ್ಟಾಲಿನ್ ಮೇಲೆ ಯುವಕರ ಗುಂಪೊಂದು ಹಲ್ಲೆ ನಡೆಸಿದೆ. ಸ್ಟಾಲಿನ್ ಮುಖಕ್ಕೆ ಗಾಯವಾಗಿದೆ.

ಸ್ಟಾಲಿನ್ ಸ್ನೇಹಿತರು ಪಬ್ ಹೊರಭಾಗದಲ್ಲಿ ಯುವತಿಯ ಮೈಮುಟ್ಟಿದರು ಎನ್ನುವ ವಿಚಾರಕ್ಕೆ ಗಲಾಟೆ ನಡೆಯುತ್ತಿತ್ತು. ಪಬ್ ಒಳಗಿದ್ದ ಸ್ಟಾಲಿನ್ ಸ್ಥಳಕ್ಕೆ ಬಂದು ವಿಚಾರಿಸಿದಾಗ ಯುವತಿ ಕಡೆಯವರು ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಸ್ಥಳಕ್ಕೆ ಬಂದ ಪೊಲೀಸರು ಗುಂಪು ಚದುರಿಸಿದರು.

ತಲಾ ₹ 1 ಕೋಟಿ ವಿಮೆ ಮೊತ್ತ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಘಾತದಲ್ಲಿ ಮೃತಪಟ್ಟ ಕೆಎಸ್‌ಆರ್‌ಟಿಸಿಯ ಮೂವರು ಸಿಬ್ಬಂದಿಯ ಕುಟುಂಬಗಳಿಗೆ ಸೋಮವಾರ ವಿಮೆ ಪರಿಹಾರವಾಗಿ ತಲಾ ₹ 1 ಕೋಟಿ ವಿತರಿಸಲಾಯಿತು.

ವಿಮೆ ಪರಿಹಾರ ವಿತರಿಸಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, 'ಅಪಘಾತ ಅಥವಾ ಇನ್ನಿತರ ಕಾರಣದಿಂದ ಮೃತಪಟ್ಟವರಿಗೆ ಹಿಂದೆ ₹ 3 ಲಕ್ಷ ಪರಿಹಾರ ಸಿಗುತ್ತಿತ್ತು. ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿಯಿಂದ ₹ 50 ಲಕ್ಷ, ಎಸ್‌ಬಿಐ ಕಾರ್ಪೊರೇಟ್ ಸ್ಯಾಲರಿ ಪ್ಯಾಕೇಜ್ ವಿಮೆ ₹ 50 ಲಕ್ಷ ಸೇರಿ ಒಟ್ಟು ₹ 1 ಕೋಟಿ ಪರಿಹಾರ ನೀಡುವ ಯೋಜನೆಯನ್ನು ವರ್ಷದ ಹಿಂದೆ ಜಾರಿಗೆ ತರಲಾಗಿತ್ತು. ಅಲ್ಲಿಂದ ಇಲ್ಲಿವರೆಗೆ ಮೃತಪಟ್ಟ 12 ನೌಕರರ ಕುಟುಂಬಗಳಿಗೆ ತಲಾ ₹ 1ಕೋಟಿ ವಿತರಿಸಲಾಗಿದೆ' ಎಂದರು.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್, ನಿರ್ದೇಶಕಿ (ಸಿಬ್ಬಂದಿ ಮತ್ತು ಜಾಗೃತ) ನಂದಿನಿ ದೇವಿ, ಅಧಿಕಾರಿಗಳು ಭಾಗವಹಿಸಿದ್ದರು.

ಒಂದು ವರ್ಷದಲ್ಲಿ ಮೃತಪಟ್ಟಿರುವ ಕೆಎಸ್‌ಆರ್‌ಟಿಸಿಯ 12 ಸಿಬ್ಬಂದಿಯ ಅವಲಂಬಿತರಿಗೆ ಹೊಸವರ್ಷದ ದಿನ ಸೀರೆ ಮತ್ತು ಸಿಹಿ ವಿತರಿಸಲಾಯಿತು. ಕೆಎಸ್‌ಆರ್‌ಟಿಸಿ ನಿರ್ದೇಶಕಿ (ಸಿಬ್ಬಂದಿ ಮತ್ತು ಜಾಗೃತಿ) ನಂದಿನಿ ದೇವಿ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬು ಕುಮಾರ್ ಭಾಗವಹಿಸಿದ್ದರು.

ಪಂಜಿನ ಮೆರವಣಿಗೆ...

ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ನಾರಾಯಣಗೌಡ ಸೇರಿದಂತೆ ಕರವೇ ಕಾರ್ಯಕರ್ತರ ಬಿಡುಗಡೆಗೆ ಆಗ್ರಹಿಸಿ ನಗರದಲ್ಲಿ ಸೋಮವಾರ ರಾತ್ರಿ ಪಂಜಿನ ಮೆರವಣಿಗೆ ನಡೆಯಿತು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಸೇರಿದಂತೆ ಕರವೇ ಕಾರ್ಯಕರ್ತರು ಪಾಲ್ಗೊಂಡಿದ್ದರು

ಬಿಬಿಎ ವಿದ್ಯಾರ್ಥಿನಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ವರ್ಷಿಣಿ

ಬೆಂಗಳೂರು: ಬಿಬಿಎ ವಿದ್ಯಾರ್ಥಿನಿಯೊಬ್ಬರು ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸುಧಾಮನಗರದ ವರ್ಷಿಣಿ (21) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿ. ಈ ಸಂಬಂಧ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ವರ್ಷಿಣಿ ನಗರದ ಕಾಲೇಜೊಂದರಲ್ಲಿ ಪ್ರಥಮ ವರ್ಷದ ಬಿಬಿಎ ವ್ಯಾಸಂಗ ಮಾಡುತ್ತಿದ್ದರು. ಶನಿವಾರ ರಾತ್ರಿ ಮನೆಯಲ್ಲಿ ಊಟ ಮುಗಿಸಿ, ತಮ್ಮ ಕೊಠಡಿಗೆ ತೆರಳಿದ್ದರು. ಭಾನುವಾರ ಬೆಳಿಗ್ಗೆ ಎಷ್ಟು ಹೊತ್ತಾದರೂ ಕೊಠಡಿಯಿಂದ ಹೊರಗೆ ಬಾರದಿದ್ದಾಗ ಅನುಮಾನಗೊಂಡು ಪೋಷಕರು ಬಾಗಿಲು ತಟ್ಟಿದ್ದಾರೆ. ಆಕೆಯಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಬಾಗಿಲು ಲಾಕ್ ತೆಗೆದು ಒಳಗೆ ಪರಿಶೀಲಿಸಿದಾಗ ಫ್ಯಾನ್‌ಗೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿತ್ತು' ಎಂದು ಪೊಲೀಸರು ಹೇಳಿದರು.

'ಕೊಠಡಿಯಲ್ಲಿ ಯಾವುದೇ ಡೆತ್‌ನೋಟ್ ಸಿಕ್ಕಿಲ್ಲ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ನೀಡಲಾಗಿದೆ' ಎಂದು ಪೊಲೀಸರು ಹೇಳಿದರು.

ವರ್ಷಿಣಿ ಫೋಟೊಗ್ರಫಿ ಕೋರ್ಸ್ ಮಾಡುತ್ತಿದ್ದರು. ಡಿ.30ರಂದು ಮಾಲ್‌ವೊಂದರಲ್ಲಿ ಫೋಟೊ ಶೂಟ್ ನಡೆಸಲು ಪೋಷಕರ ಅನುಮತಿ ಕೇಳಿದ್ದರು. ಇದಕ್ಕೆ ಪೋಷಕರು ನಿರಾಕರಿಸಿದ್ದರು. ಈ ವಿಚಾರದಿಂದ ಮನನೊಂದು ಆತ್ಮಹತ್ಯೆಗೆ ಶರಣಾಗಿರುವ ಶಂಕೆ ವ್ಯಕ್ತವಾಗಿದೆ.

ಪರಿಶಿಷ್ಟ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ- ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಮಂಗಳೂರು: ಚಿಕ್ಕಮಗಳೂರು ಜಿಲ್ಲೆಯ ಪರಿಶಿಷ್ಟ ಜಾತಿಯ 17 ವರ್ಷದ ಬಾಲಕಿಯನ್ನು ಮದುವೆಯಾಗುವುದಾಗಿ ನಂಬಿಸಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿಯನ್ನು ಉಳ್ಳಾಲ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಅಣಜೂರು ಗ್ರಾಮದ ಮೊಹಮ್ಮದ್ ರಝೀನ್ (25) ಬಂಧಿತ ಆರೋಪಿ. ಆರೋಪಿ ವಿರುದ್ಧ ಬಾಲಕಿ ದೂರು ನೀಡಿದ್ದಳು.

'ಬಾಲಕಿಯನ್ನು ಪ್ರೀತಿಸುವುದಾಗಿ ಹೇಳಿದ್ದ ಆರೋಪಿಯು ನಾಲ್ಕು ತಿಂಗಳ ಹಿಂದೆ ನಗರದ ಪಂಪ್‌ವೆಲ್‌ಗೆ ಆಕೆಯನ್ನು ಬಸ್‌ನಲ್ಲಿ ಕರೆದುಕೊಂಡು ಬಂದಿದ್ದ. ನಂತರ ಆತನ ಆಟೊರಿಕ್ಷಾದಲ್ಲಿ ಆಕೆಯನ್ನು ಕುಂಪಲದ ಬಾಡಿಗೆ ಮನೆಗೆ ಕರೆದುಕೊಂಡು ಹೋಗಿದ್ದ. ಮದುವೆಯಾಗುವುದಾಗಿ ನಂಬಿಸಿ ಒತ್ತಾಯಪೂರ್ವಕವಾಗಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದ. ಬಾಲಕಿಯು ನೀಡಿದ ದೂರಿನ ಆಧಾರದಲ್ಲಿ ಆರೋಪಿ ವಿರುದ್ಧ ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ. ಆರೋಪಿಯನ್ನು ಭಾನುವಾರ ಬಂಧಿಸಿದ್ದು, ನ್ಯಾಯಾಂಗ ಬಂಧನ ವಿಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೊಹಮ್ಮದ್ ರಝೀನ್

ಕ್ಷುಲ್ಲಕ ಕಾರಣಕ್ಕೆ ವಿದ್ಯಾರ್ಥಿಗಳ ಮಾರಾಮಾರಿ

ಪ್ರಜಾವಾಣಿ ವಾರ್ತೆ

ರಾಯಚೂರು: ಕ್ಷುಲ್ಲಕ ಕಾರಣಕ್ಕೆ ವಿದ್ಯಾರ್ಥಿಗಳು ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಗಲಾಟೆ ಮಾಡಿಕೊಂಡ ಘಟನೆ ನಗರದ ಮದರ್ ಟ್ರಸ್ಟ್ ಶಾಲೆಯ ಆವರಣದಲ್ಲಿ ಸೋಮವಾರ ನಡೆದಿದೆ.

ಬೆಳಿಗ್ಗೆ ತಮ್ಮ ತರಗತಿಗಳಲ್ಲಿ ವರ್ಷಾಚರಣೆಗೆ ಕಾಂಪೌಂಡ್ ಪ್ರವೇಶಿಸುತ್ತಿರುವ ಸಂದರ್ಭದಲ್ಲಿ ಕ್ಷುಲ್ಲಕ ಕಾರಣಕ್ಕೆ 7ನೇ ಮತ್ತು 9ನೇ ತರಗತಿಗಳ ವಿದ್ಯಾರ್ಥಿಗಳು ಗಲಾಟೆ ಮಾಡಿಕೊಂಡಿದ್ದಾರೆ.

ಆವೇಶದಲ್ಲಿ ಒಬ್ಬ ವಿದ್ಯಾರ್ಥಿ ಹಕ್ಕಿಗಳಿಗೆ ಹೊಡೆಯುವ ಏರ್‌ಗನ್ ತಂದಿದ್ದರೆ, ಇನ್ನೊಬ್ಬ ವಿದ್ಯಾರ್ಥಿ ಎರಡು ಬಟನ್ ಚಾಕು, ಪಂಚ್ ತೆಗೆದುಕೊಂಡು ಬಂದಿದ್ದ. ಪರಸ್ಪರ ಹೊಡೆದಾಡಿಕೊಂಡ ಪರಿಣಾಮ 9ನೇ ತರಗತಿ ವಿದ್ಯಾರ್ಥಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಪೊಲೀಸರು ವಿದ್ಯಾರ್ಥಿಗಳ ವಿಚಾರಣೆ ಮಾಡುತ್ತಿದ್ದಾರೆ.

ವಿದ್ಯಾರ್ಥಿಗಳ ಗಲಾಟೆಗೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿಲ್ಲ. ಈ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪಶ್ಚಿಮ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಮಿತ್ರನ ಮೂಗು ಕಚ್ಚಿದ ಯುವಕ

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ: ಸಮೀಪದ ಪಿಲ್ಯದಲ್ಲಿ ಭಾನುವಾರ ರಾತ್ರಿ ಹೊಸ ವರ್ಷಾಚರಣೆಯಲ್ಲಿ ನಿರತರಾಗಿದ್ದ ಇಬ್ಬರು ಯುವಕರ ನಡುವೆ ಗಲಾಟೆ ನಡೆದಿದ್ದು, ಯುವಕನೊಬ್ಬನ ಮೂಗನ್ನು ಆತನ ಗೆಳೆಯ ಕಚ್ಚಿ ತುಂಡರಿಸಿದ್ದಾನೆ. ವೇಣೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಪಿಲ್ಯ ಗ್ರಾಮದ ಉಲ್ಪೆ ನಿವಾಸಿ ದೀಕ್ಷಿತ್ (28) ಮೂಗಿಗೆ ಗಾಯವಾಗಿದೆ. ಆತನ ಗೆಳೆಯ, ಮೂಡಿಗೆರೆ ತಾಲ್ಲೂಕಿನ ರಾಕೇಶ್ ಮೂಗು ಕಚ್ಚಿ ಗಾಯಗೊಳಿಸಿದ ಆರೋಪಿ. ಆರೋಪಿಯು ಪಿಲ್ಯ ಗ್ರಾಮದ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದು, ಸಂಬಂಧಿಕರ ಮನೆಯಲ್ಲಿ ವಾಸವಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕೆಲ ಯುವಕರು ಸೇರಿ ಅಳದಂಗಡಿಯಲ್ಲಿ ಹೊಸ ವರ್ಷಾಚರಣೆ ನಡೆಸಿದ್ದರು. ಬಳಿಕ ವೈನ್‌ಶಾಪ್ ಒಂದರಲ್ಲಿ ಮದ್ಯ ಪಾನ ಮಾಡಿದ್ದರು. ಅಲ್ಲಿಂದ ಮನೆಗೆ ಮರಳುವಾಗ ದೀಕ್ಷಿತ್ ಮತ್ತು ರಾಕೇಶ್ ನಡುವೆ ಕ್ಷುಲ್ಲಕ ವಿಚಾರಕ್ಕೆ ಗಲಾಟೆ ನಡೆದಿತ್ತು. ಇದು ವಿಕೋಪಕ್ಕೆ ತಿರುಗಿ, ರಾಕೇಶ್ ಸಿಟ್ಟಿನಿಂದ ದೀಕ್ಷಿತ್ ಮೂಗನ್ನು ಕಚ್ಚಿ ತುಂಡರಿಸಿದ್ದ. ಗಾಯಗೊಂಡ ದೀಕ್ಷಿತ್ ಬೆಳ್ತಂಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ. ಬಳಿಕ ಆತನನ್ನು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಖುರೇಷಿಯ ₹31 ಕೋಟಿ ಮೌಲ್ಯದ ಬೇನಾಮಿ ಆಸ್ತಿ ವಶ

ಮೀರತ್ (ಉತ್ತರಪ್ರದೇಶ) (ಪಿಟಿಐ): ಬಿಎಸ್‌ಪಿ ಮುಖಂಡ, ಎರಡು ಬಾರಿಯ ಶಾಸಕ ಯಾಕೂಬ್ ಖುರೇಷಿ ಅವರಿಗೆ ಸೇರಿದ ಸುಮಾರು ₹31 ಕೋಟಿ ಮೌಲ್ಯದ ಬೇನಾಮಿ ಆಸ್ತಿಯನ್ನು ಜಿಲ್ಲಾಡಳಿತವು ವಶಪಡಿಸಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲಾ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ನೀಡಿದ ಆದೇಶದ ಅನುಸಾರ ಯಾಕೂಬ್ ಖುರೇಷಿ ಅವರ ಬೇನಾಮಿ ಆಸ್ತಿಯನ್ನು 'ದರೋಡೆಕೋರರ ಮತ್ತು ಸಮಾಜ ವಿರೋಧಿ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯ್ದೆ'ಯಡಿ ವಶಪಡಿಸಿಕೊಳ್ಳಲಾಗಿದೆ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ರೋಹಿತ್ ಸಿಂಗ್ ಸಜ್ವಾನ್ ತಿಳಿಸಿದ್ದಾರೆ.

ವಶಪಡಿಸಿಕೊಂಡ ಆಸ್ತಿಗಳಲ್ಲಿ ನೌಚಂಡಿಯ ಭವಾನಿ ನಗರದಲ್ಲಿನ ಆಸ್ಪತ್ರೆ ಕಟ್ಟಡ ಮತ್ತು ಖುರೇಷಿ ತನ್ನ ಕುಟುಂಬ ಸದಸ್ಯರು ಮತ್ತು ಉದ್ಯೋಗಿಗಳ ಹೆಸರಿನಲ್ಲಿ ಖರೀದಿಸಿದ್ದ ಎರಡು ಐಷಾರಾಮಿ ಕಾರುಗಳು, ಶಾಸ್ತ್ರಿನಗರದಲ್ಲಿರುವ 3,265.35 ಚದರ ಮೀಟರ್, 288 ಚದರ ಮೀಟರ್ ಮತ್ತು 213.60 ಚದರ ಮೀಟರ್ ಅಳತೆಯ ಮೂರು ಫ್ಲ್ಯಾಟ್‌ಗಳು ಸೇರಿವೆ ಎಂದು ಅವರು ತಿಳಿಸಿದ್ದಾರೆ.

ಮೀರತ್‌ನಲ್ಲಿ ಖುರೇಷಿ ಅವರ ಮಾಂಸದ ಕಾರ್ಖಾನೆಯ ಮೇಲೆ 2022ರ ಮಾರ್ಚ್ 31ರಂದು ಪೊಲೀಸರು ದಾಳಿ ನಡೆಸಿದ್ದರು. ಕಾರ್ಖಾನೆಯಲ್ಲಿ ಅಕ್ರಮವಾಗಿ ಸಂಗ್ರಹಿಸಿದ ಮಾಂಸದ ಪ್ಯಾಕಿಂಗ್ ಮಾಡುತ್ತಿರುವುದನ್ನು ಪತ್ತೆಹಚ್ಚಲಾಗಿತ್ತು. ಕಾರ್ಖಾನೆಯ 10 ಮಂದಿ ಉದ್ಯೋಗಿಗಳನ್ನು ಬಂಧಿಸಲಾಗಿತ್ತು. ಖುರೇಷಿ ಮತ್ತು ಅವರ ಪತ್ನಿ ಹಾಗೂ ಇಬ್ಬರು ಪುತ್ರರು ಸೇರಿ 17 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು ಎಂದು ಸಜ್ವಾನ್ ಹೇಳಿದರು.

'ಸಂಚಾಲಕರ ನೇಮಕಕ್ಕೆ ಸಭೆ ನಡೆದಿಲ್ಲ'

ಮುಂಬೈ (ಪಿಟಿಐ): ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟಕ್ಕೆ ಸಂಚಾಲಕ ಅಥವಾ ಅಧ್ಯಕ್ಷರನ್ನು ನೇಮಿಸುವ ಕುರಿತು ಯಾವುದೇ ಸಭೆ ನಡೆದಿಲ್ಲ ಎಂದು ಶಿವಸೇನಾ (ಯುಬಿಟಿ) ಸಂಸದ ಸಂಜಯ್ ರಾವುತ್ ತಿಳಿಸಿದ್ದಾರೆ.

ಕಳೆದ ವರ್ಷದ ಡಿಸೆಂಬರ್ 19ರಂದು ನಡೆದ 'ಇಂಡಿಯಾ' ಸಭೆಯಲ್ಲಿ, ಲೋಕಸಭಾ ಚುನಾವಣೆಯ ಸೀಟುಗಳ ಹಂಚಿಕೆ ವಿಚಾರವನ್ನು ಶೀಘ್ರ ಅಂತಿಮಗೊಳಿಸಲು ನಿರ್ಧರಿಸಲಾಯಿತು ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರನ್ನು ಮೈತ್ರಿಕೂಟದ ಪ್ರಧಾನ ಮಂತ್ರಿ ಅಭ್ಯರ್ಥಿಯನ್ನಾಗಿಸಲು ಕೆಲ ನಾಯಕರು ಸಭೆಯಲ್ಲಿ ಪ್ರಸ್ತಾಪಿಸಿದರು. ಆದರೆ ಖರ್ಗೆ ಅವರು, ಮೊದಲು ಚುನಾವಣೆಯಲ್ಲಿ ಗೆಲ್ಲುವುದು ಮುಖ್ಯ. ಆ ನಂತರ ನಾಯಕತ್ವದ ವಿಷಯವನ್ನು ಪ್ರಜಾಸತ್ತಾತ್ಮಕವಾಗಿ ನಿರ್ಧರಿಸಬಹುದು ಎಂದು ಹೇಳಿದ್ದರು ಎಂದು ರಾವುತ್ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ಮೈತ್ರಿಕೂಟವು ಮುಖ್ಯಸ್ಥರೊಬ್ಬರನ್ನು ಹೊಂದಿರಬೇಕು. ಹಿರಿಯ ನಾಯಕರೊಬ್ಬರನ್ನು ಅವಿರೋಧವಾಗಿ ಸಂಚಾಲಕ ಅಥವಾ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಬೇಕು ಎಂದು ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ದೆಹಲಿ ಸಭೆಯಲ್ಲಿ ಪ್ರತಿಪಾದಿಸಿದ್ದರು' ಎಂದು ರಾವುತ್ ಹೇಳಿದರು.

'ಲೋಕಸಭಾ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಮೈತ್ರಿಕೂಟವನ್ನು ಮುನ್ನಡೆಸಲು ಸಾರಥಿಯನ್ನು ನೇಮಿಸಬೇಕಿದೆ' ಎಂದು ಶಿವಸೇನಾ ಮುಖವಾಣಿ 'ಸಾಮ್ನಾ' ಕಳೆದ ತಿಂಗಳ ಸಂಪಾದಕೀಯದಲ್ಲಿ ಸಲಹೆ ನೀಡಿತ್ತು.

ನಿತೀಶ್ ಬಳಿ ₹1.64 ಕೋಟಿ ಆಸ್ತಿ

ಪಟ್ನಾ (ಪಿಟಿಐ): ಬಿಹಾರದ ಮುಖ್ಯಮಂತ್ರಿ, ಜೆಡಿಯು ವರಿಷ್ಠ ನಿತೀಶ್ ಕುಮಾರ್ ಅವರ ಬಳಿ ಹಸು, ಕರು, ಮೈಕ್ರೋವೇವ್ ಓವನ್, ಒಂದು ಕಾರು, ಒಂದು ಸೈಕಲ್ ಸೇರಿ ₹1.64 ಕೋಟಿ ಮೌಲ್ಯದ ಆಸ್ತಿ ಇದೆ.

ಮುಖ್ಯಮಂತ್ರಿ ಮತ್ತು ಸಂಪುಟ ಸಹೋದ್ಯೋಗಿಗಳ ಆಸ್ತಿ ವಿವರವನ್ನು ಸಚಿವ ಸಂಪುಟ ಕಾರ್ಯಾಲಯದ ವೆಬ್‌ಸೈಟ್‌ನಲ್ಲಿ ಭಾನುವಾರ ಪ್ರಕಟಿಸಲಾಗಿದೆ. ನಿತೀಶ್ ಬಳಿ ₹22,552 ನಗದು ಮತ್ತು ಬ್ಯಾಂಕ್ ಖಾತೆಯಲ್ಲಿ ₹49,202 ಹಣವಿದೆ. ಇದಲ್ಲದೇ ₹11.32 ಲಕ್ಷ ಮೌಲ್ಯದ ಫೋರ್ಡ್ ಇಕೋ ಸ್ಪೋರ್ಟ್ ಕಾರು, ₹1.28 ಲಕ್ಷ ಬೆಲೆಯ ಎರಡು ಚಿನ್ನದ ಉಂಗುರ ಮತ್ತು ಒಂದು ಬೆಳ್ಳಿ ಉಂಗುರ ಅವರ ಬಳಿ ಇದೆ. ಚರಾಸ್ತಿಯಾಗಿ ಅವರ ಬಳಿ ₹1.45 ಲಕ್ಷ ಮೌಲ್ಯದ 13 ಹಸುಗಳು ಮತ್ತು 10 ಕರುಗಳಿವೆ. ದೆಹಲಿಯ ದ್ವಾರಕದಲ್ಲಿರುವ ಅಪಾರ್ಟ್‌ಮೆಂಟ್ ಮಾತ್ರ ಅವರ ಹೆಸರಿನಲ್ಲಿರುವ ಸ್ಥಿರಾಸ್ತಿ. 2004ರಲ್ಲಿ ₹13.78 ಲಕ್ಷ ಬೆಲೆ ಬಾಳುತ್ತಿದ್ದ ಈ ಅಪಾರ್ಟ್‌ಮೆಂಟ್‌ನ ಈಗಿನ ಮೌಲ್ಯ ₹1.48 ಕೋಟಿ. ನಿತೀಶ್ ಕುಮಾರ್ ಅವರು ಕಳೆದ ವರ್ಷ ₹75.53 ಲಕ್ಷ ಮೌಲ್ಯದ ಆಸ್ತಿ ಘೋಷಿಸಿಕೊಂಡಿದ್ದರು. ದೆಹಲಿಯಲ್ಲಿರುವ ಅಪಾರ್ಟ್‌ಮೆಂಟ್‌ನ ಮೌಲ್ಯ ವರ್ಷದಿಂದ ವರ್ಷಕ್ಕೆ ಏರುತ್ತಿರುವ ಪರಿಣಾಮವಾಗಿ ಅವರ ಆಸ್ತಿ ಮೌಲ್ಯವೂ ಏರಿದೆ.

ರಾಜ್ಯದಲ್ಲಿ ವಾರ್ಷಿಕ ₹200 ಕೋಟಿ ಹೆಚ್ಚುವರಿ ವಹಿವಾಟು ನಡೆಸುವ ಗುರಿ

ಎಂಎಸ್‌ಐಎಲ್ 'ಹೈಟೆಕ್' ಮಳಿಗೆಯಲ್ಲಿ ತರಹೇವಾರಿ ಮದ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ಬಸವೇಶ್ವರ ನಗರದಲ್ಲಿ ಪ್ರೀಮಿಯಂ ವಿದೇಶಿ ಬ್ರ್ಯಾಂಡ್‌ಗಳನ್ನೂ ಒಳಗೊಂಡ 'ಹೈಟೆಕ್' ಮಳಿಗೆ ತೆರೆದಿದೆ.

ವಿದೇಶಿ ಕಂಪನಿಯ ಮದ್ಯಗಳೂ ಸೇರಿದಂತೆ ಎಲ್ಲ ಬಗೆಯ ಬ್ರ್ಯಾಂಡ್‌ಗಳೂ ಒಂದೇ ಮಳಿಗೆಯಲ್ಲಿ ಗ್ರಾಹಕರಿಗೆ ದೊರೆಯುತ್ತವೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಇರುವ ಸ್ಕಾಚ್, ವಿಸ್ಕಿ, ವೊಡ್ಕಾ, ವೈನ್‌ಗಳು, ದೇಶೀಯ ತಯಾರಿಕಾ ಕಂಪನಿಗಳು ಪೂರೈಸುವ ಅಗ್ಗದ ದರದ ತರಹೇವಾರಿ ಮದ್ಯಗಳು, ವಿವಿಧ ಕಂಪನಿಗಳ ಬಿಯರ್‌ಗಳು ಸಿಗುತ್ತವೆ. ಸದಾಕಾಲ ತಂಪಾದ ಬಿಯರ್‌ಗಳು ಗ್ರಾಹಕರಿಗೆ ದೊರೆಯುವಂತೆ ಶೀತಲೀಕರಣ ಘಟಕಗಳ ವ್ಯವಸ್ಥೆಯನ್ನೂ ಮಾಡಲಾಗಿದೆ.

ಮಳಿಗೆ ಉದ್ಘಾಟಿಸಿದ ನಂತರ ಮಾತನಾಡಿದ ಎಂಎಸ್‌ಐಎಲ್ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್, ರಾಜ್ಯದಾದ್ಯಂತ ಇಂತಹ 'ಹೈಟೆಕ್' ಮಳಿಗೆಗಳನ್ನು ತೆರೆಯುವ ಮೂಲಕ ವಾರ್ಷಿಕ ₹150 ಕೋಟಿಯಿಂದ ₹200 ಕೋಟಿ ಹೆಚ್ಚುವರಿ ವಹಿವಾಟು ನಡೆಸುವ ಗುರಿ ಹೊಂದಲಾಗಿದೆ ಎಂದು ಹೇಳಿದರು.

ರಾಜ್ಯದ ಎಂಎಸ್‌ಐಎಲ್ ಮಾರಾಟ ಮಳಿಗೆಗಳಲ್ಲಿ ಡಿ.31ರ ಒಂದೇ ದಿನ ₹18.85 ಕೋಟಿ ಮೊತ್ತದ ಮದ್ಯ ಮಾರಾಟವಾಗಿದೆ. 1,031 ಮದ್ಯ ಮಾರಾಟ ಮಳಿಗೆಗಳಿವೆ. 2022ರ ಡಿ.31ರಂದು ₹14.51 ಕೋಟಿ ಮೌಲ್ಯದ ಮಾರಾಟವಾಗಿತ್ತು. ಈ ಬಾರಿ ₹ 4.34 ಕೋಟಿ ಹೆಚ್ಚಳವಾಗಿದೆ ಎಂದರು.

ರಾಯಚೂರಿನ ರೈಲು ನಿಲ್ದಾಣದ ಬಳಿ ಇರುವ ಮಳಿಗೆಯಲ್ಲಿ ಅತಿ ಹೆಚ್ಚು ಅಂದರೆ ₹11.66 ಲಕ್ಷ ರೂಪಾಯಿಗಳ ಮದ್ಯ ಮಾರಾಟವಾಗಿದೆ. ಜಿಲ್ಲಾವಾರು ವರ್ಗೀಕರಣದಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಹೆಚ್ಚು ಮಾರಾಟವಾಗಿದೆ. ಅಂದರೆ ₹1.82 ಕೋಟಿಯ ಮದ್ಯ ಮಾರಾಟವಾಗಿದೆ.

ಉಳಿದ ದಿನಗಳಲ್ಲಿ ಸರಾಸರಿ ವಹಿವಾಟು ₹8 ಕೋಟಿಯಷ್ಟು ಇರುತ್ತದೆ ಎಂದು ಹೇಳಿದರು.

ಮುಖ್ಯಾಂಶಗಳು
- ರಾಯಚೂರು ರೈಲು ನಿಲ್ದಾಣದಲ್ಲಿ ಗರಿಷ್ಠ ಮಾರಾಟ
- ರಾಜ್ಯದಾದ್ಯಂತ 'ಹೈಟೆಕ್ ಮಳಿಗೆ'ಗಳ ಸ್ಥಾಪನೆ
- ಒಂದೇ ಮಳಿಗೆಯಲ್ಲಿ ವೈವಿಧ್ಯಮ ಬ್ರ್ಯಾಂಡ್‌ಗಳು ಲಭ್ಯ

ಬಸವೇಶ್ವರ ನಗರದ ಕಾರ್ಡ್ ರಸ್ತೆಯಲ್ಲಿ ಸೋಮವಾರ ಆರಂಭವಾದ ಹೈಟೆಕ್ ಮದ್ಯ ಮಾರಾಟ ಮಳಿಗೆಯನ್ನು ಎಂಎಸ್‌ಐಎಲ್ ಪ್ರಧಾನ ವ್ಯವಸ್ಥಾಪಕ ರವಿ ಕುಮಾರ್, ನಿರ್ದೇಶಕ ಎ.ಎಂ. ಚಂದ್ರಪ್ಪ, ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್ ವೀಕ್ಷಿಸಿದರು —ಪ್ರಜಾವಾಣಿ ಚಿತ್ರ

ನಿಧನವಾರ್ತೆ

ಅಶ್ವತ್ಥನಾರಾಯಣ ಸುರಸಗಾರ್



ಬೆಂಗಳೂರು: ಸಂಪಂಗಿರಾಮನಗರದ ನಿವಾಸಿ ಅಶ್ವತ್ಥನಾರಾಯಣ ಸುರಸಾಗರ್ (80) ಸೋಮವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ.

ಅಶ್ವತ್ಥನಾರಾಯಣ ಅವರು ಸ್ವಕುಳಸಾಳಿ ಸಮುದಾಯದ ಮುಖಂಡರು ಹಾಗೂ ಗಾಂಧಿನಗರದಲ್ಲಿರುವ ಅನಂತಸ್ವಾಮಿ ಆಶ್ರಮದ ಟ್ರಸ್ಟಿಯಾಗಿ ಕಾರ್ಯನಿರ್ವಹಿಸಿದ್ದರು.

ಟಿ.ಆರ್. ಮಿಲ್‌ನಲ್ಲಿ ಸೋಮವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಗಾಂಧಿ ಅಂಗಳದಲ್ಲಿ ಕುವೆಂಪು ಜಯಂತಿ2: ಅತಿಥಿ: ನಿಡಸಾಲೆ ಪುಟ್ಟಸ್ವಾಮಯ್ಯ, ಬಹುಮಾನ ವಿತರಣೆ: ಮೋಹನ್ ಕುಮಾರ್, ಉದಂತ ಶಿವಕುಮಾರ್, ಆಯೋಜನೆ: ಸಾಕ್ಷಾತ್ಕಾರ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಮಹಾತ್ಮ ಗಾಂಧಿ ಉದ್ಯಾನ, ನಾಗರಬಾವಿ, ಬೆಳಿಗ್ಗೆ 10

ಸಂಸ್ಕೃತಿ ದಿನಾಚರಣೆ: ಶೋಭಾರಾಣಿ ವಿ.ಜೆ., ಮಾನಸ ಎಂ., ಉಪಸ್ಥಿತಿ: ಗುರುರಾಜ ದಾವಣಗೆರೆ, ಆಯೋಜನೆ ಮತ್ತು ಸ್ಥಳ: ವಿಡಿಯಾ ಪೂರ್ಣ ಪ್ರಜ್ಞ ಪಿಯು ಕಾಲೇಜು, ಮಂಜುನಾಥನಗರ, ಬೆಳಿಗ್ಗೆ 10

ಸಿದ್ದೇಶ್ವರ ಸ್ವಾಮೀಜಿ ಅವರ ಪುಣ್ಯಸ್ಮರಣೆ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಅಧ್ಯಕ್ಷತೆ: ಸಿ. ಸೋಮಶೇಖರ್, ಅತಿಥಿ: ಎಸ್. ಷಡಕ್ಷರಿ, ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ಪ್ರಮೀಳಾ ಗರಡಿ, ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಜಯನಗರ, 8ನೇ ವಿಭಾಗ, ಬೆಳಿಗ್ಗೆ 11

ರಾಮನ್ ರೀಸರ್ಚ್ ಇನ್‌ಸ್ಟಿಟ್ಯೂಟ್‌ನ ಅಮೃತ ಮಹೋತ್ಸವದ ಸಮಾರೋಪ: ಅತಿಥಿಗಳು: ಜಿತೇಂದ್ರ ಸಿಂಗ್, ಅನಿಲ್ ಕಕೋಡಕರ್, ಉಪಸ್ಥಿತಿ: ಎ.ಎಸ್. ಕಿರಣಕುಮಾರ್, ಆಯೋಜನೆ: ರಾಮನ್ ರೀಸರ್ಚ್ ಇನ್‌ಸ್ಟಿಟ್ಯೂಟ್, ಸದಾಶಿವನಗರ, ಮಧ್ಯಾಹ್ನ 2

'ಮಂದ್ರ' ನಾಟಕ ಪ್ರದರ್ಶನ: ನಿರ್ದೇಶನ: ಬಿ.ವಿ. ರಾಜಾರಾಂ, ರಂಗರೂಪ: ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, ಸಂಗೀತ: ಕೀರ್ತಿಕುಮಾರ್ ಬಡಶೇಷಿ, ಆಯೋಜನೆ: ಕಲಾ ಗಂಗೋತ್ರಿ, ಸ್ಥಳ: ರಂಗಶಂಕರ, ಜೆ.ಪಿ.ನಗರ, ಮಧ್ಯಾಹ್ನ 3.30

'ಕರ್ಣಾಟ ಭಾರತ ಕಥಾಮಂಜರಿ' ವಿಶೇಷ ಉಪನ್ಯಾಸ: 'ಕುಮಾರವ್ಯಾಸ ಕವಿಯ ಮೇರು ವ್ಯಕ್ತಿತ್ವ, ಆತನ ಕಾಲಘಟ್ಟ, ಕವಿಯ ಕಾಣ್ಕೆ': ಭಾಷಣಕಾರರು: ಎಸ್.ಎನ್. ಶ್ರೀಧರ್, ಕೃಷ್ಣಮೂರ್ತಿ ಹನೂರು, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ದೊಮ್ಮಲೂರು, ಸಂಜೆ 6.30ರಿಂದ



ಎಸ್.ಎನ್. ಶ್ರೀಧರ್

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

₹ 25 ಲಕ್ಷಕ್ಕಿಂತ ಅಧಿಕ ಆದಾಯದ ದೇವಸ್ಥಾನಗಳಿಗೆ ಪ್ರಾಧಿಕಾರ ರಚಿಸಲು ಸರ್ಕಾರ ಚಿಂತನೆ

ಹುಲಿಗೆಮ್ಮ, ಘಾಟಿ ಅಭಿವೃದ್ಧಿಗೆ ಪ್ರಾಧಿಕಾರ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ದೊಡ್ಡಬಳ್ಳಾಪುರ ಜಿಲ್ಲೆಯ ಘಾಟಿ ಸುಬ್ರಹ್ಮಣ್ಯ ದೇವಸ್ಥಾನ ಮತ್ತು ಕೊಪ್ಪಳ ಜಿಲ್ಲೆಯಲ್ಲಿರುವ ಹುಲಿಗೆಮ್ಮ ದೇವಸ್ಥಾನಗಳ ಅಭಿವೃದ್ಧಿಗೂ ಪ್ರಾಧಿಕಾರ ರಚಿಸಲು ಮುಜರಾಯಿ ಇಲಾಖೆ ಚಿಂತನೆ ನಡೆಸಿದೆ.

ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಮೂಲ ಸೌಲಭ್ಯ ಕಲ್ಪಿಸಲು ಮತ್ತು ಚಾಮುಂಡಿಬೆಟ್ಟದ ಸಮಗ್ರ ಅಭಿವೃದ್ಧಿ ಕೈಗೊಳ್ಳಲು ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ರಚಿಸುವುದಾಗಿ 2023–24 ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಈ ವರ್ಷ ಮತ್ತೆರಡು 'ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ'ಗಳು ಸೇರ್ಪಡೆಯಾಗಲಿವೆ.

ಶಕ್ತಿಪೀಠ ಹುಲಿಗಿಯ ಹುಲಿಗೆಮ್ಮ ದೇವಿ ದೇವಸ್ಥಾನಕ್ಕೆ ವರ್ಷಕ್ಕೆ 80 ಲಕ್ಷದಿಂದ 1 ಕೋಟಿ ಭಕ್ತರು ಭೇಟಿ ನೀಡುತ್ತಾರೆ. ವಾರ್ಷಿಕ ಸರಾಸರಿ ₹ 12 ಕೋಟಿ ಆದಾಯವಿದೆ. ದೊಡ್ಡಬಳ್ಳಾಪುರದಿಂದ 12 ಕಿ.ಮೀ. ದೂರದಲ್ಲಿ ಇರುವ ಘಾಟಿ ಸುಬ್ರಹ್ಮಣ್ಯ ದೇವಸ್ಥಾನಕ್ಕೆ 60 ಲಕ್ಷದಿಂದ 75 ಲಕ್ಷ ಭಕ್ತರು ಭೇಟಿ ನೀಡುತ್ತಾರೆ. ವಾರ್ಷಿಕ ಸರಾಸರಿ ಆದಾಯ ₹ 8 ಕೋಟಿ ಇದೆ. ಇಷ್ಟು ಆದಾಯ ಇದ್ದರೂ ದೇವಸ್ಥಾನಗಳ ಸುತ್ತಮುತ್ತ ಸರ್ವಾಂಗೀಣ ಅಭಿವೃದ್ಧಿಯಾಗಿಲ್ಲ. ಮೂಲಕ ಸೌಲಭ್ಯಗಳ ಕೊರತೆಗಳಿವೆ.

ಈ ಬಗ್ಗೆ 'ಪ್ರಜಾವಾಣಿ' ಬೆಳಕು ಚೆಲ್ಲಿದ ಬಳಿಕ ಎಚ್ಚೆತ್ತುಕೊಂಡಿರುವ ಮುಜರಾಯಿ ಇಲಾಖೆಯು ಪ್ರಾಧಿಕಾರ ರಚಿಸಲು ಚಿಂತನೆ ನಡೆಸಿದೆ.

'800 ವರ್ಷಗಳ ಇತಿಹಾಸ ಇರುವ ಹುಲಿಗೆಮ್ಮ ದೇವಸ್ಥಾನಕ್ಕೆ ಹೊಸ್ತಿಲು ಹುಣ್ಣಿಮೆ ದಿನ 2 ಲಕ್ಷಕ್ಕೂ ಅಧಿಕ ಭಕ್ತರು ಬಂದಿದ್ದರು. ದೇವಸ್ಥಾನಕ್ಕೆ ಸೇರಿದ 30 ಎಕರೆ ಭೂಮಿ ಇದೆ. ಆದರೂ ಸರಿಯಾದ ವ್ಯವಸ್ಥೆ ಇಲ್ಲದೇ ಭಕ್ತರು ರಸ್ತೆಯಲ್ಲಿ ಮಲಗಿದ್ದರು. ಸರಿಯಾದ ಶೌಚಾಲಯದ ವ್ಯವಸ್ಥೆಗಳಿಲ್ಲ. ಇವೆಲ್ಲವನ್ನು ನೋಡಿದಾಗ ಬದಲಾವಣೆ ತರಬೇಕು ಎಂದು ಯೋಚನೆ ಮೂಡಿತು. ಈ ದೇವಸ್ಥಾನದಲ್ಲಿ ₹55 ಕೋಟಿ ಹಣ ಇದೆ. ಪ್ರಾಧಿಕಾರ ಮಾಡಿದರೆ ಸರ್ಕಾರದ ಅನುದಾನವಿಲ್ಲದೇ ಎಲ್ಲ ಅಭಿವೃದ್ಧಿಗಳನ್ನು ಮಾಡಲು ಸಾಧ್ಯವಿದೆ' ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಘಾಟಿ ಸುಬ್ರಹ್ಮಣ್ಯ ದೇವಸ್ಥಾನ ಕೂಡ ರಾಜ್ಯದಲ್ಲಿ ಪ್ರಾಚೀನ ಮತ್ತು ಪ್ರಸಿದ್ಧವಾದುದು. ಇಲ್ಲಿ ಪಂಚಮಿ ಮತ್ತು ಜಾತ್ರೆಯ ಸಂದರ್ಭದಲ್ಲಿ ಲಕ್ಷಾಂತರ ಭಕ್ತರು ಬರುತ್ತಾರೆ. ವರ್ಷಕ್ಕೆ ₹ 8 ಕೋಟಿಗೂ ಅಧಿಕ ಆದಾಯ ಇರುವ ಈ ದೇವಸ್ಥಾನದಲ್ಲಿ ಭಕ್ತರಿಗೆ ಸರಿಯಾದ ವ್ಯವಸ್ಥೆ ಇಲ್ಲ. ಅದಕ್ಕಾಗಿ ಘಾಟಿ ಸುಬ್ರಹ್ಮಣ್ಯ ದೇವಸ್ಥಾನವನ್ನು ಕೂಡ ಪ್ರಾಧಿಕಾರ ರಚಿಸಿ ಅಭಿವೃದ್ಧಿ ಮಾಡಲಾಗುವುದು ಎಂದರು.

ಘಾಟಿ ಸುಬ್ರಹ್ಮಣ್ಯ ದೇವಸ್ಥಾನ

₹ 25 ಲಕ್ಷ ಆದಾಯ ಇರುವ ದೇವಸ್ಥಾನಗಳಿಗೆ ಪ್ರಾಧಿಕಾರ

ರಾಜ್ಯದಲ್ಲಿ ಮುಜರಾಯಿ ಇಲಾಖೆಯಡಿ ಬರುವ ₹25 ಲಕ್ಷಕ್ಕಿಂತ ಅಧಿಕ ಆದಾಯ ಇರುವ ಎಲ್ಲ ದೇವಸ್ಥಾನಗಳನ್ನು ಆಮೂಲಾಗ್ರ ಬದಲಾವಣೆ ಮಾಡಿ ಎಲ್ಲ ರೀತಿಯ ಸೌಕರ್ಯಗಳನ್ನು ಕಲ್ಪಿಸಬೇಕು ಎಂಬ ಕನಸಿದೆ. ಆದ್ಯತೆಯ ಮೇರೆಗೆ ಒಂದಾದ ಮೇಲೆ ಒಂದು ದೇವಸ್ಥಾನಕ್ಕೆ ಪ್ರಾಧಿಕಾರ ರಚಿಸಲಾಗುವುದು ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

ಅಭಿವೃದ್ಧಿ ಪ್ರಾಧಿಕಾರ ರಚನೆಯಾದ ಮೇಲೆ ಮಲೆ ಮಹದೇಶ್ವರ ದೇವಸ್ಥಾನ ಹೇಗೆ ಅಭಿವೃದ್ಧಿಯಾಯಿತು ಎಂದು ಜನರು ನೋಡಿದ್ದಾರೆ. ಅದೇ ಮಾದರಿಯಲ್ಲಿ ಎಲ್ಲ ದೇವಸ್ಥಾನಗಳು ಅಭಿವೃದ್ಧಿಯಾಗಬೇಕು ಎಂದು ಹೇಳಿದರು.

ನನ್ನನ್ನು ರಾಜಕೀಯವಾಗಿ ಮುಗಿಸಲು ಷಡ್ಯಂತ್ರ– ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕ್ರಮ ಆಸ್ತಿ ಸಂಪಾದನೆ ಪ್ರಕರಣದಲ್ಲಿ ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ರಾಜ್ಯ ಸರ್ಕಾರ ಹಿಂಪಡೆದಿದ್ದರೂ ಕಿರುಕುಳ ಮುಂದುವರಿದಿದೆ. ನನ್ನನ್ನು ರಾಜಕೀಯವಾಗಿ ಮುಗಿಸಲು ಬಿಜೆಪಿ ನಾಯಕರಿಂದ ದೊಡ್ಡ ಷಡ್ಯಂತ್ರ ನಡೆಯುತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಕೇರಳದ 'ಜೈ ಹಿಂದ್' ಚಾನೆಲ್ ವ್ಯವಸ್ಥಾಪಕ ನಿರ್ದೇಶಕ ಮತ್ತು ತಮಗೆ ಸಿಬಿಐ ನೋಟಿಸ್ ನೀಡಿರುವ ಬಗ್ಗೆ ಸುದ್ದಿಗಾರರು ಕೇಳಿದಾಗ ಪ್ರತಿಕ್ರಿಯಿಸಿದ ಅವರು, 'ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ಹಿಂಪಡೆದ ನಂತರವೂ ಉಪ ನೋಂದಣಿ ಕಚೇರಿ, ಸರ್ಕಾರಿ ಕಚೇರಿ, ಸಹಕಾರ ಸೊಸೈಟಿ, ನಾನು ಅಧ್ಯಕ್ಷನಾಗಿರುವ ಸಂಸ್ಥೆ ಸೇರಿದಂತೆ ಅನೇಕರಿಗೆ ಸಿಬಿಐನವರು ನೋಟಿಸ್ ಕೊಟ್ಟಿದ್ದಾರೆ. ಮಲ್ಲೇಶ್ವರಕ್ಕೆ ಅವರು ನನಗೆ ಮತ್ತು ಪಕ್ಷಕ್ಕೆ ತೊಂದರೆ ನೀಡಲು ಷಡ್ಯಂತ್ರ ರೂಪಿಸುತ್ತಿದ್ದಾರೆ' ಎಂದರು.

'ಸಿಬಿಐ ತನಿಖೆಯನ್ನು ರಾಜ್ಯ ಸರ್ಕಾರ ಲೋಕಾಯುಕ್ತಕ್ಕೆ ಹಸ್ತಾಂತರಿಸಿದೆ. ಸಿಬಿಐ ನೀಡಿದ್ದ ಅನುಮತಿ ಹಿಂಪಡೆದಿರುವುದನ್ನು ಹೈಕೋರ್ಟ್ ಒಪ್ಪಿದ್ದರೂ ಸಿಬಿಐ ಯಾಕೆ ನೋಟಿಸ್ ನೀಡುತ್ತಿದೆ ಎಂಬುದು ಗೊತ್ತಿಲ್ಲ. ಅವರ ಬಳಿ ನನ್ನ ಎಲ್ಲ ದಾಖಲೆಗಳಿವೆ. ಲೋಕಾಯುಕ್ತಕ್ಕೆ ಪ್ರಕರಣ ಹಸ್ತಾಂತರವಾಗಿರುವುದರಿಂದ ಈ ಎಲ್ಲ ದಾಖಲೆಗಳನ್ನು ಸಿಬಿಐ, ಲೋಕಾಯುಕ್ತಕ್ಕೆ ನೀಡಬೇಕಿದೆ ಎಂಬುದು ನನಗಿರುವ ಕಾನೂನಿನ ಅರಿವು' ಎಂದರು.

'ಸಿಬಿಐನವರು ನನ್ನ ಸಂಸ್ಥೆ, ನನ್ನ ಪತ್ನಿ, ಮಕ್ಕಳು, ಕುಟುಂಬ ಸದಸ್ಯರು, ನನ್ನ ಸ್ನೇಹಿತರು ಸೇರಿದಂತೆ ಹಲವರಿಂದ ಮಾಹಿತಿ ಕೇಳುತ್ತಿದ್ದಾರೆ. ಮೊದಲು ಈ ರೀತಿ ಮಾಡಿ ನಂತರ ಅವರು ನನಗೆ ನೇರವಾಗಿ ನೋಟಿಸ್ ನೀಡುತ್ತಾರೆ. ಅವರು ಏನು ಬೇಕಾದರೂ ಮಾಡಲಿ. ನನ್ನನ್ನು ಜೈಲಿಗೆ ಕಳಿಸುವ ಬಗ್ಗೆ ಅನೇಕ ಬಿಜೆಪಿ ನಾಯಕರು ಹಿಂದೆ ಹೇಳಿದ್ದಾರೆ. ನಾನು ಯಾವುದೇ ತಪ್ಪು ಮಾಡಿಲ್ಲ. ಅವರು ಏನಾದರೂ ಮಾಡಿಕೊಳ್ಳಲಿ. ನನಗೆ ಎಲ್ಲಿ ನ್ಯಾಯ ಸಿಗಬೇಕೋ ಅಲ್ಲಿ ಸಿಗುತ್ತದೆ' ಎಂದರು.

ಶೇ 10ರಷ್ಟು ತನಿಖೆಯೂ ಮಾಡಿರಲಿಲ್ಲ: 'ಸಿಬಿಐ ಅಧಿಕಾರಿಗಳಿಗೆ ನಾನು ಎಲ್ಲ ದಾಖಲೆಗಳನ್ನು ನೀಡಿದ್ದೆ. ಅವರು ಶೇ 10ರಷ್ಟು ಕೂಡ ತನಿಖೆ ಮಾಡಿರಲಿಲ್ಲ. ಆದರೆ ಶೇ 90ರಷ್ಟು ತನಿಖೆ ಮುಗಿದಿದೆ ಎಂದು ನ್ಯಾಯಾಲಯದಲ್ಲಿ ಹೇಳಿದ್ದಾರೆ. ಯಾವ ಲೆಕ್ಕಾಚಾರದಲ್ಲಿ ಆ ರೀತಿ ಹೇಳಿದ್ದಾರೋ ಗೊತ್ತಿಲ್ಲ. ನನ್ನನ್ನು ಒಳಗೆ ಹಾಕಿಸಲು ಅವರಿಗಿದ್ದರೆ ಹಾಕಿಸಲಿ. ನಾನು ಸಿದ್ಧನಿದ್ದೇನೆ' ಎಂದರು.

'ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಈ ರೀತಿ ಮಾಡಲಾಗುತ್ತಿದೆಯೇ' ಎಂಬ ಪ್ರಶ್ನೆಗೆ, 'ಅಹ್ಮದ್ ಪಟೇಲ್ ಅವರ ರಾಜ್ಯಸಭೆ ಚುನಾವಣೆ ಕಾರಣ ನನ್ನ ಮೇಲೆ ಸೇಡು ತೀರಿಸಿಕೊಳ್ಳುತ್ತಿದ್ದಾರೆ. ಅಹ್ಮದ್ ಪಟೇಲ್ ಅವರೇ ಈಗ ನಮ್ಮ ಜತೆ ಇಲ್ಲ. ಆದರೂ ನನಗೆ ಕಿರುಕುಳ ಮುಂದುವರೆಸಿದ್ದಾರೆ. ಇದರ ಹಿಂದೆ ಯಾರೆಲ್ಲಾ ಇದ್ದಾರೆ ಎಂಬುದು ಗೊತ್ತು. ಕಾನೂನು ಇದೆ, ನನ್ನ ಕೊನೆಯುಸಿರು ಇರುವವರೆಗೂ ಹೋರಾಟ ಮಾಡುತ್ತೇನೆ' ಎಂದು ಹೇಳಿದರು.

'ನಾನು ಇನ್ನೂ ವರದಿ ನೀಡಿಲ್ಲ'

'ಲೋಕಸಭೆ ಚುನಾವಣೆಯಲ್ಲಿ ಸಚಿವರನ್ನು ಅಭ್ಯರ್ಥಿ ಮಾಡುವಂತೆ ನಾನು ಹೈಕಮಾಂಡ್‌ಗೆ ವರದಿ ಕೊಟ್ಟಿಲ್ಲ. ಅಭ್ಯರ್ಥಿಗಳ ಆಯ್ಕೆ ಬಗ್ಗೆ ಹೈಕಮಾಂಡ್ ವರದಿ ಕೇಳಿದೆ. ನಾನು ಇನ್ನೂ ವರದಿ ನೀಡಿಲ್ಲ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

'ಲೋಕಸಭೆ ಚುನಾವಣೆ ಬಗ್ಗೆ ಚರ್ಚಿಸಲು ಇದೇ 4 ರಂದು ದೆಹಲಿಗೆ ಬರುವಂತೆ ನನಗೆ ಹಾಗೂ ಸಿದ್ದರಾಮಯ್ಯ ಅವರಿಗೆ ವರಿಷ್ಠರು ಆಹ್ವಾನ ನೀಡಿದ್ದಾರೆ. ಅವರು ಯಾವ ಮಾನದಂಡ ನಿಗದಿ ಮಾಡುತ್ತಾರೋ ಅದರ ಪ್ರಕಾರ ನಾವು ಕೆಲಸ ಮಾಡುತ್ತೇವೆ. ರಾಜಕೀಯದಲ್ಲಿ ಏನು ಬೇಕಾದರೂ ಆಗಬಹುದು. ಕೆಲವು ಸಚಿವರು ನಿಲ್ಲುವ ಪರಿಸ್ಥಿತಿ ಬರಬಹುದು, ಬಾರದೆಯೂ ಇರಬಹುದು. ಅದನ್ನು ಹೈಕಮಾಂಡ್ ನಿರ್ಧರಿಸುತ್ತದೆ' ಎಂದರು.

'ಜ.10 ರಂದು ಬೆಳಿಗ್ಗೆ ಶಾಸಕರು ಹಾಗೂ ಪರಾಜಿತ ಅಭ್ಯರ್ಥಿಗಳ ಜೊತೆ, ಮಧ್ಯಾಹ್ನ ಬ್ಲಾಕ್ ಅಧ್ಯಕ್ಷರ ಜೊತೆ ಸಭೆ ಮಾಡುತ್ತೇವೆ. ಈ ಸಭೆಯಲ್ಲಿ ಭಾಗವಹಿಸುವಂತೆ ಮುಖ್ಯಮಂತ್ರಿ ಅವರಿಗೂ ಆಹ್ವಾನ ನೀಡಲಾಗಿದೆ' ಎಂದರು.

'ಕಾಂಗ್ರೆಸ್‌ಗೆ ಅಭ್ಯರ್ಥಿ ಕೊರತೆ ಇದೆಯೇ' ಎಂದು ಕೇಳಿದಾಗ, 'ನಮ್ಮ ಪಕ್ಷದಲ್ಲಿ ಅನೇಕ ಅಭ್ಯರ್ಥಿಗಳಿದ್ದಾರೆ. ಕೆಲವು ಕಡೆ 3- 4 ಆಕಾಂಕ್ಷಿಗಳು ಇದ್ದರೆ, ಕೆಲವೆಡೆ 8- 10 ಆಕಾಂಕ್ಷಿಗಳು ಇದ್ದಾರೆ. ಅವರ ಪೈಕಿ ಯಾರನ್ನು ಕಣಕ್ಕೆ ಇಳಿಸುತ್ತೇವೆ ಎಂಬುದು ಮುಖ್ಯ' ಎಂದರು.

2,511 ನ್ಯಾಯಾಂಗ ನಿಂದನೆ ಪ್ರಕರಣ ಬಾಕಿ

ಒಂದನೇ ಪುಟದಿಂದ...

ಈ ಎರಡೂ ಪತ್ರಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

ನಿರ್ಣಯ ತೆಗೆದುಕೊಳ್ಳದೆ ವಿಳಂಬ: 'ಹೈಕೋರ್ಟ್ ಪ್ರಕರಣಗಳ ನಿರ್ವಹಣೆ ಯಲ್ಲಿ ಇಲಾಖೆಗಳು ವಿಳಂಬ ಮಾಡುತ್ತಿರುವುದರಿಂದ, ಮುಖ್ಯ ಕಾರ್ಯದರ್ಶಿಯೇ ಪ್ರಮಾಣಪತ್ರ ಸಲ್ಲಿಸುವಂತೆ ನ್ಯಾಯಾಲಯಗಳು ಸೂಚಿಸುತ್ತಿರುವ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ. ನ್ಯಾಯಾಲಯಗಳು ನೀಡುವ ಆದೇಶಗಳ ಕುರಿತಂತೆ ಸಕಾಲದಲ್ಲಿ ನಿಯಮಾನುಸಾರ ಪರಿಶೀಲಿಸಿ, ಮೇಲ್ಮನವಿ ಸಲ್ಲಿಸುವ ಅಧಿಕಾರವನ್ನು ಆಡಳಿತ ಇಲಾಖೆಗಳಿಗೆ ನೀಡಲಾಗಿದೆ. ಆದರೆ, ಇಲಾಖೆಗಳು ಯಾವುದೇ ನಿರ್ಣಯವನ್ನು ಸಕಾಲ ದಲ್ಲಿ ತೆಗೆದುಕೊಳ್ಳದೆ ವಿಳಂಬ ಮಾಡು ತ್ತಿರುವುದು ಕಂಡುಬಂದಿದೆ' ಎಂದು ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಬರೆದ ಪತ್ರದಲ್ಲಿ ಪತ್ರದಲ್ಲಿ ಸಿಎಸ್ ತಿಳಿಸಿದ್ದಾರೆ.

'ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ನ್ಯಾಯಾಂಗ ನಿಂದನಾ ಪ್ರಕರಣಗಳ ಪಟ್ಟಿಯನ್ನು ಎಜಿ ಕಚೇರಿಯಿಂದ ಖುದ್ದು ಪಡೆದು ಮುಂದಿನ ಕ್ರಮ ತೆಗೆದುಕೊಳ್ಳಬೇಕು. ವಿವಿಧ ನ್ಯಾಯಾ ಲಯಗಳಲ್ಲಿ ದಾಖಲಾಗಿರುವ ಪ್ರಕ ರಣಗಳ, ನ್ಯಾಯಾಂಗ ನಿಂದನಾ ಪ್ರಕರಣಗಳ ಬಗ್ಗೆ ಪ್ರತಿ ತಿಂಗಳು ಸಮೀಕ್ಷಾ ಸಭೆ ನಡೆಸಬೇಕು. ಸರ್ಕಾರದ ಪರವಾಗಿ ಸಮರ್ಥವಾಗಿ ವಾದ ಮಾಡಲು ಅನುಕೂಲ ಆಗುವಂತೆ ಸರ್ಕಾರಿ ವಕೀಲರನ್ನು ನೇಮಿಸಬೇಕು. ಪ್ರತಿಯೊಂದಕ್ಕೂ ಷರಾ ಬರೆದು, ಆಕ್ಷೇಪಣಾ ಹೇಳಿಕೆಗಳನ್ನು ದಾಖಲಿಸಬೇಕು' ಎಂದೂ ಸೂಚನೆ ನೀಡಿದ್ದಾರೆ.

ಅಲ್ಲದೆ, ಸುಪ್ರೀಂಕೋರ್ಟ್‌ನಲ್ಲಿ ಕೂಡಾ ಎಸ್‌ಎಲ್‌ಪಿ ಹಾಗೂ ಮೇಲ್ಮನವಿಗಳನ್ನು ಸಕಾಲದಲ್ಲಿ ಸಲ್ಲಿಸಲು ಅಗತ್ಯ ಕ್ರಮ ವಹಿಸಲು ಸೂಕ್ತ ನಿರ್ದೇಶನಗಳನ್ನು ನೀಡಬೇಕು ಎಂದೂ ತಿಳಿಸಿದ್ದಾರೆ.

ಎಜಿ ಪತ್ರದಲ್ಲಿ ಏನಿದೆ?: ಹೈಕೋರ್ಟ್ ಮತ್ತು ಕೆಎಟಿಯ ಪೀಠಗಳಲ್ಲಿ ಯಾವ ವರ್ಷ, ಎಷ್ಟು ನ್ಯಾಯಾಂಗ ನಿಂದನಾ ಪ್ರಕರಣಗಳು ಬಾಕಿ ಇವೆ ಎಂಬ ಪಟ್ಟಿಯನ್ನು ಮುಖ್ಯ ಕಾರ್ಯದರ್ಶಿಯವರಿಗೆ ನೀಡಿರುವ ಎಜಿ, 'ಈ ವಿಚಾರದಲ್ಲಿ ತಕ್ಷಣ ಮಧ್ಯಪ್ರವೇಶಿಸಬೇಕು' ಎಂದು ಮನವಿ ಮಾಡಿದ್ದಾರೆ.

'ಇದೇ ಆಗಸ್ಟ್‌ವರೆಗೆ ನ್ಯಾಯಾಂಗ ನಿಂದನಾ ಪ್ರಕರಣಗಳ ಪ್ರತಿಯನ್ನು ಸಂಬಂಧಿಸಿದ ಇಲಾಖೆಗಳಿಗೆ ಮತ್ತು ಪ್ರತಿವಾದಿಗಳಿಗೆ ಇ- ಮೇಲ್ ಮಾಡಲಾಗುತ್ತಿತ್ತು. ಅಲ್ಲದೆ, ಪ್ರತಿವಾದಿಗಳಿಗೆ ಕರೆ ಮಾಡಿ ಪ್ರಕರಣಗಳಿಗೆ ಸಂಬಂಧಿಸಿದ ವಿವರಗಳನ್ನು ನೀಡಲಾಗುತ್ತಿತ್ತು. ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಕೂಡಾ ಕಳುಹಿಸಲಾಗುತ್ತಿತ್ತು. ಇದೇ ನವೆಂಬರ್‌ನಿಂದ ಸಿಸಿಎಂಎಸ್ ಮೂಲಕ ಆಯಾ ಇಲಾಖೆಗಳಿಗೆ ಪ್ರಕರಣಗಳ ಮಾಹಿತಿ ನೀಡಲಾಗುತ್ತಿದೆ. ಈ ಎಲ್ಲ ಪ್ರಯತ್ನಗಳನ್ನು ಮಾಡಿದರೂ ಅಧಿಕಾರಿಗಳು, ಪ್ರತಿವಾದಿಗಳು ಸ್ಪಂದಿಸುತ್ತಿಲ್ಲ. ನ್ಯಾಯಾಲಯಗಳಿಗೆ ಸಲ್ಲಿಸಲು ಅನುಪಾಲನಾ ಪ್ರಮಾಣಪತ್ರವನ್ನೂ ಒದಗಿಸುತ್ತಿಲ್ಲ. ಬಹುತೇಕ ಪ್ರಕರಣಗಳಲ್ಲಿ ಪ್ರತಿವಾದಿಗಳು ಪ್ರಕರಣದ ವಿಚಾರಣೆ ದಿನ ಅಥವಾ ಹಿಂದಿನ ದಿನ ಎಜಿ ಕಚೇರಿಯನ್ನು ಸಂಪರ್ಕಿಸುತ್ತಾರೆ. ಈ ರೀತಿ ಮಾಡುವುದರಿಂದ ಹಲವು ವರ್ಷ, ತಿಂಗಳುಗಳಿಂದ ಬಾಕಿ ಇರುವ ಪ್ರಕರಣಗಳಲ್ಲಿ ನ್ಯಾಯಾಲಯಗಳಲ್ಲಿ ಸಮರ್ಪಕವಾಗಿ ಪ್ರತಿಪಾದಿಸುವುದು ದೊಡ್ಡ ಸವಾಲಾಗುತ್ತದೆ' ಎಂದು ಪತ್ರದಲ್ಲಿ ಎಜಿ ಉಲ್ಲೇಖಿಸಿದ್ದಾರೆ.

'ನ್ಯಾಯಾಂಗ ನಿಂದನಾ ಪ್ರಕರಣಗಳಲ್ಲಿ ಪ್ರತಿ ಪ್ರಮಾಣಪತ್ರ ಸಲ್ಲಿಸುವುದೊಂದೇ ನಮ್ಮ ಮುಂದಿರುವ ಆಯ್ಕೆ ಎನ್ನುವುದು ಮುಖ್ಯ. ಆದರೆ, ಇತ್ತೀಚಿನ ದಿನಗಳಲ್ಲಿ ದಂಡ ವಿಧಿಸುವ ಜೊತೆಗೆ ಕೌಂಟರ್ ಅಫಿಡವಿಟ್ ಸಲ್ಲಿಸಲು ವಿಳಂಬ ಆಗಿರುವುದಕ್ಕೆ ಅಥವಾ ತನ್ನ ಆದೇಶ ಪಾಲಿಸದೇ ಇರುವುದಕ್ಕೆ ಖುದ್ದು ಹಾಜರಾಗಿ ವಿವರಣೆ ನೀಡುವಂತೆ ಹಿರಿಯ ಅಧಿಕಾರಿಗಳಿಗೆ ಅದರಲ್ಲೂ ಇಲಾಖೆಗಳ ಮುಖ್ಯಸ್ಥರಿಗೆ ಹೈಕೋರ್ಟ್, ಕೆಎಟಿ ನಿರ್ದೇಶನ ನೀಡುತ್ತಿವೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಎಲ್ಲ ಇಲಾಖೆಗಳಿಗೆ ಸೂಕ್ತ ನಿರ್ದೇಶನ ನೀಡಬೇಕು' ಎಂದೂ ಪತ್ರದಲ್ಲಿ ಅವರು ಮನವಿ ಮಾಡಿದ್ದಾರೆ.

ಮಣಿಪುರ: ಗುಂಡಿನ ದಾಳಿಗೆ 3 ಸಾವು: 5 ಜಿಲ್ಲೆಗಳಲ್ಲಿ ಕರ್ಫ್ಯೂ

ಇಂಫಾಲ್ (ಪಿಟಿಐ): ಮಣಿಪುರದ ತೌಬಾಲ್ ಜಿಲ್ಲೆಯಲ್ಲಿ ಸೋಮವಾರ ಸಂಜೆ ಗುಂಡಿನ ದಾಳಿ ನಡೆದಿದ್ದು, ಮೂವರು ಮೃತಪಟ್ಟಿದ್ದಾರೆ. ಈ ಘಟನೆಯ ಹಿಂದೆಯೇ ರಾಜ್ಯದ ಐದು ಜಿಲ್ಲೆಗಳಲ್ಲಿ ಕರ್ಫ್ಯೂ ಹೇರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುಂಡಿನ ದಾಳಿ ನಡೆಸಿದವರ ಗುರುತು ಪತ್ತೆಯಾಗಿಲ್ಲ. ಗುರುತು ಸಿಗದಂತೆ ವೇಷ ಧರಿಸಿದ್ದ ಅಪರಿಚಿತರು ಲಿಲಾಂಗ್ ಚಿಂಗ್‌ಜಾವೊ ವಲಯದಲ್ಲಿ ಬಂದು ಸ್ಥಳೀಯರನ್ನು ಗುರಿಯಾಗಿಸಿ ದಾಳಿ ನಡೆಸಿದ್ದಾರೆ ಎಂದು ತಿಳಿಸಿವೆ.

ಮೂವರು ಸ್ಥಳದಲ್ಲಿಯೇ ಮೃತಪಟ್ಟದ್ದರೆ, ಇತರೆ ಐವರು ಗಾಯಗೊಂಡರು. ತೌಬಲ್, ಇಂಫಾಲ್ ಪೂರ್ವ, ಇಂಫಾಲ್ ಪಶ್ಚಿಮ, ಕಾಕ್‌ಚಿಂಗ್, ಭಿಷ್ಣುಪುರ ಜಿಲ್ಲೆಗಳಲ್ಲಿ ಕರ್ಫ್ಯೂ ಹೇರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆ ಕುರಿತು ಆಕ್ರೋಶ ವ್ಯಕ್ತಪಡಿಸಿದ ಸ್ಥಳೀಯರು ಪ್ರತಿಭಟನೆ ನಡೆಸಿದ್ದು, ನಾಲ್ಕು ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ. ಈ ವಾಹನಗಳು ಯಾರಿಗೆ ಸೇರಿದ್ದವು ಎಂಬುದು ತಕ್ಷಣಕ್ಕೆ ಖಚಿತವಾಗಿಲ್ಲ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ

ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು – 560 023

ದೂ: 080–23295623 ಇ–ಮೇಲ್: ddehospital-hfws@karnataka.gov.in

ನಂ.:ನೇಮಕಾತಿ–ರಾಜ್ಯ ಬಜೆಟ್ ಅಡಿಯಲ್ಲಿ/17/2023–24(ಇ–1133294) ದಿನಾಂಕ: 29.12.2023

ಪ್ರಕಟಣೆ

ನೇರ ಸಂದರ್ಶನಕ್ಕೆ ಅವಕಾಶ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯವು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಗೆ ಈ ಕೆಳಗಿನ ಹುದ್ದೆಗಳಿಗೆ ನೇರ ಸಂದರ್ಶನಕ್ಕೆ ಆಹ್ವಾನಿಸುತ್ತದೆ.

ಕ್ರ. ಸಂ.	ಹುದ್ದೆ	ಖಾಲಿ ಹುದ್ದೆಗಳ ಸಂಖ್ಯೆ	ಅನುಭವ
1	ಸಕಾಲ ಕನ್ಸಲ್‌ಟೆಂಟ್	01	● ಹೊಸ ಪದವೀಧರರು ● ಕನ್ನಡ ಮಾತನಾಡುವ/ಬರಹ ಜ್ಞಾನ ಕಡ್ಡಾಯವಾಗಿದೆ.
2	ಹೆಲ್ಪ್ ಡೆಸ್ಕ್	01	● ಹೆಲ್ಪ್ ಡೆಸ್ಕ್ ಪ್ಲಾಟ್‌ಫಾರ್ಮ್‌ನಲ್ಲಿ ಕನಿಷ್ಠ 2 ವರ್ಷಗಳ ಕೆಲಸದ ಅನುಭವ. ● ಕನ್ನಡ ಮಾತನಾಡುವ/ಬರಹ ಜ್ಞಾನ ಕಡ್ಡಾಯವಾಗಿದೆ.

ದಿನಾಂಕ: **10.01.2024.** ನೋಂದಣಿ ಸಮಯ: ಬೆಳಿಗ್ಗೆ 10:00 ರಿಂದ 11:00 ಗಂಟೆಯವರೆಗೆ. ಸ್ಥಳ: ಸಭೆಯ ಸಭಾಂಗಣ, 3ನೇ ಮಹಡಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.

ಇದು ತಾತ್ಕಾಲಿಕ ಹುದ್ದೆಯಾಗಿದ್ದು ಮತ್ತು 31.03.2024 ರವರೆಗೆ ಗುತ್ತಿಗೆ ಆಧಾರಿತವಾಗಿರುತ್ತದೆ. ಅಭ್ಯರ್ಥಿಗಳ ಕಾರ್ಯಕ್ಷಮತೆಯನ್ನು ಆಧರಿಸಿ ಮೌಲ್ಯಮಾಪನಗಳನ್ನು ನಡೆಸಲಾಗುತ್ತದೆ. ಆಸಕ್ತ ಅರ್ಜಿದಾರರು ಎಲ್ಲಾ ಮೂಲ ದಾಖಲೆಗಳೊಂದಿಗೆ, ಪ್ರಮಾಣಪತ್ರಗಳ ಸ್ವಯಂ–ದೃಢೀಕರಿಸಿದ ಫೋಟೊಕಾಪಿಗಳು, ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರ ಮತ್ತು ಮಾನ್ಯವಾದ ಗುರುತಿನ ದಾಖಲೆಗಳನ್ನು ಹೊಂದಿರಬೇಕು.

ಹುದ್ದೆಗೆ ಅರ್ಜಿ ಸಲ್ಲಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ಹೆಸರನ್ನು **10.01.2024** ರಂದು ನಿಗದಿತ ಸಮಯದ ಸ್ಲಾಟ್‌ಗಳಲ್ಲಿ ನೋಂದಾಯಿಸಿಕೊಳ್ಳಬೇಕು. ನಿಮ್ಮ ಭಾಗವಹಿಸುವಿಕೆಗೆ ನಾವು ಎದುರುನೋಡುತ್ತಿದ್ದೇವೆ. ಹುದ್ದೆ, ವಿದ್ಯಾರ್ಹತೆ, ವಯಸ್ಸು ಮತ್ತು ವೇತನದ ವಿವರಗಳಿಗಾಗಿ ದಯವಿಟ್ಟು ಭೇಟಿ ನೀಡಿ: https://hfwcom.karnataka.gov.in

ಸಹಿ/–
ನಿರ್ದೇಶಕರು, ಆ&ಕು.ಕ.ಸೇ.ನಿ.

DIPR/CP/BCPL/2809/2022-23

ಕಪ್ಪುರಂಧ್ರ ಅಧ್ಯಯನಕ್ಕೆ ಮುನ್ನುಡಿ

ಒಂದನೇ ಪುಟದಿಂದ...

ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಅವರು, 'ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು' ಎನ್ನುತ್ತ ಸುದ್ದಿಗಾರರ ಜೊತೆ ಮಾತು ಆರಂಭಿಸಿದರು. 'ಉಪಗ್ರಹದ ಸೌರಫಲಕ ಯಶಸ್ವಿಯಾಗಿ ಕಾರ್ಯಾರಂಭಿಸಿದೆ' ಎಂದು ಸೋಮನಾಥ್ ಅವರು ಸುದ್ದಿಗಾರರಿಗೆ ತಿಳಿಸಿದರು.

ಎಕ್ಸ್‌ಪೊಸ್ಯಾಟ್ ಉಪಗ್ರಹವು ಜಾಗತಿಕವಾಗಿ ಖಗೋಳ ವಿಜ್ಞಾನಿಗಳಿಗೆ ಹೆಚ್ಚಿನ ಪ್ರಯೋಜನ ತಂದುಕೊಡುವ ನಿರೀಕ್ಷೆ ಇದೆ. ಕಪ್ಪುರಂಧ್ರಗಳು, ನ್ಯೂಟ್ರಾನ್ ನಕ್ಷತ್ರಗಳ ಕುರಿತ ಅರಿವನ್ನು ಹೆಚ್ಚಿಸುವ ನಿರೀಕ್ಷೆಯನ್ನು ವಿಜ್ಞಾನಿಗಳು ಹೊಂದಿದ್ದಾರೆ.

'ಈ ಬಾರಿ ಉಡಾವಣಾ ವಾಹನದಲ್ಲಿ, ಮಹಿಳೆಯರೇ ಅಭಿವೃದ್ಧಿಪಡಿಸಿದ ಉಪಗ್ರಹವೊಂದು ಇರುವುದು ಹೆಚ್ಚು ಮಹತ್ವದ್ದು. ಇದು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಸಬಲೀಕರಣವನ್ನು ತೋರಿಸುತ್ತಿದೆ. ಉಡಾವಣಾ ವಾಹನದಲ್ಲಿ ಇದ್ದ ಎಲ್ಲ ಉಪಗ್ರಹಗಳು, ಭಾರತದ ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ನಡೆಯುತ್ತಿರುವ ಪರಿವರ್ತನೆಗಳಿಗೆ ದ್ಯೋತಕವಾಗಿವೆ' ಎಂದು ಯೋಜನಾ ನಿರ್ದೇಶಕ ಎಂ. ಜಯಕುಮಾರ್ ಹೇಳಿದರು. ಕೇರಳದ ತಿರುವನಂತಪುರದ ಎಲ್‌ಬಿಎಸ್ ಮಹಿಳೆಯರ ತಾಂತ್ರಿಕ ಸಂಸ್ಥೆಯ ಎಂಜಿನಿಯರ್‌ಗಳು ಅಭಿವೃದ್ಧಿಪಡಿಸಿರುವ ಉಪಗ್ರಹವು ಈ ಬಾರಿ ಉಡಾವಣಾ ವಾಹನದಲ್ಲಿ ಇತ್ತು.

'ಇಸ್ರೊ ಜೊತೆ ಸಮನ್ವಯದಿಂದ ಈ ಎಂಜಿನಿಯರ್‌ಗಳು ಉಪಗ್ರಹವನ್ನು ಅಭಿವೃದ್ಧಿಪಡಿಸಿದ್ದಾರೆ. ಇದು ಇಸ್ರೊ ಪಾಲಿಗೆ ಮಾತ್ರವೇ ಸ್ಫೂರ್ತಿ ನೀಡುವಂಥದ್ದಲ್ಲ. ಬದಲಿಗೆ, ಇದು ಇಡೀ ದೇಶಕ್ಕೆ ಸ್ಫೂರ್ತಿ. ಹೆಣ್ಣುಮಕ್ಕಳು ವಿಜ್ಞಾನದ ಅಧ್ಯಯನಕ್ಕೆ ಸಮಯ ನೀಡಿ, ತಮ್ಮ ಇಷ್ಟದ ಕ್ಷೇತ್ರದಲ್ಲಿ ಮುಂದೆ ಬಂದಾಗ ನಾವು ಪ್ರಶಂಸಿಸಬೇಕು' ಎಂದು ಸೋಮನಾಥ್ ಹೇಳಿದರು.

ರಾಮನ್ ಸಂಸ್ಥೆಯ ನಂಟು

ಒಂದನೇ ಪುಟದಿಂದ...

ಎಕ್ಸ್‌ಪೊಸ್ಯಾಟ್ ಎರಡು ಪೇಲೋಡ್‌ಗಳನ್ನು ಹೊಂದಿವೆ ಅವುಗಳೆಂದರೆ, ಇಂಡಿಯನ್ ಎಕ್ಸ್‌–ರೇ ಪೋಲಾರಿ ಮೀಟರ್ (ಪೋಲಿಕ್ಸ್) ಮತ್ತು ಎಕ್ಸ್‌–ರೇ ಸ್ಪೆಕ್ಟ್ರೊ ಸ್ಕೋಪಿ ಅಂಡ್ ಟೈಮಿಂಗ್. ಇವೆರಡೂ ಸಾಧನಗಳನ್ನು ಬಳಸಿ ಪ್ರಖರ ಎಕ್ಸ್‌ರೇ ಮೂಲದಿಂದ ಹೊಮ್ಮುವ ಕ್ಷಕಿರಣಗಳನ್ನು ಅಧ್ಯಯನ ನಡೆಸಲಿವೆ. ಪೋಲಿಕ್ಸ್ ಅನ್ನು ರಾಮನ್ ಸಂಶೋಧನಾ ಸಂಸ್ಥೆಯು ಬೆಂಗಳೂರಿನ ಯು.ಆರ್. ರಾವ್ ಉಪಗ್ರಹ ಕೇಂದ್ರದ ಸಹಯೋಗದೊಂದಿಗೆ ಅಭಿವೃದ್ಧಿ ಪಡಿಸಿದೆ.

ವಿಶೇಷವೆಂದರೆ 350 ಕಿ.ಮೀ ಎತ್ತರದಲ್ಲಿರುವ ಉಪಗ್ರಹದಲ್ಲಿರುವ ಸಾಧನಗಳೇ ಅಧ್ಯಯನ, ವಿಶ್ಲೇಷಣೆ ಕಾರ್ಯ ನಡೆಸುತ್ತವೆ. ಇಲ್ಲಿ ಲಭ್ಯವಾಗುವ ಮಾಹಿತಿಯು ಜಾಗತಿಕವಾಗಿ ಬಳಕೆಯಾಗಲಿದೆ.

14 ಉಪಗ್ರಹಗಳ ಉಡಾವಣೆ: ಇಸ್ರೊ

ಪ್ರಜಾವಾಣಿ ವಾರ್ತೆ

ಚೆನ್ನೈ: ಉಪಗ್ರಹ ಉಡಾವಣಾ ವಾಹಕಗಳಾದ ಪಿಎಸ್‌ಎಲ್‌ವಿ, ಜಿಎಸ್‌ಎಲ್‌ವಿ ಮತ್ತು ಎಸ್‌ಎಸ್‌ಎಲ್‌ವಿ ಮೂಲಕ 12ರಿಂದ 14 ಉಪಗ್ರಹಗಳನ್ನು 2024ನೇ ಸಾಲಿನಲ್ಲಿ ಉಡಾವಣೆ ಮಾಡುವ ಯೋಜನೆ ಇದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ತಿಳಿಸಿದೆ.

ಎಕ್ಸ್‌ಪೊಸ್ಯಾಟ್ ಯಶಸ್ವಿ ಉಡಾವಣೆ ಬಳಿಕ, ಇನ್ಸ್ಯಾಟ್–3ಡಿಎಸ್ ಉಪಗ್ರಹವನ್ನು ಉಡಾವಣೆಗೆ ಮಾಡಲಾಗುವುದು. ಇದು ಈ ವರ್ಷ ಉಡಾವಣೆ ಆಗಲಿರುವ ಎರಡನೇ ಉಪಗ್ರಹವಾಗಲಿದೆ ಎಂದು ಇಸ್ರೊ ತಿಳಿಸಿದೆ.

'2024 ನಮಗೆ ಬಿಡುವಿಲ್ಲದ ವರ್ಷವಾಗಿದೆ. ತಿಂಗಳಿಗೊಂದರಂತೆ ಬಾಹ್ಯಾಕಾಶ ಯೋಜನೆಗಳನ್ನು ಹಮ್ಮಿಕೊಳ್ಳಬೇಕು. ಅದರಂತೆ ಈ ವರ್ಷ 12– 14 ಉಪಗ್ರಹಗಳಗಳನ್ನು ಉಡಾವಣೆ ಮಾಡಲು ನಾವು ಯೋಜನೆ ಹಮ್ಮಿಕೊಂಡಿದ್ದೇವೆ' ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಅವರು ತಿಳಿಸಿದ್ದಾರೆ. ಇನ್‌ಸ್ಯಾಟ್– 3ಡಿಎಸ್ ಹವಾಮಾನ ಮುನ್ಸೂಚನೆ ನೀಡುವ ಉಪಗ್ರಹವಾಗಿದೆ. ಇದನ್ನು ಜಿಎಸ್‌ಎಲ್‌ವಿ ಎಂಕೆ– 2 ಉಡಾವಣಾ ವಾಹನದ ಮೂಲಕ ಉಡಾವಣೆ ಮಾಡಲಾಗುತ್ತದೆ.

ಜ.6ಕ್ಕೆ ಗುರಿ ತಲುಪಲಿರುವ ಆದಿತ್ಯ ಎಲ್–1 'ಸೂರ್ಯನ ಅಧ್ಯಯನ ಉದ್ದೇಶದ ಭಾರತದ ಮಹತ್ವಾಕಾಂಕ್ಷೆಯ ಆದಿತ್ಯ ಎಲ್1 ಉಪಗ್ರಹವು ಜನವರಿ 6ರಂದು ತನ್ನ ಗಮ್ಯಸ್ಥಾನವಾದ ಲಾಗ್ರೇಂಜಿಯನ್ ಪಾಯಿಂಟ್ (ಎಲ್1) ತಲುಪಲಿದೆ. ಅದು ಅಲ್ಲಿಯೇ ನೆಲೆಗೊಂಡು, ಸೂರ್ಯನ ಅಧ್ಯಯನ ನಡೆಸಲು ಅಗತ್ಯವಿರುವ ತಾಂತ್ರಿಕ ಬದಲಾವಣೆಗಳನ್ನು ನಾವು ಮಾಡುತ್ತೇವೆ' ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದರು.

ರೈತರಿಗೂ ಇ.ಡಿ ನೋಟಿಸ್

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಸೇಲಂ ಜಿಲ್ಲೆಯ ಆತ್ತೂರು ಬಳಿ 6.5 ಎಕರೆ ಜಮೀನು ಹೊಂದಿರುವ ದಲಿತ ಸಮುದಾಯದ ಇಬ್ಬರು ರೈತರಿಗೆ ಸೂಕ್ತ ಕಾರಣ ನೀಡದೆ ಜಾರಿ ನಿರ್ದೇಶನಾಲಯ (ಇ.ಡಿ) ನೋಟಿಸ್ ನೀಡಿರುವುದು ವ್ಯಾಪಕ ಚರ್ಚೆಗೆ ಕಾರಣವಾಗಿದೆ.

ಇಬ್ಬರು ರೈತ ಸಹೋದರರಾದ ಕನ್ನಯ್ಯನ್ ಮತ್ತು ಕೃಷ್ಣನ್ ಅವರಿಗೆ 2023ರ ಜೂನ್‌ನಲ್ಲಿ ಇ.ಡಿ ನೋಟಿಸ್ ನೀಡಿತ್ತು. ಅವರು ತಮ್ಮ ವಕೀಲರಾದ ಪರ್ವಿನಾ ಅವರ ನೆರವನ್ನು ಪಡೆದು ಇ.ಡಿ ಮುಂದೆ ಹಾಜರಾಗಿದ್ದರು.

ಆ ಬಳಿಕ ಕೇಂದ್ರದ ಈ ಏಜೆನ್ಸಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಚೆನ್ನೈನ ನುಂಗಂಬಾಕ್ಕಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಹೀಗಾಗಿ, ರೈತರಿಗೆ ಇ.ಡಿ ನೋಟಿಸ್ ನೀಡಿದ್ದ ವಿಷಯ ಸಾರ್ವಜನಿಕವಾಗಿ ಗೊತ್ತಾಗಿದೆ.

'ಇ.ಡಿ ನೀಡಿರುವ ನೋಟಿಸ್‌ನಲ್ಲಿ ರೈತ ಸಹೋದರರನ್ನು ಹಿಂದೂ ಪಲ್ಲರು ಎಂದು ಸಂಬೋಧಿಸಲಾಗಿದೆ. ಅಲ್ಲದೆ, ಕಾರಣ ಉಲ್ಲೇಖಿಸಿಲ್ಲ. ಅವರೊಂದಿಗೆ ಹೋಗಿದ್ದ ನನ್ನನ್ನು ಇ.ಡಿ ಕಚೇರಿಯ ಒಳಗೆ ಬಿಡಲಿಲ್ಲ. ಈ ರೈತರಿಗೆ ಇ.ಡಿ ಎಂದರೇನು?, ಅದು ಏಕೆ ನೋಟಿಸ್ ನೀಡಿದೆ? ಎಂಬ ವಿಚಾರಗಳು ತಿಳಿದಿಲ್ಲ' ಎಂದು ವಕೀಲರಾದ ಪರ್ವಿನಾ ಪ್ರತಿಕ್ರಿಯಿಸಿದರು.

ಪ್ರತೀಕಾರದ ಕ್ರಮವೇ?: ಸೇಲಂ ಜಿಲ್ಲೆಯ ಬಿಜೆಪಿ ಘಟಕದ ಕಾರ್ಯದರ್ಶಿ ಗುಣಶೇಖರ್ ಎಂಬುವರು ಫಲವತ್ತಾದ ಭೂಮಿಯನ್ನು ಕಬಳಿಸುವುದನ್ನು ಈ ರೈತ ಸಹೋದರರು ಪ್ರಶ್ನಿಸಿದ್ದಕ್ಕೆ ಪ್ರತೀಕಾರವಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ದೂರಿರುವ ಸಾಮಾಜಿಕ ಕಾರ್ಯಕರ್ತರು, ನೋಟಿಸ್‌ನಲ್ಲಿ ರೈತರ ಜಾತಿಯನ್ನು ಏಕೆ ಉಲ್ಲೇಖಿಸಬೇಕು ಎಂದು ಪ್ರಶ್ನಿಸಿದ್ದಾರೆ.

ಇ.ಡಿ ವಿರುದ್ಧ ನೀಡಲಾದ ದೂರಿಗೆ ಸಂಬಂಧಿಸಿದಂತೆ ನುಂಗಂಬಾಕ್ಕಂ ಪೊಲೀಸರು ವಕೀಲೆ ಪರ್ವಿನಾ ಅವರನ್ನು ಭಾನುವಾರ ವಿಚಾರಣೆಗೆ ಒಳಪಡಿಸಿದರು.

'ಕೇಂದ್ರದ ಏಜೆನ್ಸಿ ವಿರುದ್ಧ ದಾಖಲಿಸಿರುವ ದೂರನ್ನು ಹಿಂಪಡೆಯುವಂತೆ ನನಗೆ ಬೆದರಿಕೆ ಹಾಕಲಾಗುತ್ತಿದೆ' ಎಂದು ಪರ್ವಿನಾ ಅವರು 'ಪ್ರಜಾವಾಣಿ'ಗೆ ತಿಳಿಸಿದರು. ಈ ಕುರಿತು ಇ.ಡಿ ಅಧಿಕಾರಿಗಳ ಪ್ರತಿಕ್ರಿಯೆಗೆ ಪ್ರಯತ್ನಿಸಲಾಯಿತು, ಆದರೆ ಅವರು ಸಂಪರ್ಕಕ್ಕೆ ಸಿಗಲಿಲ್ಲ.

ಸುಳಗಾ(ಹಿ) ಗ್ರಾಮದಲ್ಲಿ ಅಳವಡಿಸಿದ್ದ ಕನ್ನಡ ಬಾವುಟ ಸುಟ್ಟಿರುವುದು

ಕನ್ನಡ ಬಾವುಟಕ್ಕೆ ಕಿಡಿಗೇಡಿಗಳಿಂದ ಬೆಂಕಿ

ಬೆಳಗಾವಿ: ಹೊಸ ವರ್ಷಾಚರಣೆಯಲ್ಲಿ ಪಾಲ್ಗೊಂಡ ಕಿಡಿಗೇಡಿಗಳು ಭಾನುವಾರ ತಡರಾತ್ರಿ ಕನ್ನಡ ಬಾವುಟ ಸುಟ್ಟ ಘಟನೆ ತಾಲ್ಲೂಕಿನ ಹಿಂಡಲಗಾ ಸಮೀಪದ ಸುಳಗಾದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ನಡೆದಿದೆ.

'ಹೊಸ ವರ್ಷ ಸ್ವಾಗತಿಸಲು ಸಿದ್ಧಗೊಳಿಸಿದ್ದ ಪ್ರತಿಕೃತಿಗಳನ್ನು ಸುಟ್ಟ ಬಳಿಕ, ಕನ್ನಡ ಬಾವುಟಕ್ಕೂ ಬೆಂಕಿ ಹಚ್ಚಿದ್ದಾರೆ' ಎಂದು ಕನ್ನಡಿಗರು ಆರೋಪಿಸಿದ್ದಾರೆ.

ಘಟನೆ ಖಂಡಿಸಿ ಕನ್ನಡಪರ ಹೋರಾಟಗಾರರು ಬೆಳಗಾವಿ–ವೆಂಗುರ್ಲಾ ಹೆದ್ದಾರಿ ತಡೆದು, ಪ್ರತಿಭಟಿಸಿದರು. ಸೋಮವಾರ ಬೆಳಿಗ್ಗೆ ಹೊಸದಾಗಿ ಕನ್ನಡ ಬಾವುಟ ಅಳವಡಿಸಿದ್ದು, ಈಗ ಪರಿಸ್ಥಿತಿ ಹತೋಟಿಯಲ್ಲಿದೆ.

ಮಹಿಳೆಗೆ ₹89 ಲಕ್ಷ ವಂಚನೆ

ಕಲಬುರಗಿ: ಮನೆಯಲ್ಲಿ ಕುಳಿತು ವಿಮಾನ ಸೀಟ್ ಟಿಕೆಟ್ ಬುಕ್ಕಿಂಗ್ ಮಾಡಿದರೆ ಉತ್ತಮ ಲಾಭಾಂಶ ನೀಡುವುದಾಗಿ ನಂಬಿಸಿದ ಸೈಬರ್ ವಂಚಕರು ಮಹಿಳೆಯೊಬ್ಬರಿಗೆ ₹89.12 ಲಕ್ಷ ವಂಚಿಸಿದ್ದಾರೆ.

ನಗರದ ಬಸವೇಶ್ವರ ಕಾಲೊನಿಯ ಮಹಿಳೆ ಪ್ರತಿಮಾ ಗಿರೀಶ ನೀಡಿದ ದೂರಿನ ಅನ್ವಯ ಸೈಬರ್, ಆರ್ಥಿಕ ಮತ್ತು ಮಾದಕವಸ್ತು ತಡೆ (ಸೆನ್) ಠಾಣೆಯಲ್ಲಿ ನೋಯ್ಡಾ ಮೂಲದ ನಿಕಿತಾ ಬನ್ಸಾಲ್, ಕೇರಳದ ಎಸ್.ಕಿಶೋರ್ ಹಾಗೂ ಬೆಂಗಳೂರಿನ ಅಖಿಲೇಶ ಗೌಡ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

2023ರ ನವೆಂಬರ್ 7ರಂದು ಟೆಲಿಗ್ರಾಂ ಮೂಲಕ ಪ್ರತಿಮಾ ಅವರನ್ನು ಅಪರಿಚಿತರು ಸಂಪರ್ಕಿಸಿದ್ದರು. ಮನೆಯಲೇ ಕುಳಿತು ನೆಟ್‌ವರ್ಕ್ ಸೈಟ್‌ನಲ್ಲಿ ವಿಮಾನ ಸೀಟ್ ಬುಕ್ಕಿಂಗ್ ಮಾಡಿ, ದಿನಕ್ಕೆ ₹7,000 ಗಳಿಸಬಹುದು ಎಂಬ ಆಮಿಷದ ಸಂದೇಶ ಕಳುಹಿಸಿದ್ದರು.

ಲಾಭಾಂಶದ ಆಮಿಷಕ್ಕೆ ಒಳಗಾದ ಪ್ರತಿಮಾ, ವಂಚಕರು ಸೂಚಿಸಿದ್ದ ಬ್ಯಾಂಕ್ ಖಾತೆಗೆ ₹10,848 ಜಮೆ ಮಾಡಿದರು. ಬಳಿಕ ಸೀಟ್ ಬುಕ್ಕಿಂಗ್ ಮಾಡಿದ್ದಕ್ಕೆ ₹57,058 ಲಾಭಾಂಶವನ್ನು ಪ್ರತಿಮಾ ಅವರ ಬ್ಯಾಂಕ್ ಖಾತೆಗೆ ಜಮೆ ಮಾಡಿದರು. ಹೆಚ್ಚಿನ ಲಾಭಾಂಶದ ಆಮಿಷಕ್ಕೆ ಒಳಗಾದ ಪ್ರತಿಮಾ ಅವರು, ಅಧಿಕ ಹಣವನ್ನು ಜಮೆ ಮಾಡಿದರು. ಆದರೆ, ವಂಚಕರು ಲಾಭಾಂಶದ ಹಣವನ್ನು ಮರಳಿ ಜಮೆ ಮಾಡಲಿಲ್ಲ.

THE MANDYA DISTRICT CENTRAL CO-OPERATIVE BANK LTD., MANDYA

P.B.No.14, Market Road, Mandya - 571401 Phone No:08232-226010, 226011, Email-mdy_dccb@rediffmail.com

No:EST:ADM:RECRUIT: 02:2023-24 Date: 02-01-2024

SHORT TERM TENDER NOTIFICATION

The Mandya District Central Co-operative Bank Ltd., Mandya, invites (two cover system) from the eligible Companies/ Firms/ Agencies/ Societies who are interested to participate in the "Expression of Interest" (EOI) for selection of and admit Card Management etc., related work towards Recruitment for the different cadres of 94 Posts to The Mandya District Central Co-operative Bank Ltd., Mandya, who have executed the same nature of work in State/Central Govt/ Commercial/ Scheduled/Co-operative Banks. The details of work can be obtained directly from Head office, Mandya.

CALENDAR OF EVENTS

1	Date and Time for commencement of Tender	02-01-2024, 10-30 A.M
2	Last date and time for submission of Tender	08-01-2024, 3.00 P.M
3	EMD	Rs.50,000/- (Refundable) DD
4	Period of Completion	Till Completion of the Recruitment Process
5	Opening of Technical Bid	08-01-2024, 03.10 P.M
6	Opening of Commercial Bid	08-01-2024, 05.00 P.M

for further terms & Condition visit our website www.mandyadccbank.com

Place: Mandya
Date: 02-01-2024

Sd/- Chief Executive Officer

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) ASHOK_LEY ALDOST YOM – 2022 Reg No – KA13D3890
2) CB_TIPPER_SIGNA3525K _TATA_MOTORS YOM – 2021 Reg No – KA44A1166
3) CB_EICHER_VOLVO_PRO2049 YOM – 2022 Reg No – KA05AL0579
4) CB_MARUTI SUPER CARRY YOM – 2021 Reg No – KA02AH6806
5) ASHOK LEYLAND LIMITED – CB _AL_BADA_DOST YOM – 2022 Reg No – KA07B4130
6) CB_MARUTI SUPER CARRY YOM – 2022 Reg No – KA17AA4942
7) CB_TATA_LPT_4223_FULLY _BUILT_GOODS YOM – 2019 Reg No – KA35C3192
8) CB_AL BOSS 1112 YOM – 2020 Reg No – KA03AJ5769
9) CB_AL1615_HE4750_BS_6 YOM – 2022 Reg No – KA01AM5036
10) CB_MARUTI SUPER CARRY YOM – 2023 Reg No – KA19AE1431
11) CB_AL_BADA_DOST YOM – 2022 Reg No – KA07B3831
12) CB_LPT1212_TATAMOTORS YOM – 2021 Reg No – KA53AA2795

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 02.01.2024

(Please note that closing Auction date would not be a Weekly off / Holiday).

BRANCH ADDRESS: KOTAK MAHINDRA BANK LTD., 22, MG ROAD, BANGALORE, KARNATAKA – 560001

Or

Contact: Muzzammilkhan N Kotak Mahindra Bank Ltd. Contact / 080 - 61564205

ಪ್ರಜಾವಾಣಿ ಸ್ಪರ್ಧಾವಾಣಿ MASTERMIND

UPSC, KAS, KPSC, PSI, Banking, Railways, Group-C ಮುಂತಾದ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿಯಲ್ಲಿರುವ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ, ಪ್ರಜಾವಾಣಿ ವಿಶ್ವಾಸಾರ್ಹ ಮಾಹಿತಿ ಮೂಲದಿಂದ ಬಿಡುಗಡೆಯಾಗಿರುವ ಮಾಸಪತ್ರಿಕೆ, ಸ್ಪರ್ಧಾವಾಣಿ.

ಈ ಸಂಚಿಕೆಯಲ್ಲಿ 200ಕ್ಕೂ ಹೆಚ್ಚು ಅಭ್ಯಾಸ ಪ್ರಶ್ನೆಗಳು!

ಆರ್ಡರ್ ಮಾಡಲು ನಿಮ್ಮ ಹತ್ತಿರದ ಪುಸ್ತಕದ ಅಂಗಡಿ/ಪತ್ರಿಕಾ ವಿತರಕರನ್ನು ಸಂಪರ್ಕಿಸಿ

ಹೆಚ್ಚಿನ ಮಾಹಿತಿಗಾಗಿ, WhatsApp/ಕರೆ ಮಾಡಿ: 9606966128

ಕ್ಷೇಮ ಕುಶಲ

ಮಾನಸಿಕ ಒತ್ತಡವೇ?

ಮನಸಿಗೆ ಕಿರಿಕಿರಿಯಾಗುತ್ತಿದ್ದರೆ ದೈಹಿಕ ಆರೋಗ್ಯದ ಮೇಲೆಯೂ ಪರಿಣಾಮ ಬೀರುತ್ತದೆ. ನಿಮ್ಮ ಆರೋಗ್ಯದ ಬಗ್ಗೆ ಎಚ್ಚರವಹಿಸಲು ಒತ್ತಡದ ಪರಿಣಾಮಗಳನ್ನು ಇಲ್ಲಿ ವಿವರಿಸಲಾಗಿದೆ.

ಹೊರೆಯನಿಳಿಸಿ ಮುನ್ನಡೆಯುತ...



ಸುಷ್ಮ ಸಿಂಧು

ನೆನ್ನೆಗಳ ನೋವಿನ ಹೊರೆ ಬಲು ಭಾರದ್ದು. ಕಳೆದ ವರ್ಷವನ್ನು ಅವಲೋಕಿಸಿದಾಗ ಖುಷಿಯ ಸರತಿ ಪಟಪಟನೆ ಸಾಗಿದರೆ ನೋವುಗಳದ್ದು ಮುಗಿಯದ ಮೆರವಣಿಗೆ. ಮನವನ್ನು ಕುಗ್ಗಿಸಿ ಕಾಡುವ ಕಹಿ ನೆನಪುಗಳ ಸಹವಾಸ ಬೇಡವೇ ಬೇಡ ಎಂದರೂ ಅದನ್ನು ಹಾಗೇ ಸರಾಗವಾಗಿ ಎತ್ತಿಟ್ಟು ಹಗುರಾಗಿ ಬಿಡಲೂ ಆಗದು. ದೇಹಕ್ಕಾದ ಗಾಯದಂತೆಯೇ ಈ ಮಾನಸಿಕ ವ್ಯಾಧಿಗಳೂ ಮಾಯಲು ಸಮಯ ಬೇಕು. ದೈಹಿಕ ಗಾಯ ಕೆರೆದಷ್ಟೂ ಉಲ್ಬಣವಾಗುವಂತೆ ಘಟನೆ ಯಾವುದೇ ಕಾಲದ್ದಾದರೂ ಸ್ಮೃತಿಯನ್ನು ಕೆದುಕಿದಷ್ಟೂ ಮನದಂಗಳದಲ್ಲಾದ ಗಾಯವೂ ನೋಯುತ್ತಾ ಗಾಸಿಯುಂಟು ಮಾಡುತ್ತಲೇ ಇರುವವು.

ಒಬ್ಬೊಬ್ಬರ ವೇದನೆ ಒಂದೊಂದು ರೀತಿಯದ್ದಾದರೂ, ಅದು ಮನವನ್ನು ಹಿಂಡುವುದನ್ನು ಬಿಟ್ಟು ಹಿಂದೆ ಸರಿಯಲು ಸಾಕಷ್ಟು ಕಾಲವನ್ನೇ ತೆಗೆದುಕೊಳ್ಳುತ್ತದೆ. ಭಾವನಾತ್ಮಕವಾಗಿ ಬಲಗೊಂಡು ಪುನಃ ಬದುಕು ಕಟ್ಟಿಕೊಳ್ಳಲು ಸಾಧ್ಯವಿದೆ ಎಂಬ ಭರವಸೆಯೊಂದಿಗೆ ನಾಳೆಗಳೆಡೆಗೆ ನಡೆಯಬೇಕಿದೆ. ಮತ್ತೆ ನವಚೈತನ್ಯದೊಂದಿಗೆ ಹೊಸತನ್ನು, ಹೊಸವರುಷವನ್ನು ಸ್ವಾಗತಿಸಲು ಸಾಧ್ಯವಿದೆ.

ಮನೋಸ್ಥೈರ್ಯ ಕಸಿಯುವ ನೆನ್ನೆಗಳು

ನೆನ್ನೆಯ ನೋವುಗಳು ಇವತ್ತನ್ನು ಆವರಿಸಲು ಬಿಟ್ಟಷ್ಟೂ ಮನೋಸ್ಥೈರ್ಯದ ಮಟ್ಟ ಕೆಳಗಿಳಿಯುವುದು. ಅತಿಯಾಗಿ ಯೋಚಿಸಿದರೆ ಸಮಸ್ಯೆಗಳು ಬಗೆಹರಿಯುವುದಿಲ್ಲ. ಇನ್ನೂ ಹೆಚ್ಚಾಗುತ್ತವೆ. ಪರಿಹಾರಕ್ಕೆ ಯೋಚಿಸಿ ಚಿಂತೆ ಹಚ್ಚಿಸಿಕೊಳ್ಳುವುದಲ್ಲ, ಯೋಜಿಸಿ ಕಾರ್ಯಪ್ರವೃತ್ತರಾಗಬೇಕು. ಹಾಗಾಗಲು ಮನೋಬಲ ಉತ್ತಮ ಮಟ್ಟದಲ್ಲಿರುವುದು ಅಗತ್ಯ. ಮುಂದಿನ ಜೀವನದ ಸಾಧ್ಯತೆಗಳನ್ನು ಅಪ್ಪಿಕೊಳ್ಳಲು ಹಳೆಯ ಬೇನೆಗಳನ್ನು ಅಲ್ಲಿಯೇ ಬಿಟ್ಟು ಹೊಸದನ್ನು ಸ್ವಾಗತಿಸಲು ಸಜ್ಜಾಗಬೇಕು.

ನವವರುಷವೊಂದು ಅವಕಾಶ. ಹೊಸತನವೆನ್ನುವುದು ಮನಸ್ಸನ್ನು ಪ್ರಫುಲ್ಲಗೊಳಿಸಿ ಮನೋಲ್ಲಾಸ ತುಂಬಿಕೊಳ್ಳಲು ಒದಗಿರುವ ಸುಯೋಗ. ಅದರ ಸದುಪಯೋಗ ಪಡೆದುಕೊಂಡಾಗ ಸಮಸ್ಯೆಗಳಿಂದ ಬೆಂದ ಚಿತ್ತ ತಾನಾಗೇ ತಹಬದಿಗೆ ಬರುವುದು. ನೆನ್ನೆಯ ಹಿಂಸೆಗಳು ಧೈರ್ಯ-ನೆಮ್ಮದಿಗಳನ್ನು ದೋಚಲು ಬಿಡದಿದ್ದಲ್ಲಿ ಶಾಂತಿ-ಸಮಾಧಾನ-ಸ್ಥೈರ್ಯದ ವಿಚಾರದಲ್ಲಿ ನಾವು ಬಹಳವೇ ಶ್ರೀಮಂತರಾದಂತೆ.

ಈ ಕ್ಷಣದಲ್ಲಿ ಬದುಕಿದರೆ ಪರಿತಾಪವಿರದು

ಹಿಂದಿನದ್ದರಲ್ಲೇ ಕಳೆದು ಹೋಗಿ ಕಾಲಹರಣ ಮಾಡಿಕೊಂಡರೆ ನಾವು ಕಳೆದುಕೊಳ್ಳುವುದು ಏನನ್ನು? ಈ ದಿನದ ಈ ಕ್ಷಣವನ್ನು. 'ಅಯ್ಯೋ ಹಾಗೆ ಮಾಡಬಹುದಿತ್ತು'. 'ಛೇ ಅದು ಹೊಳೆಯಲೇ ಇಲ್ಲ' ಎಂಬ ಪರಿತಾಪ ಜಾಸ್ತಿ ಇರುವುದೇ ವರ್ತಮಾನದಲ್ಲಿ ಮನಸ್ಸು ನಿಂತಿಲ್ಲದಿರುವುದರಿಂದ. ಅನ್ಯಮನಸ್ಕರಾಗಿ, ನಿರಾಸಕ್ತರಾಗಿ ದಿನದೂಡಿಬಿಟ್ಟಾಗ ಕಳೆದುಹೋದುದರ ಬಗ್ಗೆ ಬೇಸರ, ಪಶ್ಚಾತ್ತಾಪಗಳೇ ಉಳಿಯುವುದು. ಹೊಸ ವರುಷವೂ ಅದರಲ್ಲೇ ಕಳೆಯುವುದು. ವೇದನೆಯಲ್ಲೇ ಮನಸ್ಸಿಟ್ಟರೆ ನಾವು ಮತ್ತಷ್ಟು ವೇದನೆಯನ್ನೇ ಕಲೆಹಾಕುತ್ತಲಿರುತ್ತೇವೆ.

ನೆನ್ನೆಯ ನೋವಿಗೆ ಅಂಟದೇ ಉತ್ತಮ ನಾಳೆಗಳತ್ತ ನಿರಾಳವಾಗಿ ತೆರಳಲು ಒಂದಷ್ಟು ಮಾನಸಿಕ ದೃಢತೆ, ಸಿದ್ಧತೆ ಬೇಕು. ಅದನ್ನು ಹೊಂದುವುದು ಹೇಗೆ?

ಇಲ್ಲಿದೆ ಮಾರ್ಗ:

ಹೊಸತನದತ್ತ ಹೆಜ್ಜೆ ಹಾಕುತ್ತಾ ...

- **ಹೊಸದಕ್ಕೆ** ಜಾಗ ಮಾಡಿಕೊಡಿ. ಹಳೆಯದರಲ್ಲೇ ಉಳಿದುಬಿಟ್ಟರೆ ಜಾಡ್ಯತನ ಆವರಿಸಿಬಿಡುವುದು. ಹೊಸ ಕಲಿಕೆ, ಹವ್ಯಾಸಗಳು, ಹೊಸ ಜನರ ಪರಿಚಯ-ಸ್ನೇಹ... ಹೊಸತನಕ್ಕೆ ತೆರೆದುಕೊಂಡಷ್ಟೂ ನವೋಲ್ಲಾಸ ಮನ ತುಂಬುವುದು.
- 'ನಾನು ನೆನ್ನೆಗಳ ನೋವುಗಳನ್ನೇ ಆನಂದಿಸುತ್ತಿದ್ದೀನಾ?' ಪ್ರಶ್ನಿಸಿಕೊಳ್ಳಿ. ಹಿಂಸೆಗಳೊಡನೆ ದೀರ್ಘಕಾಲ ಬದುಕಿದ್ದಾಗ ಕೆಲವೊಮ್ಮೆ ನಮಗೇ ಗೊತ್ತಿಲ್ಲದೇ ಅದೇ ಪರಿಪಾಠವಾಗಿಬಿಟ್ಟಿರುವುದು. ಉದಾ: 'ನಾನು ಅಯೋಗ್ಯ' ಎಂದು ನಿರ್ಧರಿಸಿಕೊಂಡರೆ ತಿದ್ದಿಕೊಂಡು ನಡೆದರೆ, ಸಂಕಟಗಳ ಅಗತ್ಯವಿರದು.
- ಇವತ್ತು ಒಂದು ಹೆಜ್ಜೆ ಎತ್ತಿಡಲೂ ಕಷ್ಟವೆನಿಸುತ್ತಿರಬಹುದು. ಆದರೆ ಈ ಹಂತವೇ ಅಂತಿಮವಲ್ಲ. ಈ ಸ್ಥಿತಿಯಿಂದಲೂ ನಾನು ಹೊರಬರಬಲ್ಲೆ ಎನ್ನುವುದನ್ನು ನೆನಪಿಸಿಕೊಳ್ಳುತ್ತಿರಿ.
- ಹಿಡಿತದಲ್ಲಿಲ್ಲದ್ದನ್ನು ಹಾಗೇ ಇರಲು ಬಿಡುವ, ಇರುವಂತೆಯೇ ಸ್ವೀಕರಿಸುವ ಮನಸ್ಸು ಮಾಡಿ. Letting go... ಎನ್ನುವುದು ಒಂದು ಅಭ್ಯಾಸ. ಅಭ್ಯಸಿಸಿದಷ್ಟೂ ಬದುಕು ಹಗುರಾಗುವುದು.
- ದೈಹಿಕ-ಮಾನಸಿಕವಾಗಿ ಕ್ರಿಯಾಶೀಲವಾಗಿಡುವ ಚಟುವಟಿಕೆಗಳು, ಸ್ವ-ಆರೈಕೆ ರೂಢಿಯಾಗಲಿ. ಹಳೆಯ ನೋವುಗಳು ಮಾಯಲು ಅದರಿಂದ ವಿಚಲಿತರಾಗಿ ಬೇರೆ ಕೆಲಸಗಳಲ್ಲಿ ನಿರತರಾಗುವುದು ಒಳ್ಳೆಯ ಔಷಧವಾಗಬಲ್ಲದು.
- ಆನಂದಕ್ಕೆ ಆದ್ಯತೆ ನೀಡಿ. ಕೆಲಸವನ್ನು ಪರಿಪೂರ್ಣವಾಗಿ ಮಾಡಬೇಕು, ದೊಡ್ಡ ಸಾಧನೆ ಮಾಡಿದರಷ್ಟೇ ಸಂತೋಷ ಎಂಬೆಲ್ಲಾ ನಿಯಮಗಳಿಂದ ಹೊರಬಂದು ಈ ವರ್ಷ ಪುಟ್ಟಪುಟ್ಟ ಖುಷಿಗಳನ್ನು ಕಲೆ ಹಾಕಿ ಹರ್ಷಿಸುವ ನಿರ್ಧಾರ ಮಾಡಿ. ನಲುಗುವ ಮನ ನಲಿವಿನ ಗೂಡಾಗಿ ಮಾರ್ಪಾಡಾಗುವುದು.
- ಜೀವನ ಪಾಠಕ್ಕೆ ಗಮನ ನೀಡಿ. ನಿರಾಶಾದಾಯಕ ಅನುಭವಗಳಿಂದ ಸಂಬಂಧಗಳು, ಬದುಕು ಹಾಗೂ ನಿಮ್ಮ ಬಗ್ಗೆ ಏನನ್ನು ಕಲಿತಿರಿ ಅವಲೋಕಿಸಿಕೊಳ್ಳಿ. ಕಳೆದ ವರ್ಷದ ಕಲಿಕೆ ನವ ವರ್ಷದ ನೂತನ ಪ್ರಾರಂಭಗಳಿಗೆ ದಾರಿದೀಪವಾಗಬಹುದು.

ಡಾ.ಕೆ.ಜಯಲಕ್ಷ್ಮಿ

ಒತ್ತಡವು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನ. ಹಾಗಾಗಿ ಒತ್ತಡದಿಂದಾಗುವ ಅನುಭವವೂ ಭಿನ್ನವಾಗಿಯೇ ಇರುತ್ತದೆ. ಯಾವುದೇ ಪರಿಸ್ಥಿತಿಯನ್ನು ಸಮರ್ಪಕವಾಗಿ ಎದುರಿಸಲು ಕಷ್ಟವೆನಿಸಿದಾಗ ಗಾಬರಿ, ಕಿರಿಕಿರಿಯಾಗುತ್ತದೆ. ಇದನ್ನೇ ಒತ್ತಡದ ಸ್ಥಿತಿ ಎನ್ನಬಹುದು. ಸವಾಲು, ಸಂಕಟ, ಅಪಾಯದ ಸನ್ನಿವೇಶಗಳನ್ನು ಎದುರಿಸುವಾಗೆಲ್ಲ ಒತ್ತಡದ ಸ್ಥಿತಿ ಉಂಟಾಗುತ್ತದೆ.

ಒಂದು ಹಂತದವರೆಗೆ ಒತ್ತಡವು ನಮ್ಮನ್ನು ಸಾಂದರ್ಭಿಕವಾಗಿ ಕಾರ್ಯೋನ್ಮುಖರಾಗಲು ಪ್ರಚೋದಿಸುತ್ತದೆ. ಅದು ಹೆಚ್ಚಾದಾಗ ಹೆದರಿಕೆಯಾಗುವುದು ಸಹಜ. ಹೃದಯಬಡಿತದಲ್ಲಿ ಏರುಪೇರು, ಬಾಯಿ ಒಣಗುವುದು, ಬೆವರುವುದೆಲ್ಲ ಮಾಮೂಲು.

ಅಪಘಾತ, ಆತ್ಮೀಯರ ಸಾವು, ನಾವು ಗೌರವಿಸುವ ವ್ಯಕ್ತಿಗಳ ಅನಿರೀಕ್ಷಿತ ನಡವಳಿಕೆ, ನಮ್ಮದೇ ಆರೋಗ್ಯದ ಸಮಸ್ಯೆ, ಆಸ್ತಿ ಕಳೆದುಕೊಳ್ಳುವುದು, ಆರ್ಥಿಕ ನಷ್ಟ, ನಿಯಂತ್ರಣ ಮೀರಿದ ಸನ್ನಿವೇಶಗಳು ಇವುಗಳಿಂದ ಒತ್ತಡ ಉಂಟಾಗುವುದು ಸಹಜ. ಇವೆಲ್ಲವೂ ಅಲ್ಪಾವಧಿಗೆ ಸೀಮಿತವಾಗಿರುವ ಒತ್ತಡಗಳು. ಈ ಒತ್ತಡ ದೀರ್ಘಕಾಲ ಉಳಿದುಬಿಟ್ಟರೆ ದೇಹ ಹಾಗೂ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ.

ಪರಿಣಾಮಗಳೇನು?

ಒತ್ತಡವೆಂಬುದು ಕೇವಲ ಮನಸ್ಸಿಗೆ ಸಂಬಂಧಿಸಿದ್ದಲ್ಲ. ಹೊರಗಿನ ಭಯಕ್ಕೆ ದೇಹವೂ ಪ್ರತಿಕ್ರಿಯಿಸುತ್ತದೆ. ಇದರಿಂದ ರಕ್ತನಾಳಗಳು ಸಂಕುಚಿತಗೊಳ್ಳುತ್ತವೆ. ರಕ್ತದೊತ್ತಡ ಏರುತ್ತದೆ. ಉಸಿರಾಟ, ನಾಡಿಮಿಡಿತ ಹೆಚ್ಚುತ್ತದೆ.

ಅಡ್ರೆನಾಲಿನ್ ಮತ್ತು ಕಾರ್ಟಿಸೋಲ್ ಹಾರ್ಮೋನುಗಳು ಹೆಚ್ಚಿನ ಮಟ್ಟದಲ್ಲಿ ಬಿಡುಗಡೆಯಾಗಿ ದೀರ್ಘಕಾಲದ ಆರೋಗ್ಯ ಸಮಸ್ಯೆ ತಂದೊಡ್ಡಬಹುದು. ದೀರ್ಘಕಾಲೀನ ಒತ್ತಡದಿಂದ ಉಂಟಾಗುವ ಪ್ರಮುಖ ತೊಂದರೆಗಳೆಂದರೆ:

ಹೃದ್ರೋಗ: ಒತ್ತಡದಿಂದ ಹೃದಯದ ಬಡಿತ, ನಾಡಿಮಿಡಿತ ಹೆಚ್ಚಾಗಿ ಕೊಲೆಸ್ಟರಾಲ್‌ನ ಮಟ್ಟವನ್ನು ಹೆಚ್ಚಿಸುತ್ತದೆ. ಇದು ಹೃದ್ರೋಗಕ್ಕೆ ಕಾರಣವಾಗುತ್ತದೆ. ಹಾಗಾಗಿ ದೀರ್ಘಕಾಲದ ಹೃದ್ರೋಗದಿಂದ ಬಳಲುತ್ತಿರುವವರು ಆಘಾತಕಾರಿ ಒತ್ತಡಗಳಿಂದ ದೂರವಿರುವುದು ಒಳಿತು.

ಅಸ್ತಮಾ: ಅಸ್ತಮಾ ಇರುವವರ ಸಮಸ್ಯೆ ಒತ್ತಡಗಳಿಂದ ಇನ್ನಷ್ಟು ಬಿಗಡಾಯಿಸುತ್ತದೆ. ಅಲ್ಲದೇ ಉಸಿರಾಟದ ಸಮಸ್ಯೆ ಕಾಣಿಸಿಕೊಳ್ಳಬಹುದು.

ಬೊಜ್ಜು: ಅತಿ ಹೆಚ್ಚು ಒತ್ತಡಕ್ಕೆ ಒಳಗಾದರೆ ಕಾರ್ಟಿಸೋಲ್ ಹಾರ್ಮೋನಿನ ಉತ್ಪಾದನೆ ಹೆಚ್ಚುತ್ತದೆ. ಇದರಿಂದ ಉದರದಲ್ಲಿ ಹೆಚ್ಚು ಕೊಬ್ಬು ಸಂಗ್ರಹವಾಗುತ್ತದೆ. ಕಾಲು ಅಥವಾ ತೊಡೆಗಳಿಗಿಂತ ಉದರದಲ್ಲಿ ಸೇರುವ ಕೊಬ್ಬಿನಿಂದ ಆರೋಗ್ಯದ ಮೇಲೆ ಪರಿಣಾಮ ಹೆಚ್ಚು.

ಸಕ್ಕರೆ ಕಾಯಿಲೆ: ಮಧುಮೇಹದಿಂದ ಬಳಲುವವರು ಹೆಚ್ಚಿನ ಒತ್ತಡಕ್ಕೆ ಈಡಾಗುವುದರಿಂದ ಅದನ್ನು ಮರೆಯಲು ಆಹಾರದ ಮೊರೆ ಹೋಗುತ್ತಾರೆ. ಜಂಕ್‌ಫುಡ್‌ಗಳ ಅತಿಯಾದ ಸೇವನೆಯಿಂದ ರಕ್ತದಲ್ಲಿ ಗ್ಲುಕೋಸ್ ಮಟ್ಟ ಹೆಚ್ಚಿ ಮಧುಮೇಹದ ತೊಂದರೆ ಇನ್ನಷ್ಟು ಹೆಚ್ಚುತ್ತದೆ.

ಖಿನ್ನತೆ ಮತ್ತು ಆತಂಕ: ಒತ್ತಡದಿಂದ ಆತಂಕದ ಜತೆ ಖಿನ್ನತೆ ಉಂಟಾಗುತ್ತದೆ. ಒತ್ತಡದ ಕೆಲಸ ಮಾಡುವವರು ಬಹುಬೇಗ ಖಿನ್ನತೆಗೆ ಜಾರುತ್ತಾರೆ ಎನ್ನುತ್ತದೆ ಅಧ್ಯಯನದ ವರದಿಗಳು. ಅತಿ ಒತ್ತಡವನ್ನು ನಿಭಾಯಿಸಲು ಆಗದೆ ಮಿದುಳು ನೆನಪಿನ ಶಕ್ತಿ ಕಳೆದುಕೊಳ್ಳಬಹುದು. ಆಲ್ಜಿಮರ್ಸ್ ಕಾಯಿಲೆ ಉಂಟಾಗಬಹುದು.

ಜೀರ್ಣಕ್ರಿಯೆ ತೊಂದರೆ: ಅತಿ ಒತ್ತಡದಿಂದ ಹೊಟ್ಟೆಹುಣ್ಣು ಹೊಸದಾಗಿ ಉಂಟಾಗದೇ ಇದ್ದರೂ ಈಗಾಗಲೇ ಆ್ಯಸಿಡಿಟಿ ಸಮಸ್ಯೆ ಇರುವವರಿಗೆ ಒತ್ತಡ ತೆಗೆದುಕೊಂಡರೆ ಸಮಸ್ಯೆ ಹೆಚ್ಚುತ್ತದೆ. ಒತ್ತಡದಿಂದ ಅಜೀರ್ಣ ಸಮಸ್ಯೆ ಕಾಣಿಸಿಕೊಳ್ಳಬಹುದು.

ನಿರ್ವಹಣೆ ಹೇಗೆ?

ಒತ್ತಡವನ್ನು ನಿಭಾಯಿಸುವುದು ಒಂದು ಕಲೆ. ನಿಮಗಿರುವ ಒತ್ತಡ, ಆತಂಕಗಳನ್ನು ಒಂದು ಕಡೆ ಬರೆಯುತ್ತಾ ಸ್ಪಷ್ಟತೆ ತಂದುಕೊಳ್ಳಿ. ಯಾವುದೇ ಕೆಲಸ ಮಾಡುವ ಮುನ್ನ ಪೂರ್ವ ತಯಾರಿಯ ಕಡೆಗೆ ಗಮನ ಕೊಡಿ. ಬಾಹ್ಯ ಪ್ರಚೋದನೆಗಿಂತ ಆಂತರಿಕ ಪ್ರಚೋದನೆಗೆ ಪ್ರಾಮುಖ್ಯತೆ ಕೊಡಿ. ಬದುಕು ಕೇವಲ ಪ್ರತಿಕ್ರಿಯೆಗಷ್ಟೆ ಸೀಮಿತವಲ್ಲವೆಂಬುದನ್ನು ಅರಿಯಿರಿ. ಭೂತ, ಭವಿಷ್ಯದ ಕಡೆಗೆ ಗಮನ ಕೊಡದೇ ವರ್ತಮಾನದಲ್ಲಿ ಬದುಕಿ. ನಿಯಮಿತ ಯೋಗ, ಧ್ಯಾನ, ಪ್ರಾಣಾಯಾಮ ಸೇರಿ ಆರೋಗ್ಯಕರ ಜೀವನಶೈಲಿಯಿಂದ ಒತ್ತಡರಹಿತ ಬದುಕನ್ನು ನಿಮ್ಮದಾಗಿಸಿಕೊಳ್ಳಬಹುದು.

ಒತ್ತಡವೂ ಉಪ್ಪಿನಂತೆ

ಊಟಕ್ಕೆ ಉಪ್ಪಿನ ರುಚಿ ಇರುವ ಹಾಗೇ ಒತ್ತಡವು ಬದುಕಿಗೆ ಬೇಕು. ಇಲ್ಲದೇ ಇದ್ದರೆ ಜೀವನ ಸಪ್ಪೆ ಎನಿಸುತ್ತದೆ. ಕಲಿಯಲು, ಬೆಳೆಯಲು ಒತ್ತಡದ ಅಗತ್ಯವಿರುತ್ತದೆ. ಯಾವುದೇ ಜವಾಬ್ದಾರಿಯನ್ನು ಜವಾಬ್ದಾರಿಯಾಗಿ ನೋಡದೇ ಅದನ್ನು ಪ್ರೀತಿಸಲು ಆರಂಭಿಸಿದ ಕ್ಷಣವೇ ಒತ್ತಡವೆಂಬುದು ಕರಗುತ್ತದೆ. ಮೊದಲ ಬಾರಿಗೆ ಶಾಲೆಗೆ ಹೋಗುವಾಗ, ವ್ಯಾಪಾರ ಆರಂಭಿಸುವಾಗ, ಉದ್ಯೋಗ ಸೇರುವಾಗ ಹೀಗೆ ಎಲ್ಲ ಮೊದಲ ಹಂತಗಳಲ್ಲಿಯೂ ಒತ್ತಡವೆಂಬುದು ಸಾಮಾನ್ಯ. ನಮ್ಮನ್ನು ಕ್ರಿಯಾಶೀಲರಾಗಿಡಲು ಒತ್ತಡದ ಅಗತ್ಯವಿದೆ. ಸಾಮರ್ಥ್ಯ ಅರಿತು ಹೆಜ್ಜೆ ಹಾಕಿದರೆ ಒತ್ತಡವನ್ನು ನಿಭಾಯಿಸುವುದು ಬಲು ಸುಲಭ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಭಾರತದಲ್ಲಿ ಶೇಕಡ ಎಷ್ಟು ಭೂಭಾಗ ಅರಣ್ಯಗಳಿಂದ ಕೂಡಿದೆ?
ಎ) ಶೇ 21.02 ಬಿ) ಶೇ. 33.3
ಸಿ) ಶೇ. 16.3 ಡಿ) ಶೇ, 44.2
ಉತ್ತರ:– (ಎ) ಶೇ 21.02

2) ಇವರು ಯಾರು? ಇವರ ಕೃತಿಯನ್ನು ಗುರುತಿಸಿ



ಎ) ಜವಾಹರ್ ಲಾಲ್ ನೆಹರು – ಡಿಸ್ಕವರಿ ಆಫ್ ಇಂಡಿಯಾ
ಬಿ) ಮಹಾತ್ಮ ಗಾಂಧಿ – ಎಕ್ಸ್‌ಪರಿಮೆಂಟ್ ವಿಥ್ ಥ್ರೂತ್
ಸಿ) ರಬೀಂದ್ರನಾಥ್ ಟ್ಯಾಗೋರ್– ಗೀತಾಂಜಲಿ
ಡಿ) ಬಾಲಗಂಗಾಧರ್ ತಿಲಕ್– ಗೀತಾ ರಹಸ್ಯ
ಉತ್ತರ:–(ಬಿ) ಮಹಾತ್ಮ ಗಾಂಧಿ– ಎಕ್ಸ್‌ಪರಿಮೆಂಟ್ ವಿಥ್ ಥ್ರೂತ್

3) ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ________ ಇಲಾಖೆಯು ನೀಡುತ್ತದೆ.
ಎ) ಸಹಕಾರ ಬ್ಯಾಂಕ್ ಬಿ) ಸಹಕಾರ ಪತ್ತಿನ ಸೊಸೈಟಿ
ಸಿ) ಅಂಚೆ ಇಲಾಖೆ ಡಿ) ಯಾರೂ ಅಲ್ಲ
ಉತ್ತರ: (ಸಿ) ಅಂಚೆ ಇಲಾಖೆ

4) ....ನ ಬೆಂಬಲದಿಂದ 1829ರಲ್ಲಿ ಸತಿಪದ್ಧತಿಯ ಆಚರಣೆಯನ್ನು ಕಾನೂನಾತ್ಮಕವಾಗಿ ನಿಷೇಧಿಸಲಾಯಿತು.
ಎ) ವಿಲಿಯಂ ಬೆಂಟಿಂಕ್ ಬಿ) ಮೌಂಟ್ ಬ್ಯಾಟನ್
ಸಿ) ಲಾರ್ಡ್ ಡಫರಿನ್ ಡಿ) ಲಾರ್ಡ್ ಇರ್ವಿನ್
ಉತ್ತರ:– (ಎ) ವಿಲಿಯಂ ಬೆಂಟಿಂಕ್

5) ಹಾಗೆಯೇ ದೇಶದಲ್ಲಿ ಉತ್ಪಾದನೆಯಾಗುವ ಆದಾಯ ಮತ್ತು ಸಂಪತ್ತು ಬಡವ–ಬಲ್ಲಿದ, ನಗರ–ಗ್ರಾಮೀಣ ಎಂಬ ಯಾವುದೇ ತಾರತಮ್ಯವಿಲ್ಲದೆ ಸಮಾಜದ ಎಲ್ಲ ಜನರಲ್ಲಿ ಆದಷ್ಟು ಸಮಾನವಾಗಿ ಹಂಚಿಕೆಯಾಗ ಬೇಕಾಗುತ್ತದೆ. ಇದನ್ನೇ ....ಎನ್ನುತ್ತಾರೆ.
ಎ) ಆರ್ಥಿಕ ಅಸ್ಥಿರತೆ ಬಿ) ಸಾಮಾಜಿಕ ನ್ಯಾಯ
ಸಿ) ಸಾಮಾಜಿಕ ಸಂಘರ್ಷ ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:–(ಬಿ) ಸಾಮಾಜಿಕ ನ್ಯಾಯ

6) ಸಂವಿಧಾನದ .... ವಿಧಿಯ ಅಸ್ಪೃಶ್ಯತಾ ಆಚರಣೆಯ ಒಂದು ಶಿಕ್ಷಾರ್ಹ ಅಪರಾಧ ಎಂದಿದೆ.
ಎ) 11ನೇಯ ವಿಧಿ ಬಿ) 17ನೇಯ ವಿಧಿ
ಸಿ) 13ನೇಯ ವಿಧಿ ಡಿ) 15ನೇಯ ವಿಧಿ
ಉತ್ತರ: (ಬಿ) 17ನೇಯ ವಿಧಿ

7) ಹಸಿರು ಕ್ರಾಂತಿಯನ್ನು ಆಹಾರ ಧಾನ್ಯಗಳ ಉತ್ಪಾದನೆ ಮಾಡಲಾಗಿತ್ತು, ಹಾಗಾದರೆ ನೀಲಿ ಕ್ರಾಂತಿ ಯಾವುದಕ್ಕಾಗಿ ಮಾಡಲಾಗಿತ್ತು?
ಎ) ಮೊಟ್ಟೆಗಳ ಉತ್ಪಾದನೆ ಬಿ) ಎಣ್ಣೆ ಬೀಜಗಳ ಉತ್ಪಾದನೆ
ಸಿ) ಮೀನುಗಳ ಉತ್ಪಾದನೆ ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– (ಸಿ) ಮೀನುಗಳ ಉತ್ಪಾದನೆ

8) ಬಂಗಾಲದಲ್ಲಿ ದ್ವಿ ಸರ್ಕಾರ ಪದ್ಧತಿ ಜಾರಿಗೆ ತಂದವನು ಯಾರು?
ಎ) ರಾಬರ್ಟ್ ಕ್ಲೈವ್ ಬಿ) ಡೂಪ್ಲೆ
ಸಿ) ವಾಸ್ಕೋಡಿಗಾಮ ಡಿ) ಮೇಲಿನ ಯಾರೂ ಅಲ್ಲ
ಉತ್ತರ:– (ಎ) ರಾಬರ್ಟ್ ಕ್ಲೈವ್

9) ಬಕ್ಸಾರ್ ಕದನದಲ್ಲಿ ಮೊಘಲ್ ಚಕ್ರವರ್ತಿ ಷಾ ಅಲಂ, ಔಧ್‌ನ ನವಾಬ ಷೂಜ ಉದ್ದೌಲ ಮತ್ತು ಮೀರ್‌ಖಾಸಿಮರ ತ್ರಿಮೈತ್ರಿಕೂಟದ ಸೈನ್ಯವು ಇಂಗ್ಲಿಷರ ವಿರುದ್ಧ ಹೋರಾಡಿ ಸೋತಿತು. ಈ ಘಟನೆ ನಡೆದ ವರ್ಷ ಯಾವುದು?
ಎ) 1734 ಬಿ) 1526
ಸಿ) 1764 ಡಿ) 1943
ಉತ್ತರ:– (ಸಿ) 1764

10) ವಾರ್ಷಿಕವಾಗಿ ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು 'ಅಪರಾಧ ತೆರಿಗೆ' ಎಂದು ತೀಕ್ಷ್ಣವಾಗಿಯೇ ಟೀಕಿಸಿದವನು. ಯಾರು?
ಎ) ಜೋಜೋ ಮೆಥ್ಯೂ ಬಿ) ರೋಜ್ ಮೇರಿ
ಸಿ) ಲಾರ್ಡ್ ಮೆಕಾಲೆ ಡಿ) ಎಡ್ಮಂಡ್ ಬರ್ಕ್
ಉತ್ತರ:– (ಡಿ) ಎಡ್ಮಂಡ್ ಬರ್ಕ್

11) ಬಂಗಾಳ, ಮುಂಬಯಿ ಮತ್ತು ಮದರಾಸು ಪ್ರೆಸಿಡೆನ್ಸಿಗಳು. ಪ್ರತ್ಯೇಕವಾಗಿಯೂ ಮತ್ತು ಸ್ವತಂತ್ರವಾಗಿಯೂ ಕಾರ್ಯ ನಿರ್ವಹಿಸುತ್ತಿದ್ದವು. .... ಕಾಯ್ದೆಯ ಪ್ರಕಾರ ಬಂಗಾಳದ ಪ್ರೆಸಿಡೆನ್ಸಿಯು ಉಳಿದ ಎರಡು ಪ್ರೆಸಿಡೆನ್ಸಿಗಳ ಮೇಲೆ ಅಧಿಕಾರವನ್ನು ಪಡೆಯಿತು.
ಎ) 1773ರ ರೆಗ್ಯುಲೇಟಿಂಗ್ ಕಾಯ್ದೆ
ಬಿ) 1784ರ ಪಿಟ್ಸ್ ಇಂಡಿಯಾ ಕಾಯ್ದೆ
ಸಿ) 1833ರ ಚಾರ್ಟರ್ ಕಾಯ್ದೆ:
ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– (ಎ) 1773ರ ರೆಗ್ಯುಲೇಟಿಂಗ್ ಕಾಯ್ದೆ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

12) ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳು ಎಲ್ಲಿ ಕಂಡು ಬರುತ್ತದೆ?
ಉತ್ತರ:– ಇಂಥ ಸಸ್ಯವರ್ಗವು 60–75 ಸೆಂ.ಮೀ. ವಾರ್ಷಿಕ ಮಳೆ ಬೀಳುವ ಭಾಗಗಳಲ್ಲಿ ಕಂಡುಬರುತ್ತದೆ.

13) ಗಂಗಾ ಮುಖಜ ಭೂಮಿಯನ್ನು 'ಸುಂದರ ಬನ' ಎಂದು ಕರೆಯಲಾಗಿದೆ. ಏಕೆ?
ಉತ್ತರ:– ಗಂಗಾ ನದಿಮುಖಜ ಭೂಮಿಯಲ್ಲಿರುವ ಮ್ಯಾಂಗ್ರೋವ್ ಕಾಡುಗಳಲ್ಲಿ ಸುಂದರಿ ಎಂಬ ಮರ ವ್ಯಾಪಕವಾಗಿ ಹಂಚಿಕೆಯಾಗಿದೆ ಹೀಗಾಗಿ ಈ ಮುಖಜ ಭೂಮಿಯನ್ನು 'ಸುಂದರ ಬನ' ಎಂದು ಕರೆಯಲಾಗಿದೆ.

14) ಉತ್ಸಾಹಿ ಕೃಷಿಕರು ಅಳವಡಿಸಿಕೊಂಡ ಪರಿಸರ ಸ್ನೇಹಿ ಕೃಷಿ ವಿಧಾನವನ್ನು ತಿಳಿಸಿ
ಉತ್ತರ:– ಕೆಲವು ಉತ್ಸಾಹಿ ರೈತರು ಸಾವಯವ ಕೃಷಿ, ಶೂನ್ಯ ಬಂಡವಾಳ ಕೃಷಿ ಮುಂತಾದ ಪರಿಸರ ಸ್ನೇಹಿ ಹಾಗೂ ಸುಸ್ಥಿರ ಕೃಷಿ ವಿಧಾನಗಳನ್ನು ಅಳವಡಿಸಿಕೊಂಡು ಅನುಕೂಲ ಪಡೆಯುತ್ತಿದ್ದಾರೆ.

14) ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವು ಯಾವುವು?
ಉತ್ತರ:– ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವುಗಳೆಂದರೆ ; **'ದಿವಾನಿ ಅದಾಲತ್'** ಎಂಬ ನಾಗರಿಕ ನ್ಯಾಯಾಲಯಗಳು ಮತ್ತು **'ಫೌಜದಾರಿ ಅದಾಲತ್'** ಎಂಬ ಅಪರಾಧ ನ್ಯಾಯಾಲಯಗಳು.

15) ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ ವ್ಯತ್ಯಾಸಗಳನ್ನು ತಿಳಿಸಿ. *(ಮುಂದುವರಿಯುವುದು)*

II PUC PHYSICS

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MODEL QUESTIONS

MODEL QUESTIONS

Answer the following questions:-

1. Write an expression for refractive index of the material of prism in terms of its angle and minimum deviation. Does it hold good for all positions?
2. What is interference of light? Give an example.
3. Give two differences between Fresnel diffraction and Fraunhofer diffraction.
4. What are meant by 'electric dipole' and 'electric dipole moment'?
5. Two capacitors of capacitance 3 μF and 6μF are connected in series. Calculate their effective capacitance.
6. State Kirchoffs laws of electrical network.
7. Define the terms 'Declination' and 'Inclination' at a place.
8. What is the nature of force between two long straight parallel conductors, when they carry currents in the –
(i) Same direction and
(ii) Opposite direction?
9. What is transformer? Give the principle of a transformer.
10. Name any two types of electron emission.
11. Obtain an expression for de Broglie wavelength of a photon.
12. What are liquid crystals? Give one of its applications.

Answers:-

1. An expression for refractive index of the material of prism in terms of its angle and minimum deviation is –

$$n = \frac{\sin\frac{(A+\delta_m)}{2}}{\sin\frac{A}{2}}$$

where, n is the refractive index of the material of prism,

δ_m is the minimum deviation position

A is angle of the prism

It does not hold good for all positions.

2. Interference of light is the phenomenon of redistribution of light energy due to the superposition of light waves from two coherent sources. Eg:- The Soap bubbles appear coloured in sunlight due to the interference of light reflected from the soap bubble.

3. Two differences between Fresnel diffraction and Fraunhofer diffraction are -

Fraunhofer diffraction: 1) the source of light and screen are placed at infinite distance from obstacle.

2) In this case parallel rays and plane wavefronts are produced using lens.

4. A pair of two equal and opposite charges separated by certain distance is called an electric dipole.

Electric dipole moment of an electric dipole is defined as the product of the magnitude of either charge of the electric dipole and the dipole length.

5) To calculate the effective capacitance of two capacitors of capacitance 3 μF and 6μF are connected in series.

We know that the two capacitors C_1 and C_2 are connected in series then effective capacitance is given by –

$$\frac{1}{C} = \frac{1}{C_1} + \frac{1}{C_2} \Rightarrow C = \frac{C_1C_2}{C_1 + C_2}$$

Given, $C_1 = 3\ \mu F$ and $C_2 = 6\ \mu F$

$$\therefore\ C = \frac{C_1C_2}{C_1 + C_2} = \frac{3 \times 2}{3 + 2} = \frac{6}{5} = 1.2\mu\ F$$

6) Kirchoffs laws of electrical network

Kirchoffs First law (The junction Law or Kirchoffs Current Law) states that – the sum of all the currents entering any point (or junction) must be equal to the sum of all currents leaving that point (junction).

Kirchoffs Second law (The Loop Law or Kirchoffs Voltage Law) states that – the algebraic sum of all voltages ie., the potential differences across all elements and e.m.fs of all sources in any closed electrical circuit is zero.

7) Declination

The magnetic declination at a place is defined as the angle between geographic meridian and magnetic meridian at that place.

Inclination

The magnetic inclination or dip at a place is the angle between the direction of the total intensity of magnetic field of the earth and a horizontal line in the magnetic meridian.

8) The nature of force between two long straight parallel conductors, when they carry currents in the –

(i) Same direction – they attract each other
(ii) Opposite direction – they repel each other

9) A transformer is an electrical device that transfers energy between two or more circuits through electromagnetic induction.

It works on the principle of a transformer of Faradays law of electromagnetic induction.

10) Two types of electron emission are -
a) Thermionic emission
b) Photoelectric emission

11) An expression for de Broglie wavelength of a photon.

$$\lambda = \frac{h}{mv}$$

12) Liquid crystals (LCs) are matter in a state that has properties between those of conventional liquid and those of solid crystal.

Application - It is used in Optical Imaging.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಖಾಸಗಿ ಕ್ಲಿನಿಕ್ ಆರಂಭಿಸುವ ಮುನ್ನ ನೋಂದಣಿ ಕಡ್ಡಾಯ: ರಾಜ್ಯ ಸರ್ಕಾರದ ನಿರ್ಧಾರ ಎತ್ತಿ ಹಿಡಿದ ಹೈಕೋರ್ಟ್

ಸಿಎಂಎಸ್ ಡಿಪ್ಲೊಮಾ: ವೈದ್ಯ ವೃತ್ತಿಗೆ ಅನರ್ಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮುದಾಯ ವೈದ್ಯಕೀಯ ಸೇವೆ ಮತ್ತು ಅವಶ್ಯಕ ಔಷಧಿಗಳು (ಸಿಎಂಎಸ್-ಇಡಿ) ವಿಷಯದಲ್ಲಿ ಡಿಪ್ಲೊಮಾ ಪಡೆದವರನ್ನು ವೈದ್ಯರು ಎಂದು ಪರಿಗಣಿಸಲು ಸಾಧ್ಯವಿಲ್ಲ’ ಎಂಬ ಸರ್ಕಾರದ ಕ್ರಮವನ್ನು ಎತ್ತಿ ಹಿಡಿದಿರುವ ಹೈಕೋರ್ಟ್, ‘ಅರ್ಹತೆ ಇಲ್ಲದೇ ಇದ್ದರೂ, ವೈದ್ಯರು ಎಂದು ಹೇಳಿಕೊಂಡು ಗ್ರಾಮೀಣ ಭಾಗಗಳಲ್ಲಿ ಜನರನ್ನು ವಂಚಿಸುತ್ತಿರುವವರ ಪ್ರವೃತ್ತಿಗೆ ಅಂತ್ಯ ಹಾಡಬೇಕಿದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಈ ಸಂಬಂಧ ಕೋಲಾರ ಜಿಲ್ಲೆಯ ಕೆಜಿಎಫ್‌ನ ಅಣ್ಣಯ್ಯ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಅರ್ಜಿದಾರರ ವಿದ್ಯಾಭ್ಯಾಸವು ಕೆಪಿಎಂಎ (ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥಾಪನಾ ಕಾಯ್ದೆ) ಕಲಂ 2(ಕೆ)ಗೆ ಅನ್ವಯ ಆಗುವುದಿಲ್ಲ. ಹೀಗಾಗಿ, ಅರ್ಜಿದಾರರು ವೈದರಲ್ಲ. ಆದ್ದರಿಂದ, ಅವರು ವೈದ್ಯಕೀಯ ಸೇವೆ ಸಲ್ಲಿಸಲು ಅನುಮತಿ ನೀಡುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿರುವ ಸರ್ಕಾರದ ನಿರ್ಧಾರ ಸಮಂಜಸವಾಗಿದೆ’ ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಪ್ರಕರಣವೇನು?: ಅರ್ಜಿದಾರರು ಸಿಎಂಎಸ್-ಇಡಿ ಪೂರ್ಣಗೊಳಿಸಿ, ನವದೆಹಲಿಯಲ್ಲಿ ಅರೆ ವೈದ್ಯಕೀಯ ಕೋರ್ಸ್ ತರಬೇತಿ ಪಡೆದಿದ್ದು, ಮುಂಬೈನಲ್ಲಿರುವ ಅರೆ ವೈದ್ಯಕೀಯ ಶಿಕ್ಷಣ ಮಂಡಳಿಯಿಂದ ಪ್ರಮಾಣ ಪತ್ರ ಪಡೆದಿದ್ದಾರೆ. ಈ ಪ್ರಮಾಣ ಪತ್ರದ ಆಧಾರದಡಿ ಬಂಗಾರಪೇಟೆ ತಾಲ್ಲೂಕಿನ ಕೆಜಿಎಫ್‌ನ ಮಿನಿ ಇಬ್ರಾಹಿಂ ರಸ್ತೆಯಲ್ಲಿ ‘ಸಂಗೀತಾ ಕ್ಲಿನಿಕ್’ ಹೆಸರಿನಲ್ಲಿ ಕ್ಲಿನಿಕ್ ಆರಂಭಿಸಿ ಹಲವು ವರ್ಷಗಳಿಂದ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದರು.

‘ಖಾಸಗಿಯಾಗಿ ವೈದ್ಯಕೀಯ ಸೇವೆ ಸಲ್ಲಿಸುವವರು ರಾಜ್ಯದಲ್ಲಿ 2008ರ ಜನವರಿ 23ರಿಂದ ಜಾರಿಗೆ ಬಂದಿರುವ, ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ–2007ರ ಅನುಸಾರ ಅರ್ಜಿ ಸಲ್ಲಿಸಿ ನೋಂದಣಿ ಮಾಡಿಸಿಕೊಂಡ ಬಳಿಕವೇ ಸೇವೆ ಮುಂದುವರೆಸಬೇಕು’ ಎಂದು ಸರ್ಕಾರ ಪ್ರಕಟಿಸಿತ್ತು. ಇದರನ್ವಯ ಅರ್ಜಿದಾರರು ತಮ್ಮ ಕ್ಲಿನಿಕ್ ನೋಂದಣಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಆದರೆ, ಸಕ್ಷಮ ಪ್ರಾಧಿಕಾರ ಈ ಅರ್ಜಿಯನ್ನು ತಿರಸ್ಕರಿಸಿ ಹಿಂಬರಹ ನೀಡಿತ್ತು. ಈ ಹಿಂಬರಹ ಪ್ರಶ್ನಿಸಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಮುಖ್ಯಾಂಶಗಳು

- ಕೆಜಿಎಫ್‌ನ ಅಣ್ಣಯ್ಯ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ. ನಾಗಪ್ರಸನ್ನ
- ಜನರನ್ನು ವಂಚಿಸುತ್ತಿರುವವರ ಪ್ರವೃತ್ತಿಗೆ ಅಂತ್ಯ ಹಾಡಬೇಕಿದೆ: ನ್ಯಾಯಪೀಠ
- ಕೆಪಿಎಂಎ ಪ್ರಕಾರ ವಿದ್ಯಾಭ್ಯಾಸ ಪೂರೈಸಿದವರು ಮಾತ್ರ ವೈದ್ಯರು

‘ಗ್ರ್ಯಾಚ್ಯುಟಿಗೆ ದಿನಗುತ್ತಿಗೆ ಅವಧಿಯೂ ಅರ್ಹ’

ಬೆಂಗಳೂರು: ‘ಸರ್ಕಾರಿ ಸೇವೆ ಕಾಯಂಗೊಳ್ಳುವುದಕ್ಕೂ ಮುನ್ನ ಉದ್ಯೋಗಿಯು ದಿನಗುತ್ತಿಗೆ ಆಧಾರದಡಿ ಕಾರ್ಯನಿರ್ವಹಿಸುತ್ತಿದ್ದರೆ ಅಂತಹ ಅವಧಿಗೂ ಗ್ರ್ಯಾಚ್ಯುಟಿ ಪಾವತಿಸಬೇಕು’ ಎಂದು ಹೈಕೋರ್ಟ್ ಆದೇಶಿಸಿದೆ.

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಸರ್ಕಾರಿ ಶಾಲೆಯ ನಿವೃತ್ತ ಶಿಕ್ಷಕ ಬಸವೇಗೌಡ (75) ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಗ್ರ್ಯಾಚ್ಯುಟಿ ಪಾವತಿ ಕಾಯ್ದೆ–1972ರ ಅನುಸಾರ ಕಾಯಂ ನೌಕರ ಮತ್ತು ಗುತ್ತಿಗೆ ಅಡಿ ಕಾರ್ಯ ನಿರ್ವಹಿಸುವ ಸರ್ಕಾರಿ ನೌಕರನ ಮಧ್ಯೆ ಯಾವುದೇ ವ್ಯತ್ಯಾಸವಿಲ್ಲ. ಹೀಗಾಗಿ, ಅರ್ಜಿದಾರರಿಗೆ ನಾಲ್ಕು ವಾರಗಳಲ್ಲಿ ಬಾಕಿ ಗ್ರ್ಯಾಚ್ಯುಟಿ ಹಣಕ್ಕೆ ₹ 50 ಸಾವಿರ ವ್ಯಾಜ್ಯದ ವೆಚ್ಚವೂ ಸೇರಿದಂತೆ ಒಟ್ಟು ₹ 2.44 ಲಕ್ಷ ಪಾವತಿ ಮಾಡಬೇಕು’ ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಪ್ರಕರಣವೇನು?: ಅರ್ಜಿದಾರರು ಮಂಡ್ಯ ಜಿಲ್ಲೆಯ ಜಿ.ಮಲ್ಲಿಗೆರೆ ಸರ್ಕಾರಿ ಪ್ರೌಢಶಾಲೆಯಲ್ಲಿ ದಿನಗುತ್ತಿಗೆ ಆಧಾರದಡಿ ‘ಡಿ’ ದರ್ಜೆ ಉದ್ಯೋಗಿಯಾಗಿ 1971ರಲ್ಲಿ ನೇಮಕಗೊಂಡಿದ್ದರು. ಸರ್ಕಾರ ಅವರ ಸೇವೆಯನ್ನು 1990 ರಲ್ಲಿ ಕಾಯಂಗೊಳಿಸಿ ಶಿಕ್ಷಕ ಹುದ್ದೆ ನೀಡಿತ್ತು. ಅವರು 2013ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದ್ದರು.

ಸೇವೆ ಕಾಯಂ ಆದ ದಿನದಿಂದ ಅಂದರೆ, 1990 ರಿಂದ 2013ರ ಮಧ್ಯದ ಅವಧಿಯನ್ನು ಮಾತ್ರವೇ ಪರಿಗಣಿಸಿದ್ದ ಸರ್ಕಾರ ₹ 1.92 ಲಕ್ಷ ಗ್ರ್ಯಾಚ್ಯುಟಿ ಪಾವತಿ ಮಾಡಿತ್ತು. ಸೇವೆ ಕಾಯಂಗೊಳ್ಳುವುದಕ್ಕೂ ಮೊದಲಿನ ಅಂದರೆ 1971ರಿಂದ 1999ರ ಮಧ್ಯದಲ್ಲಿ ಮಾಡಿದ ದಿನಗುತ್ತಿಗೆ ಆಧಾರದಡಿ ಕೆಲಸಕ್ಕೆ ಗ್ರ್ಯಾಚ್ಯುಟಿ ಪಾವತಿಸಲು ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಬಸವೇಗೌಡ ಹೈಕೋರ್ಟ್ ಮೆಟ್ಟಿಲೇರಿದ್ದರು.

ಲಂಚ ಬೇಡಿಕೆ ಆರೋಪಕ್ಕೆ ಪುರಾವೆ ಅವಶ್ಯ: ಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಂಚಕ್ಕೆ ಬೇಡಿಕೆ ಇರಿಸಿದ ಆರೋಪಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಅಧಿಕಾರಿಗಳ ಮೇಲೆ ದಾಳಿ ನಡೆಸುವ ವೇಳೆ ಹಣಕ್ಕಾಗಿ ಬೇಡಿಕೆ ಇಟ್ಟಿರುವ ಮತ್ತು ಲಂಚ ಪಡೆದಿರುವ ಕುರಿತಂತೆ ಸೂಕ್ತ ಪುರಾವೆಗಳನ್ನು ಹೊಂದಿರಬೇಕಾದ್ದು ಅತ್ಯಗತ್ಯ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

‘ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ದಾಖಲಿಸಲಾಗಿರುವ ನನ್ನ ವಿರುದ್ಧದ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಗದಗ ನಿವೃತ್ತ ಸಬ್ ರಿಜಿಸ್ಟ್ರಾರ್ ಶ್ರೀಕಾಂತ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಸೂಕ್ತ ದಾಖಲೆಗಳೇ ಇಲ್ಲದ ಈ ಪ್ರಕರಣದ ವಿಚಾರಣೆ ಮುಂದುವರೆಸಿದಲ್ಲಿ ಕಾನೂನಿನ ದುರ್ಬಳಕೆಯಾಗಲಿದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿ, ಅರ್ಜಿದಾರರ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ರದ್ದುಪಡಿಸಿದೆ.

ಪ್ರಕರಣವೇನು?: ‘ಗದಗ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ’ ಎಂದು ಆರೋಪಿಸಿ 2019 ರಲ್ಲಿ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಅನಾಮಧೇಯ ದೂರೊಂದು ಸಲ್ಲಿಕೆಯಾಗಿತ್ತು. ದೂರು ದಾಖಲಿಸಿಕೊಂಡಿದ್ದ ಎಸಿಬಿ ದಾಳಿ ನಡೆಸಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯವು 2021ರಲ್ಲಿ ಸಂಜ್ಞೇಯ ಅಪರಾಧ ಎಂದು ಪರಿಗಣಿಸಿದ್ದನ್ನು ಪ್ರಶ್ನಿಸಿ ಶ್ರೀಕಾಂತ್ ಹೈಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಆರೋಪಿಯಿಂದ ವಶಪಡಿಸಿಕೊಳ್ಳಲಾದ ಹಣ ಲಂಚದ್ದೇ ಎಂಬುದಕ್ಕೆ ಸೂಕ್ತ ಪುರಾವೆಗಳಿಲ್ಲ’ ಎಂದು ಪ್ರತಿಪಾದಿಸಿದ್ದರು.

‘ಬಂಧನದ ವಿರುದ್ಧ ಹೋರಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಉದ್ಘಾಟನೆಯಾಗುತ್ತಿರುವ ಸಮಯದಲ್ಲಿ ಹಿಂದೂ ಸಂಘಟನೆಗಳ ಕಾರ್ಯಕರ್ತರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಬಂಧಿಸುತ್ತಿದೆ. ಇದರ ವಿರುದ್ಧ ಬಿಜೆಪಿ ಹೋರಾಟ ನಡೆಸಲಿದೆ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಎಚ್ಚರಿಕೆ ನೀಡಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಕಾಂಗ್ರೆಸ್ ಮತ್ತೆ ದ್ವೇಷದ ರಾಜಕಾರಣ ಆರಂಭಿಸಿದೆ. ಹಿಂದೆ ಸಿದ್ದರಾಮಯ್ಯ ಸರ್ಕಾರದಿಂದ ಹಿಂದೂ ಸಂಘಟನೆಗಳ ಕಾರ್ಯಕರ್ತರ ಕಗ್ಗೊಲೆಯಾಗಿತ್ತು’ ಎಂದು ದೂರಿದರು.

‘ಶ್ರೀರಾಮ ಮಂದಿರ ಉದ್ಘಾಟನೆಯ ಐತಿಹಾಸಿಕ ಕ್ಷಣಕ್ಕೆ ಜನ ಕಾಯುತ್ತಿದ್ದರೆ ಕಾಂಗ್ರೆಸ್ ಇದನ್ನು ಭಯವೆಂಬಂತೆ ಬಿಂಬಿಸುತ್ತಿದೆ. 30 ವರ್ಷಗಳ ಹಿಂದೆ ರಾಮ ಜನ್ಮಭೂಮಿ ಹೋರಾಟದಲ್ಲಿ ಭಾಗವಹಿಸಿದ ಹುಬ್ಬಳ್ಳಿಯ ಇಬ್ಬರನ್ನು ಹಳೆಯ ಪ್ರಕರಣಗಳ ಸಂಬಂಧ ಜೈಲಿಗೆ ಕಳುಹಿಸಲಾಗಿದೆ. ನಾನು ಕೂಡ ಆಗ ಹೋರಾಟದಲ್ಲಿ ಭಾಗವಹಿಸಿದ್ದೆ. ನನ್ನನ್ನೂ ಬಂಧಿಸುತ್ತೀರಾ?’ ಎಂದರು.

‘ನಾವೂ ರಾಮನ ಭಕ್ತರು’ ಎಂದು ಗೃಹ ಸಚಿವ ಜಿ. ಪರಮೇಶ್ವರ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ಅಶೋಕ, ‘ರಾಮನನ್ನು ಆರಾಧಿಸುವುದಾದರೆ ರಾಮ ನವಮಿ ಮಾಡಬೇಕು. ಕಾಂಗ್ರೆಸ್‌ನವರದ್ದು ಟಿಪ್ಪು ಸಂಸ್ಕೃತಿ. ಸಿದ್ದರಾಮಯ್ಯನವರು ಟಿಪ್ಪು ಜಯಂತಿಯನ್ನು ಸಂಭ್ರಮದಿಂದ ಆಚರಿಸುತ್ತಾರೆ. ಅವರಿಗೆ ಕೇಸರಿ ಕಂಡರೆ ಆಗಲ್ಲ, ನಾಮ ಹಚ್ಚಿದರೆ ಸಮಸ್ಯೆ ಕಂಡುಬರುತ್ತದೆ. ಆದರೆ, ಮಸೀದಿಯಲ್ಲಿ ಟೋಪಿ ಹಾಕಿಕೊಳ್ಳುತ್ತಾರೆ. ಮತಕ್ಕಾಗಿ ಧರ್ಮ, ಜಾತಿ ಒಡೆಯುವುದು ಅವರ ಗುಣ’ ಎಂದರು.

‘ರಾಮ ಭಕ್ತರನ್ನು ಸರ್ಕಾರ ಗುರಿ ಮಾಡಿಲ್ಲ’

ಬೆಂಗಳೂರು: ‘ರಾಜ್ಯದಲ್ಲಿ ಬಾಕಿ ಇರುವ ಎಲ್ಲ ಹಳೆ ಪ್ರಕರಣಗಳನ್ನು ವಿಲೇವಾರಿಗೆ ಸೂಚನೆ ನೀಡಲಾಗಿದೆ. ಹುಬ್ಬಳ್ಳಿಯಲ್ಲಿ 32 ಹಳೆ ಪ್ರಕರಣಗಳಿವೆ. ಅವುಗಳ ಪೈಕಿ ಒಂದು ಪ್ರಕರಣದಲ್ಲಿ ಒಬ್ಬನ ಬಂಧನವಾಗಿದೆ. ಹಾಗೆಂದು, ರಾಮ ಭಕ್ತರನ್ನು ಗುರಿ ಮಾಡಿ ಬಂಧಿಸಲಾಗಿದೆ ಎನ್ನುವುದು ಸರಿಯಲ್ಲ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

‘ರಾಮ ಭಕ್ತರನ್ನು ಸರ್ಕಾರ ಗುರಿ ಮಾಡುತ್ತಿದೆ’ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ‘ವರ್ಷಾನುಗಟ್ಟಲೆಯಿಂದ ಅನೇಕ ಪ್ರಕರಣಗಳನ್ನು ತನಿಖೆ ಮಾಡಿ ಅರ್ಥದಲ್ಲೇ ಇಟ್ಟುಕೊಳ್ಳಲಾಗಿದೆ. ಅಂತಹ ಪ್ರಕರಣಗಳನ್ನು ಮತ್ತೆ ತೆರೆದು ವಿಲೇವಾರಿ ಮಾಡುವಂತೆ ಸೂಚಿಸಲಾಗಿದೆ. ಉದ್ದೇಶಪೂರ್ವಕವಾಗಿ ಯಾವುದೋ ಒಂದು ಪ್ರಕರಣವನ್ನು ತೆರೆದಿಲ್ಲ. ಹಿಂದೂ ಕಾರ್ಯಕರ್ತರೆಂಬ ಕಾರಣಕ್ಕೂ ಮಾಡಿಲ್ಲ. ಇದಕ್ಕೆ ಬಣ್ಣ ಕಟ್ಟುವುದು ಸೂಕ್ತವಲ್ಲ’ ಎಂದರು.

ನಾವು ಕೂಡ ಹಿಂದುಗಳೇ: ‘ನಾವು (ಕಾಂಗ್ರೆಸ್‌ನವರು) ಕೂಡ ಹಿಂದುಗಳೇ. ಬಿಜೆಪಿಯವರಷ್ಟೇ ಹಿಂದುಗಳಲ್ಲ. ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆಗೆ ಹೋಗಬೇಕೊ ಬೇಡವೊ ಎಂಬುದನ್ನು ನಮ್ಮ ಹೈಕಮಾಂಡ್ ತೀರ್ಮಾನಿಸಲಿದೆ’ ಎಂದು ಪರಮೇಶ್ವರ ಹೇಳಿದರು. ‘ಇಂಡಿಯಾ’ದ (ವಿರೋಧ ಪಕ್ಷಗಳ ಮೈತ್ರಿಕೂಟ) ನಾಯಕರು ರಾಮ ಮಂದಿರ ಉದ್ಘಾಟನೆಗೆ ಹೋಗುವ ಬಗ್ಗೆ ದೆಹಲಿ ನಾಯಕರು ತೀರ್ಮಾನಿಸುತ್ತಾರೆ’ ಎಂದರು.

1992ರ ಗಲಭೆ ಪ್ರಕರಣದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಗರದ ಶಹರ ಠಾಣಾ ವ್ಯಾಪ್ತಿಯಲ್ಲಿ 1992ರಲ್ಲಿ ನಡೆದ ಗಲಭೆ ಪ್ರಕರಣಕ್ಕೆ ಸಂಬಂಧಿಸಿ ಸ್ಥಳೀಯ ನಿವಾಸಿ ಶ್ರೀಕಾಂತ ಪೂಜಾರಿ ಅವರನ್ನು ಪೊಲೀಸರು ಬಂಧಿಸಿ, ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ.

ರಾಮಜನ್ಮ ಭೂಮಿ ಹೋರಾಟದ ಸಂದರ್ಭದಲ್ಲಿ ನಗರದ ಕೆಲವೆಡೆ ಗಲಭೆ ನಡೆದಿದ್ದವು. ಅದಕ್ಕೆ ಸಂಬಂಧಿಸಿ ಶ್ರೀಕಾಂತ ಪೂಜಾರಿ, ರಾಜು ಧರ್ಮದಾಸ, ಅಶೋಕ ಕಲಬುರ್ಗಿ, ಷಣ್ಮುಖ ಕಾಟಗಾರ, ಗುರುನಾಥ ಕಾಟಗಾರ, ರಾಮಚಂದ್ರ ಕಲಬುರ್ಗಿ, ಅಮೃತ ಕಲಬುರ್ಗಿ ಸೇರಿ ಕೆಲವರ ವಿರುದ್ಧ ಪ್ರಕರಣ ದಾಖಲಾಗಿತ್ತು.

ಇದರ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಪೊಲೀಸ್ ಕಮಿಷನರ್ ರೇಣುಕಾ ಸುಕುಮಾರ, ‘ತಲೆ ಮರೆಸಿಕೊಂಡ ಆರೋಪಿಯನ್ನು ಪತ್ತೆ ಮಾಡುವುದು ಪೊಲೀಸರ ನಿರಂತರ ಕಾರ್ಯ. ರಾಮಜನ್ಮಭೂಮಿ ಹೋರಾಟಕ್ಕೂ ಮತ್ತು ಆರೋಪಿ ಬಂಧನಕ್ಕೂ ತಾಳೆ ಹಾಕುವುದು ಸರಿಯಲ್ಲ’ ಎಂದರು.

‘ಆರೋಪಿಗಳು ಪತ್ತೆಯಾಗದಿದ್ದಾಗ ಕೋರ್ಟ್‌ನಲ್ಲಿ ಪ್ರಕರಣ ಯಥಾರೀತಿ ಇರುತ್ತದೆ. ಹಳೆಯ ಪ್ರಕರಣಗಳ ಆರೋಪಿ ಪತ್ತೆಗೆ ವಿಶೇಷ ತಂಡ ರಚಿಸಲಾಗುತ್ತದೆ. ಆರೋಪಿಗಳ ಮಾಹಿತಿ ಸಂಗ್ರಹಣೆ ಜೊತೆಗೆ ಕಾರ್ಯಾಚರಣೆ ನಡೆಯುತ್ತದೆ. 30 ರಿಂದ 40 ವರ್ಷಗಳಿಂದ ತಲೆ ಮರೆಸಿಕೊಂಡಿದ್ದ 37 ಪ್ರಕರಣಗಳ ಆರೋಪಿಗಳನ್ನು ಎರಡು ತಿಂಗಳ ಅವಧಿಯಲ್ಲಿ ಪತ್ತೆ ಮಾಡಿದ್ದೇವೆ. ಅವುಗಳಲ್ಲಿ 1992ರಲ್ಲಿ ನಡೆದ ಗಲಭೆ ಪ್ರಕರಣದ ಆರೋಪಿಯೂ ಒಬ್ಬರು’ ಎಂದರು.

‘1992ರ ಗಲಭೆಗೆ ಸಂಬಂಧಿಸಿ 13 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ. ಅವರಲ್ಲಿ 8 ಮಂದಿ ಬಂಧನವಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ಮೂವರು ಮೃತಪಟ್ಟಿದ್ದಾರೆ. ಉಳಿದವರು ತಲೆಮರೆಸಿಕೊಂಡಿದ್ದರು. ಇದು ಕೂಡ ದೀರ್ಘಾವಧಿಯಿಂದ ಬಾಕಿ ಉಳಿದ ಪ್ರಕರಣವೇ. ವಿಶೇಷ ವಿಶ್ಲೇಷಣೆ ಮಾಡುವುದು ಸರಿಯಲ್ಲ’ ಎಂದು ಅವರು ಹೇಳಿದರು.

‘ಕಾಂಗ್ರೆಸ್‌ನಿಂದ ಅಲ್ಪಸಂಖ್ಯಾತರ ತುಷ್ಟೀಕರಣ’

ಹುಬ್ಬಳ್ಳಿ: ‘1992ರ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀಕಾಂತ ಪೂಜಾರಿ ಅವರನ್ನು ಬಂಧಿಸಿದ್ದು ಖಂಡನೀಯ. ಅಲ್ಪಸಂಖ್ಯಾತರ ತುಷ್ಟೀಕರಣದ ಪರಮೋಚ್ಚ ಹಂತಕ್ಕೆ ಕಾಂಗ್ರೆಸ್ ತಲುಪಿದೆ’ ಎಂದು ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರದ ಬಿಜೆಪಿ ಶಾಸಕ ಮಹೇಶ ಟೆಂಗಿನಕಾಯಿ ಅಸಮಾಧಾನ ವ್ಯಕ್ತಪಡಿಸಿದರು.

‘ಅಯೋಧ್ಯೆಯಲ್ಲಿ ರಾಮನ ಮೂರ್ತಿ ಪ್ರತಿಷ್ಠಾಪನೆ ನಡೆದಿದೆ. ಹಿಂದೂ ಸಮಾಜ ಸಂಭ್ರಮದಲ್ಲಿದೆ. ಆದರೆ, ಈ ಸಂದರ್ಭದಲ್ಲಿ 31 ವರ್ಷದ ಹಿಂದಿನ ಪ್ರಕರಣಕ್ಕೆ ಮರುಜೀವ ನೀಡಲಾಗಿದೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘31 ವರ್ಷಗಳ ಅವಧಿಯಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಏಕೆ ಬಂಧಿಸಲಿಲ್ಲ? ಹಳೆಯ ಪ್ರಕರಣಕ್ಕೆ ಈಗ ಮರುಜೀವ ನೀಡುವ ಹಿಂದಿನ ಉದ್ದೇಶವೇನು? ರಾಮ ಮೂರ್ತಿ ಪ್ರತಿಷ್ಠಾಪನೆಗೆ ನಿಮ್ಮ ಸಹಮತ ಇಲ್ಲವೇ’ ಎಂದು ಅವರು ಪ್ರಶ್ನಿಸಿದರು.

ಪೊಲೀಸ್ ಠಾಣೆ ಎದುರು ಧರಣಿ

ಹುಬ್ಬಳ್ಳಿಯ ಶಹರ ಪೊಲೀಸ್ ಠಾಣೆ ಆವರಣದಲ್ಲಿ ಜಮಾಯಿಸಿದ್ದ ವಿಶ್ವಹಿಂದೂ ಪರಿಷತ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ಹುಬ್ಬಳ್ಳಿ: ಬಂಧನದ ವಿಷಯ ಖಂಡಿಸಿ ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ಶಹರ ಪೊಲೀಸ್ ಠಾಣೆ ಆವರಣದಲ್ಲಿ ಸೋಮವಾರ ಸಂಜೆ ಪ್ರತಿಭಟನೆ ನಡೆಸಿದರು. ಪೊಲೀಸರು ಹಾಗೂ ಕಾಂಗ್ರೆಸ್ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಡಿಸಿಪಿ ರಾಜೀವ.ಎಂ ಮತ್ತು ಎಸಿಪಿ ಬಲ್ಲಪ್ಪ ನಂದಗಾವಿ ಅವರು ಕಾರ್ಯಕರ್ತರ ಮನವೊಲಿಸಲು ಪ್ರಯತ್ನಿಸಿರು. ‘ಇನ್‌ಸ್ಪೆಕ್ಟರ್ ಎಂ.ಎಂ. ತಹಶೀಲ್ದಾರ್ ಅವರು ಸ್ಥಳಕ್ಕೆ ಬರುವವರೆಗೂ ಕದಲುವುದಿಲ್ಲ. ಅಹೋರಾತ್ರಿ ಪ್ರತಿಭಟನೆ ನಡೆಸುತ್ತೇವೆ’ ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದರು.

ವಿಶ್ವ ಹಿಂದೂ ಪರಿಷತ್ ಮುಖಂಡ ಸಂಜಯ ಬಡಸ್ಕರ, ‘ನೋಟಿಸ್ ನೀಡದೆ ಬಂಧಿಸಿದ್ದು ಏಕೆ? ಬಂಧಿತ ವ್ಯಕ್ತಿ ದುರ್ಗದಬೈಲ್ ಪ್ರದೇಶದಲ್ಲೇ ಆಟೊ ಓಡಿಸಿಕೊಂಡಿದ್ದರು. ಇಷ್ಟು ವರ್ಷ ಸುಮ್ಮನಿದ್ದು, ಈ ಸಂದರ್ಭದಲ್ಲಿ ಬಂಧಿಸಿದ್ದು ಎಷ್ಟು ಸರಿ’ ಎಂದು ಪ್ರಶ್ನಿಸಿದರು.

ಕೋವಿಡ್: 296 ಪ್ರಕರಣ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸೋಮವಾರ 296 ಕೋವಿಡ್ ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ. ಒಬ್ಬರು ಮೃತಪಟ್ಟಿದ್ದಾರೆ.

24 ಗಂಟೆಗಳ ಅವಧಿಯಲ್ಲಿ 5,021 ಪರೀಕ್ಷೆಗಳನ್ನು ನಡೆಸಲಾಗಿದೆ. ಶೇ 5.89ರಷ್ಟು ಮಂದಿಯಲ್ಲಿ ಸೋಂಕು ಇರುವುದು ದೃಢಪಟ್ಟಿದೆ. 1,245 ಸಕ್ರಿಯ ಪ್ರಕರಣಗಳಲ್ಲಿ 1,179 ಮಂದಿ ಮನೆ ಆರೈಕೆಗೆ ಒಳಗಾಗಿದ್ದಾರೆ. 66 ಮಂದಿ ಆಸ್ಪತ್ರೆಗೆ ದಾಖಲಾಗಿದ್ದು, ಅದರಲ್ಲಿ 20 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸೋಂಕಿತರಲ್ಲಿ 50 ಮಂದಿ ಚೇತರಿಸಿಕೊಂಡಿದ್ದಾರೆ.

ಡಿ.15 ರಿಂದ ಈವರೆಗೆ ರಾಜ್ಯದಲ್ಲಿ 601 ಮಾದರಿಗಳನ್ನು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆ (ಜಿನೋಮಿಕ್ ಸಿಕ್ವೆನ್ಸಿಸ್) ಪರೀಕ್ಷೆಗೆ ಕಳುಹಿಸಲಾಗಿದೆ. ಅವುಗಳಲ್ಲಿ ಈವರೆಗೆ 262 ಮಾದರಿಗಳ ಫಲಿತಾಂಶ ಬಂದಿದೆ. ಇವುಗಳಲ್ಲಿ 199 ಮಾದರಿಗಳಲ್ಲಿ ಜೆಎನ್.1, 28 ಮಾದರಿಗಳಲ್ಲಿ ಎಕ್ಸ್‌ಬಿಬಿ ಹಾಗೂ 35 ಮಾದರಿಗಳಲ್ಲಿ ಕೊರೊನಾ ವೈರಾಣುವಿನ ಇತರ ರೂಪಾಂತರಿ ತಳಿಗಳು ಪತ್ತೆಯಾಗಿವೆ.

‘ಖಾಲಿ’ ಕೊಡ ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ವಾಗಣಗೇರಿ ಗ್ರಾಮದಲ್ಲಿ ನೀರಿನ ಸಮಸ್ಯೆಯಿಂದಾಗಿ ಕೊಡಗಳನ್ನು ತಳ್ಳುವ ಗಾಡಿಯಲ್ಲಿ ನೀರಿನ ಟ್ಯಾಂಕ್ ಬಳಿ ಸಾಲಾಗಿ ಇಟ್ಟಿರುವುದು
–ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ರಾಜ್ಯಕ್ಕೆ 30,000 ಡೋಸ್ ಕೋರ್ಬಿವ್ಯಾಕ್ಸ್ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಶೀಲ್ಡ್ ಅಥವಾ ಕೊವಾಕ್ಸಿನ್ 2ನೇ ಲಸಿಕೆ ಪಡೆದವರಿಗೆ ನೀಡಲು ಕೇಂದ್ರ ಸರ್ಕಾರವು ರಾಜ್ಯಕ್ಕೆ 30,000 ಡೋಸ್ ಕೋರ್ಬಿವ್ಯಾಕ್ಸ್ ಲಸಿಕೆಯನ್ನು ಸರಬರಾಜು ಮಾಡಿದೆ.

ಈ ಲಸಿಕೆಯನ್ನು ವಿಜಾತಿ (ಹೆಟೆರೊಲಾಗಸ್) ಮುನ್ನೆಚ್ಚರಿಕೆಯಾಗಿ ನೀಡಬಹುದು. ತಾಂತ್ರಿಕ ಸಲಹಾ ಸಮಿತಿಯ ಶಿಫಾರಸಿನಂತೆ ಕೋವಿಶೀಲ್ಡ್ ಅಥವಾ ಕೋವಾಕ್ಸಿನ್ ಲಸಿಕೆಯ 2ನೇ ಡೋಸ್ ಪಡೆದು ಆರು ತಿಂಗಳು ಅಥವಾ 26 ತಿಂಗಳು ಪೂರೈಸಿಯೂ ಮುನ್ನೆಚ್ಚರಿಕೆ ಡೋಸ್ ಪಡೆಯದವರಿಗೆ ನೀಡಬಹುದು. 60 ವರ್ಷ ದಾಟಿದವರು, ರೋಗ ನಿರೋಧಕ ಶಕ್ತಿ ಕಡಿಮೆ ಇರುವವರು ಪಡೆಯಬಹುದು. ಕೋವಿಡ್–19 ಲಸಿಕಾಕರಣದ ಮಾರ್ಗಸೂಚಿಯಂತೆ ನೀಡಲಾಗುವುದು.

ಕೋರ್ಬಿವ್ಯಾಕ್ಸ್ ಡೋಸ್ ಹಂಚಿಕೆ

ಜಿಲ್ಲೆ	ಹಂಚಿಕೆ	ಉತ್ತರ ಕನ್ನಡ	660	ಹಾಸನ	720
ಬೆಂಗಳೂರು ನಗರ	840	ಬಳ್ಳಾರಿ	640	ಕೊಡಗು	220
ಬೆಂಗಳೂರು ಗ್ರಾಮಾಂತರ	480	ಚಿತ್ರದುರ್ಗ	720	ಮಂಡ್ಯ	720
ಬಿಬಿಎಂಪಿ	5,680	ದಾವಣಗೆರೆ	740	ಮೈಸೂರು	1,360
ಚಿಕ್ಕಬಳ್ಳಾಪುರ	520	ಶಿವಮೊಗ್ಗ	820	ಚಿಕ್ಕಮಗಳೂರು	480
ಕೋಲಾರ	680	ವಿಜಯನಗರ	560	ದಕ್ಷಿಣ ಕನ್ನಡ	1,140
ರಾಮನಗರ	440	ಬಾಗಲಕೋಟೆ	900	ಉಡುಪಿ	520
ತುಮಕೂರು	1,300	ವಿಜಯಪುರ	1,000	ಬೀದರ್	840
ಬೆಳಗಾವಿ	2,280	ಗದಗ	500	ಕಲಬುರಗಿ	1,280
ಧಾರವಾಡ	920	ಕೊಪ್ಪಳ	520	ರಾಯಚೂರು	820
ಹಾವೇರಿ	780	ಚಾಮರಾಜನಗರ	440	ಯಾದಗಿರಿ	480

ಒಟ್ಟು 30,000

‘ಮತ್ತೆ ಸ್ಪರ್ಧಿಸುವಂತೆ ಒತ್ತಡ’

ಪ್ರಜಾವಾಣಿ ವಾರ್ತೆ

ಡಿ.ವಿ. ಸದಾನಂದಗೌಡ

ಬೆಂಗಳೂರು: ‘ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಎಲ್ಲರೂ ಒತ್ತಾಯಿಸುತ್ತಿದ್ದಾರೆ. ಈ ಒತ್ತಡ ಮೀರಿ ನಿಲ್ಲುವಲ್ಲಿ ಯಶಸ್ವಿ ಆಗುತ್ತೇನೆಂದು ಸದ್ಯಕ್ಕೆ ಹೇಳುವುದಕ್ಕೆ ಆಗುವುದಿಲ್ಲ’ ಎಂದು ಸಂಸದ ಡಿ.ವಿ. ಸದಾನಂದ ಗೌಡ ತಿಳಿಸಿದರು. ಆ ಮೂಲಕ, ಮತ್ತೊಮ್ಮೆ ಕಣಕ್ಕಿಳಿಯುವ ಸುಳಿವು ಪರೋಕ್ಷವಾಗಿ ನೀಡಿದರು.

ಬೆಂಗಳೂರು ಉತ್ತರ ಕ್ಷೇತ್ರದಿಂದ ಮತ್ತೆ ಸ್ಪರ್ಧಿಸುವ ಕುರಿತು ಪ್ರತಿಕ್ರಿಯಿಸಿದ ಅವರು, ‘ನಾನು 30 ವರ್ಷದ ರಾಜಕಾರಣ ನೋಡಿದ್ದೇನೆ. ಹೊಸಬರು ಬರಬೇಕು ಎನ್ನುವ ಕಾರಣಕ್ಕೆ ಚುನಾವಣೆ ರಾಜಕೀಯದಿಂದ ದೂರ ಸರಿಯುವ ಪ್ರಯತ್ನ ಮಾಡಿದ್ದೇನೆ. ಆದರೆ, ಅಶೋಕ, ಬೊಮ್ಮಾಯಿ, ಡಾ. ಅಶ್ವತ್ಥನಾರಾಯಣ, ಸೋಮಶೇಖರ್, ದಾಸರಹಳ್ಳಿ ಮುನಿರಾಜು ಸೇರಿದಂತೆ ಪಕ್ಷದ ಎಲ್ಲ ನಾಯಕರು ನೀವೇ ಸ್ಪರ್ಧಿಸಿ ಎಂದು ಒತ್ತಡ ಹಾಕುತ್ತಿದ್ದಾರೆ’ ಎಂದರು.

‘ನಾನು ನನ್ನ ಕ್ಷೇತ್ರದಲ್ಲಿ ಯಾರನ್ನೂ ದೂರ ಇಟ್ಟವನಲ್ಲ. ಎಲ್ಲರ ವಿಶ್ವಾಸ ಗಳಿಸಿದ್ದೇನೆ. ಅನೇಕ ಆರೋಪ, ಅಪವಾದ ಬಂದಾಗಲೂ ಎಲ್ಲರೂ ಜೊತೆಗೆ ನಿಂತಿದ್ದಾರೆ. ಸಣ್ಣ ಕೆಲಸ ಮಾಡಿ ದೊಡ್ಡ ಪ್ರಚಾರ ಪಡೆಯುವ ವ್ಯಕ್ತಿ ನಾನಲ್ಲ. ಈ ಹಂತದಲ್ಲಿ ನಾನು ಏನೂ ಹೇಳುವುದಿಲ್ಲ. ಪಕ್ಷ ಏನು ತೀರ್ಮಾನ ಮಾಡುತ್ತದೊ ನೋಡಬೇಕು’ ಎಂದರು.

ಬೆಂಗಳೂರು ಉತ್ತರ ಕ್ಷೇತ್ರದ ಮೇಲೆ ಮಾಜಿ ಸಚಿವ ವಿ. ಸೋಮಣ್ಣ ಕಣ್ಣಿಟ್ಟಿದ್ದಾರೆಂಬ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ‘ಸೋಮಣ್ಣನವರೇ ನಾನು ಸ್ಪರ್ಧಿಸುವಂತೆ ಹೇಳಿದ್ದಾರೆ. ವಿರೋಧಿಸುತ್ತಿದ್ದವರೆಲ್ಲ ನಾನೇ ಸ್ಪರ್ಧಿಸುವಂತೆ ಒತ್ತಾಯಿಸುತ್ತಿದ್ದಾರೆ. ಹೀಗಿರುವಾಗ ಸೋಮಣ್ಣ ಉತ್ತರಕ್ಕೆ ಆಕಾಂಕ್ಷಿ ಆಗುವುದು ಎಲ್ಲಿಂದ ಬಂತು’ ಎಂದರು.

‘ನಾವೂ ರಾಮನ ಭಕ್ತರು’ ಎಂಬ ಸಚಿವ ಜಿ. ಪರಮೇಶ್ವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಪರಮೇಶ್ವರ ಅವರು ರಾಮ ಎಲ್ಲರ ದೇವ ಎಂದು ನಂಬಿದ್ದಾರಲ್ಲ. ಇತರರಿಗೂ ಆ ಬುದ್ಧಿ ಬರಲಿ. ಮುಸ್ಲಿಂ ಮಹಿಳೆಯೊಬ್ಬರು ರಾಮನನ್ನು ನೋಡಲು ಯಾತ್ರೆ ಹೊರಟಿರುವುದನ್ನು ನೋಡಿದರೆ ಎಲ್ಲರೂ ರಾಮನನ್ನು ಒಪ್ಪುತ್ತಿದ್ದಾರೆ. ಪರಮೇಶ್ವರ ಅವರೂ ರಾಮ ಮಂದಿರ ಉದ್ಘಾಟನೆ ಕಾರ್ಯಕ್ರಮಕ್ಕೆ ಬರಲಿ’ ಎಂದರು.

ನಾನು ಯಾವುದೇ ಸ್ಥಾನಮಾನ ಕೇಳಿಲ್ಲ: ಬಿ.ಆರ್. ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಸಲಹೆಗಾರನಾಗಿ ನೇಮಕಗೊಂಡಿರುವುದಕ್ಕೆ ನನಗೆ ತೃಪ್ತಿ ಇದೆ. ನಾನು ಪಕ್ಷದ ಸಾಮಾನ್ಯ ಕಾರ್ಯಕರ್ತ. ಯಾವುದೇ ಸ್ಥಾನಮಾನ ಕೇಳಿಲ್ಲ’ ಎಂದು ಆಳಂದ ಶಾಸಕ ಬಿ.ಆರ್. ಪಾಟೀಲ ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನಿವಾಸದ ಬಳಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಉಪ ಮುಖ್ಯಮಂತ್ರಿಗೆ ಹೊಸ ವರ್ಷದ ಶುಭಾಶಯ ತಿಳಿಸಲು ಬಂದಿದ್ದೆ. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೆ ಜಯಭೇರಿ ಬಾರಿಸಬೇಕು. ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಜಯ ಸಾಧಿಸಲಿ ಎಂದು ಹಾರೈಸಿದೆ’ ಎಂದರು.

‘ಮುಖ್ಯಮಂತ್ರಿ ರಾಜಕೀಯ ಗಂಜಿ ಕೇಂದ್ರ ತೆರೆದಿದ್ದಾರೆ’ ಎಂಬ ಎಚ್.ಡಿ. ಕುಮಾರಸ್ವಾಮಿ ಆರೋಪಕ್ಕೆ ‘ಕುಮಾರಸ್ವಾಮಿ ತಮ್ಮ ಕಾಲದಲ್ಲಿ ಕೆಲಸಕ್ಕೆ ಬಾರದವರಿಗೆ ಹುದ್ದೆ ಕೊಟ್ಟಿದ್ದರು. ಬೇಕುಬೇಕಾದವರಿಗೆಲ್ಲ ಗೂಟದ ಕಾರು ಕೊಟ್ಟಿದ್ದರು. ಕುಮಾರಸ್ವಾಮಿಗೆ ಮಾತನಾಡಲು ಯಾವುದೇ ನೈತಿಕತೆ ಇಲ್ಲ’ ಎಂದು ತಿರುಗೇಟು ನೀಡಿದರು.

‘ಸೋದರನ ಬಂಧನ; ಪರಮೇಶ್ವರ ರಾಜಕಾರಣ’

ಮಡಿಕೇರಿ: ‘ನನ್ನ ಸೋದರ ವಿಕ್ರಂಸಿಂಹನ ಬಂಧನದ ವಿಷಯದಲ್ಲಿ ಗೃಹ ಸಚಿವ ಪರಮೇಶ್ವರ ಅವರು ರಾಜಕಾರಣ ಮಾಡುತ್ತಿದ್ದಾರೆಯೇ ಹೊರತು ನಾನಲ್ಲ’ ಎಂದು ಸಂಸದ ಪ್ರತಾಪಸಿಂಹ ತಿರುಗೇಟು ನೀಡಿದರು.

ಇಲ್ಲಿನ ಸಂಪಾಜೆಯ ಗಡಿ ಭಾಗದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ನಾನು ಇಷ್ಟಪಡುವ ರಾಜಕಾರಣಿಗಳಲ್ಲಿ ಒಬ್ಬರಾದ ಪರಮೇಶ್ವರ ಅವರ ಬಗ್ಗೆ ಅಪಾರ ಗೌರವವಿದೆ. ಆದರೆ, ಬಂಧನದ ರಾಜಕಾರಣ ಮಾಡುತ್ತಿರುವವರು ಅವರೇ. ನ್ಯಾಯಾಲಯದಲ್ಲಿ ಕೇವಲ ಐದೇ ನಿಮಿಷಕ್ಕೆ ಸೋದರನಿಗೆ ಜಾಮೀನು ಸಿಕ್ಕಿದೆ’ ಎಂದು ಪ್ರತಿಪಾದಿಸಿದರು.

ಗುಡಿಸಲಿಗೂ ಬೆಂಕಿ ಹಚ್ಚಿದ ದುಷ್ಕರ್ಮಿಗಳು • ಐವರು ಆರೋಪಿಗಳ ಬಂಧನ

ಸಾಲ ಮರಳಿ ಕೇಳಿದ ಪರಿಶಿಷ್ಟನ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಮುಳಬಾಗಿಲು (ಕೋಲಾರ): ತಾಲ್ಲೂಕಿನ ಯಡಹಳ್ಳಿ ಗ್ರಾಮದಲ್ಲಿ ಭಾನುವಾರ ಸಾಲ ಮರಳಿ ಕೇಳಿದ ಪರಿಶಿಷ್ಟ ಜಾತಿಯ ಯುವಕ ಮತ್ತು ಸಂಬಂಧಿ ಮಹಿಳೆಯ ಮೇಲೆ ಗುಂಪೊಂದು ಹಲ್ಲೆ ನಡೆಸಿ, ಗುಡಿಸಲಿಗೆ ಬೆಂಕಿ ಹಚ್ಚಿದೆ.

ಹಲ್ಲೆಯಲ್ಲಿ ಹನುಮಂತ (28) ಮತ್ತು ಆತನ ಅತ್ತಿಗೆ ಸುಧಮ್ಮ ಗಾಯಗೊಂಡಿದ್ದು, ಮುಳಬಾಗಿಲು ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿದೆ. ಹನುಮಂತ ಅವರ ಅಣ್ಣನ ಗುಡಿಸಲಿಗೆ ಆರೋಪಿಗಳು ಬೆಂಕಿ ಹಚ್ಚಿದ್ದಾರೆ.

ಗ್ರಾಮದ ಸುರೇಶ್ ಮತ್ತು ಇತರ ಒಂಬತ್ತು ಜನರು ತಮ್ಮ ಮೇಲೆ ಕಲ್ಲು, ಚಾಕುವಿನಿಂದ ಹಲ್ಲೆ ನಡೆಸಿದ್ದಾರೆ ಎಂದು ಸಂತ್ರಸ್ತರು, ಪೊಲೀಸರಿಗೆ ದೂರು ನೀಡಿದ್ದಾರೆ.

ಆರೋಪಿಗಳೆಲ್ಲರೂ ಸಂಬಂಧಿಕರಾಗಿದ್ದು, ಒಕ್ಕಲಿಗ ಸಮುದಾಯಕ್ಕೆ ಸೇರಿದ್ದಾರೆ. ಹತ್ತು ಜನರ ವಿರುದ್ಧ ನಂಗಲಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ಸೋಮವಾರ ಐವರನ್ನು ಬಂಧಿಸಲಾಗಿದ್ದು, ಉಳಿದ ಐವರು ತಲೆ ಮರೆಸಿಕೊಂಡಿದ್ದಾರೆ.

ಹನುಮಂತ

ಹನುಮಂತ ಅವರ ಸಹೋದರ ರೆಡ್ಡೆಪ್ಪ ಗುಡಿಸಲಿಗೆ ಬೆಂಕಿ ಹಾಕಲಾಗಿದೆ

ಸಾಲದ ಹಣಕ್ಕಾಗಿ ಜಗಳ: ಕೂಲಿ ಕೆಲಸ ಮಾಡುವ ಹನುಮಂತ ಮೂರು ವರ್ಷದ ಹಿಂದೆ ಸಂಬಂಧಿಯೊಬ್ಬರಿಂದ ತಮ್ಮದೇ ಗ್ರಾಮದ ಸಂತೋಷ್ ಎಂಬುವರಿಗೆ ₹50 ಸಾವಿರ ಸಾಲ ಕೊಡಿಸಿದ್ದರು. ಆದರೆ, ಸಾಲ ಹಿಂದಿರುಗಿಸದೆ ಸತಾಯಿಸುತ್ತಿದ್ದ ಸಂತೋಷ್ ವರ್ತನೆಯಿಂದ ರೋಸಿ ಹೋಗಿದ್ದ ಹನುಮಂತ ಭಾನುವಾರ ಸಂಜೆ ಆತನ ಮನೆಗೆ ತೆರಳಿ ಸಾಲ ಮರಳಿಸುವಂತೆ ಕೇಳಿದ. ಇದರಿಂದ ಇಬ್ಬರ ಮಧ್ಯೆ ಜಗಳವಾಗಿತ್ತು.

‘ಸ್ವಲ್ಪ ಸಮಯದ ಬಳಿಕ ಸಂಬಂಧಿಕರನ್ನು ಕರೆದುಕೊಂಡು ಮನೆ ಬಳಿ ಬಂದ ಸಂತೋಷ, ನನ್ನ ಮತ್ತು ನನ್ನ ಅತ್ತಿಗೆ ಸುಧಮ್ಮನನ್ನು ಜಾತಿ ಹೆಸರಿನಿಂದ ಅವಾಚ್ಯವಾಗಿ ನಿಂದಿಸಿ, ಕಲ್ಲು, ಚಾಕುವಿನಿಂದ ಹಲ್ಲೆ ನಡೆಸಿದ್ದಾರೆ. ಬಳಿಕ ನನ್ನ ಅಣ್ಣ ರೆಡ್ಡೆಪ್ಪ ಗುಡಿಸಲಿಗೆ ಬೆಂಕಿ ಹಚ್ಚಿದ್ದಾರೆ’ ಎಂದು ಹನುಮಂತ ದೂರಿನಲ್ಲಿ ತಿಳಿಸಿದ್ದಾರೆ.

ಸುರೇಶ್, ಸುನೀಲ್, ಅಶೋಕ್ ಗೌಡ, ಕಲಾವತಿ, ಶಿವಶಂಕರ್ ಗೌಡ, ಜನಾರ್ದನ್, ಪ್ರಸನ್ನ ಕುಮಾರ್, ಸಾಗರ್, ಸಂತೋಷ ಹಾಗೂ ನರೇಂದ್ರ ಗೌಡ ಎಂಬುವರ ವಿರುದ್ಧ ನಂಗಲಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವಿ.ಬಿ. ಭಾಸ್ಕರ್ ಹಾಗೂ ಸಮಾಜ ಕಲ್ಯಾಣ ಅಧಿಕಾರಿ ನರಸಿಂಹಪ್ಪ ಸ್ಥಳಕ್ಕೆ ಗ್ರಾಮಕ್ಕೆ ನೀಡಿ ಪರಿಶೀಲಿಸಿದರು.

ಕಚೇರಿಯಲ್ಲೇ ವ್ಯವಸ್ಥಾಪಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ಲಿಂಗನಾಯಕ್

ಮೂಡಿಗೆರೆ (ಚಿಕ್ಕಮಗಳೂರು): ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಲ್ಲಿ ವ್ಯವಸ್ಥಾಪಕರಾಗಿ ಕಾರ್ಯನಿರ್ಹಿಸುತ್ತಿದ್ದ ಲಿಂಗನಾಯಕ್ (58) ಸೋಮವಾರ ಬೆಳಿಗ್ಗೆ ಕಚೇರಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಡೂರು ತಾಲ್ಲೂಕಿನ ಸಖರಾಯ ಪಟ್ಟಣದವರಾದ ಲಿಂಗನಾಯಕ್ ಎರಡು ವರ್ಷಗಳಿಂದ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

‘ಕಚೇರಿ ಸಮೀಪ ಬಾಡಿಗೆ ಮನೆಯಲ್ಲಿ ವಾಸವಿದ್ದ ಅವರು, ಸೋಮವಾರ ಬೆಳಿಗ್ಗೆ 8ರ ಸುಮಾರಿಗೆ ಮನೆಯಿಂದ ಹಾಲು ತರುವುದಾಗಿ ಹೋದವರು ಮರಳಿ ಬಂದಿರಲಿಲ್ಲ. ಅವರು ನೇರವಾಗಿ ಕಚೇರಿಗೆ ಹೋಗಿ, ಅಲ್ಲಿ ತಾವು ಕೆಲಸ ಮಾಡುತ್ತಿದ್ದ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬೆಳಿಗ್ಗೆ 10 ಗಂಟೆ ಸುಮಾರಿಗೆ ಸಿಬ್ಬಂದಿ ಕಚೇರಿಗೆ ಬಂದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ಗಮನಕ್ಕೆ ಬಂದಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಂಜಿಎಂ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರಿಸಲಾಯಿತು.

ಡೆತ್ ನೋಟ್ ಪತ್ತೆ: ಕಚೇರಿಯಲ್ಲಿ ಡೆತ್ ನೋಟ್ ಪತ್ತೆಯಾಗಿದ್ದು, ‘ಕೆಲಸದ ಒತ್ತಡ ಅಧಿಕವಾಗಿತ್ತು. ಇತ್ತೀಚೆಗೆ ನಡೆದ ಲೋಕಾಯುಕ್ತ ದಾಳಿಯ ಬಳಿಕ ನೌಕರ ಬಶೀರ್ ಅವರ ಕ್ಲಸ್ಟರ್ ಕೆಲಸ ಬಾಕಿ ಉಳಿದಿತ್ತು. ಕಚೇರಿಯಲ್ಲಿ ಸಿಬ್ಬಂದಿ ಕೊರತೆ ಕೂಡ ಇತ್ತು. ಸಮಯಕ್ಕೆ ಸರಿಯಾಗಿ ಯಾವುದೇ ಕೆಲಸ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಇದರಿಂದ ರಾತ್ರಿ ನಿದ್ರೆ ಕೂಡ ಬರುತ್ತಿರಲಿಲ್ಲ. ಹಾಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಿ’ ಎಂದು ಎರಡು ಪುಟಗಳ ಡೆತ್ ನೋಟ್‌ನಲ್ಲಿ ಬರೆದಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೃತರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ಸುಭಾಷಿತ
ಅಕ್ಷರ ಕಲಿತ ವ್ಯಕ್ತಿ ಭ್ರಷ್ಟನಾಗಬಹುದು, ಆದರೆ ಸಂಸ್ಕಾರ ಕಲಿತ ವ್ಯಕ್ತಿ ಎಂದೆಂದಿಗೂ ಭ್ರಷ್ಟನಾಗಲಾರ.
–ಸಿದ್ಧೇಶ್ವರ ಸ್ವಾಮೀಜಿ

ಕತಾರ್ ಮರಣದಂಡನೆ ಪ್ರಕರಣ ಭಾರತಕ್ಕೆ ಕಲಿಸಿದ ಪಾಠಗಳು ಹಲವು

ಭಾರತದ ನೌಕಾಪಡೆಯ ಎಂಟು ಮಂದಿ ಮಾಜಿ ಸಿಬ್ಬಂದಿಗೆ ನೀಡಿದ್ದ ಮರಣದಂಡನೆಯನ್ನು ಕತಾರ್ ದೇಶವು ರದ್ದು ಮಾಡಿರುವುದು ಈ ಪ್ರಕರಣದಲ್ಲಿ ಮೂಡಿದ ಭರವಸೆಯ ಬೆಳಕು. ಬೇಹುಗಾರಿಕೆ ಆರೋಪದಲ್ಲಿ 2022ರ ಆಗಸ್ಟ್‌ನಲ್ಲಿ ಇವರನ್ನು ಬಂಧಿಸಲಾಗಿತ್ತು. ಮೇಲ್ಮನವಿ ನ್ಯಾಯಾಲಯವು ಮರಣದಂಡನೆಯನ್ನು ರದ್ದು ಮಾಡಿ ಮೂರರಿಂದ 25 ವರ್ಷಗಳವರೆಗಿನ ಶಿಕ್ಷೆಯನ್ನು ವಿಧಿಸಿದೆ ಎಂದು ವರದಿಯಾಗಿದೆ. ಭಾರತ ಸರ್ಕಾರವು ಕತಾರ್ ಸರ್ಕಾರದ ಜೊತೆಗೆ ಈ ಪ್ರಕರಣಕ್ಕೆ ಸಂಬಂಧಿಸಿ ಹೆಚ್ಚಿನ ವಿವೇಚನೆಯಿಂದ ಮಾತುಕತೆ ನಡೆಸಿದೆ. ಕುಲಭೂಷಣ್ ಜಾಧವ್ ಪ್ರಕರಣದಲ್ಲಿ ನಡೆದುಕೊಂಡಂತೆ ಭಾರತವು ನಡೆದುಕೊಳ್ಳಲಿಲ್ಲ. ಜಾಧವ್ ಅವರನ್ನು ಐಎಸ್‌ಐ ಅಪಹರಿಸಿದೆ ಎಂದು ಭಾರತವು ಬಿಂಬಿಸಿತ್ತು ಮತ್ತು ಹಾಗೆ ಮಾಡುವುದು ಸುಲಭವಾಗಿ ಸಾಧ್ಯವಾಗಿತ್ತು. ಆದರೆ, ಕತಾರ್ ಪ್ರಕರಣದಲ್ಲಿ ರಾಜಕೀಯ ನಾಯಕರು ಸಾರ್ವಜನಿಕವಾಗಿ ಯಾವುದೇ ಭರವಸೆಯನ್ನು ಕೊಡಲಿಲ್ಲ. ಅವರ ಮೇಲಿದ್ದ ಆರೋಪಗಳ ಕುರಿತು ಏನನ್ನೂ ಬಹಿರಂಗಪಡಿಸಲಿಲ್ಲ. ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿರುವ ಎಲ್ಲವನ್ನೂ ಮಾಡಲಾಗುವುದು ಎಂದು ಮಾತ್ರ ಸರ್ಕಾರ ಹೇಳಿತ್ತು. ಸರ್ಕಾರವು ಏನನ್ನು ಮಾಡಬೇಕಿತ್ತೋ ಅದನ್ನು ಮಾಡಿತ್ತೇ ಎಂಬ ಕಳವಳ ಶಿಕ್ಷೆಗೆ ಒಳಗಾದವರ ಕುಟುಂಬಗಳ ಸದಸ್ಯರಿಗೆ ಇತ್ತು. ಶಿಕ್ಷೆಯಾದಾಗ ಅವರು ಬಹಿರಂಗವಾಗಿ ಏನನ್ನೂ ಹೇಳದೆ ಘನತೆಯಿಂದ ವರ್ತಿಸಿದರು. ಆದರೆ, ಕೆಲವರು ಸಾಮಾಜಿಕ ಮಾಧ್ಯಮದ ಮೂಲಕ ಸರ್ಕಾರದ ಮೇಲೆ ಒತ್ತಡ ಹೇರುವ ಕೆಲಸವನ್ನು ನಿರಂತರವಾಗಿ ಮಾಡಿದರು. ಎಂಟು ಮಂದಿಯ ಬಂಧನದ ನಂತರ ಪ್ರತಿ ತಿಂಗಳು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಹಾಕಿ, ಅದನ್ನು ಸರ್ಕಾರದಲ್ಲಿರುವವರಿಗೆ ಟ್ಯಾಗ್ ಮಾಡಿ, ವಿಚಾರವು ಸಾರ್ವಜನಿಕವಾಗಿಯೇ ಇರುವಂತೆ ನೋಡಿಕೊಂಡರು. ವಕೀಲರೊಬ್ಬರನ್ನು ನೇಮಿಸಿ, ಕಾನೂನು ಹೋರಾಟದ ಸಂಪೂರ್ಣ ವೆಚ್ಚವನ್ನು ಭರಿಸುವ ನಿರ್ಧಾರ ಕೈಗೊಂಡಿದ್ದು ಸರ್ಕಾರದಿಂದ ಸಿಕ್ಕ ಗಟ್ಟಿಯಾದ ಭರವಸೆಯಾಗಿತ್ತು. ಕಾನೂನು ಹೋರಾಟವು ಮುಂದುವರಿಯಲಿದೆ. ಕತಾರ್‌ನ ಅತ್ಯುನ್ನತ ನ್ಯಾಯಾಲಯವು ಈಗ ನೀಡಿರುವ ಶಿಕ್ಷೆಯ ಅವಧಿಯನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಸಂತ್ರಸ್ತರ ಕುಟುಂಬಸ್ಥರು ಹೇಳಿದ್ದಾರೆ. ಈ ಎಂಟು ಮಂದಿ ತಮ್ಮ ಜೈಲುವಾಸದ ಅವಧಿಯನ್ನು ಭಾರತದಲ್ಲಿಯೇ ಕಳೆಯಬಹುದು ಎಂಬ ಭರವಸೆಯೊಂದು ಇದೆ. ಕೈದಿಗಳ ಹಸ್ತಾಂತರಕ್ಕೆ ಸಂಬಂಧಿಸಿದ ಒಪ್ಪಂದವನ್ನು 2014ರಲ್ಲಿಯೇ ಮಾಡಿಕೊಳ್ಳಲಾಗಿದೆ. ಆದರೆ, ಕತಾರ್ ಸರ್ಕಾರ ಅದಕ್ಕೆ ಇನ್ನೂ ಅನುಮೋದನೆ ನೀಡಿಲ್ಲ.

ಕತಾರ್ ದೊರೆಯಿಂದ ಕ್ಷಮಾದಾನ ಪಡೆದುಕೊಳ್ಳುವ ಸಾಧ್ಯತೆಯೂ ಇದೆ. ಆದರೆ, ಅದಕ್ಕಾಗಿ ಭಾರತವು ರಾಜತಾಂತ್ರಿಕವಾಗಿ ಹೆಚ್ಚು ಪ್ರಯತ್ನ ಮಾಡಬೇಕಾದೀತು

ಕತಾರ್ ದೊರೆಯಿಂದ ಕ್ಷಮಾದಾನ ಪಡೆದುಕೊಳ್ಳುವ ಸಾಧ್ಯತೆಯೂ ಇದೆ. ಆದರೆ, ಅದಕ್ಕಾಗಿ ಭಾರತವು ರಾಜತಾಂತ್ರಿಕವಾಗಿ ಬಹಳ ಹೆಚ್ಚು ಪ್ರಯತ್ನ ಮಾಡಬೇಕಾದೀತು. ಆರೋಪ ಮತ್ತು ನ್ಯಾಯಾಲಯದಲ್ಲಿನ ವಿಚಾರಣೆಯ ವಿವರಗಳಿಗೆ ಸಂಬಂಧಿಸಿ ಕಾಯ್ದುಕೊಂಡ ಗೋಪ್ಯತೆಯನ್ನು ಗಮನಿಸಿದರೆ, ಪ್ರಕರಣವು ಯಾವುದೇ ತಿರುವು ಪಡೆದುಕೊಂಡರೂ ವ್ಯಾಪಕವಾದ ಪರಿಣಾಮವನ್ನು ಬೀರಲಿದೆ ಎಂಬುದರಲ್ಲಿ ಸಂಶಯ ಇಲ್ಲ. ಭಾರತ ಸರ್ಕಾರವು ಕತಾರ್ ಆಳ್ವಿಕೆಯ ಅಧಿಕೃತತೆಯನ್ನು ಎಂದಿಗೂ ಪ್ರಶ್ನಿಸಿಲ್ಲ. ಭಾರತವು ಎಂದಿನಂತೆ 'ಸೂಕ್ಷ್ಮ' ಪ್ರಕರಣ ಎಂದು ಹೇಳಿಬಿಟ್ಟಿದೆ. ಈ ಬಿಕ್ಕಟ್ಟಿನ ಪರಿಸ್ಥಿತಿಯಿಂದ ಭಾರತದ ವರ್ಚಸ್ಸಿಗೆ ಆಗುವ ಹಾನಿಯ ಕುರಿತು ಸರ್ಕಾರದ ಚಿಂತೆ ಸಹಜವಾದುದೇ ಆಗಿದೆ. ಭಾರತದ ಭದ್ರತಾ ಪಡೆಗಳ ಸಿಬ್ಬಂದಿಯ ನಿವೃತ್ತಿಯ ವಯಸ್ಸು ಕಡಿಮೆ ಆಗಿರುವುದರಿಂದ ನಿವೃತ್ತಿಯ ನಂತರ ಅವರು ಬೇರೊಂದು ಕೆಲಸವನ್ನು ಹುಡುಕಿಕೊಳ್ಳುತ್ತಾರೆ. ನೌಕಾಪಡೆಯ ಈ ಎಂಟು ನಿವೃತ್ತ ಸಿಬ್ಬಂದಿಯು ದೋಹಾದಲ್ಲಿಯ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಕೆಲವರು ಭಾರತದ ಜೊತೆ ರಕ್ಷಣಾ ವಿಚಾರಕ್ಕೆ ಸಂಬಂಧಿಸಿ ಪ್ರಬಲ ಬಾಂಧವ್ಯ ಹೊಂದಿರುವ ಸಣ್ಣ ದೇಶಗಳಲ್ಲಿ ಹೊಸ ಉದ್ಯೋಗ ಕಂಡುಕೊಳ್ಳುತ್ತಾರೆ. ಇಂತಹ ಉದ್ಯೋಗಿಗಳ ನಿಷ್ಠೆ ಮತ್ತು ಬದ್ಧತೆ ಕುರಿತು ಉದ್ಯೋಗದಾತರಿಗೆ ಸಣ್ಣ ಅನುಮಾನ ಬಂದರೂ ಅದು ರಕ್ಷಣಾ ಪಡೆಗಳ ಅಂತರರಾಷ್ಟ್ರೀಯ ವರ್ಚಸ್ಸಿಗೆ ಮಾತ್ರವಲ್ಲದೆ ದ್ವಿಪಕ್ಷೀಯ ಸಂಬಂಧಕ್ಕೂ ಧಕ್ಕೆ ಉಂಟುಮಾಡುತ್ತದೆ. ಹಾಗಾಗಿಯೇ ರಕ್ಷಣಾ ಪಡೆಗಳ ಸಿಬ್ಬಂದಿಯು ನಿವೃತ್ತಿಯ ನಂತರ ಬೇರೆ ಉದ್ಯೋಗ ಪಡೆದುಕೊಳ್ಳುವುದಕ್ಕೆ ಸಂಬಂಧಿಸಿ ನಿಯಮಗಳನ್ನು ರೂಪಿಸಲು ಕತಾರ್ ಪ್ರಕರಣವು ಎಚ್ಚರಿಕೆಯ ಗಂಟೆಯಾಗಿದೆ.

ದಿನದ ಟ್ವೀಟ್

ಸದಾಶಯ ಹೊಂದೋಣ

2024ರಲ್ಲಿ ಭಾರತದಲ್ಲಿ ನಾನು ಬಯಸುವುದು ಇವು: 1. ಬಡತನದ ಬೇಗೆಯಿಂದ ಹೆಚ್ಚು ಜನರು ಹೊರಬರಲಿ 2. ವಾಯುಗುಣಮಟ್ಟ ಉತ್ತಮವಾಗಲಿ 3. ಉಚಿತ ಕೊಡುಗೆಗಳ ಸಂಖ್ಯೆ ಕಡಿಮೆಯಾಗಲಿ 4. ಚುನಾವಣೆಯಲ್ಲಿ ಸ್ಪಷ್ಟ ಜನಾದೇಶ ಬರಲಿ 5. ಕೃತಕ ಬುದ್ಧಿಮತ್ತೆ ಇನ್ನಷ್ಟು ಪ್ರಗತಿ ಕಾಣಲಿ 6. ಚಿಂತನೆಗಳ ಧ್ರುವೀಕರಣ ಕಡಿಮೆಯಾಗಲಿ 7. ಸೆನ್ಸೆಕ್ಸ್ ಏರಿಕೆಯಾಗಲಿ 8. ಶಿಕ್ಷಣ ಮತ್ತು ಆರೋಗ್ಯಸೇವೆ ಉತ್ತಮವಾಗಲಿ 9. ಪತ್ರಿಕಾ ಸ್ವಾತಂತ್ರ್ಯ ಬಲಗೊಳ್ಳಲಿ 10. ಉದ್ಯೋಗ ಅವಕಾಶ ವಿಪುಲವಾಗಲಿ 11. ನಾಲ್ಕನೇ ಬೃಹತ್ ಆರ್ಥಿಕತೆಯಾಗಲಿ.

ಹರ್ಷ್ ಗೋಯಂಕಾ, ಉದ್ಯಮಿ

ಕಿಡಿನುಡಿ



ರಾಮಸೇತುವನ್ನು ರಾಷ್ಟ್ರೀಯ ಪಾರಂಪರಿಕ ಸ್ಮಾರಕವೆಂದು ಘೋಷಿಸುವಂತೆ ಪ್ರಹ್ಲಾದ್ ಪಟೇಲ್ ನೇತೃತ್ವದ ಕೇಂದ್ರ ಸಂಸ್ಕೃತಿ ಸಚಿವಾಲಯವು ವಿಸ್ತೃತ ಕಡತವನ್ನು ಸಲ್ಲಿಸಿದ್ದರೂ ನರೇಂದ್ರ ಮೋದಿ ಅವರು ಆ ಘೋಷಣೆ ಆಗದಂತೆ ಮಾಡಿದರು. ನಂತರ, ಪಟೇಲ್ ಅವರನ್ನು ಸಚಿವಾಲಯದಿಂದ ಹೊರಹಾಕಲಾಯಿತು. ಈಗ ಮೋದಿ ಅವರು ರಾಮ ಮಂದಿರದ ಶಿಲ್ಪಿಯಾಗಲು ಬಯಸಿದ್ದಾರೆ. ಆಷಾಢಭೂತಿತನ!

ಸುಬ್ರಮಣಿಯನ್ ಸ್ವಾಮಿ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಶನಿವಾರ 2-1-1999

- **ಸಿಎಂ ವಿರುದ್ಧ ಸಿದ್ದರಾಮಯ್ಯ ಬಂಡಾಯ**

ಬೆಂಗಳೂರು, ಜ. 1–ಕಳೆದ ಮೂರು ತಿಂಗಳಿಂದ ರಾಜ್ಯ ಜನತಾದಳದಲ್ಲಿ ಭಿನ್ನಮತೀಯ ಚಟುವಟಿಕೆಗಳು ನಡೆದಿದ್ದರೂ ಬಹಿರಂಗವಾಗಿ ಯಾವ ಗುಂಪಿನ ಜೊತೆಯೂ ಗುರುತಿಸಿಕೊಳ್ಳದೆ ಇದುವರೆಗೆ 'ತಟಸ್ಥ' ಧೋರಣೆ ತಳೆದಿದ್ದ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂತಿಮವಾಗಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಗುಂಪಿನ ಜೊತೆ ಗುರುತಿಸಿಕೊಳ್ಳಲು ತೀರ್ಮಾನಿಸಿದ್ದಾರೆ.

ದೆಹಲಿಯಲ್ಲಿರುವ ದೇವೇಗೌಡರನ್ನು ದೂರವಾಣಿ ಮೂಲಕ ಸಂಪರ್ಕಿಸಿದ್ದ ಸಿದ್ದರಾಮಯ್ಯ ಅವರು, 'ಪಟೇಲ್ ನಾಯಕತ್ವ ಬದಲಾವಣೆ ವಿಚಾರದಲ್ಲಿ ನೀವು ಕೈಗೊಳ್ಳುವ ಯಾವುದೇ ರೀತಿಯ ನಿರ್ಧಾರಕ್ಕೆ ನಾನು ಬದ್ಧನಾಗಿರುತ್ತೇನೆ'ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ ಎಂದು ತಿಳಿದುಬಂದಿದೆ. ಇದರಿಂದ ರಾಜ್ಯ ಜನತಾದಳದ ಬಿಕ್ಕಟ್ಟು ಮತ್ತಷ್ಟು ಉಲ್ಬಣಗೊಳ್ಳುವ ಸೂಚನೆಗಳಿವೆ.

- **ಮಂಗಳೂರಿಗೂ ಹಬ್ಬಿದ ಹಿಂಸಾಚಾರ**

ಮಂಗಳೂರು, ಜ. 1– ಬೆಂಗಳೂರಿನಿಂದ ಬಂದ ಸಚಿವರ ತಂಡ ಶಾಂತಿ ಸಮಾಲೋಚನಾ ಸಭೆ ನಡೆಸುತ್ತಿದ್ದಂತೆಯೇ, ಮಂಗಳೂರಿಗೂ ಹಬ್ಬಿದ ಹಿಂಸಾಚಾರವನ್ನು ನಿಯಂತ್ರಿಸಲು ಬಂದರು ಪ್ರದೇಶದಲ್ಲಿ ಪೊಲೀಸರು ಗೋಲಿಬಾರ್ ನಡೆಸಿದರು. ಗಲಭೆಗೆ ಒಬ್ಬ ಬಲಿಯಾಗಿದ್ದಾನೆ. ಸುರತ್ಕಲ್‌ನಲ್ಲಿ ಗಲಭೆಗಳು ತಣ್ಣಗಾಗುತ್ತಿದ್ದರೆ, ಮಂಗಳೂರು ಉದ್ವಿಗ್ನಗೊಂಡು ವ್ಯಾಪಾರ ವಹಿವಾಟು, ಖಾಸಗಿ ಬಸ್ ಸಂಚಾರ ಸ್ತಬ್ಧಗೊಂಡಿದೆ.

- **ಹೊಸ ವರ್ಷಾಚರಣೆಯ ಪರಾಕಾಷ್ಠೆ: ವಾಹನ ಅಪಘಾತಗಳಿಗೆ 11 ಬಲಿ**

ಬೆಂಗಳೂರು, ಜ. 1– ಹೊಸ ವರ್ಷದ ಸಂಭ್ರಮಾಚರಣೆ ಸಂದರ್ಭದಲ್ಲಿ ನಗರ ಮತ್ತು ಗ್ರಾಮಾಂತರ ಜಿಲ್ಲೆಯ ವಿವಿಧ ಕಡೆ ಸಂಭವಿಸಿದ ಎಂಟು ಪ್ರತ್ಯೇಕ ರಸ್ತೆ ಅಪಘಾತಗಳಲ್ಲಿ ಹನ್ನೊಂದು ಜನರು ಮೃತಪಟ್ಟಿದ್ದು, ಐದು ಮಂದಿ ಗಾಯಗೊಂಡಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ 2-1-1974

- **ದುಷ್ಟ, ಭ್ರಷ್ಟರಿಂದ ಸಮಾಜವಾದದ ಸ್ಥಾಪನೆ ಅಸಾಧ್ಯ**

ಮೈಸೂರು ಜ. 1– 'ಕಳ್ಳಕಾಕರು, ಪುಂಡು ಪೋಕರಿಗಳು, ಲಂಚಕೋರರು, ಲಾಭ ಬಡುಕರು ತೀವ್ರಗಾಮಿಗಳ ಪೋಷಾಕು ಧರಿಸಿದ್ದಾರೆ. ಸಮಾಜದ್ರೋಹಿಗಳು, ದುಷ್ಟರು, ಭ್ರಷ್ಟರು ಎಂದಿಗೂ ಸಮಾಜವಾದಿಗಳಾಗಲಾರರು' ಎಂದು ಮಾಜಿ ಮುಖ್ಯಮಂತ್ರಿ ಶ್ರೀ ಕಡಿದಾಳ್ ಮಂಜಪ್ಪ ಅವರು ಇಂದು ಇಲ್ಲಿ ಹೇಳಿದರು.

'ರಾಷ್ಟ್ರದಲ್ಲಿ ಇಂದು ವ್ಯಾಪಕವಾಗಿ ಹಬ್ಬಿರುವ ಅಶಾಂತಿ, ಭ್ರಷ್ಟಾಚಾರ, ಲಂಚಕೋರತನ, ಬೆಲೆಗಳ ಏರಿಕೆ, ಸರ್ವತೋಮುಖ ನೈತಿಕ ಅಧಃಪತನಕ್ಕೆ ಮೂರರಲ್ಲಿ ಎರಡು ಪಾಲು ರಾಜಕಾರಣಿಗಳು ಮತ್ತು ಸರ್ಕಾರಿ ಅಧಿಕಾರಿಗಳು ಕಾರಣರು. ಉಳಿದ ಒಂದು ಪಾಲಿಗೆ ಮಾತ್ರ ಜನರು ಮತ್ತು ಸನ್ನಿವೇಶಗಳು ಹೊಣೆ' ಎಂದರು.

ಪ್ರಗತಿಪರ ಸಮಾಜವಾದಿಗಳ ಸಮ್ಮೇಳನವನ್ನು ಉದ್ಘಾಟಿಸಿದ ಶ್ರೀ ಕಡಿದಾಳ್ ಅವರು, 'ಜನನಾಯಕರಲ್ಲಿ ಬಹುಮಂದಿ ಭ್ರಷ್ಟರು, ಸಮಯಸಾಧಕರಾಗಿದ್ದಾರೆ. ಸರ್ಕಾರಿ ಅಧಿಕಾರಿಗಳಲ್ಲಿ ಬಹುಮಂದಿ ಅಪ್ಪಟ ಲಂಚಕೋರರು' ಎಂದರು.

ಸಾಧನೆ, ಕೀರ್ತಿ, ಅಪಖ್ಯಾತಿಯ ಮಿಶ್ರಣ ಈ ಚಾಣಾಕ್ಷ ಶತಾಯುಷಿ ಕಿಸ್ಸಿಂಜರ್

ಚತುರ ರಾಜತಂತ್ರಜ್ಞ, ಆದರೆ...

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಅಮೆರಿಕದ ಮಾಜಿ ವಿದೇಶಾಂಗ ಕಾರ್ಯದರ್ಶಿ ಹೆನ್ರಿ ಕಿಸ್ಸಿಂಜರ್ ಅವರು ಈಚೆಗೆ ನಿಧನರಾದಾಗ, ಜಗತ್ತಿನ ಪ್ರಮುಖ ನಾಯಕರು ಅವರಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಮಹಾನ್ ಚಾಣಾಕ್ಷ, ವಾಸ್ತವದ ಆಧಾರದ ಮೇಲೆ ವಿದೇಶಾಂಗ ನೀತಿ ರೂಪಿಸಿದ ಅಪ್ರತಿಮ ರಾಜತಂತ್ರಜ್ಞ ಎಂದು ಕಿಸ್ಸಿಂಜರ್ ಅವರನ್ನು ಕರೆದರು. ನೊಬೆಲ್ ಶಾಂತಿ ಪುರಸ್ಕಾರ ಪಡೆದ ಕಿಸ್ಸಿಂಜರ್, ಒಂದು ರೀತಿಯಲ್ಲಿ ಯುದ್ಧ ಅಪರಾಧಿ ಎಂಬ ಅಭಿಪ್ರಾಯವೂ ಕ್ಷೀಣವಾಗಿ ಕೇಳಿಬಂತು.

ನೂರು ವರ್ಷಗಳ ತುಂಬು ಜೀವನ ನಡೆಸಿದ ಕಿಸ್ಸಿಂಜರ್ ಅವರ ಬದುಕು ದುಗುಡ, ಮೋಜು, ಸಾಧನೆ, ಕೀರ್ತಿ ಹಾಗೂ ಅಪಖ್ಯಾತಿಯ ಮಿಶ್ರಣದಂತೆ ಇತ್ತು. ಅವರ ಕುರಿತು ಎರಡು ಬಗೆಯ ಅಭಿಪ್ರಾಯಗಳು ಅವರ ಜೀವಿತ ಅವಧಿಯಲ್ಲಿ ಇದ್ದವು. ಭಾರತ– ಪಾಕಿಸ್ತಾನದ ನಡುವಿನ ಬಾಂಗ್ಲಾ ಯುದ್ಧದ ಸಂದರ್ಭದಲ್ಲಿ ಅವರು ಬೇಜವಾಬ್ದಾರಿಯಿಂದ ಬಳಸಿದ ಕೆಲವು ಪದಗಳು ಮತ್ತು ಅಹಂಕಾರದಿಂದ ವರ್ತಿಸಿದ ರೀತಿ ಕಿಸ್ಸಿಂಜರ್ ಅವರ ಇನ್ನೊಂದು ಮುಖವನ್ನು ಜಾಹೀರುಗೊಳಿಸಿದ್ದವು.

ಅಮೆರಿಕ ಇದುವರೆಗೆ ಕಂಡ ವಿದೇಶಾಂಗ ಕಾರ್ಯದರ್ಶಿಗಳ ಪೈಕಿ, ಆ ದೇಶದ ವಿದೇಶಾಂಗ ನೀತಿಗೆ ಹೊಸ ಆಯಾಮ ನೀಡಿದ ನಾಲ್ಕೈದು ಹೆಸರುಗಳನ್ನು ಗುರುತಿಸಬಹುದು. 1947ರಿಂದ 1949ರವರೆಗೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಜಾರ್ಜ್ ಮಾರ್ಷಲ್ ಆ ಪೈಕಿ ಒಬ್ಬರು. ಎರಡನೇ ಮಹಾಯುದ್ಧದ ಬಳಿಕ ಆರ್ಥಿಕವಾಗಿ ಕಳೆಗುಂದಿದ್ದ ಯುರೋಪಿನ ಪುನರ್‌ನಿರ್ಮಾಣಕ್ಕೆ ಯೋಜನೆಯೊಂದನ್ನು ಅವರು ರೂಪಿಸಿದರು. ಅದನ್ನು ಅಧ್ಯಕ್ಷರ ಹೆಸರಿನಲ್ಲಿ 'ಟ್ರೂಮನ್ ಯೋಜನೆ' ಎಂದು ಕರೆಯಬೇಕು ಎಂಬ ಸಲಹೆ ಬಂದಾಗ, ಅಧ್ಯಕ್ಷ ಟ್ರೂಮನ್ ಅವರೇ ಆ ಯೋಜನೆಯನ್ನು 'ಮಾರ್ಷಲ್ ಯೋಜನೆ' ಎಂದು ಕರೆದು ಜಾರ್ಜ್ ಮಾರ್ಷಲ್ ಅವರಿಗೆ ಗೌರವ ಸಲ್ಲಿಸಿದ್ದರು.

1949ರಿಂದ 1953ರವರೆಗೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ ಮತ್ತೊಬ್ಬ ಚಾಣಾಕ್ಷ ರಾಜತಂತ್ರಜ್ಞ ಎಂದರೆ ಅದು ಡೀನ್ ಆಚಸನ್. ನ್ಯಾಟೊ ಮಿಲಿಟರಿ ಒಕ್ಕೂಟದ ರಚನೆಯಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. 1989ರಿಂದ 1992ರವರೆಗೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿಯಾಗಿ ಕೆಲಸ ಮಾಡಿದವರು ಜೇಮ್ಸ್ ಬೇಕರ್. ಶೀತಲ ಸಮರದ ಅಂತಿಮಘಟ್ಟ ಚಾಲ್ತಿಯಲ್ಲಿದ್ದ ಅವಧಿ ಅದು. ಆನಂತರ ಸೋವಿಯತ್ ವಿಘಟನೆಯೊಂದಿಗೆ ಜಾಗತಿಕ ರಾಜಕೀಯದಲ್ಲಿ ಅಮೆರಿಕ ಏಕಮೇವ ಸೂಪರ್ ಪವರ್ ರಾಷ್ಟ್ರವಾಗಿ ಹೊರಹೊಮ್ಮಿತು. ಈ ಅವಧಿಯಲ್ಲಿ ಬೇಕರ್ ಅವರು ತೆಗೆದುಕೊಂಡ ನಿಲುವು ಪ್ರಶಂಸೆಗೆ ಒಳಪಟ್ಟಿತ್ತು.

ಈ ಸಾಲಿನಲ್ಲಿ ನಂತರ ಎದ್ದು ಕಂಡವರು ಹೆನ್ರಿ ಕಿಸ್ಸಿಂಜರ್. ಮೂಲತಃ ಯಹೂದಿ ಜನಾಂಗಕ್ಕೆ ಸೇರಿದ ಕಿಸ್ಸಿಂಜರ್, ಜರ್ಮನಿಯಿಂದ ನಿರಾಶ್ರಿತರಾಗಿ ಅಮೆರಿಕಕ್ಕೆ ವಲಸೆ ಬಂದವರು. ಕಿಸ್ಸಿಂಜರ್ ಕುಟುಂಬದ 11 ಸದಸ್ಯರು ಜರ್ಮನಿಯಲ್ಲಿ ನಡೆದ ಜನಾಂಗೀಯ ಹತ್ಯೆಯಲ್ಲಿ ಸಾವನ್ನಪ್ಪಿದ್ದರು. ಹೈಂಜ್ ಆಲ್ಫ್ರೆಡ್ ಕಿಸ್ಸಿಂಜರ್ ಅಮೆರಿಕಕ್ಕೆ ಬಂದ ಮೇಲೆ ಹೆನ್ರಿ ಕಿಸ್ಸಿಂಜರ್ ಆದರು. ಇಂಗ್ಲಿಷ್ ಭಾಷೆಯ ಮೇಲೆ ಹಿಡಿತ ಸಾಧಿಸಿದರು. ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿ ಸೇರಿದರು. ಶೇವಿಂಗ್ ಬ್ರಷ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾ ಓದಿದರು. ಪದವಿ ವಿದ್ಯಾರ್ಥಿಯಾಗಿದ್ದಾಗಲೇ ಅವರು ವಿಶ್ವದ ಆಗುಹೋಗುಗಳ ಕುರಿತು ತ್ರೈಮಾಸಿಕವನ್ನು ಹೊರತರುತ್ತಿದ್ದರು. ಅದರಿಂದಾಗಿ, ಇತರ ಜನಪ್ರಿಯ ಮತ್ತು ಶ್ರೇಷ್ಠ ಲೇಖಕರು, ವಿಶ್ಲೇಷಕರ ಗೆಳೆತನ ಅವರಿಗೆ ಸಾಧ್ಯವಾಯಿತು. ಶ್ವೇತಭವನದ ಸಂಪರ್ಕ ಬೆಳೆಯಿತು.

ನಿಕ್ಸನ್ ಅವರ ಅವಧಿಯಲ್ಲಿ ಭದ್ರತಾ ಸಲಹೆಗಾರರಾಗಿ ಮೊದಲ ಮೆಟ್ಟಿಲು ಹತ್ತಿದ ಕಿಸ್ಸಿಂಜರ್ ನಂತರ ವಿದೇಶಾಂಗ ಕಾರ್ಯದರ್ಶಿಯಂತಹ ಉನ್ನತ ಹುದ್ದೆಗೆ ಏರಿದರು. ಆ ಮೂಲಕ ಮೊದಲ ಯಹೂದಿ ವಿದೇಶಾಂಗ ಕಾರ್ಯದರ್ಶಿ, ಅಮೆರಿಕದ ಹೊರಗೆ ಜನ್ಮತಳೆದ ಮೊದಲ ವಿದೇಶಾಂಗ ಕಾರ್ಯದರ್ಶಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಅದುವರೆಗೆ ಆ ಹುದ್ದೆ ಅಮೆರಿಕದ ಶ್ವೇತವರ್ಣೀಯ ಕ್ರೈಸ್ತರಿಗಷ್ಟೇ ಒಲಿದಿತ್ತು!

ಕಿಸ್ಸಿಂಜರ್ ಎಂಟು ವರ್ಷಗಳ ಕಾಲ ಅಮೆರಿಕದ ಅಧ್ಯಕ್ಷರ ಆಪ್ತ ವಲಯದಲ್ಲಿ ಕೆಲಸ ಮಾಡಿದರು. ಸೋವಿಯತ್ ಶಕ್ತಿಯನ್ನು ಮೊಟಕುಗೊಳಿಸಲು ಚೀನಾವನ್ನು ಅಸ್ತ್ರವನ್ನಾಗಿ ಮಾಡಿಕೊಳ್ಳಬೇಕು ಎಂಬುದು ಕಿಸ್ಸಿಂಜರ್ ಆಲೋಚನೆಯಾಗಿತ್ತು. 1971ರಲ್ಲಿ ಪಾಕಿಸ್ತಾನದ ಪ್ರವಾಸಕ್ಕೆ ತೆರಳಿದ್ದ ಕಿಸ್ಸಿಂಜರ್ ಅನಾರೋಗ್ಯದ ನೆಪವೊಡ್ಡಿ, ತಮ್ಮ ತಂಡದಲ್ಲಿದ್ದ ಮಾಧ್ಯಮ ಪ್ರತಿನಿಧಿಗಳನ್ನು ಹಿಂದಕ್ಕೆ ಕಳುಹಿಸಿ, ತಾವು ರಹಸ್ಯವಾಗಿ ಬೀಜಿಂಗ್‌ಗೆ ತೆರಳಿ, ಅಧ್ಯಕ್ಷ ನಿಕ್ಸನ್ ಅವರ ಭೇಟಿಗೆ ಅಗತ್ಯವಿದ್ದುದನ್ನು ಮಾಡಿದರು.

1972ರಲ್ಲಿ ಅಮೆರಿಕ ಮತ್ತು ಚೀನಾ ಅಧಿಕೃತವಾಗಿ ಕೈಕುಲುಕಿದವು. ಕಿಸ್ಸಿಂಜರ್ ಅವರ ಪ್ರಯತ್ನ ಚೀನಾ ಮತ್ತು ಅಮೆರಿಕದ ನಡುವಿನ ದಶಕಗಳ ಹಗೆತನವನ್ನು ಕೊನೆಗೊಳಿಸಿದ್ದಷ್ಟೇ ಅಲ್ಲ, ಚೀನಾದ ಅರ್ಥವ್ಯವಸ್ಥೆಯ ರೂಪಾಂತರಕ್ಕೆ ಅಡಿಪಾಯ ಹಾಕಿತು. ಜಂಟಿ ಘೋಷಣೆಯಲ್ಲಿ ತೈವಾನನ್ನು ಚೀನಾದ ಭಾಗ ಎಂದು ಅಮೆರಿಕ ಒಪ್ಪಿಕೊಂಡಿತು!

1973ರ ಅಕ್ಟೋಬರ್‌ನಲ್ಲಿ ಸಿರಿಯಾ ಮತ್ತು ಈಜಿಪ್ಟ್ ನಾಯಕತ್ವದಲ್ಲಿ ಅರಬ್ ರಾಷ್ಟ್ರಗಳು ಇಸ್ರೇಲ್ ಮೇಲೆರಗಿದ್ದವು. ಈ ಯುದ್ಧ ಕೊನೆಗೊಳ್ಳುವಲ್ಲಿ ಕಿಸ್ಸಿಂಜರ್ ಅವರ ಪಾತ್ರ ಹಿರಿದಾಗಿತ್ತು. ಕಿಸ್ಸಿಂಜರ್ ಕೈಗೊಂಡ 'ಶಟಲ್ ಡಿಪ್ಲೊಮಸಿ' ಬಹಳ ಪ್ರಸಿದ್ಧವಾದದ್ದು. ತಕ್ಷಣಕ್ಕೆ ಅದು ಫಲ ನೀಡದಿದ್ದರೂ ನಂತರ ಜಿಮ್ಮಿ ಕಾರ್ಟರ್ ಅವರ ಅವಧಿಯಲ್ಲಿ ಶಾಂತಿ ಒಪ್ಪಂದಕ್ಕೆ ಇಸ್ರೇಲ್ ಮತ್ತು ಈಜಿಪ್ಟ್ ಅಂಕಿತ ಹಾಕಿದವು.

ಕಿಸ್ಸಿಂಜರ್ ಅವರ ಕುರಿತು ಟೀಕೆಗಳೂ ಇದ್ದವು. ವಿಯೆಟ್ನಾಂ ಯುದ್ಧದ ವಿಷಯದಲ್ಲಿ ಅವರು ತಳೆದ ನಿಲುವು ಆ ಯುದ್ಧ ದೀರ್ಘಾವಧಿಗೆ ಮುಂದುವರಿಯಲು, ಕಾಂಬೋಡಿಯಾಕ್ಕೆ ವಿಸ್ತಾರಗೊಳ್ಳಲು ಕಾರಣವಾಯಿತು. ಕಿಸ್ಸಿಂಜರ್ ಮತ್ತು ವಿಯೆಟ್ನಾಂನ ಲೆ ಡಕ್ ಥೋ ಅವರು ವಿಯೆಟ್ನಾಂ ಯುದ್ಧದಲ್ಲಿ ಅಮೆರಿಕದ ಸೇನಾ ಭಾಗವಹಿಸುವಿಕೆಯನ್ನು ಕೊನೆಗೊಳಿಸಲು ನಡೆಸಿದ ರಹಸ್ಯ ಮಾತುಕತೆಗಳಿಂದ 1973ರ ಪ್ಯಾರಿಸ್ ಒಪ್ಪಂದ ಏರ್ಪಟ್ಟಿತು. ನೊಬೆಲ್ ಶಾಂತಿ ಪುರಸ್ಕಾರವನ್ನು ಇಬ್ಬರಿಗೂ ನೀಡಲಾಯಿತು. ಆದರೆ ಲೆ ಡಕ್ ಥೋ ಅವರು ಪ್ರಶಸ್ತಿಯನ್ನು ಕಿಸ್ಸಿಂಜರ್ ಅವರ ಜೊತೆ ಹಂಚಿಕೊಳ್ಳಲು ನಿರಾಕರಿಸಿ, ಅದನ್ನು ತಿರಸ್ಕರಿಸಿದರು.

ಕಿಸ್ಸಿಂಜರ್ ರಾಜತಾಂತ್ರಿಕತೆಯ ಮುಖ್ಯ ಪಾತ್ರಧಾರಿಯಾಗಿ ಕಾರ್ಯನಿರ್ವಹಿಸಿದ್ದು ಮಾತ್ರವಲ್ಲದೆ, ಅಮೆರಿಕದ ವಿದೇಶಾಂಗ ಕಚೇರಿಯಿಂದ ಹೊರಬಂದ ಮೇಲೆ ಜಾಗತಿಕ ರಾಜಕಾರಣದ ವಿಶ್ಲೇಷಕನಾಗಿಯೂ ಜನಪ್ರಿಯರಾದರು. ವಿದೇಶಾಂಗ ಕಾರ್ಯದರ್ಶಿ ಹುದ್ದೆಯಲ್ಲಿ ಆ ಮೊದಲು ಇದ್ದವರು ಗಳಿಸಿದ ಅಧಿಕಾರ, ಖ್ಯಾತಿ ಮತ್ತು ಸಂಪತ್ತಿಗಿಂತ ಹೆಚ್ಚಿನದನ್ನು ಕಿಸ್ಸಿಂಜರ್ ಪಡೆದುಕೊಂಡರು. ಆದರ್ಶಗಳನ್ನು ಕೈಬಿಟ್ಟರು. ತಾವು ಗಳಿಸಿಕೊಂಡ ಹೆಸರು, ಖ್ಯಾತಿ ಮತ್ತು ಸಂಪರ್ಕಗಳನ್ನು ಬಳಸಿ ವಿಶ್ವದಾದ್ಯಂತ ಬ್ಯಾಂಕುಗಳು, ವಿಮಾ ಕಂಪನಿಗಳು, ವಾಹನ ಮತ್ತು ಔಷಧ ತಯಾರಿಕಾ ಕಂಪನಿಗಳ ಸಮಸ್ಯೆಗಳಿಗೆ ಪರಿಹಾರ ಹುಡುಕಿಕೊಡುವ ಕೆಲಸ ಮಾಡಿ ಹಣ ಗಳಿಸಿದರು.

ಒಟ್ಟಾರೆಯಾಗಿ ಹೇಳಬೇಕೆಂದರೆ, ನಿರಾಶ್ರಿತನಾಗಿ ಅಮೆರಿಕಕ್ಕೆ ಬಂದ ಕಿಸ್ಸಿಂಜರ್, ವಿದೇಶಾಂಗ ನೀತಿ ನಿಪುಣನಾಗಿ ಜಗತ್ತಿಗೆ ಪರಿಚಯವಾದರು. ಅಮೆರಿಕ ಕಂಡ ಶ್ರೇಷ್ಠ ವಿದೇಶಾಂಗ ಕಾರ್ಯದರ್ಶಿ ಎಂದು ಅವರನ್ನು ಕರೆಯಲು ಸಾಧ್ಯವಿಲ್ಲದಿದ್ದರೂ ಜಾಗತಿಕ ರಾಜಕಾರಣದ ಮೇಲೆ ಪ್ರಭಾವ ಬೀರಿದ, ಅಮೆರಿಕದ ಏಳುಬೀಳುಗಳಿಗೆ ಸಾಕ್ಷಿಯಾದ, ಕೊನೆಯವರೆಗೂ ತನ್ನ ಇರುವಿಕೆಯನ್ನು ನೆನಪಿಸುತ್ತಿದ್ದ ಚಾಣಾಕ್ಷ ವಿಶ್ಲೇಷಕ ಎಂದು ಕಿಸ್ಸಿಂಜರ್ ಅವರನ್ನು ಕರೆಯಬಹುದು.

ಎಂತಹ ಪ್ರಚಂಡ ತಂತ್ರಗಾರನಿಗೂ ಕೆಲವು ವಿಷಯಗಳಲ್ಲಿ ಕಣ್ಕತ್ತಲೆ ಆವರಿಸುತ್ತದೆ. ಚೀನಾದೊಂದಿಗೆ ಅಮೆರಿಕದ ಸಂಬಂಧ ಸುಧಾರಿಸಿಕೊಳ್ಳಬೇಕು ಎಂದು ಕಿಸ್ಸಿಂಜರ್ ಪ್ರತಿಪಾದಿಸಿ ಆ ದಿಸೆಯಲ್ಲಿ ಹೆಜ್ಜೆಯಿರಿಸಿದಾಗ, ಇದರಿಂದಾಗಿ ಚೀನಾ ಆರ್ಥಿಕವಾಗಿ ವೇಗದ ಬೆಳವಣಿಗೆ ಕಾಣುತ್ತದೆ ಮತ್ತು ಮುಂದೊಂದು ದಿನ ಅಮೆರಿಕಕ್ಕೆ ಪ್ರತಿಸ್ಪರ್ಧಿಯಾಗಿ ಹೊರಹೊಮ್ಮುತ್ತದೆ ಎಂಬುದನ್ನು ಅರಿಯುವಲ್ಲಿ ಅವರು ಸೋತಿದ್ದರು. 2023ರ ಜುಲೈನಲ್ಲಿ ಅವರು ಕೊನೆಯ ಬಾರಿಗೆ ಚೀನಾಕ್ಕೆ ಭೇಟಿಯಿತ್ತಿದ್ದರು. ನೂರು ದಾಟಿದ್ದ ವೃದ್ಧ ರಾಜತಂತ್ರಜ್ಞನ ಮನಸ್ಸಿನಲ್ಲಿ ಏನೆಲ್ಲಾ ಭಾವನೆಗಳು ಹಾದುಹೋಗಿದ್ದವೋ, ಅದನ್ನು ಅವರು ದಾಖಲಿಸಿದಂತಿಲ್ಲ.

ಚುರುಮುರಿ



ರಾಜಕೀಯ ಕಾಯಿಲೆ

• ಲಿಂಗರಾಜು ಡಿ.ಎಸ್.

ಅವತ್ತು ಪಾರ್ಕಿನಲ್ಲಿ ಡಾಕ್ಟರೊಬ್ಬರು ವಯಸ್ಸಾದ ಮೇಲೆ ಬರೋ ಕಾಯಿಲೆಗಳ ಬಗ್ಗೆ ಉಪನ್ಯಾಸ ಕೊಡ್ತಾ ಇದ್ರು.

'ವಯಸ್ಸಾದ ಮೇಲೆ ದೇಹ ಸೊರಗುತ್ತೆ. ಮೂಳೆ ಸವೀತದೆ, ಸೊಂಟನೋವು, ಮಂಡಿನೋವು, ಕಾಲುನೋವು, ಸುಸ್ತು ಕಾಣಿಸ್ಗತವೆ. ಇವುಕ್ಕೆ ಒಂದೇ ಮದ್ದು ಪೇನ್ ಮ್ಯಾನೇಜ್‌ಮೆಂಟ್' ಅಂದ್ರು. ತುರೇಮಣೆ ಸಟಕ್ಕನೆ ಎದ್ದು ನಿಂತರು.

'ಡಾಕ್ಟರೇ, ನೀವು ಹೇಳಿದ ಕಾಯಿಲೆಗಳು ವಯಸ್ಸಾದ ಮ್ಯಾಲೆ ದೇಹಕ್ಕೆ ಅಮರಿಕ್ಯತವೆ. ಒಪ್ಪಿಕ್ಯಂದೆ! ಅದೇ ಥರ ರಾಜಕೀಯದಲ್ಲೂ ಥರಂಥರ ಕಾಯಿಲೆಗಳು ಕಾಣಿಸ್ಗತವೆ ಅನ್ನೋದು ನಿಮಗೆ ಗೊತ್ರಾ? ಇಂಥಾ ರಾಜಕೀಯದ ಕಾಯಿಲೆಗಳಿಗೆ ಗೆಯ್ನ್ ಮ್ಯಾನೇಜ್‌ಮೆಂಟ್ ಒಂದೇ ಕಾರಣ' ಅಂತಂದರು.

'ರಾಜಕೀಯದಲ್ಲಿ ಇಂಥಾ ಕಾಯಿಲೆಗಳು ಕಾಣಿಸ್ಗಳ್ಳೋ ಕಾರಣ ಏನು?' ಇನ್ನೊಬ್ಬರು ಕೇಳಿದರು.

'ಅಧಿಕಾರ ಸಿಕ್ಕದಿದ್ದಾಗ ಏನೂ ಗೆಯ್ನ್ ಆಗಕುಲ್ಲ. ಆಗ ಬರೋ ರೆಬೆಲ್ ಕಾಯಿಲೆಯಿಂದ ಹೊಟ್ಟುರಿ, ವಾಯುದೇಗು ಕಾಣಿಸಿಕ್ಯತವೆ. ಸ್ವಾಮುವಾದಿ ಸುರುವಾಯ್ತದೆ, ಹೂವಿನ ವಾಸನೆಗೆ ಅಲರ್ಜಿಯಾಗಿ ಸೀನು ಬತ್ತವೆ, ಪುಳ್ಳೆ ಹಾಕೋರು ಹೆಚ್ಚಾದಾಗ ಉಸಿರು ಕಟ್ತದೆ, ಆಗಾಗ 'ನೀರುಕಡೆ ಹೋಗಿ ಬತ್ತೀನಿ' ಅಂತ ಫಾರಿನ್ನಿಗೋಯ್ತರೆ' ಅಂತಂದ್ರು ತುರೇಮಣೆ.

'ರಾಜಕೀಯ ಕಾಯಿಲೆಗಳ ಪರಿಸ್ಥಿತಿ ಹ್ಯಂಗೆ ಸಾ?' ಅಂತ ಮತ್ತೊಬ್ಬರು ಕೇಳಿದರು.

'ದಿಲ್ಲಿ ಡಾಕ್ಟರುಗಳು ಬಂದು ಹೋದ್ರೂ ಘಟಾನುಘಟಿಗಳೇ ಶಾಕು ಹೊಡ್ದು ಕುಂತುಬುಟ್ರು. ಸೋತೋರಿಗೆ ಯಾವ ಟಾನಿಕ್ಕೂ ಮೈಗೆ ಹತ್ತುತಾ ಇಲ್ಲ. ಅದುಕ್ಕೆ ಕುಣುಗಲಲ್ಲಿ ರಾಜಕೀಯ ಕುದುರೆಗಳ ತಳಿ ಸಂವರ್ಧನೆ ಮಾಡಕ್ಕೆ ಹೊಂಟವ್ರೆ!' ತುರೇಮಣೆ ವಿಶ್ಲೇಷಣೆ ಮಾಡಿದರು.

'ಈ ಚಳಿಗಾಲದೇಲಿ ಜನಕ್ಕೆ ಏನೇನು ಕಾಯಿಲೆ ಬರಬೈದು ಸಾ' ನಾನು ಕೇಳಿದೆ.

'ಭ್ರಷ್ಟಾಚಾರದ ಬಗ್ಗೆ ಮಾತಾಡಿಕ್ಯಂದು ನಮ್ಮ ಕಿವಿ ಮ್ಯಾಲೆ ಹೂವಿಡೋ ಗಟ್ಟು ಕಾಯಿಲೆ ಕಾಡ್ತಾ ಅದೆ ಕಪ್ಪಾ. ಈಗ ಹುಲಿ- ಸಿಂಹದ ಜಾದೂ ಆಟ ನೋಡ್ರಿ!' ಅಂತಂದರು.

ಸಂಗತ

ಭೂಮಿ ಕಳೆದಿದೆ... ಹುಡುಕಿಕೊಡಿ

ರಾಜ್ಯದಲ್ಲಿ ಜಾರಿಯಲ್ಲಿರುವ ವಿವಿಧ ಕಾನೂನುಗಳ ಬೇಲಿಗಳನ್ನು ದಾಟಿ ಭೂಕಬಳಿಕೆ ನಡೆಯುತ್ತಲೇ ಇರುವುದು ಆತಂಕಕ್ಕೆ ಕಾರಣವಾಗಿದೆ

• ಮಲ್ಲಿಕಾರ್ಜುನ ಹೆಗ್ಗಳಗಿ

ಬಾಗಲಕೋಟೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಈಚೆಗೆ ಚಾಲುಕ್ಯ ಅಭಿವೃದ್ಧಿ ಪ್ರಾಧಿಕಾರದ ಸಭೆ ನಡೆಯಿತು. ಐಹೊಳೆಯಲ್ಲಿ ಚಾಲುಕ್ಯರು ನಿರ್ಮಿಸಿದ ಐತಿಹಾಸಿಕ ಸ್ಮಾರಕಗಳ ಸುತ್ತಮುತ್ತಲಿನ ಪ್ರದೇಶವನ್ನು ಕೆಲವರು ಒತ್ತುವರಿ ಮಾಡಿ, ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇದರಿಂದ ಐಹೊಳೆಯನ್ನು ಆಕರ್ಷಕ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸುವುದಕ್ಕೆ ತೊಂದರೆಯಾಗಿದೆ. ಅಲ್ಲಿಗೆ ಬರುವ ಪ್ರವಾಸಿಗರ ಸಂಖ್ಯೆ ಕೂಡ ಕಡಿಮೆಯಾಗ ತೊಡಗಿದೆ ಎಂಬ ಆತಂಕ ಸಭೆಯಲ್ಲಿ ವ್ಯಕ್ತವಾಯಿತು.

ದೇಶದೆಲ್ಲೆಡೆ ದೇವಾಲಯಗಳು, ಐತಿಹಾಸಿಕ ಸ್ಮಾರಕಗಳು, ಗೋಮಾಳ, ಸರ್ಕಾರಿ ಸಂಸ್ಥೆ, ಸಹಕಾರಿ ಸಂಸ್ಥೆಗಳ ಭೂಮಿಯ ಅತಿಕ್ರಮಣ ದೊಡ್ಡ ಪ್ರಮಾಣದಲ್ಲಿ ನಡೆದಿದೆ. ಹಣಕಾಸಿನ ಭ್ರಷ್ಟಾಚಾರಕ್ಕಿಂತಲೂ ದೊಡ್ಡ ಅಕ್ರಮವಾಗಿದೆ ಭೂಕಬಳಿಕೆ.

ಕೇಂದ್ರ ಸರ್ಕಾರದ ಡಿಜಿಟಲ್ ಭೂ ದಾಖಲೀಕರಣ ಯೋಜನೆ (ನ್ಯಾಷನಲ್ ಜನೆರಿಕ್ ಡಾಕ್ಯುಮೆಂಟ್ ರಿಜಿಸ್ಟ್ರೇಷನ್ ಸಿಸ್ಟಂ– ಎನ್‌ಜಿಡಿಆರ್‌ಎಸ್) ಉಪಯುಕ್ತವಾದುದು. ಇದು ಪರಿಣಾಮಕಾರಿಯಾಗಿ ಜಾರಿಯಾದರೆ ದೇಶದ ಒಟ್ಟು ಭೂಸಂಪತ್ತನ್ನು ಕಟ್ಟುನಿಟ್ಟಾಗಿ ರಕ್ಷಿಸಬಹುದು. ಆದರೆ ಅದನ್ನು ವ್ಯವಸ್ಥಿತವಾಗಿ ಜಾರಿಗೆ ತರುವ ಕಾರ್ಯ ನಡೆಯುತ್ತಿಲ್ಲ. ರಾಜ್ಯ ಮಟ್ಟದಲ್ಲಿ, ಹಸಿರು ವಲಯಕ್ಕೆ ಸೇರಿದ ಭೂಮಿಯನ್ನು ಕೈಗಾರಿಕೆಗೆ ಬಳಸಿದರೆ, ಕೈಗಾರಿಕೆ ಸ್ಥಾಪನೆ ಉದ್ದೇಶಕ್ಕೆ ಪಡೆದ ಜಮೀನನ್ನು ಬೇರೆ ಉದ್ದೇಶಕ್ಕೆ ಬಳಸಿದರೆ ಮುಟ್ಟುಗೋಲು ಹಾಕಿಕೊಳ್ಳುವ ಕಾನೂನುಗಳು ಜಾರಿಯಲ್ಲಿವೆ. ಆದರೆ ಎಲ್ಲ ಬೇಲಿಗಳನ್ನೂ ದಾಟಿ ಭೂಕಬಳಿಕೆ ನಡೆಯುತ್ತಲೇ ಇದೆ. ಕಾನೂನುಗಳು ಕಟ್ಟುನಿಟ್ಟಾಗಿ ಪಾಲನೆಯಾಗದಿರುವುದು ಆತಂಕಕಾರಿ.

ಭೂಕಬಳಿಕೆ ಮತ್ತು ಒತ್ತುವರಿಯಿಂದಾಗಿ ನದಿಗಳು ಹರಿಯುವ ದಿಕ್ಕು ಕೂಡ ಬದಲಾಗುತ್ತಿರುವುದು ಅತ್ಯಂತ ಗಂಭೀರ ಸಮಸ್ಯೆಯಾಗಿದೆ. ಬಾಗಲಕೋಟೆ ಜಿಲ್ಲೆಯಲ್ಲಿ ಹರಿಯುವ ಮಲಪ್ರಭಾ, ಘಟಪ್ರಭಾ, ಕೃಷ್ಣಾ ನದಿ ಪಾತ್ರದ ಭೂಮಿಯನ್ನು ಕೆಲವರು ಒತ್ತುವರಿ ಮಾಡಿಕೊಂಡು ಕೃಷಿ ಭೂಮಿಯನ್ನಾಗಿ ಪರಿವರ್ತಿಸಿದ್ದಾರೆ. ಇದರ ಪರಿಣಾಮವಾಗಿ, ನದಿಗಳು ಹರಿಯುವ ಮಾರ್ಗ ಬದಲಾಗಿದೆ. ಪ್ರವಾಹದ ನೀರು ಹೊಲಗಳು, ಗ್ರಾಮಗಳಿಗೆ ನುಗ್ಗಿ ಅಪಾರ ಪ್ರಮಾಣದಲ್ಲಿ ಹಾನಿಯನ್ನು ಉಂಟುಮಾಡಿದ ನಿದರ್ಶನಗಳಿವೆ. ಪ್ರವಾಹ ಬಂದಾಗ ಒತ್ತುವರಿ ತೆರವು ಮಾಡುವ, ಕಠಿಣ ಕ್ರಮ ಜರುಗಿಸುವ ಮಾತುಗಳು ಕೇಳಿಬರುತ್ತವೆ. ನಂತರ ಎಲ್ಲರೂ ಮರೆತುಬಿಡುತ್ತಾರೆ.

ನದಿಗಳ ಮಾದರಿಯಲ್ಲೇ ಬಹಳಷ್ಟು ಹಳ್ಳಗಳು, ಕೆರೆಗಳು ಸಹ ಒತ್ತುವರಿಯಿಂದ ಮಾಯವಾಗಿವೆ. ಅಶೋಕ್ ನರೋಡೆ ಅವರು ಮನಕಲಕುವಂತೆ ಬರೆದ 'ನಮ್ಮೂರ ಹಳ್ಳ ಕಳೆದಿದೆ' ಎಂಬ ಪ್ರಬಂಧ ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ. ಭೂಒಡೆತನದ ಮುಖ್ಯ ದಾಖಲೆಯಾದ ಉತಾರದಲ್ಲಿ (ಆರ್‌ಟಿಸಿ) ಮಾಲೀಕ ಹೊಂದಿದ ಭೂಮಿಯ ವ್ಯಾಪ್ತಿಯು ಎಕರೆ ಮತ್ತು ಗುಂಟೆಗಳಲ್ಲಿ ದಾಖಲಾಗಿರುತ್ತದೆ. ಈ ವ್ಯಾಪ್ತಿಯನ್ನು ಮೀರಿ ಯಾವುದೇ ವ್ಯಕ್ತಿ ಹೆಚ್ಚುವರಿ ಭೂಮಿ ಹೊಂದಿದ್ದರೆ ಅದು ಖಂಡಿತವಾಗಿ ಒತ್ತುವರಿ ಆಗಿರುತ್ತದೆ. ಕೃಷಿಗೆ ಯೋಗ್ಯವಲ್ಲದ ಭೂಮಿಯನ್ನು 'ಕರಾಬು' ಭೂಮಿ ಎಂದು ಪರಿಗಣಿಸಲು ಅವಕಾಶವಿದೆ. ತಮ್ಮ ಅಧಿಕೃತ ಭೂಮಿಗೆ ಹೊಂದಿಕೊಂಡ ಸರ್ಕಾರಿ ಅಥವಾ ಸಂಸ್ಥೆಗಳ ಭೂಮಿಯನ್ನು ಕರಾಬು ಭೂಮಿ ಎಂದು ಹೇಳಿ ಕೆಲವರು ಲಾಭ ಪಡೆದುಕೊಳ್ಳುತ್ತಿದ್ದಾರೆ. ಕರಾಬು ಭೂಮಿಯ ಅಧಿಕೃತ ಮಾಲೀಕತ್ವ ಮತ್ತು ಅಳತೆಯ ದಾಖಲೀಕರಣವನ್ನು ಕಡ್ಡಾಯಗೊಳಿಸಿ ಅದಕ್ಕೆ ಕಂದಾಯ ನಿಗದಿಪಡಿಸಿದರೆ ಒತ್ತುವರಿ ತಡೆಯಬಹುದಾಗಿದೆ.

ರಾಜ್ಯದಲ್ಲಿ ಎರಡು ಲಕ್ಷ ಎಕರೆ ಅರಣ್ಯ ಭೂಮಿ ಒತ್ತುವರಿಯಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಹೇಳಿದ್ದಾರೆ. ಇದರಿಂದ ವನ್ಯಜೀವಿಗಳು ಗ್ರಾಮಗಳು, ಹೊಲಗಳಿಗೆ ನುಗ್ಗಿ ಹಾನಿ ಉಂಟುಮಾಡುತ್ತಿವೆ. ಅರಣ್ಯ ಭೂಮಿ ಒತ್ತುವರಿ ತೆರವಿಗೆ ಪ್ರಯತ್ನಿಸಿದ ಅಧಿಕಾರಿಗಳ ಮೇಲೆ ಜನಪ್ರತಿನಿಧಿಗಳ ಕುಮ್ಮಕ್ಕಿನಿಂದಲೇ ಹಲ್ಲೆ ನಡೆದಿರುವ ಪ್ರಕರಣಗಳು ವರದಿಯಾಗಿವೆ. ಒತ್ತುವರಿಗೆ ಜನಪ್ರತಿನಿಧಿಗಳ ಪರೋಕ್ಷ ಬೆಂಬಲ ಇರುವುದನ್ನು ಇದು ಸ್ಪಷ್ಟಪಡಿಸುತ್ತದೆ.



ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ 1974ರಲ್ಲಿ ಅನುಷ್ಠಾನಕ್ಕೆ ತಂದ ಭೂಸುಧಾರಣೆ ಕಾಯ್ದೆಯ ಫಲವಾಗಿ ಸುಮಾರು ಎಂಟು ಲಕ್ಷ ಕೃಷಿ ಕಾರ್ಮಿಕರು ಭೂಮಾಲೀಕರಾದರು. ಜಮೀನ್ದಾರಿ ಪದ್ಧತಿಗೆ ಬ್ರೇಕ್ ಹಾಕಲಾಯಿತು. ಕೃಷಿ ಉತ್ಪಾದನೆಯ ಭೂಮಿಯ ಪ್ರಮಾಣವನ್ನು ಹೆಚ್ಚಿಸಲಾಯಿತು. ಉಳುವವನೇ ಭೂ ಒಡೆಯನಾಗಬೇಕು ಎಂಬುದು ಅರಸು ಅವರ ಚಿಂತನೆಯಾಗಿತ್ತು. ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದಾಗ ಹೊಂದಿದ್ದ 28 ಎಕರೆ ಸ್ವಂತದ ಭೂಮಿಯು ಅಧಿಕಾರ ತ್ಯಜಿಸಿದಾಗ 24 ಎಕರೆಗೆ ಇಳಿದಿತ್ತು. ತಮ್ಮ ಗೇಣಿದಾರನಿಗೆ 4 ಎಕರೆ ಭೂಮಿಯನ್ನು ಸ್ವತಃ ಬಿಟ್ಟುಕೊಟ್ಟಿದ್ದರು. ಅರಸು ಅವರ ನಿಷ್ಠುರ ನಡೆಯಿಂದ ಅನೇಕ ಬಡವರು ಸ್ವಂತದ ಭೂಮಿ ಪಡೆದು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳುವ ಅವಕಾಶ ದೊರೆಯಿತು.

ತಂತ್ರಜ್ಞಾನ ಬಹಳಷ್ಟು ಬೆಳೆದಿದೆ. ಮೂಲೆಯಲ್ಲಿ ಕುಳಿತು ವಿಶ್ವದ ಪ್ರತಿ ವಸ್ತುವಿನ ನಕ್ಷೆ ತಯಾರಿಸಬಹುದು. ಡಿಜಿಟಲೀಕರಣ ಅತ್ಯಂತ ಪರಿಣಾಮಕಾರಿ ವ್ಯವಸ್ಥೆಯಾಗಿದೆ. ಕಾನೂನು ರಚಿಸಿದರಷ್ಟೇ ಸಾಲದು, ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದು ಬಹಳ ಅವಶ್ಯ. ಭೂಕಬಳಿಕೆಯನ್ನು ಗಂಭೀರವಾಗಿ ಪರಿಗಣಿಸಿ ಇನ್ನಷ್ಟು ಕಠಿಣ ಶಿಕ್ಷೆ ವಿಧಿಸುವ ಕಾನೂನು ಕೂಡ ಜಾರಿಯಾಗಬೇಕು.

ವಾಚಕರ ವಾಣಿ

ಕನ್ನಡ ಮಾಧ್ಯಮ: ಇದೆ ತೊಡಕು

ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡುತ್ತಿರುವ ಸರ್ಕಾರಿ ಶಾಲೆಗಳ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಅಲ್ಲಿ ಕನಿಷ್ಠ ಮೂಲ ಸೌಕರ್ಯಗಳೂ ಇಲ್ಲ. ಹಾಗೂ ಹೀಗೂ ಕನ್ನಡ ಮಾಧ್ಯಮದಲ್ಲಿ ಉನ್ನತ ಶಿಕ್ಷಣ ಪಡೆದ ಜ್ಞಾನಿಗಳಿಗೆ ಹಿಂದಿ, ಇಂಗ್ಲಿಷ್ ಭಾಷಿಕರಿಗೆ ಇರುವ ಅನುಕೂಲ ಮತ್ತು ಅವಕಾಶಗಳು ಇಲ್ಲ. ಕೇಂದ್ರ ಸರ್ಕಾರವು ನಡೆಸುವ ಬಹುತೇಕ ಉದ್ಯೋಗ ನೇಮಕಾತಿ ಪರೀಕ್ಷೆಗಳು ಹಿಂದಿ ಜೊತೆಗೆ ಇಂಗ್ಲಿಷ್‌ನಲ್ಲಷ್ಟೇ ಇರುತ್ತವೆ. ವಿಜ್ಞಾನ, ತಂತ್ರಜ್ಞಾನದ ಉನ್ನತ ಶಿಕ್ಷಣವನ್ನು ನಮಗೆ ಇಂದಿಗೂ ಕನ್ನಡ ಮಾಧ್ಯಮದಲ್ಲಿ ಕೊಡಲು ಸಾಧ್ಯವಾಗಿಲ್ಲ. ಅಲ್ಲದೆ ಶಾಲಾ ಹಂತದಲ್ಲಿ ಕೊಡುತ್ತಿರುವ ಕನ್ನಡ ಮಾಧ್ಯಮದ ವಿಜ್ಞಾನ ಶಿಕ್ಷಣದ ಭಾಷೆಯೂ ಕಬ್ಬಿಣದ ಕಡಲೆಯಾಗಿದೆ. ಸರಳವಾದ ಭಾಷೆಯಲ್ಲಿಲ್ಲ. ಇಂತಹ ಹತ್ತಾರು ತೊಡಕುಗಳಿವೆ. ಇವುಗಳನ್ನು ನಿವಾರಿಸಲು ಸರ್ಕಾರ ದಿಟ್ಟ ಹೆಜ್ಜೆ ಇಟ್ಟರೆ ಮಾತ್ರ ಕನ್ನಡ ಮಾಧ್ಯಮದ ಶಿಕ್ಷಣ ಸಹಜವಾಗಿ ಆಕರ್ಷಣೆ ಪಡೆಯುತ್ತದೆ. ಅಲ್ಲಿಯತನಕ ಕನ್ನಡ ಮಾಧ್ಯಮದ ಶಿಕ್ಷಣದ ಬಗ್ಗೆ ಯಾರು ಎಷ್ಟೇ ಮಾತನಾಡಿದರೂ ಹೆಚ್ಚಿನ ಪ್ರಯೋಜನ ಸಿಗಲಾರದು. ಈ ದಿಸೆಯಲ್ಲಿ ಸರ್ಕಾರದ ಮೇಲೆ ಒತ್ತಡ ಹೇರುವ ಪ್ರಯತ್ನಕ್ಕೆ ಬಲ ತುಂಬಬೇಕಾಗಿರುವುದು ಇಂದಿನ ಅಗತ್ಯ.

ಗಿರೀಶ್ ಮತ್ತೇರ, ಯರಗಟ್ಟಿಹಳ್ಳಿ, ಚನ್ನಗಿರಿ

ಆಚರಣೆ ಅರ್ಥಪೂರ್ಣವಾಗಿರಬೇಕು

ಪ್ರತಿವರ್ಷ ಡಿಸೆಂಬರ್ 31ರ ರಾತ್ರಿ ಹೊಸ ವರ್ಷವನ್ನು ಸ್ವಾಗತಿಸಲು ವಿಶೇಷವಾಗಿ ಯುವಕ–ಯುವತಿಯರು ಉತ್ಸಾಹದಿಂದ ಸಕ್ರಿಯರಾಗಿಬಿಡುತ್ತಾರೆ. ಅರ್ಥಪೂರ್ಣ ಆಚರಣೆಗೆ ಯಾರದೂ ತಕರಾರಿಲ್ಲ. ಆದರೆ, ನಗರಗಳಿಂದ ಹಿಡಿದು ಸಣ್ಣಪುಟ್ಟ ಹಳ್ಳಿಗಳವರೆಗೂ ಬಾರ್, ಪಬ್, ರೆಸ್ಟೋರೆಂಟ್‌ಗಳ ಮುಂದೆ ಉದ್ದನೆಯ ಸರತಿಸಾಲುಗಳ ದೃಶ್ಯ, ನೂಕುನುಗ್ಗಲು ಚಿಂತೆಗೆ ಹಚ್ಚುವಂತಹ ಸಂಗತಿ.

ಮದ್ಯಸೇವನೆಯು ಕೆಲವೆಡೆ ಗಲಾಟೆ, ಘರ್ಷಣೆಗಳಿಗೆ, ಅಪಘಾತಗಳಿಗೂ ಕಾರಣವಾಗುವುದುಂಟು. ಪೊಲೀಸರು ಇದನ್ನೆಲ್ಲಾ ಹತೋಟಿಗೆ ತರಲು ಹರಸಾಹಸ ಮಾಡಬೇಕಾಗುತ್ತದೆ. ಯುವಪೀಳಿಗೆಯು ಸ್ವಯಂನಿಯಂತ್ರಣ ಮಂತ್ರ ಮರೆತಿರುವುದು ಸರಿಯಲ್ಲ. ಹಿಂದಿನ ವರ್ಷದ ತಮ್ಮ ತಪ್ಪು ವರ್ತನೆಗಳನ್ನು ಗುರುತಿಸಿಕೊಂಡು, ಹೊಸ ವರ್ಷದಲ್ಲಿ ಅವು ಮರುಕಳಿಸದಂತೆ ಪಣ ತೊಡುವುದು, ಗೆಳೆಯರು ಒಂದೆಡೆ ಸೇರಿ ಒಳ್ಳೆಯ ಸಂಗೀತ ಆಲಿಸುವುದು, ಸಿನಿಮಾ ನೋಡುವುದು, ಒಟ್ಟಿಗೆ ಊಟ ಮಾಡುವುದು, ಹರಟುವುದು ಇವೆಲ್ಲ ಹೊಸ ವರ್ಷದ ಸಂಭ್ರಮವನ್ನು ಹೆಚ್ಚಿಸಬಲ್ಲವು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ದುಡ್ಡಿಗೆ ಬೆಲೆ ಇಲ್ಲವೇ?

ದಿನಬೆಳಗಾದರೆ ಪತ್ರಿಕೆಗಳಲ್ಲಿ ಕೋಟಿ, ನೂರು ಕೋಟಿ, ಸಾವಿರ ಕೋಟಿ, ನಾಲ್ಕು ಸಾವಿರ ಕೋಟಿ, ನಲವತ್ತು ಸಾವಿರ ಕೋಟಿ ರೂಪಾಯಿ ಮೊತ್ತದ ಹಗರಣಗಳ ವಿಚಾರವೇ ಇರುತ್ತದೆ. ದುಡ್ಡಿಗೆ ಬೆಲೆ ಇಲ್ಲವೇ?

ಎಸ್.ಎನ್. ಕೃಷ್ಣಮೂರ್ತಿ, ಕಡೂರು

ನಾಮಫಲಕ: ಕನ್ನಡಕ್ಕೆ ಇರಲಿ ಪ್ರಾಧಾನ್ಯ

ಅಂಗಡಿ, ಮಳಿಗೆಯಂತಹ ವ್ಯಾಪಾರ ಸಂಸ್ಥೆಗಳ ನಾಮಫಲಕಗಳಲ್ಲಿ ಶೇಕಡ 60ರಷ್ಟು ಕನ್ನಡ ಇದ್ದರಷ್ಟೇ ಸಾಲದು. ಇನ್ನುಳಿದ ಶೇಕಡ 40ರಷ್ಟಿರುವ ಅನ್ಯಭಾಷೆಯ ಅಕ್ಷರಗಳ ಗಾತ್ರಕ್ಕೆ ಹೋಲಿಸಿದಾಗ ಕನ್ನಡ ಅಕ್ಷರಗಳ ಗಾತ್ರವು ದೊಡ್ಡದಾಗಿ, ಪ್ರಧಾನವಾಗಿ ಇರಬೇಕು. ಈ ದಿಸೆಯಲ್ಲಿ ನಿಯಮಗಳನ್ನು ರೂಪಿಸಬೇಕು. ಆಗಲೇ ಸರ್ಕಾರವು ಕನ್ನಡಕ್ಕೆ ಮಾನ್ಯತೆಯನ್ನು ನೀಡಿದಂತೆ ಆಗುತ್ತದೆ.

ಸಾಮಗ ದತ್ತಾತ್ರಿ, ಬೆಂಗಳೂರು

ಮರುಪಾವತಿ ಇಲ್ಲವೆಂದರೆ ಅಧಿಕಾರವೂ ಇರದು!

ಆರೋಗ್ಯ ಸಚಿವರ ಆಪ್ತ ಕಾರ್ಯದರ್ಶಿಯು ಸಚಿವರಂತೆಯೇ ಸರ್ಕಾರದ ಅಧಿಕೃತ ಪ್ರವಾಸ ಕಾರ್ಯಕ್ರಮದ (ಟಿ.ಪಿ) ವೇಳಾಪಟ್ಟಿ ಹಾಕಿಕೊಂಡು ಪ್ರವಾಸ ಮಾಡುತ್ತಿರುವುದು ಚರ್ಚೆಗೆ ಗ್ರಾಸವಾಗಿದೆ. ಇದಕ್ಕೆ ಸ್ಪಷ್ಟನೆ ನೀಡಿರುವ ಕಾರ್ಯದರ್ಶಿ, 'ಈ ಪ್ರಯಾಣದ ವೆಚ್ಚವನ್ನು ಸ್ವಂತ ಹಣದಿಂದಲೇ ಭರಿಸಿದ್ದೇನೆ' ಎಂದು ಹೇಳಿದ್ದಾರೆ. ಸಚಿವರ ಆಪ್ತ ಕಾರ್ಯದರ್ಶಿಗೆ ಪ್ರಯಾಣ ಭತ್ಯೆಯನ್ನು ಸರ್ಕಾರದಿಂದ ಮರುಪಾವತಿ ಮಾಡಿಕೊಳ್ಳಲು ಅವಕಾಶ ಇಲ್ಲ ಎಂದೂ ಹೇಳಿದ್ದಾರೆ. ಅಂದರೆ ಇದನ್ನು ಸರಳವಾಗಿ ಅರ್ಥೈಸುವುದಾದರೆ, ಅವರಿಗೆ ಸ್ವತಂತ್ರವಾಗಿ ಪ್ರಯಾಣ ಮಾಡಿ ಸಾರ್ವಜನಿಕರ ಅಹವಾಲನ್ನು ಸ್ವೀಕರಿಸುವುದಕ್ಕಾಗಲೀ ಅಥವಾ ಕಚೇರಿಗಳಿಗೆ ಭೇಟಿ ನೀಡಿ ಪರಿಶೀಲಿಸುವುದಕ್ಕಾಗಲೀ ಅವಕಾಶ ಇಲ್ಲ ಎಂದಾಗುತ್ತದೆ. ಒಂದು ವೇಳೆ ಇದಕ್ಕೆ ಅವಕಾಶ ಇದ್ದಲ್ಲಿ ಸರ್ಕಾರಿ ಕೆಲಸದ ಪ್ರಯಾಣದ ವೆಚ್ಚಕ್ಕೆ ಏಕೆ ಮರುಪಾವತಿಗೆ ಅವಕಾಶವಿಲ್ಲ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಕೆ.ಎಂ.ನಾಗರಾಜು, ಮೈಸೂರು

ಉದ್ಯೋಗಿನಿ: ಅವಕಾಶ ವಂಚಿತರಿಗೆ ವರವಾಗಲಿ

ಮಹಿಳೆಯರು ಸ್ವಯಂ ಉದ್ಯೋಗಿಗಳಾಗಲು ಪ್ರೇರೇಪಿಸುವ 'ಉದ್ಯೋಗಿನಿ' ಯೋಜನೆಯನ್ನು ರಾಜ್ಯ ಸರ್ಕಾರ ಜಾರಿಗೊಳಿಸುತ್ತಿರುವುದು ಸ್ವಾಗತಾರ್ಹ. ರಾಜ್ಯದಲ್ಲಿ ಹಲವು ಮಹಿಳೆಯರು ಸರ್ಕಾರದ ಅನ್ನಭಾಗ್ಯ, ಗೃಹಲಕ್ಷ್ಮಿ ಸೇರಿದಂತೆ ವಿವಿಧ ನಿಗಮಗಳಡಿ ಒಂದಿಲ್ಲೊಂದು ಯೋಜನೆಯ ಫಲಾನುಭವಿಗಳಾಗಿರಬಹುದು. ಆದರೆ ಇಂತಹ ಯೋಜನೆಯ ಫಲಾನುಭವಿಗಳಾಗಲು ಅರ್ಹರಾಗಿದ್ದೂ ವಿವಿಧ ಕಾರಣಗಳಿಂದ ವಂಚಿತರಾಗಿರುವ ಮಹಿಳೆಯರನ್ನು 'ಉದ್ಯೋಗಿನಿ' ಯೋಜನೆಗಳ ಫಲಾನುಭವಿಗಳ ಆಯ್ಕೆಯ ಸಂದರ್ಭದಲ್ಲಿ ವಿಶೇಷವಾಗಿ ಪರಿಗಣಿಸುವುದು ಒಳಿತು.

ದೇವರಾಜ ದೊಡ್ಡಗೌಡ್ರ, ನಾಗವಂದ, ಹಾವೇರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಮಮಂದಿರ ನಿರ್ಮಾಣ ಪ್ರಗತಿ ಏನು, ಎತ್ತ...

ಅಯೋಧ್ಯೆಯ ರಾಮಮಂದಿರ ಈ ಹೊತ್ತಿನಲ್ಲಿ ಪ್ರಚಲಿತದಲ್ಲಿರುವ ಮಹತ್ವದ ವಿಚಾರಗಳಲ್ಲಿ ಒಂದು. ದಶಕಗಳ ಕಾನೂನು ಹೋರಾಟದ ಮೂಲಕ ಬಂದ 71 ಎಕರೆಯಷ್ಟು ವಿಸ್ತೀರ್ಣದ ನಿವೇಶನದಲ್ಲಿ ರಾಮಮಂದಿರ ಸಂಕೀರ್ಣವನ್ನು ನಿರ್ಮಿಸಲಾಗುತ್ತಿದೆ. ರಾಮಮಂದಿರ ಸಂಕೀರ್ಣದ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು 2025ರ ಡಿಸೆಂಬರ್ ಅಂತ್ಯದವರೆಗೆ ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆ. ಈಗ ಮೊದಲ ಹಂತದ ಕಾಮಗಾರಿಯಷ್ಟೇ ಪೂರ್ಣಗೊಳ್ಳಬೇಕಿದೆ. ಮೊದಲ ಹಂತದಲ್ಲಿ ನೆಲಮಹಡಿಯ ದೇವಾಲಯ, ಗರ್ಭಗುಡಿ ಎಲ್ಲವೂ ಸಿದ್ಧವಾಗಲಿದೆ. ಇದೇ ಜನವರಿ 22ರಂದು ಪ್ರಧಾನಿ ನರೇಂದ್ರ ಮೋದಿ ಅವರು ಕಾಮಗಾರಿ ಪೂರ್ಣಗೊಂಡಿರುವಷ್ಟು ಮಂದಿರವನ್ನು ಲೋಕಾರ್ಪಣೆ ಮಾಡಲಿದ್ದಾರೆ. ರಾಮನ ಮೂರ್ತಿಯ ಪ್ರಾಣಪ್ರತಿಷ್ಠೆಯೂ ನಡೆಯಲಿದೆ

ಪ್ರಜಾವಾಣಿ ವಾರ್ತೆ

ಸುಪ್ರೀಂ ಕೋರ್ಟ್ ಆದೇಶದಂತೆ ರಚಿಸಲಾಗಿರುವ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ರಾಮಮಂದಿರ ಸಂಕೀರ್ಣ ನಿರ್ಮಾಣದ ಹೊಣೆ ಹೊತ್ತಿದೆ. ಟ್ರಸ್ಟ್‌ನ ಪದಾಧಿಕಾರಿಗಳು ವಿವಿಧ ಸುದ್ದಿಮಾಧ್ಯಮಗಳಿಗೆ ನೀಡಿರುವ ಮಾಹಿತಿ ಪ್ರಕಾರ ರಾಮಮಂದಿರದ ನಿರ್ಮಾಣವೊಂದಕ್ಕೇ ಅಂದಾಜು ₹1,500 ಕೋಟಿ ವೆಚ್ಚವಾಗಲಿದೆ. ದೇವಾಲಯ ಸಂಕೀರ್ಣ, ಸಂಕೀರ್ಣದಲ್ಲಿ ಇರಲಿರುವ ಬೇರೆ ಬೇರೆ ದೇವಾಲಯಗಳು, ವಸ್ತು ಸಂಗ್ರಹಾಲಯಗಳು, ಭಕ್ತಾದಿಗಳ ವಸತಿಗೃಹ, ಶೌಚಾಲಯ, ವಾಹನ ನಿಲುಗಡೆ ಪ್ರದೇಶ ನಿರ್ಮಾಣ ಮತ್ತು ಅಭಿವೃದ್ಧಿಗೆ ಎಷ್ಟು ವೆಚ್ಚವಾಗಲಿದೆ ಎಂಬುದರ ಮಾಹಿತಿ ಇಲ್ಲ. ಆದರೆ, ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಗತ್ಯವಿರುವಷ್ಟು ದೇಣಿಗೆ ಸಂಗ್ರಹವಾಗಲಿದೆ ಎಂದು ಟ್ರಸ್ಟ್ ಹೇಳಿದೆ. ದೇಣಿಗೆ ನೀಡಬಹುದಾದ ಪೋರ್ಟಲ್‌ನ ಲಿಂಕ್ ಟ್ರಸ್ಟ್‌ನ ಅಧಿಕೃತ ಜಾಲತಾಣದಲ್ಲಿ ಈಗಲೂ ಚಾಲ್ತಿಯಲ್ಲಿದೆ.

ಜನವರಿ 22ರಂದು ನಡೆಯಲಿರುವ ದೇವಾಲಯದ ಲೋಕಾರ್ಪಣೆ ಕಾರ್ಯಕ್ರಮವು ಹಲವು ಕಾರಣಗಳಿಂದಾಗಿ ರಾಜಕೀಯ ತಿರುವು ಪಡೆದುಕೊಂಡಿದೆ. ಕೆಲವೇ ತಿಂಗಳಲ್ಲಿ ನಡೆಯಬೇಕಿರುವ ಲೋಕಸಭಾ ಚುನಾವಣೆಗೆ ರಾಮಮಂದಿರವು ಚುನಾವಣಾ ವಿಷಯವಾಗಲಿದೆ ಎಂದು ರಾಜಕೀಯ ತಜ್ಞರು ವಿಶ್ಲೇಷಿಸಿದ್ದಾರೆ. ಈ ವಿಶ್ಲೇಷಣೆಗೆ ಪೂರಕವೆಂಬಂತೆ ಈಗಾಗಲೇ ರಾಜಕೀಯ ಕೆಸರೆರಚಾಟ ಆರಂಭವಾಗಿದೆ. ಕಾಮಗಾರಿ ಪೂರ್ಣಗೊಳ್ಳದೇ ಇದ್ದರೂ, ಲೋಕಸಭಾ ಚುನಾವಣೆಯ ಕಾರಣಕ್ಕೆ ಅಪೂರ್ಣ ದೇವಾಲಯವನ್ನು ಉದ್ಘಾಟಿಸಲಾಗುತ್ತಿದೆ ಎಂದು 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಆರೋಪಿಸಿವೆ. ಅಲ್ಲದೇ, ಬಿಜೆಪಿ ಇದನ್ನು ತನ್ನದೇ ಕಾರ್ಯಕ್ರಮ ಎಂಬಂತೆ ನಿರ್ವಹಿಸುತ್ತಿದೆ ಎಂದೂ ವಿರೋಧ ಪಕ್ಷಗಳು ಆರೋಪಿಸಿವೆ.

ಟ್ರಸ್ಟ್ ಸಹ ಮಂದಿರ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರನ್ನು ಆಹ್ವಾನಿಸಿಲ್ಲ. ಕೆಲವು ಪಕ್ಷಗಳಿಗೆ ಆಹ್ವಾನ ನೀಡಿಲ್ಲ. ಇದು ಸಹ ಆರೋಪ–ಪ್ರತ್ಯಾರೋಪಕ್ಕೆ ಕಾರಣವಾಗಿದೆ. 'ರಾಮನನ್ನು ನಂಬುವವರಿಗೆ ಮಾತ್ರವೇ ಆಹ್ವಾನ ನೀಡಲಾಗಿದೆ' ಎಂದು ಟ್ರಸ್ಟ್‌ನ ಪದಾಧಿಕಾರಿಗಳು ಶಿವಸೇನಾಗೆ (ಉದ್ಧವ್ ಬಣ) ತಿರುಗೇಟು ನೀಡಿದ್ದಾರೆ.

ರಾಮಮಂದಿರ ಸಂಕೀರ್ಣ ಅಭಿವೃದ್ಧಿಯ ನೆಪದಲ್ಲಿ ಅಯೋಧ್ಯೆಯಲ್ಲೂ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ದೊರೆತಿದೆ. ರೈಲು ನಿಲ್ದಾಣ ಅಭಿವೃದ್ಧಿ, ನೂತನ ವಿಮಾನ ನಿಲ್ದಾಣ ಕಾರ್ಯಾರಂಭ, ಹೆದ್ದಾರಿ ಅಭಿವೃದ್ಧಿ ಮತ್ತು ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವ ಕಾಮಗಾರಿಗಳು ಯುದ್ಧೋಪಾದಿಯಲ್ಲಿ ನಡೆಯುತ್ತಿವೆ. ರಾಮಮಂದಿರಕ್ಕೆ ಬರುವ ಭಕ್ತಾದಿಗಳಿಗೆ ಊಟ–ವಸತಿಯಂತಹ ಮೂಲಸೌಕರ್ಯ ಒದಗಿಸಲು ಸ್ಥಳೀಯ ಸಂಸ್ಥೆಗಳೂ ಕಾಮಗಾರಿ ನಡೆಸುತ್ತಿವೆ, ಖಾಸಗಿಯವರೂ ಹೋಟೆಲ್–ಲಾಡ್ಜಿಂಗ್ ವ್ಯವಸ್ಥೆಯನ್ನು ಮೇಲ್ದರ್ಜೆಗೆ ಏರಿಸುತ್ತಿದ್ದಾರೆ. ಒಟ್ಟಾರೆ ಅಯೋಧ್ಯೆಗೆ ಹೊಸ ಮೆರುಗು ಬಂದಿದೆ.

2025ಕ್ಕೆ ದೇವಾಲಯದ ಕಾಮಗಾರಿ ಪೂರ್ಣ

ಎರಡನೇ ಹಂತ

- ಡಿಸೆಂಬರ್ 2024ಕ್ಕೆ ಎರಡನೇ ಹಂತದ ಅಂದರೆ, ಎರಡು ಮಹಡಿಗಳ ದೇವಾಲಯದ ಕಾಮಗಾರಿ ಪೂರ್ಣಗೊಳ್ಳಲಿದೆ. ದೇವಾಲಯವನ್ನು ಪರಿಕ್ರಮಣ ಮಾಡುವ ಆವರಣದ ಕಾಮಗಾರಿಯು ಪೂರ್ಣಗೊಳ್ಳಲಿದೆ
- ರಾಮಮಂದಿರದಲ್ಲಿ ರಾಮನ ದರ್ಬಾರಿನ ಝಲಕ್ ಇರಬೇಕು ಎನ್ನುವುದು ಅಯೋಧ್ಯೆಯ ಭಕ್ತರ ಆಸೆಯಾಗಿತ್ತು. ಆದ್ದರಿಂದ, ಮೊದಲ ಮಹಡಿಯಲ್ಲಿ ರಾಮನ ದರ್ಬಾರನ್ನು ಹೋಲುವ ವಾತಾವರಣವನ್ನು ನಿರ್ಮಿಸಲಾಗುತ್ತದೆ. ಸೀತೆ, ಹನುಮಂತ ಹಾಗೂ ರಾಮನ ಮೂವರು ಸೋದರರ ಮೂರ್ತಿಗಳು ಇಲ್ಲಿರಲಿವೆ
- ಎರಡನೇ ಮಹಡಿಯನ್ನು ಧಾರ್ಮಿಕ ಕಾರ್ಯಕ್ರಮಗಳಿಗಾಗಿ ಮೀಸಲಿಡಲಾಗುವುದು. ಈ ಮಹಡಿಯಲ್ಲಿ ಧ್ಯಾನ, ಯಜ್ಞ ಮಾಡಲು ಅವಕಾಶವಿದೆ. ಆದರೆ, ಈ ಜಾಗವು ಸಾರ್ವಜನಿಕರಿಗೆ ಲಭ್ಯ ಇರುವುದಿಲ್ಲ. ಇದು ಕೇವಲ ದೊಡ್ಡ ಮಟ್ಟದ ಅರ್ಚಕರಿಗೆ ಮಾತ್ರವೇ ಮೀಸಲಿರುತ್ತದೆ

ಮೊದಲ ಹಂತ

- 2023ರ ಡಿಸೆಂಬರ್ ಅಂತ್ಯಕ್ಕೆ ಮೊದಲ ಹಂತದ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಜನವರಿ 22ಕ್ಕೆ ಮಂದಿರ ಉದ್ಘಾಟನೆಗೊಳ್ಳಲಿದೆ. ಈ ದಿನಾಂಕಕ್ಕೂ ಮೊದಲು ಕಾಮಗಾರಿ ಪೂರ್ಣಗೊಳ್ಳಲಿದೆ
- ನೆಲಮಹಡಿಯಲ್ಲಿ ಐದು ಮಂಟಪಗಳನ್ನು ನಿರ್ಮಿಸಲಾಗುತ್ತದೆ. ಗರ್ಭಗುಡಿ ಕೂಡ ಇದೇ ಹಂತದಲ್ಲಿ ಪೂರ್ಣಗೊಳ್ಳಲಿದ್ದು, ರಾಮ ಮೂರ್ತಿ ಪ್ರತಿಷ್ಠಾಪನೆ ನಡೆಯಲಿದೆ. ದೇವಾಲಯವನ್ನು ಪರಿಕ್ರಮಣ ಮಾಡುವ ಆವರಣದ ಕೆಲವು ಭಾಗಗಳೂ ಈ ಹಂತದಲ್ಲಿ ಪೂರ್ಣಗೊಳ್ಳಲಿದೆ. ದೇವಸ್ಥಾನದ ಹೊರ ಗೋಡೆಯ ತಳಭಾಗದಲ್ಲಿ ರಾಮ ಜೀವನವನ್ನು ಬಿಂಬಿಸುವ ಚಿತ್ರಗಳ ಕೆತ್ತನೆ ಕಾರ್ಯ ಪೂರ್ಣಗೊಳ್ಳಲಿದೆ. ಭಕ್ತರ ಸಹಾಯ ಕೇಂದ್ರ ಹಾಗೂ ಶೌಚಾಲಯ ಕಟ್ಟಡದ ಕಾಮಗಾರಿ ಮುಗಿಯಲಿದೆ

ಮೂರನೇ ಹಂತದ ಕಾಮಗಾರಿ

- ಡಿಸೆಂಬರ್ 2025ರ ಹೊತ್ತಿಗೆ ದೇವಾಲಯದ ಸಂಕೀರ್ಣದ ನಿರ್ಮಾಣವು ಪೂರ್ಣಗೊಳ್ಳಲಿದೆ
- ತಾಂತ್ರಿಕ ಹಾಗೂ ಭದ್ರತಾ ವ್ಯವಸ್ಥೆ, ಭಕ್ತಾದಿಗಳ ಸಹಾಯಕ್ಕೆ ಬೇಕಿರುವ ಇತರ ಕೇಂದ್ರಗಳು ಪೂರ್ಣ ಪ್ರಮಾಣದಲ್ಲಿ ಬಳಕೆಗೆ ಲಭ್ಯವಾಗಲಿವೆ. ಮಹರ್ಷಿ ವಾಲ್ಮೀಕಿ, ಶಬರಿ, ನಿಷದ ರಾಜ, ಮಹರ್ಷಿ ವಶಿಷ್ಠ, ಮಹರ್ಷಿ ವಿಶ್ವಾಮಿತ್ರ, ಅಹಲ್ಯೆ ಹಾಗೂ ಅಗಸ್ತ್ಯಮುನಿಗೆ ದೇವಾಲಯಗಳನ್ನು ನಿರ್ಮಿಸಲಾಗುವುದು. ಇದು ಈ ಹಂತದಲ್ಲಿ ಪೂರ್ಣಗೊಳ್ಳಲಿದೆ

ರಾಮಮಂದಿರ ಸಂಕೀರ್ಣ



- **2.7** ಎಕರೆ — ದೇವಾಲಯದ ಒಟ್ಟು ವಿಸ್ತೀರ್ಣ
- **57,400** ಚದರ ಅಡಿ — ಒಟ್ಟು ಬಿಲ್ಟ್–ಅಪ್ ಏರಿಯಾ
- **3** — ಒಟ್ಟು ಮಹಡಿಗಳು
- **235** ಅಡಿ — ದೇವಾಲಯದ ಅಗಲ
- **161** ಅಡಿ — ತುದಿಯನ್ನೂ ಒಳಗೊಂಡು, ದೇವಾಲಯದ ಒಟ್ಟು ಎತ್ತರ
- **360** ಅಡಿ — ದೇವಾಲಯ ಕಟ್ಟಡದ ಉದ್ದ
- **20** ಅಡಿ — ಪ್ರತಿ ಮಹಡಿಯ ಎತ್ತರ
- **12** — ದೇವಾಲಯದಲ್ಲಿ ಇರಲಿರುವ ಒಟ್ಟು ದ್ವಾರಗಳ ಸಂಖ್ಯೆ

ಈವರೆಗಿನ ಕಾಮಗಾರಿ

ಆಧಾರ ಮತ್ತು ಚಿತ್ರಗಳು: ಪಿಟಿಐ, ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಹಾಗೂ ರಾಮಮಂದಿರ ನಿರ್ಮಾಣ ಸಮಿತಿಯ ಪತ್ರಿಕಾ ಪ್ರಕಟಣೆಗಳು ಮತ್ತು ವಿವಿಧ ಮಾಧ್ಯಮಗಳಿಗೆ ನೀಡಿದ ಸಂದರ್ಶನಗಳು

ಪ್ರಜಾವಾಣಿ ಗ್ರಾಫಿಕ್ಸ್

ಸಿನಿ ಬಿಟ್ಸ್

ಶಿವರಾಜ್‌ಕುಮಾರ್‌ಗೆ ದಿನಕರ್ ಆ್ಯಕ್ಷನ್ ಕಟ್



ಸಾಲು, ಸಾಲು ಸಿನಿಮಾಗಳನ್ನು ಒಪ್ಪಿಕೊಂಡಿರುವ ಶಿವರಾಜ್‌ಕುಮಾರ್ ಇದೀಗ ನಿರ್ದೇಶಕ ದಿನಕರ್ ತೂಗುದೀಪ ಜೊತೆ ಕೈಜೋಡಿಸಿದ್ದಾರೆ. ಶಿವರಾಜ್‌ಕುಮಾರ್ ಅವರ 131ನೇ ಚಿತ್ರವನ್ನು ದಿನಕರ್ ನಿರ್ದೇಶಿಸಲಿದ್ದಾರೆ. ಪ್ರಿಯದರ್ಶಿನಿ ರಾಮರೆಡ್ಡಿ ಬರೆದಿರುವ ಕಥೆಗೆ 'ಬಿಂದ್ಯಾ ಮೂವೀಸ್' ಬಂಡವಾಳ ಹೂಡುತ್ತಿದೆ.

2023ರಲ್ಲಿ 'ಜೈಲರ್', 'ಘೋಸ್ಟ್' ಸಿನಿಮಾಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದ್ದ ಶಿವರಾಜ್‌ಕುಮಾರ್ ಸದ್ಯ 'ಭೈರತಿ ರಣಗಲ್' ಚಿತ್ರೀಕರಣದಲ್ಲಿ ಮಗ್ನರಾಗಿದ್ದಾರೆ. ಅವರ ಅಭಿನಯದ 'ಕರಟಕ ದಮನಕ' ಚಿತ್ರೀಕರಣ ಮುಗಿದಿದೆ. ಪುತ್ರಿ ನಿವೇದಿತಾ ನಿರ್ಮಿಸುತ್ತಿರುವ 'ಫೈರ್ ಫ್ಲೈ' ಚಿತ್ರದಲ್ಲಿ ಅತಿಥಿ ಪಾತ್ರದಲ್ಲಿಯೂ ಸೆಂಚುರಿ ಸ್ಟಾರ್ ಕಾಣಿಸಿಕೊಂಡಿದ್ದಾರೆ. ಪ್ರೀ ಪ್ರೊಡಕ್ಷನ್ ಕೆಲಸ ಆರಂಭಿಸಿರುವ ಚಿತ್ರತಂಡ ಉಳಿದ ತಾರಾಬಳಗ ಹಾಗೂ ತಾಂತ್ರಿಕವರ್ಗದ ಆಯ್ಕೆ ನಡೆಸುತ್ತಿದೆ. ಮಹಾಶಿವರಾತ್ರಿ ಹಬ್ಬದ ವೇಳೆಗೆ ಚಿತ್ರದ ಶೀರ್ಷಿಕೆ ಬಿಡುಗಡೆಯಾಗಲಿದೆ ಎಂದಿದೆ ಚಿತ್ರತಂಡ.

ಈ ಹಿಂದೆ 'ಜೊತೆ ಜೊತೆಯಲಿ', 'ನವಗ್ರಹ', 'ಸಾರಥಿ' ಸಿನಿಮಾಗಳನ್ನು ನಿರ್ದೇಶಿಸಿದ್ದ ದಿನಕರ್ ಅವರ 'ರಾಯಲ್' ಸಿನಿಮಾ ಬಿಡುಗಡೆಗೆ ಸಿದ್ಧವಿದೆ. 'ಆ್ಯಕ್ಷನ್, ಮಾಸ್ ಕಥೆ ಹೊಂದಿರುವ ಈ ಹೊಸ ಚಿತ್ರದ ಕೆಲಸಗಳು ಪ್ರಾರಂಭಗೊಂಡಿವೆ. ಶಿವಣ್ಣ ಈಗಾಗಲೇ ಒಪ್ಪಿಕೊಂಡಿರುವ ಸಿನಿಮಾಗಳು ಮುಗಿದ ಬಳಿಕ ಚಿತ್ರೀಕರಣಕ್ಕೆ ಹೋಗುವ ಯೋಜನೆಯಿದೆ' ಎಂದು ಚಿತ್ರತಂಡ ಹೇಳಿದೆ.

ಇಟಲಿಯತ್ತ ಹೊರಟ 'ಕೃಷ್ಣ..'

ಗಣೇಶ್

ಗೋಲ್ಡನ್ ಸ್ಟಾರ್ ಗಣೇಶ್ ನಟನೆಯ 41ನೇ ಚಿತ್ರ 'ಕೃಷ್ಣಂ ಪ್ರಣಯ ಸಖಿ' ಸಿನಿಮಾದ ಚಿತ್ರೀಕರಣ ಅಂತಿಮ ಹಂತ ತಲುಪಿದ್ದು, ಚಿತ್ರದ ಎರಡು ಹಾಡುಗಳ ಚಿತ್ರೀಕರಣಕ್ಕೆ ಚಿತ್ರತಂಡ ಇಟಲಿಗೆ ಪ್ರಯಾಣ ಬೆಳೆಸಲಿದೆ.

ಶ್ರೀನಿವಾಸರಾಜು ನಿರ್ದೇಶನದಲ್ಲಿ ಈ ಸಿನಿಮಾ ಮೂಡಿಬಂದಿದೆ. ಚಿತ್ರದ ಎರಡು ಹಾಡುಗಳ ಚಿತ್ರೀಕರಣ ಇಟಲಿ ಮತ್ತು ಮಾಲ್ಟಾದಲ್ಲಿ ನಡೆಯಲಿದೆ. ಗಣೇಶ್, ಮಾಳವಿಕ ನಾಯರ್ ಹಾಗೂ ಶರಣ್ಯ ಶೆಟ್ಟಿ ಹಾಡುಗಳ ಚಿತ್ರೀಕರಣದಲ್ಲಿ ಪಾಲ್ಗೊಳ್ಳಲಿದ್ದಾರೆ. ಹಾಡುಗಳ ಚಿತ್ರೀಕರಣಕ್ಕಾಗಿ ಮೂವತ್ತು ಜನರ ತಂಡ ಇಟಲಿಗೆ ಪ್ರಯಾಣ ಬೆಳೆಸಲಿದೆ. ಹೊಸವರ್ಷದ ಶುಭಕೋರಿ ಪೋಸ್ಟರ್ ಬಿಡುಗಡೆ ಮಾಡಿರುವ ಚಿತ್ರತಂಡ ಈ ಮಾಹಿತಿ ನೀಡಿದೆ. ಈ ಚಿತ್ರದಲ್ಲಿ ಐದು ಹಾಡುಗಳಿದ್ದು, ಅರ್ಜುನ್ ಜನ್ಯ ಸಂಗೀತ ನೀಡಿದ್ದಾರೆ. ವೆಂಕಟ್ ಪ್ರಸಾದ್ ಛಾಯಾಚಿತ್ರಗ್ರಹಣ ಹಾಗೂ ಕೆ.ಎಂ.ಪ್ರಕಾಶ್ ಸಂಕಲನ ಚಿತ್ರಕ್ಕಿದೆ.

ತ್ರಿಶೂಲ್ ಎಂಟರ್‌ಟೈನ್ಮೆಂಟ್ ಲಾಂಛನದಲ್ಲಿ ಪ್ರಶಾಂತ್ ಜಿ. ರುದ್ರಪ್ಪ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಶ್ರೀನಿವಾಸಮೂರ್ತಿ, ಸಾಧುಕೋಕಿಲ, ರಂಗಾಯಣ ರಘು, ಶಶಿಕುಮಾರ್, ಶ್ರುತಿ, ಭಾವನ, ಅಶೋಕ್, ರಾಮಕೃಷ್ಣ, ಶಿವಧ್ವಜ್, ರಘುರಾಮ್, ಮಾನಸಿ ಸುಧೀರ್, ಅಂಬುಜ, ಗಿರಿ ಶಿವಣ್ಣ ಮುಂತಾದ ಕಲಾವಿದರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತಕ್ಕೆ ಅಗತ್ಯವಾಗಿ ಬೇಕಿರುವ ಭೂಗತಪಾತಕಿ ದಾವೂದ್ ಇಬ್ರಾಹಿಂ ಎದುರಿಗೆ ಮಹಿಳೆಯೊಬ್ಬರು ಕುಳಿತಿರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗೆ ಹೆಚ್ಚಿನ ಸಂಖ್ಯೆಯಲ್ಲಿ ಹರಿದಾಡುತ್ತಿದೆ. ಆ ಮಹಿಳೆಯನ್ನು ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರೀನಾತೆ ಎಂದೂ ಹೇಳಲಾಗುತ್ತಿದೆ. 'ದಾವೂದ್ ಇಬ್ರಾಹಿಂನೊಂದಿಗೆ ಪತ್ರಕರ್ತೆಯೊಬ್ಬರು ಕುಳಿತಿದ್ದಾರೆ. ಈ ಚಿತ್ರವನ್ನು 1987ರಲ್ಲಿ ಸೆರೆಹಿಡಿಯಲಾಗಿದೆ. ಈ ಪತ್ರಕರ್ತೆಯು ಈಗಿನ 'ಕಾಂಗ್ರೆಸ್' ವಕ್ತಾರೆ 'ಸುಪ್ರಿಯಾ ಶ್ರೀನಾತೆ'. ಈಗ ನಿಮಗೆ ಕಾಂಗ್ರೆಸ್ ಏನೆಂದು ತಿಳಿಯುತ್ತದೆ' ಎಂದು ಚಿತ್ರದೊಂದಿಗೆ ಪೋಸ್ಟ್ ಅನ್ನೂ ಹಂಚಿಕೊಳ್ಳಲಾಗುತ್ತಿದೆ. ಮತ್ತೊಂದು 'ಎಕ್ಸ್' ಖಾತೆಯು ಈ ಬಗ್ಗೆ ಪೋಸ್ಟ್ ಹಂಚಿಕೊಂಡಿದ್ದು, 'ಹೆಲೋ ಸುಪ್ರಿಯಾ ಶ್ರೀನಾತೆ, ಯಾರಿದು?' ಎಂದು ಬರೆದುಕೊಂಡಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಈ ಚಿತ್ರವನ್ನು 2023ರ ಜೂನ್‌ನಲ್ಲಿ ಪತ್ರಕರ್ತೆ ಶೀಲಾ ಭಟ್ ಅವರು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದಾರೆ. 'ದಾವೂದ್‌ನನ್ನು 1987ರಲ್ಲಿ ದುಬೈನ ಪರ್ಲ್ ಕಟ್ಟಡದಲ್ಲಿ ಸಂದರ್ಶಿಸಿದ್ದು' ಎಂದು ಶೀಲಾ ಅವರು ಬರಹವನ್ನು ಬರೆದುಕೊಂಡಿದ್ದಾರೆ. ಸರಣಿ ಪೋಸ್ಟ್‌ಗಳಲ್ಲಿ ಸಂದರ್ಶನದ ಕುರಿತು ಹಲವು ಮಾಹಿತಿಗಳನ್ನೂ ಅವರು ಹಂಚಿಕೊಂಡಿದ್ದಾರೆ. 1988ರಲ್ಲಿ ಈ ಸಂದರ್ಶನವು 'ಇಲ್ಲಸ್ಟ್ರೇಟೆಡ್ ವೀಕ್ಲಿ' ಹಾಗೂ 'ಅಭಿಯಾನ್' ಪತ್ರಿಕೆಗಳಲ್ಲಿ ಪ್ರಕಟವಾಗಿದ್ದನ್ನು, ಪತ್ರಿಕೆಯ ಮುಖಪುಟವನ್ನೂ ಅವರು ಹಂಚಿಕೊಂಡಿದ್ದಾರೆ. ದಾವೂದ್ ಅವರ ಚಿತ್ರಗಳನ್ನು ತಾವೇ ಸೆರೆಹಿಡಿದದ್ದು ಎಂದೂ ಅವರು ಹೇಳಿಕೊಂಡಿದ್ದಾರೆ. ತಮ್ಮ ಕುರಿತು ಸುಳ್ಳು ಸುದ್ದಿಯ ಬಗ್ಗೆ ಪ್ರತಿಕ್ರಿಯಿಸಿರುವ ಸುಪ್ರಿಯಾ, 'ನಾನು ಹುಟ್ಟಿದ್ದು, ಅಕ್ಟೋಬರ್ 27, 1977ರಲ್ಲಿ. ಈ ಸಂದರ್ಶನ ನಡೆದಾಗ ನನಗೆ 10 ವರ್ಷವಾಗಿತ್ತು' ಎಂದು ಹೇಳಿದ್ದಾರೆ. ಆದ್ದರಿಂದ, ಚಿತ್ರದಲ್ಲಿ ಇರುವವರು ಪತ್ರಕರ್ತೆ ಶೀಲಾ ಭಟ್ ಅವರೇ ಹೊರತು ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಅಲ್ಲ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ನುಡಿ ಬೆಳಗು

ಪಿ. ಚಂದ್ರಿಕಾ

ದೃಢ ನಿಲುವು

ಮನುಷ್ಯ ಧ್ಯಾನದಲ್ಲಿ ಮನಸ್ಸು ನಿಲ್ಲಿಸಿ ಅಲೌಕಿಕವಾದ ಆನಂದ ಪಡೆಯುವಿರಿ ಎಂದು ಗಾಂಧೀಜಿಗೆ ಸ್ವಾಮಿ ಜಗದಾತ್ಮಾನಂದರು ಹೇಳಿದರು. ಗಾಂಧೀಜಿ ಹೌದೇ ಆಗುತ್ತದೆಯೇ ಎಂದು ಕೇಳಿದರು ಕುತೂಹಲದಿಂದ.

ಜಗದಾತ್ಮಾನಂದರು ಗಾಂಧೀಜಿಯವರಿಗೆ ಧ್ಯಾನದ ಕ್ರಮಗಳನ್ನು ಹೇಳಿಕೊಡುತ್ತಾ ಮನಸ್ಸನ್ನು ನಿಲ್ಲಿಸುವ ಬಗೆಯನ್ನು ವಿವರಿಸಿ ಅವರಿಗೆ ಅಲೌಕಿಕ ಆನಂದ ಉಂಟಾಗುವಂತೆ ಮಾಡಿದರು. ಗಾಂಧೀಜಿ ಅದರಿಂದ ಎಚ್ಚೆತ್ತ ನಂತರ ಜಗದಾತ್ಮಾನಂದರು ನಿಮ್ಮ ಆತ್ಮ ಸಾಧಿಸಿದ ಎತ್ತರ ನೋಡಿದಿರಾ? ಅನುಭವ ಹೇಗಿತ್ತು?' ಎಂದರು. ಗಾಂಧೀಜಿ ಅಚ್ಚರಿಯಿಂದ, 'ನಮ್ಮ ಆತ್ಮಕ್ಕೆ ಇಷ್ಟೆಲ್ಲಾ ಶಕ್ತಿ ಇದೆಯೇ? ಧ್ಯಾನದ ಮೂಲಕ ನಾವು ಏನನ್ನಾದರೂ ಸಾಧಿಸಬಹುದೇ' ಎಂದೆಲ್ಲಾ ಪ್ರಶ್ನೆ ಕೇಳತೊಡಗಿದರು. ಜಗದಾತ್ಮಾನಂದರು ಗೆದ್ದ ಭಾವದಲ್ಲಿ, 'ಹೌದು' ಎಂದರು. 'ಹೌದು ಎನ್ನುವುದಾದರೆ ನನ್ನದೂ ಒಂದು ಕೋರಿಕೆ ಇದೆ ಅದು ನೆರವೇರುವ ಹಾಗೆ ಮಾಡಿ' ಎಂದರು ಗಾಂಧೀಜಿ.

ಜಗದಾತ್ಮನಂದರಿಗೆ ಏನನ್ನಾದರೂ ಸರಿ ಧ್ಯಾನದ ಮೂಲಕ ಸಾಧಿಸಬಲ್ಲೆ ಎಂಬ ದೊಡ್ಡ ನಂಬಿಕೆ. ಗಾಂಧೀಜಿ ಕೇಳಿದರು, 'ನನಗೆ ಬೇಕಿರುವುದು ಈ ದೇಶವನ್ನು ದಾಸ್ಯದಿಂದ ಬಿಡುಗಡೆ ಮಾಡುವುದು. ಅದು ಸಿಗುವ ಹಾಗೆ ಧ್ಯಾನಿಸುವುದನ್ನು ಕಲಿಸಿಕೊಡಿ'.

ತಕ್ಷಣವೇ ಜಗದಾತ್ಮಾನಂದರು ಗಾಂಧೀಜಿಗೆ ಕೈ ಮುಗಿದು, 'ಅಲೌಕಿಕವಾದ ಅನುಭವಕ್ಕಾಗಿ ಜನ ಕಾಯುತ್ತಾರೆ. ಅದನ್ನು ಅನುಭವಿಸಿದ ಬಳಿಕವೂ ಅದು ನಿಮಗೆ ಆತ್ಯಂತಿಕ ಅನ್ನಿಸಲಿಲ್ಲ. ಎಲ್ಲಾ ಆದ ನಂತರವೂ ಸ್ವಾತಂತ್ರ್ಯವನ್ನೇ ಕನಸುತ್ತಿದ್ದೀರಿ. ನಿಮ್ಮ ಗುರಿಯಲ್ಲಿ ಎಂದೂ ಚಾಂಚಲ್ಯ ಇಲ್ಲ. ನೀವು ಮಹಾನ್ ಸಂತರು' ಎಂದರು.

ಹೀಗೆ ಸ್ವಾತಂತ್ರ್ಯಕ್ಕಾಗಿ ಕನಸಿದವರು ಗಾಂಧೀಜಿ. ಇಂಥ ದೃಢತೆ ಇದ್ದಲ್ಲಿ ಸಾಧಿಸುವ ದಾರಿಗಳು ತಾನಾಗೇ ತೆರೆದುಕೊಳ್ಳುತ್ತವೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜನವರಿ 2, 2024

ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಷಷ್ಠಿ ಗಂ. 17-11 ನಕ್ಷತ್ರ: ಪೂರ್ವಫಲ್ಗುನಿ ಗಂ. 11-42 ಯೋಗ: ಸೌಭಾಗ್ಯ ಗಂ 29-33 ಕರಣ: ವಣಿಜ ಗಂ. 17-11, ಧನು ಮಾಸದ 17 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 2.

ರಾಹುಕಾಲ: ಬೆಳಿಗ್ಗೆ 07-30 – 09-00

ಸೂರ್ಯೋದಯ: 06-57 **ಸೂರ್ಯಾಸ್ತ:** 06-11

ಮುಸ್ಲಿಂ ದಿನಾಂಕ: 19 ಜುಮಾದುಸ್ಸಾನಿ

ಅದೃಷ್ಟ ಸಂಖ್ಯೆ: 5, 7

ಮೇಷ: ವೈದ್ಯಕೀಯ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳು ಲಭ್ಯವಾಗಲಿದೆ. ಲೇವಾದೇವಿ ವ್ಯವಹಾರಗಳಲ್ಲಿ ಎಚ್ಚರಿಕೆಯಿಂದ ಇರುವುದು ಸೂಕ್ತ. ಓದಿನೆಡೆ ಹೆಚ್ಚಿನ ಆಸಕ್ತಿ ಮೂಡುವುದು. ಮಾತಿನಲ್ಲಿ ಹಿಡಿತವಿರಲಿ.

ವೃಷಭ: ಅನುಮಾನಕ್ಕೆ ಎಡೆಮಾಡಿಕೊಡುವಂಥ ಕೆಲಸಗಳು ನಿಮ್ಮಿಂದ ನಡೆಯಲಿದೆ. ಸಣ್ಣಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಸಹಾಯಹಸ್ತ ದೊರಕಲಿದೆ. ಬಡಗಿ ಕೆಲಸ ಮಾಡುವವರಿಗೆ ಇಂದು ಸುಯೋಗ.

ಮಿಥುನ: ಗೊಂದಲದ ಸಮಸ್ಯೆಗೆ ಅನುಭವಿಗಳ ಸಲಹೆ ಪಡೆಯುವುದು ಸರಿಯಾದ ಮಾರ್ಗ. ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸುವಿಕೆಯಿಂದ ಮಾನಸಿಕ ಶಾಂತಿ ಹೆಚ್ಚಾಗಲಿದೆ. ಬ್ಯಾಂಕಿನ ಸಾಲ ತೀರಲಿದೆ.

ಕರ್ಕಾಟಕ: ನಿಯಮವನ್ನು ಬದಿಗಿಟ್ಟು ಸಮಯಕ್ಕೆ ಸರಿಯಾಗಿ ವರ್ತಿಸುವ ಅನಿವಾರ್ಯತೆ ಎದುರಾಗುವುದು. ಕಾರ್ಯನಿಮಿತ್ತ ಅತ್ತೆ-ಸೊಸೆಯಲ್ಲಿ ಭಿನ್ನಾಭಿಪ್ರಾಯ ತೋರಿಬಂದರೂ ತಾಳ್ಮೆ, ಸಮಾಧಾನ ಇರಲಿ.

ಸಿಂಹ: ಸಹಚರರನ್ನು ಒಮ್ಮನಸ್ಸಿನಿಂದ ಕರೆದೊಯ್ಯುವಲ್ಲಿ ಯಶಸ್ವಿಯಾಗುವಿರಿ. ರಚನಾತ್ಮಕ ಕಾರ್ಯಕ್ರಮಗಳ ಕುರಿತು ಮಾಧ್ಯಮದವರಿಂದ ಮೆಚ್ಚುಗೆಯ ಮಾತುಗಳನ್ನು ಕೇಳಲಿದ್ದೀರಿ.

ಕನ್ಯಾ: ಕೈತಪ್ಪಿ ಹೋದ ವಿಚಾರಗಳು ಪುನಃ ಕೈ ಸೇರಿ ಸಂತೋಷ ಇಮ್ಮಡಿಗೊಳ್ಳಲಿದೆ. ಮಾತಾ-ಪಿತೃಗಳ ಹಾರೈಕೆಯಿಂದ ಕೆಲಸ ಕಾರ್ಯಗಳಲ್ಲಿ ವಿಜಯ ಪಡೆಯುವಿರಿ. ನೀವಂದುಕೊಂಡ ಕೆಲಸ ನಡೆಯುತ್ತದೆ.

ತುಲಾ: ಕೋರ್ಟ್ ಕಚೇರಿ ದೂರುಗಳಂತಹ ಗೊಡವೆಗಳಿಗೆ ಪ್ರಾಮುಖ್ಯತೆ ಕೊಡುವುದು ಸರಿಯಲ್ಲ. ಮನೆಯಲ್ಲಿ ಜವಾಬ್ದಾರಿ ಹೆಚ್ಚಲಿದೆ. ತಾತ್ಕಾಲಿಕ ಹುದ್ದೆಯಲ್ಲಿರುವವರಿಗೆ ಬದಲಾವಣೆಯ ಸೂಚನೆ ಕಂಡುಬರಲಿದೆ.

ವೃಶ್ಚಿಕ: ಸ್ನೇಹಿತರಲ್ಲಿ ಅಥವಾ ಸಂಬಂಧಿಕರಲ್ಲಿ ಅವರ ವೈಯಕ್ತಿಕ ವಿಚಾರವನ್ನು ಅನಗತ್ಯವಾಗಿ ಮಾತನಾಡು ವುದಕ್ಕಿಂತ ಮೌನವಾಗಿ ಇರುವುದು ಲೇಸು. ಮನೆಯನ್ನು ನವೀಕರಣಗೊಳಿಸುವ ವಿಚಾರಗಳು ಯೋಚನೆಗೆ ಬರಲಿದೆ.

ಧನು: ಕೆಲಸದಲ್ಲಿ ಅಥವಾ ಕೆಲಸದ ಜಾಗವನ್ನು ಬದಲಾವಣೆ ಮಾಡುವುದು ಸರಿಯಲ್ಲ. ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುವುದು ಉತ್ತಮ. ಕೆಲಸ ಮಾಡುತ್ತಿರುವ ಜಾಗದಲ್ಲಿ ತೊಂದರೆ ಕಾಣಿಸಿಕೊಳ್ಳಲಿದೆ.

ಮಕರ: ಕೆಲಸದಲ್ಲಿನ ಹೆಚ್ಚಿನ ಸ್ವಾತಂತ್ರ್ಯ ಸಿಗುವುದರಿಂದ ಗುರಿ ಸಾಧನೆ ಇನ್ನೂ ಹತ್ತಿರವಾಗಲಿದೆ. ನೃತ್ಯ ಮತ್ತು ಅಭಿನಯ ಕಲಿಯಲು ಆಸಕ್ತಿ ಉಂಟಾಗುವುದು. ಸರ್ಕಾರಿ ಕೆಲಸದವರಿಗೆ ಅನುಕೂಲಕರ ದಿನ.

ಕುಂಭ: ಸಿವಿಲ್ ಎಂಜಿನಿಯರ್‌ಗಳಿಗೆ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗ ದೊರೆಯುವುದು. ವಿದೇಶಿ ಸಂಸ್ಥೆಗಳೊಡನೆ ಸಹಭಾಗಿತ್ವ ಒಪ್ಪಂದಗಳನ್ನು ಮಾಡಿಕೊಳ್ಳುವುದು ಬಹಳ ಸಮಂಜಸವಾಗಿ ಕಾಣುವುದಿಲ್ಲ.

ಮೀನ: ಕೆಲವು ವಿಚಾರಗಳನ್ನು ತೀರ್ಮಾನಿಸುವ ಸಂದರ್ಭದಲ್ಲಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವುದು ಉತ್ತಮ. ಹರಿದು ಬರುವ ಅವಕಾಶಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿ. ಉಳಿತಾಯದ ಹಣ ಕೈ ಸೇರುವುದು.

ಪದಬಂಧ 5548

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಭ್ರಾಂತಿಯನ್ನು ಹೋಗಲಾಡಿಸುವುದು (6)
4.ಒಂದು ಸಂಖ್ಯೆಯನ್ನು ಇನ್ನೊಂದರಿಂದ ಗುಣಿಸುವುದು (4)
5.ವಾಹನವನ್ನು ನಡೆಸುವವನು (3)
7.ವಿಷಯಾಸಕ್ತ ಇಲ್ಲಿದ್ದಾನೆ (3)
10.ಅರಿಶಿನ ಬಣ್ಣವನ್ನು ಹೀಗೆನ್ನಿ (3)
12.ಗವಿ ಇಲ್ಲಿದೆ (3)
13.ಕನ್ನಡಿಗರ ಹೆಮ್ಮೆಯ ನಾಡು (4)
15.ಮೂರ್ತಿ ಪೂಜೆಯಿದು (6)

ಮೇಲಿಂದ ಕೆಳಕ್ಕೆ

1.ಚಾರನ ಕೆಟ್ಟ ನಡುವಳಿಕೆ (4)
2.ಅಳು ಪದದ ವಿರುದ್ಧ ಪದ (2)
3.ನಡುವೆ ಧ್ವನಿಯಿದ್ದಾಗ ಮೂಡಿದ ನಂಬಿಕೆ! (4)
6.ಅತಿಯಾದ ಬಾಯಾರಿಕೆ (4)
7.ಪಾವತಿ ಪತ್ರವಿದು (3)
8.ಹಾಲು ಮೊಸರು ಮಾರುವವನು (4)
9.ಕತ್ತು ಕೊನೆಗಿಟ್ಟಾಗ ಉಂಟಾದ ಅಡ್ಡಿ! (4)
11.ರಾಜನ ಗೃಹವಿದು (4)
14.ಈತ ಕವಿತೆ ಬರೆಯುವವನು (2)



5547ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸೂಕ್ಷ್ಮದರ್ಶಕ 4.ವಾರ್ಧಕ್ಯ 5.ಸುಗಮ 6.ನವಿಲು 8.ಹಸುಳೆ 9.ವಿರಾಮ 12.ವರದಿ 15.ನಖಾಗ್ರ 16.ಪ್ರೇಯಸಿ 17.ಜಲಜನಕ

ಮೇಲಿಂದ ಕೆಳಕ್ಕೆ:
1.ಸೂಕ್ಷ್ಮದೃಷ್ಟಿ 2.ದನಿಗೂಡಿಸು 3.ಕಸುವು 4.ವಾಮನ 7.ವಿಲೋಮ 8.ಹಗುರ 10.ರಾಜಾಧಿರಾಜ 11.ಅಕರ್ಷಕ 13.ದಿನಸಿ 14.ಅಗ್ರಜ

ಸುಡೊಕು 5933

4			9		1		3	2
	9	2		8			7	4
8			4		5	9		
7								8
	8		1	6	2		9	
		9	7			2		
		8		1				
9		4	8		7		2	5
	1			9			8	6

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5932 ಸುಡೊಕು

6	2	4	9	1	7	3	5	8
5	1	3	8	4	6	9	2	7
9	7	8	2	5	3	4	1	6
7	4	9	5	3	8	1	6	2
1	8	6	4	2	9	7	3	5
2	3	5	6	7	1	8	4	9
4	9	2	3	8	5	6	7	1
3	6	1	7	9	2	5	8	4
8	5	7	1	6	4	2	9	3

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ	21,731
ಇಂದಿನ ಅಂತ	21,741
▲	10
ದಿನದ ಗರಿಷ್ಠ	21,834

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹615
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹615

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1620)
ಸೋಯಾ (ರಿಫೈನ್ಡ್)	₹870 (870)
ಸೂರ್ಯಕಾಂತಿ (ರಿಫೈನ್ಡ್)	₹890 (890)
ಪಾಮೊಲಿನ್	₹824 (820)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹330-500
ದ್ವಿತಳಿ (ಬಿ.ವಿ)	₹286-582

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹152
ಆರ್‌ಎಸ್‌ಎಸ್-5	₹148
ರಬ್ಬರ್ ಲಾಟ್	₹131

(ಪ್ರತಿ ಕೆ.ಜಿಗೆ)

ವಿನಿಮಯ ದರ

$ ಡಾಲರ್	83.21
£ ಪೌಂಡ್	105.74
€ ಯೂರೊ	91.89
¥ ಯೆನ್ (100ಕ್ಕೆ)	59

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2000-2400
ಮಧ್ಯಮ	₹1500-2000
ಸಣ್ಣ	₹1000-1500

ಸ್ವಿಗ್ಗಿ: ಒಂದೇ ದಿನ 4.8 ಲಕ್ಷ ಬಿರಿಯಾನಿ ಮಾರಾಟ

ಹೊಸ ವರ್ಷದ ಮುನ್ನ ದಿನ ಗ್ರಾಹಕರಿಂದ ಖರೀದಿ ಜೋರು

ಹೈದರಾಬಾದ್ (ಪಿಟಿಐ): ಹೊಸ ವರ್ಷಾಚರಣೆಯ ಮುನ್ನ ದಿನವಾದ ಭಾನುವಾರದಂದು ಗ್ರಾಹಕರು ಆನ್‌ಲೈನ್ ಮೂಲಕ ಆಹಾರ, ದಿನಸಿ ಸಾಮಗ್ರಿ ಸೇರಿದಂತೆ ದಿನಬಳಕೆಯ ಅಗತ್ಯ ವಸ್ತುಗಳ ಖರೀದಿಯಲ್ಲಿ ದಾಖಲೆ ಬರೆದಿದ್ದಾರೆ.

‘ಹೊಸ ವರ್ಷದ ಮುನ್ನ ದಿನದಂದು 4.8 ಲಕ್ಷ ಬಿರಿಯಾನಿ ಮಾರಾಟವಾಗಿವೆ. ಪ್ರತಿ ನಿಮಿಷಕ್ಕೆ ಗ್ರಾಹಕರು 1,244 ಆಹಾರ ಪದಾರ್ಥಗಳನ್ನು ಆರ್ಡರ್ ಮಾಡಿದ್ದಾರೆ’ ಎಂದು ಸ್ವಿಗ್ಗಿ ಕಂಪನಿ ತಿಳಿಸಿದೆ.

ಪ್ರತಿ ನಾಲ್ಕು ಬಿರಿಯಾನಿ ಆರ್ಡರ್‌ಗಳ ಪೈಕಿ ಒಂದು ಬಿರಿಯಾನಿಯು ಹೈದರಾಬಾದ್‌ನಿಂದ ಆರ್ಡರ್ ಆಗಿದೆ. 2023ರ ನವೆಂಬರ್ 19ರಂದು ನಡೆದ ವಿಶ್ವಕಪ್ ಕ್ರಿಕೆಟ್‌ನ ಫೈನಲ್ ಪಂದ್ಯದ ವೇಳೆ ದಾಖಲೆ ಪ್ರಮಾಣದಲ್ಲಿ ಗ್ರಾಹಕರು ಬಿರಿಯಾನಿ ಆರ್ಡರ್ ಮಾಡಿದ್ದರು ಎಂದು ತಿಳಿಸಿದೆ.

ಸ್ವಿಗ್ಗಿಯು ಕಳೆದ ವರ್ಷ ಇದೇ ಅವಧಿಯಲ್ಲಿ 3.50 ಲಕ್ಷ ಬಿರಿಯಾನಿ ಮತ್ತು 2.5 ಲಕ್ಷಕ್ಕೂ ಹೆಚ್ಚು ಪಿಜ್ಜಾಗಳನ್ನು ಗ್ರಾಹಕರಿಗೆ ತಲುಪಿಸಿತ್ತು ಎಂದು ಕಂಪನಿಯ ಸಿಇಒ (ಆಹಾರ ಮಾರುಕಟ್ಟೆ) ರೋಹಿತ್ ಕಪೂರ್ ತಿಳಿಸಿದ್ದಾರೆ.

‘ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ಹೊಸ ವರ್ಷದ ಮುನ್ನ ದಿನದಂದು ಗ್ರಾಹಕರು ಅತಿಹೆಚ್ಚು ದಿನಸಿ ಪದಾರ್ಥಗಳನ್ನು ಖರೀದಿ ಮಾಡಿದ್ದಾರೆ’ ಎಂದು ಇನ್‌ಸ್ಟಾಮಾರ್ಟ್ ತಿಳಿಸಿದೆ.

ಜೊಮಾಟೊ ದಾಖಲೆ: ‘2015ರಿಂದ 2020ರ ವರೆಗೆ ಹೊಸ ವರ್ಷದ ಮುನ್ನ ದಿನದಂದು ಅತಿಹೆಚ್ಚಿನ ಪ್ರಮಾಣದಲ್ಲಿ ಆಹಾರ ಪೂರೈಕೆಗೆ ಜೊಮಾಟೊ ಕಂಪನಿಯು ಆರ್ಡರ್ ಸ್ವೀಕರಿಸಿತ್ತು. ಈ ಹೊಸ ವರ್ಷದಲ್ಲೂ ಅಷ್ಟೇ ಸಂಖ್ಯೆಯ ಆರ್ಡರ್ ಸ್ವೀಕರಿಸಿ ಗ್ರಾಹಕರಿಗೆ ಸೇವೆ ಒದಗಿಸಿದೆ’ ಎಂದು ಜೊಮಾಟೊ ಸಿಇಒ ದೀಪಿಂದರ್ ಗೋಯಲ್ ಹೇಳಿದ್ದಾರೆ.

ಜೊಮಾಟೊ ಒಡೆತನದ ಗ್ರಾಹಕ ಆನ್‌ಲೈನ್ ಡೆಲಿವರಿ ತಾಣ ಬ್ಲಿಂಕಿಟ್ ಕೂಡ ‘ಒಂದು ನಿಮಿಷದಲ್ಲಿ ಅತಿಹೆಚ್ಚು ಆರ್ಡರ್ ದಾಖಲಾದ ದಿನ (ಭಾನುವಾರ) ಇದಾಗಿದೆ’ ಎಂದು ಹೇಳಿದೆ. ಆದರೆ, ಎಷ್ಟು ಸಂಖ್ಯೆಯಲ್ಲಿ ಆರ್ಡರ್ ಸ್ವೀಕರಿಸಲಾಗಿದೆ ಎಂಬುದನ್ನು ತಿಳಿಸಿಲ್ಲ.

ಜ.22ರಿಂದ ಏರ್ ಇಂಡಿಯಾದ ಏರ್‌ಬಸ್ ವಿಮಾನ ಸೇವೆ ಆರಂಭ

ನವದೆಹಲಿ (ಪಿಟಿಐ): ಏರ್ ಇಂಡಿಯಾ ಕಂಪನಿಯ ಮೊದಲ ಏರ್‌ಬಸ್ ಎ350 ವಿಮಾನ ಸೇವೆಯು ಜನವರಿ 22ರಿಂದ ಬೆಂಗಳೂರು ಮತ್ತು ಮುಂಬೈ ನಡುವೆ ಆರಂಭವಾಗಲಿದೆ.

ಎ350–900 ವಿಮಾನವು ಮೂರು ವರ್ಗದ ಕ್ಯಾಬಿನ್ ಹೊಂದಿದ್ದು, ಒಟ್ಟು 316 ಸೀಟುಗಳಿವೆ. 28 ಬ್ಯುಸಿನೆಸ್ ಕ್ಲಾಸ್, 24 ಪ್ರೀಮಿಯಂ ಎಕಾನಮಿ ಹಾಗೂ 264 ಎಕಾನಮಿ ದರ್ಜೆಯ ಸೀಟುಗಳಿವೆ.

ದೇಶೀಯ ಮಾರ್ಗದಲ್ಲಿ ಏರ್‌ಬಸ್‌ನ ಪ್ರಥಮ ವಾಣಿಜ್ಯ ಸಂಚಾರ ಸೇವೆ ಆರಂಭಕ್ಕೆ ಸಿದ್ಧತೆ ಪೂರ್ಣಗೊಂಡಿದೆ. ಎಲ್ಲಾ ಸಿಬ್ಬಂದಿಗೂ ಸೂಕ್ತ ತರಬೇತಿ ನೀಡಲಾಗಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಸೋಮವಾರದಿಂದಲೇ ಏರ್‌ಬಸ್‌ನ ಪ್ರಯಾಣ ಸೇವೆಗೆ ಸಂಬಂಧಿಸಿದಂತೆ ಬುಕ್ಕಿಂಗ್ ಆರಂಭಿಸಲಾಗಿದೆ.

ಫ್ರಾನ್ಸ್‌ನ ಏರ್‌ಬಸ್ ಕಂಪನಿ ನಿರ್ಮಿಸಿರುವ ಈ ವಿಮಾನವು ಡಿಸೆಂಬರ್ 23ರಂದು ನವದೆಹಲಿಗೆ ಬಂದಿಳಿದಿತ್ತು.

ಜನರ ಬಳಿ ₹9,330 ಕೋಟಿ ಮೌಲ್ಯದ ₹2,000 ನೋಟು

ಮುಂಬೈ (ಪಿಟಿಐ): ದೇಶದಲ್ಲಿ ಚಲಾವಣೆಯಲ್ಲಿದ್ದ ₹2,000 ಮುಖಬೆಲೆಯ ನೋಟುಗಳ ಪೈಕಿ ಶೇ 97.38ರಷ್ಟು ನೋಟುಗಳು ಬ್ಯಾಂಕ್‌ಗಳಿಗೆ ಮರಳಿವೆ. ಜನರ ಬಳಿ ಇನ್ನೂ ₹9,330 ಕೋಟಿ ಮೌಲ್ಯದ ನೋಟುಗಳು ಉಳಿದಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೋಮವಾರ ತಿಳಿಸಿದೆ.

ಈ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯುವುದಾಗಿ ಆರ್‌ಬಿಐ ಮೇ 19ರಂದು ಹೇಳಿತ್ತು.

ಎಸ್‌ಯುವಿ ಮೇಲೆ ಗ್ರಾಹಕರ ಪ್ರೀತಿ: ಮಹೀಂದ್ರ, ಹುಂಡೈ, ಟೊಯೊಟಾ ಮಾರಾಟ ಹೆಚ್ಚಳ

41 ಲಕ್ಷ ವಾಹನ ಮಾರಾಟ ದಾಖಲೆ

ನವದೆಹಲಿ (ಪಿಟಿಐ): ದೇಶದಲ್ಲಿ 2023ನೇ ಸಾಲಿನಲ್ಲಿ ಪ್ರಯಾಣಿಕ ವಾಹನಗಳ ಮಾರಾಟ ಶೇ 8.3ರಷ್ಟು ಹೆಚ್ಚಳವಾಗಿದೆ.

ಒಟ್ಟು 41.08 ಲಕ್ಷ ವಾಹನಗಳು ಮಾರಾಟವಾಗಿರುವುದು ದಾಖಲೆಯಾಗಿದೆ. ಈ ಪೈಕಿ ಅರ್ಧದಷ್ಟು ಎಸ್‌ಯುವಿ ವಾಹನಗಳಾಗಿವೆ.

2022ನೇ ಸಾಲಿನಲ್ಲಿ ಸರಾಸರಿ ₹10.58 ಲಕ್ಷ ಮೌಲ್ಯದ ವಾಹನಗಳ ಮಾರಾಟ ಹೆಚ್ಚಿತ್ತು. ಈ ಬಾರಿ ₹11.5 ಲಕ್ಷ ಮೌಲ್ಯದ ವಾಹನಗಳು ಹೆಚ್ಚು ಮಾರಾಟವಾಗಿವೆ. ಎಂಜಿ, ಮಹೀಂದ್ರ ಆ್ಯಂಡ್ ಮಹೀಂದ್ರ, ಹುಂಡೈ, ಟೊಯೊಟಾ, ಐಷರ್, ಟಾಟಾ ಕಂಪನಿಯ ವಾಹನಗಳ ಮಾರಾಟ ಏರಿಕೆಯಾಗಿದೆ.

ಎಂಜಿ ಮೋಟರ್: ಎಂಜಿ ಮೋಟರ್ ಇಂಡಿಯಾದ ಚಿಲ್ಲರೆ ವಾಹನ ಮಾರಾಟವು 2022ಕ್ಕೆ ಹೋಲಿಸಿದರೆ 2023ರಲ್ಲಿ ಶೇ 18ರಷ್ಟು ಏರಿಕೆಯಾಗಿದೆ. 56,902 ವಾಹನ ಮಾರಾಟವಾಗಿವೆ. ಡಿಸೆಂಬರ್‌ನಲ್ಲಿ ಚಿಲ್ಲರೆ ಮಾರಾಟವು ಶೇ 13ರಷ್ಟು ಏರಿಕೆಯಾಗಿದ್ದು, 4,400 ವಾಹನಗಳು ಮಾರಾಟವಾಗಿವೆ. ಒಟ್ಟಾರೆ ಮಾರಾಟದಲ್ಲಿ ವಿದ್ಯುತ್ ಚಾಲಿತ ವಾಹನಗಳ ಮಾರಾಟವು ಶೇ 25ರಷ್ಟಿದೆ ಎಂದು ಕಂಪನಿ ತಿಳಿಸಿದೆ.

ಮಹೀಂದ್ರ ಮಾರಾಟ: ಮಹೀಂದ್ರ ಆ್ಯಂಡ್ ಮಹೀಂದ್ರ ಲಿಮಿಟೆಡ್ ವಾಹನಗಳ ಮಾರಾಟವು ಶೇ 6ರಷ್ಟು ಏರಿಕೆಯಾಗಿದ್ದು, 60,188 ವಾಹನಗಳು ಮಾರಾಟವಾಗಿವೆ. ಪ್ರಯಾಣಿಕ ವಾಹನಗಳ ಮಾರಾಟವು 28,445ರಿಂದ 35,174ಕ್ಕೆ ಏರಿದೆ ಎಂದು ಕಂಪನಿ ತಿಳಿಸಿದೆ.

ಯುಟಿಲಿಟಿ ವಾಹನಗಳ ಮಾರಾಟವು ಡಿಸೆಂಬರ್‌ನಲ್ಲಿ ಶೇ 24ರಷ್ಟು ಏರಿಕೆಯಾಗಿದೆ ಒಟ್ಟು 35,171 ವಾಹನಗಳು ಮಾರಾಟವಾಗಿವೆ.

ಡಿಸೆಂಬರ್‌ನಲ್ಲಿ ಕಂಪನಿಯ

> **ಡಿಸೆಂಬರ್‌ನಲ್ಲಿ ಕೃಷಿ ಚಟುವಟಿಕೆ ಕಡಿಮೆ. ಇದರಿಂದ ವಾಹನಗಳ ಮಾರಾಟವು ಮಂದಗತಿಯಲ್ಲಿತ್ತು. ಕೃಷಿ ವಲಯಕ್ಕೆ ಸರ್ಕಾರದ ಬೆಂಬಲವು ಟ್ರ್ಯಾಕ್ಟರ್‌ಗಳ ಖರೀದಿಯನ್ನು ಹೆಚ್ಚಿಸಲಿದೆ**
>
> **ಹೇಮಂತ್ ಸಿಕ್ಕಾ,** ಅಧ್ಯಕ್ಷ (ಕೃಷಿ ಸಲಕರಣೆ) ಮಹೀಂದ್ರ ಆ್ಯಂಡ್ ಮಹೀಂದ್ರ

ಒಟ್ಟು ವಾಹನಗಳ ರಫ್ತು ಶೇ 41ರಷ್ಟು ಇಳಿಕೆಯಾಗಿದೆ. 2022ರ ಡಿಸೆಂಬರ್‌ನಲ್ಲಿ 3,100 ವಾಹನಗಳನ್ನು ರಫ್ತು ಮಾಡಲಾಗಿತ್ತು. ಮಹೀಂದ್ರ ಆ್ಯಂಡ್ ಮಹೀಂದ್ರ ಟ್ರ್ಯಾಕ್ಟರ್‌ಗಳ ಒಟ್ಟು ಮಾರಾಟ ಶೇ 18ರಷ್ಟು ಇಳಿಕೆಯಾಗಿ, 19,138ಕ್ಕೆ ತಲುಪಿದೆ.

ಬಜಾಜ್ ವಹಿವಾಟು: ಬಜಾಜ್ ಆಟೊ ವಾಹನ ಮಾರಾಟವು ಡಿಸೆಂಬರ್‌ನಲ್ಲಿ ಶೇ 16ರಷ್ಟು ಏರಿಕೆಯಾಗಿ, 3.26 ಲಕ್ಷಕ್ಕೆ ತಲುಪಿದೆ. 2022ರಲ್ಲಿ ಇದೇ ಅವಧಿಯಲ್ಲಿ 2.81 ಲಕ್ಷ ವಾಹನಗಳು ಮಾರಾಟವಾಗಿದ್ದವು.

ಕಂಪನಿಯ ದ್ವಿಚಕ್ರವಾಹನಗಳ ಮಾರಾಟವು ಹಿಂದಿನ ವರ್ಷದ ಅವಧಿಗಿಂತ ಶೇ 15ರಷ್ಟು ಹೆಚ್ಚಳವಾಗಿ 2.83 ಲಕ್ಷಕ್ಕೆ ತಲುಪಿದೆ.

ಹುಂಡೈ ಮಾರಾಟ: ಹುಂಡೈ ಮೋಟರ್ ಇಂಡಿಯಾ ಲಿಮಿಟೆಡ್ ವಾಹನಗಳ ಮಾರಾಟವು ಶೇ 9ರಷ್ಟು ಏರಿಕೆಯಾಗಿ 7.65 ಲಕ್ಷಕ್ಕೆ ತಲುಪಿದೆ. 2022ರಲ್ಲಿ ಇವುಗಳ ಮಾರಾಟ 7 ಲಕ್ಷ ಇತ್ತು ಎಂದು ಕಂಪನಿ ತಿಳಿಸಿದೆ.

ಟೊಯೊಟಾ ವಹಿವಾಟು: ಟೊಯೊಟಾ ಕಿರ್ಲೋಸ್ಕರ್ ಮೋಟರ್ ವಾಹನಗಳ ಮಾರಾಟವು 2023ರಲ್ಲಿ ಶೇ 45ರಷ್ಟು ಏರಿಕೆಯಾಗಿದ್ದು 2.33 ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷ 1.60 ಲಕ್ಷ ವಾಹನಗಳ ಮಾರಾಟವಾಗಿತ್ತು.

ವಿಇಸಿವಿ ವಾಹನ: ಐಷರ್ ಮೋಟರ್ಸ್‌ನ ಅಂಗಸಂಸ್ಥೆ ‘ವಿಇಸಿವಿ’ ವಾಹನಗಳ ಮಾರಾಟವು ಡಿಸೆಂಬರ್‌ನಲ್ಲಿ ಶೇ 11ರಷ್ಟು ಹೆಚ್ಚಳವಾಗಿದೆ.

ಮಾರುತಿ ಸುಜುಕಿ ಮಾರಾಟ ಇಳಿಕೆ

ದೇಶದ ಪ್ರಮುಖ ವಾಹನ ತಯಾರಿಕಾ ಕಂಪನಿಯಾದ ಮಾರುತಿ ಸುಜುಕಿ ಇಂಡಿಯಾದ ವಾಹನಗಳ ಮಾರಾಟವು ಡಿಸೆಂಬರ್‌ನಲ್ಲಿ ಶೇ 1.28ರಷ್ಟು ಇಳಿಕೆಯಾಗಿದೆ. 1.37 ಲಕ್ಷ ವಾಹನಗಳು ಮಾರಾಟವಾಗಿವೆ.

2022ರ ಡಿಸೆಂಬರ್‌ನಲ್ಲಿ 1.39 ಲಕ್ಷ ವಾಹನ ಮಾರಾಟವಾಗಿದ್ದವು. ಈ ಅವಧಿಯಲ್ಲಿ ವಾಹನಗಳ ರಫ್ತು 21,796ರಿಂದ 26,884ಕ್ಕೆ ಏರಿಕೆ ಆಗಿದೆ.

ಟಾಟಾ ಮಾರಾಟ ಶೇ 4 ಏರಿಕೆ

ಟಾಟಾ ಮೋಟರ್ಸ್ ವಾಹನಗಳ ದೇಶೀಯ ಮಾರಾಟವು ಡಿಸೆಂಬರ್‌ನಲ್ಲಿ ಶೇ 4ರಷ್ಟು ಏರಿಕೆಯಾಗಿದೆ. ಒಟ್ಟು 76,138 ವಾಹನಗಳು ಮಾರಾಟವಾಗಿವೆ. 2022ರ ಡಿಸೆಂಬರ್‌ನಲ್ಲಿ 72,997 ವಾಹನಗಳು ಮಾರಾಟವಾಗಿದ್ದವು. ಪ್ರಯಾಣಿಕ ವಾಹನಗಳ ಮಾರಾಟ 40,043ರಿಂದ 43,470ಕ್ಕೆ (ಶೇ 9ರಷ್ಟು) ಏರಿಕೆಯಾಗಿದೆ.

ಮೊದಲ ದಿನ ಅಲ್ಪ ಗಳಿಕೆ ಕಂಡ ಷೇರು ಮಾರುಕಟ್ಟೆ

ಮುಂಬೈ (ಪಿಟಿಐ): ಹೊಸ ವರ್ಷ ಆರಂಭದ ದಿನವಾದ ಸೋಮವಾರ ಅಲ್ಪ ಗಳಿಕೆಯೊಂದಿಗೆ ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ವಹಿವಾಟು ಅಂತ್ಯಗೊಂಡಿತು.

ಸೆನ್ಸೆಕ್ಸ್ 31 ಅಂಶ ಏರಿಕೆ ಕಂಡು 72,271ಕ್ಕೆ ತಲುಪಿತು. ದಿನದ ವಹಿವಾಟಿನಲ್ಲಿ 72,031 ಅಂಶ ಕನಿಷ್ಠ ಮಟ್ಟಕ್ಕೆ ಇಳಿದ ಸೆನ್ಸೆಕ್ಸ್, ನಂತರ 72,561 ಗರಿಷ್ಠ ಮಟ್ಟಕ್ಕೆ ಮುಟ್ಟಿತ್ತು. ನಿಫ್ಟಿ 10.50 ಅಂಶ ಏರಿಕೆಯಾಗಿ, 21,741ಕ್ಕೆ ತಲುಪಿತು.

2023ರಲ್ಲಿ ಬಿಎಸ್‌ಇ 11,399 ಅಂಶ (ಶೇ 18.73) ಮತ್ತು ನಿಫ್ಟಿ 3,626 ಅಂಶ (ಶೇ 20) ಏರಿಕೆಯಾಗಿದ್ದು, ಹೂಡಿಕೆದಾರರಿಗೆ ಲಾಭ ತಂದುಕೊಟ್ಟಿವೆ.

ನೆಸ್ಲೆ, ಟೆಕ್ ಮಹೀಂದ್ರ, ಎಚ್‌ಸಿಎಲ್ ಟೆಕ್ನಾಲಜೀಸ್, ಟಾಟಾ ಮೋಟರ್ಸ್, ವಿಪ್ರೊ ಮತ್ತು ಐಟಿಸಿ ಷೇರುಗಳು ಗಳಿಕೆ ಕಂಡಿವೆ. ಭಾರ್ತಿ ಏರ್‌ಟೆಲ್, ಮಹೀಂದ್ರ ಆ್ಯಂಡ್ ಮಹೀಂದ್ರ, ಬಜಾಜ್ ಫಿನ್‌ಸರ್ವ್, ಎಚ್‌ಡಿಎಫ್‌ಸಿ ಬ್ಯಾಂಕ್, ಎನ್‌ಟಿಪಿಸಿ ಮತ್ತು ಹಿಂದೂಸ್ತಾನ್ ಯೂನಿಲಿವರ್ ಇಳಿಕೆ ಕಂಡಿವೆ. ಬ್ರೆಂಟ್ ಕಚ್ಚಾ ತೈಲವು ಬ್ಯಾರೆಲ್‌ಗೆ ಶೇ 0.14ರಷ್ಟು ಇಳಿದು, 77.04 ಡಾಲರ್‌ಗೆ ತಲುಪಿದೆ.

ಮುಂಬೈ ಧಾರಣೆ

ಶೇಂಗಾ

01-01-2024

ಜಾವಾ 70/80(ಹೊಸ)	12300-12400
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10900-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	827 (827)
ಪಾಮ್ ವಾರದ ಡೆಲಿವರಿ	826 (822)
ಸೂರ್ಯಕಾಂತಿ ಎಣ್ಣೆ ಕಚ್ಚಾ	810 (810)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

63,100 (62,900)

ಬೆಳ್ಳಿ ಕೆ.ಜಿ 73,700 (73,550)

ಆವರಣದಲ್ಲಿ ಶನಿವಾರದ ಧಾರಣೆ

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹14100
ಎಸಿ	₹7840
ಆರ್‌ಪಿ	₹11000
ಆರ್‌ಸಿ	₹6890

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ತಿಪಟೂರು	₹8000-9500
ತುರುವೇಕೆರೆ	₹9300-9300

1.64 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ಒಂದನೇ ಪುಟದಿಂದ...

2022ನೇ ಆರ್ಥಿಕ ವರ್ಷದ ಡಿಸೆಂಬರ್‌ನಲ್ಲಿ ಸಂಗ್ರಹವಾಗಿದ್ದ ₹1.49 ಲಕ್ಷ ಕೋಟಿಗೆ ಹೋಲಿಸಿದರೆ, ಶೇ 10ರಷ್ಟು ಹೆಚ್ಚು ವರಮಾನ ಸಂಗ್ರಹವಾಗಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

2023ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ₹14.97 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು. ಒಟ್ಟು ಶೇ 12ರಷ್ಟು ಹೆಚ್ಚಳವಾಗಿತ್ತು. ಇದೇ ಅವಧಿಯಲ್ಲಿ ತಿಂಗಳ ಸರಾಸರಿ ಸಂಗ್ರಹವು ₹1.66 ಲಕ್ಷ ಕೋಟಿ ಇದೆ ಎಂದು ಹೇಳಿದೆ.

2022ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ₹13.40 ಲಕ್ಷ ಕೋಟಿ ಸಂಗ್ರಹವಾಗಿತ್ತು. ಅಲ್ಲದೇ, ಈ ಅವಧಿಯಲ್ಲಿ ಸರಾಸರಿ ಸಂಗ್ರಹ ₹1.49 ಲಕ್ಷ ಕೋಟಿ ಇತ್ತು ಎಂದು ವಿವರಿಸಿದೆ.

ರಾಜ್ಯದ ಜಿಎಸ್‌ಟಿ ₹11,759 ಕೋಟಿ

ನವದೆಹಲಿ: ಕರ್ನಾಟಕದಲ್ಲಿ ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಮೂಲಕ 2023ರ ಡಿಸೆಂಬರ್‌ನಲ್ಲಿ ₹11,759 ಕೋಟಿ ಸಂಗ್ರಹವಾಗಿದೆ.

2022ರ ಡಿಸೆಂಬರ್ ತಿಂಗಳಲ್ಲಿ ₹10,061 ಕೋಟಿ ಸಂಗ್ರಹವಾಗಿತ್ತು. 2023ರ ಡಿಸೆಂಬರ್‌ನಲ್ಲಿ ಜಿಎಸ್‌ಟಿ ಸಂಗ್ರಹ ಪ್ರಮಾಣ ಶೇ 17ರಷ್ಟು ಹೆಚ್ಚಳ ಆಗಿದೆ. ಜಿಎಸ್‌ಟಿ ಸಂಗ್ರಹದಲ್ಲಿ ಮಹಾರಾಷ್ಟ್ರ ಮೊದಲನೇ ಹಾಗೂ ಕರ್ನಾಟಕ ಎರಡನೇ ಸ್ಥಾನದಲ್ಲಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		**ಪುತ್ತೂರು**		**ಸಿದ್ದಾಪುರ**	
ಬಂಟ್ವಾಳ		ಹೊಸತು	27000-36500	ರಾಶಿ	43599-48299
ಕೋಕ	15000-27500	**ಸಾಗರ**		ತಟ್ಟಿಬೆಟ್ಟೆ	38699-38699
ಹೊಸತು	27500-35500	ಬಿಳಿಗೋಟು	22899-31799	ಬಿಳಿಗೋಟು	31199-32699
ಹಳತು	41000-43000	ಚಾಲಿ	33829-37639	ಚಾಲಿ	36106-37500
ಕಾರ್ಕಳ		ಕೋಕ	20199-33989	ಕೋಕ	28299-33700
ಹೊಸತು	25000-36500	ಕೆಂಪುಗೋಟು	34299-38000	ಕೆಂಪುಗೋಟು	33000-33000
ಹಳತು	30000-44000	ರಾಶಿ	39399-48569	**ಶಿರಸಿ**	
ಕುಮಟ		ಸಿಪ್ಪೆಗೋಟು	12899-20451	ಬೆಟ್ಟೆ	40009-43099
ಚಿಪ್ಪು	25899-32999	**ಶಿವಮೊಗ್ಗ**		ಬಿಳಿಗೋಟು	28999-34709
ಕೋಕ	19189-32019	ಬೆಟ್ಟೆ	44969-54050	ಚಾಲಿ	37399-38649
ಫ್ಯಾಕ್ಟರಿ	11509-23299	ಗೊರಬಲು	18000-38199	ಕೆಂಪುಗೋಟು	30199-34909
ಹಳೆಚಾಲಿ	36289-38019	ಹೊಸತು	45639-47858	ರಾಶಿ	42098-47199
ಹೊಸಚಾಲಿ	32629-34359	ರಾಶಿ	43338-48699		
		ಸರಕು	47201-80996		

ಆಹಾರ ಪೊಟ್ಟಣದ ಮೇಲೆ ತಯಾರಿಕೆ ದಿನಾಂಕ, ಬೆಲೆ ಮುದ್ರಣ ಕಡ್ಡಾಯ

ನವದೆಹಲಿ (ಪಿಟಿಐ): ಆಹಾರ ಪದಾರ್ಥಗಳ ಪ್ಯಾಕಿಂಗ್ ಮೇಲೆ ಅದರ ತಯಾರಿಕೆಯ ದಿನಾಂಕ ಹಾಗೂ ಮಾರಾಟದ ದರವನ್ನು ಕಂಪನಿಗಳು ಕಡ್ಡಾಯವಾಗಿ ಮುದ್ರಿಸಬೇಕಿದೆ ಎಂದು ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಈ ಕುರಿತು ಅಧಿಸೂಚನೆ ಹೊರಡಿಸಲಾಗಿದ್ದು, ಸೋಮವಾರದಿಂದಲೇ ಆದೇಶ ಜಾರಿಗೆ ಬಂದಿದೆ ಎಂದು ಸಚಿವಾಲಯದ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ಈ ಮೊದಲು ಆಹಾರ ಪದಾರ್ಥಗಳ ಪ್ಯಾಕಿಂಗ್ ಮೇಲೆ ತಯಾರಿಕೆಯ ದಿನಾಂಕ, ಆಮದು ದಿನಾಂಕ ಅಥವಾ ಪ್ಯಾಕಿಂಗ್ ಮಾಡಿದ ದಿನವನ್ನು ನಮೂದಿಸುವುದಕ್ಕೆ ಕಂಪನಿಗಳಿಗೆ ಆಯ್ಕೆ ನೀಡಲಾಗಿತ್ತು. ಸದ್ಯ ಈ ನಿಯಮವನ್ನು ಬದಲಾಯಿಸಲಾಗಿದೆ ಎಂದು ಹೇಳಿದ್ದಾರೆ.

ಒಂದು ಕೆ.ಜಿ ಚಿನ್ನ ಗೆದ್ದ ಜೋಯಾಲುಕ್ಕಾಸ್ ಗ್ರಾಹಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತ್ತೀಚೆಗೆ ಮುಕ್ತಾಯಗೊಂಡ ಬೆಂಗಳೂರು ಗೋಲ್ಡ್ ಶಾಪಿಂಗ್ ಫೆಸ್ಟಿವಲ್‌ನ ಅದೃಷ್ಟಶಾಲಿ ವಿಜೇತರಾದ ಜೋಯಾಲುಕ್ಕಾಸ್‌ನ ಗ್ರಾಹಕ ಹರಿಹರಸುದನ್ ಅವರು, ಒಂದು ಕೆ.ಜಿ ಚಿನ್ನವನ್ನು ಬಹುಮಾನವಾಗಿ ಪಡೆದಿದ್ದಾರೆ.

ಬೆಂಗಳೂರಿನ ಡಿಕೆಎನ್ ಮಳಿಗೆಯಲ್ಲಿ ಚಿನ್ನ ಖರೀದಿಸಿದ್ದ ಅವರು ಫೆಸ್ಟಿವಲ್‌ನ ಕೂಪನ್ ಪಡೆದಿದ್ದರು. ಮಹಾತ್ಮಗಾಂಧಿ ರಸ್ತೆಯ ಶಾಖೆಯಲ್ಲಿ ನಡೆದ ಸಂಭ್ರಮಾಚರಣೆ ಸಮಾರಂಭದಲ್ಲಿ ಅವರಿಗೆ ಬಹುಮಾನ ನೀಡಲಾಯಿತು.

ಇತ್ತೀಚೆಗೆ ಮುಕ್ತಾಯಗೊಂಡ ಬೆಂಗಳೂರು ಗೋಲ್ಡ್ ಶಾಪಿಂಗ್ ಫೆಸ್ಟಿವಲ್‌ನಲ್ಲಿ ಅದೃಷ್ಟಶಾಲಿಯಾಗಿ ಆಯ್ಕೆಯಾದ ಜೋಯಾಲುಕ್ಕಾಸ್ ಗ್ರಾಹಕ ಹರಿಹರಸುದನ್ ಅವರಿಗೆ ಒಂದು ಕೆ.ಜಿ ಚಿನ್ನವನ್ನು ಬಹುಮಾನವಾಗಿ ನೀಡಲಾಯಿತು

ಫೆಸ್ಟಿವಲ್‌ನ 72 ಅದೃಷ್ಟಶಾಲಿ ವಿಜೇತರ ಪೈಕಿ ಎಂಟು ಮಂದಿ ಜೋಯಾಲುಕ್ಕಾಸ್ ಶಾಖೆಯಲ್ಲಿ ಚಿನ್ನಾಭರಣ ಖರೀದಿಸಿದ್ದ ಗ್ರಾಹಕರಾಗಿದ್ದಾರೆ. ವಿಜೇತರಾದ ಎಲ್ಲಾ ಗ್ರಾಹಕರಿಗೆ ಒಟ್ಟು 1,111 ಗ್ರಾಂ ಚಿನ್ನ ಹಾಗೂ 28 ಗ್ರಾಹಕರಿಗೆ 2,030 ಗ್ರಾಂ ಬೆಳ್ಳಿಯನ್ನು ಬಹುಮಾನವಾಗಿ ನೀಡಲಾಯಿತು.

ನರೇಗಾ: ಆಧಾರ್ ಆಧಾರಿತ ಪಾವತಿ ವ್ಯವಸ್ಥೆ- ಕಾಂಗ್ರೆಸ್ ಟೀಕೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗಾ) ಕಾರ್ಮಿಕರಿಗೆ ಇನ್ನು ಮುಂದೆ ಆಧಾರ್ ಆಧಾರಿತ ಪಾವತಿ ವ್ಯವಸ್ಥೆ (ಎಬಿಪಿಎಸ್) ಮೂಲಕವೇ ಹಣ ಪಾವತಿಯಾಗಲಿದೆ.

ನರೇಗಾ ಕಾರ್ಮಿಕರ ಜಾಬ್ ಕಾರ್ಡ್ ವಿವರಗಳನ್ನು ಅವರ ಆಧಾರ್ ಸಂಖ್ಯೆ ಜತೆ ಜೋಡಿಸುವ ಮೂಲಕ ಎಬಿಪಿಎಸ್ ಜಾರಿಗೆ ನಿಗದಿಪಡಿಸಿದ್ದ ಡಿಸೆಂಬರ್ 31ರ ಗಡುವನ್ನು ಗ್ರಾಮೀಣಾಭಿವೃದ್ಧಿ ಸಚಿವಾಲಯ ವಿಸ್ತರಿಸಿಲ್ಲ. ಹೀಗಾಗಿ ಆಧಾರ್ ಆಧಾರಿತ ಪಾವತಿ ವ್ಯವಸ್ಥೆ ಜಾರಿಯಾಗಲಿದೆ.

ಕೇಂದ್ರ ಸರ್ಕಾರ ಈ ಕ್ರಮವನ್ನು ಕಾಂಗ್ರೆಸ್ ಟೀಕಿಸಿದ್ದು, ‘ದೇಶದ ಕೋಟ್ಯಂತರ ಬಡ ಜನರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಈ ಮೂಲಕ ಹೊಸ ವರ್ಷಕ್ಕೆ ಅತ್ಯಂತ ಕೆಟ್ಟ ಉಡುಗೊರೆ ನೀಡಿದ್ದಾರೆ’ ಎಂದು ದೂರಿದೆ.

ದೇಶದ ದುರ್ಬಲ ವರ್ಗದವರಿಗೆ ಸಾಮಾಜಿಕ ಕಲ್ಯಾಣ ಯೋಜನೆಗಳನ್ನು ನಿರಾಕರಿಸಲು ಆಧಾರ್ ವ್ಯವಸ್ಥೆ ಸೇರಿದಂತೆ ತಂತ್ರಜ್ಞಾನವನ್ನು ಅಸ್ತ್ರವಾಗಿ ಬಳಸುವುದನ್ನು ಮೋದಿ ಸರ್ಕಾರ ನಿಲ್ಲಿಸಬೇಕು ಎಂದು ಅದು ಆಗ್ರಹಿಸಿದೆ. ಈ ಮೂಲಕ ‘ಮೋದಿ ಸರ್ಕಾರವು ತಂತ್ರಜ್ಞಾನದ ವಿನಾಶಕಾರಿ ಪ್ರಯೋಗಗಳನ್ನು ಮುಂದುವರಿಸುತ್ತಿದೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಟೀಕಿಸಿದ್ದಾರೆ.

‘ದೇಶದಲ್ಲಿ ಒಟ್ಟು 25.69 ಕೋಟಿ ನರೇಗಾ ಕಾರ್ಮಿಕರು ಇದ್ದಾರೆ. ಇವರಲ್ಲಿ 14.33 ಕೋಟಿ ಸಕ್ರಿಯ ಕಾರ್ಮಿಕರು. ಡಿಸೆಂಬರ್ 27ರ ವೇಳೆಗೆ, ನೋಂದಣಿಯಾಗಿರುವ ಒಟ್ಟು ಕಾರ್ಮಿಕರಲ್ಲಿ ಶೇ 34.8 (8.9 ಕೋಟಿ) ಮತ್ತು ಶೇ 12.7 (1.8 ಕೋಟಿ) ರಷ್ಟು ಸಕ್ರಿಯ ಕಾರ್ಮಿಕರು ಎಬಿಪಿಎಸ್‌ಗೆ ಅನರ್ಹರಾಗಿದ್ದಾರೆ. ಇವರ ಸಮಸ್ಯೆಗಳನ್ನು ಕಾರ್ಮಿಕರು, ತಜ್ಞರು ಮತ್ತು ಸಂಶೋಧಕರು ಎತ್ತಿ ತೋರಿಸಿದ್ದರೂ ಸರ್ಕಾರ ಎಬಿಪಿಎಸ್ ಜಾರಿಗೆ ಮುಂದಾಗಿದೆ’ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನರೇಗಾಕ್ಕಾಗಿ ವಿನ್ಯಾಸಗೊಳಿಸಿರುವ ಡಿಜಿಟಲ್ ಹಾಜರಾತಿ (ಎನ್‌ಎಂಎಂಎಸ್), ಎಬಿಪಿಎಸ್, ಡ್ರೋನ್ ನಿಗಾ ಸೇರಿದಂತೆ ವಿವಿಧ ತಂತ್ರಜ್ಞಾನದ ಯೋಜನೆಗಳನ್ನು ಕೋಟ್ಯಂತರ ಭಾರತೀಯರ ಮೇಲೆ ಪ್ರಯೋಗಿಸುವ ಮುನ್ನ ಮೋದಿ ಸರ್ಕಾರ ಸಮಾಲೋಚನೆ ನಡೆಸಿಲ್ಲ ಎಂದು ದೂರಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

23ನೇ ವರ್ಷದ ಪುಣ್ಯಸ್ಮರಣೆ

ಬೋಜರೆಡ್ಡಿಯವರ

ಶ್ರೀಮತಿ ದೊಡ್ಡತಾಯಮ್ಮ W/o ಶ್ರೀ.ವೆಂಕಟಸ್ವಾಮಿ ರೆಡ್ಡಿ

ನಿಧನ: 02–01–2001 (ದೊಡ್ಡಬಾಣಸವಾಡಿ)

ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶಕ, ನಿಮ್ಮ ನೆನಪು ನಮಗೆ ಸದಾಹಸಿರು ಮತ್ತು ಸ್ಫೂರ್ತಿದಾಯಕ.

ಸದಾ ಸ್ಮರಿಸುವ

ಮಗ: ಬಿ.ವಿ.ಶ್ರೀನಿವಾಸರೆಡ್ಡಿ (ಮರಿ)

ಸೊಸೆ: ಶೈಲಜ,

ಮೊಮ್ಮಕ್ಕಳು: ವಿಜಯ್, ವಿನಯ್, ಶ್ವೇತ & ರೂಪಶ್ರೀ

ಮರಿಮಗಳು: ರಿಷಿಕಾ ರೆಡ್ಡಿ.

6th Year Anniversary

B.R. Gopalakrishna Reddy (Bellandur)

21.09.1970 – 02.01.2018

Remembered by: Mother, Wife, Children, Brothers, Sisters, Relatives & Friends.

ಮೊದಲನೇ ವರ್ಷದ ಪುಣ್ಯಸ್ಮರಣೆ

ಬಿ. ವರಲಕ್ಷ್ಮಿ

ಜನನ: 11.08.1944 – ನಿಧನ: 02.01.2023

ಲೇಟ್ ಬಿ.ಸಿ. ನಾರಾಯಣರೆಡ್ಡಿರವರ ಧರ್ಮಪತ್ನಿ

ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್ ಪಿಡಬ್ಲ್ಯುಡಿ

ನಂ. 1966, 9ನೇ ಬ್ಲಾಕ್, ಜಯನಗರ, ಬೆಂಗಳೂರು

ನಿಮ್ಮ ನೆನಪು ಸದಾ ನಮ್ಮಲ್ಲಿ ಅಚ್ಚಳಿಯದೇ ಉಳಿದಿದೆ.

ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ,

ದುಃಖತಪ್ತರು: ಕುಟುಂಬವರ್ಗದವರು

9ನೇ ವರ್ಷದ ಪುಣ್ಯಸ್ಮರಣೆ



ಜನನ: 01.11.1941 – ಮರಣ: 02.01.2015

ಭೋಜರೆಡ್ಡಿಯವರ

ಶ್ರೀ ಬಿ.ವಿ. ನಾರಾಯಣ ರೆಡ್ಡಿ

ಪುಣ್ಯ ತಿಥಿ:05.01.2024 ಮಧ್ಯಾಹ್ನ 3.00 ಗಂಟೆಗೆ ಮೃತರ ಸ್ವಗೃಹದಲ್ಲಿ

ದುಃಖತಪ್ತರು: ಧರ್ಮಪತ್ನಿ, ಎಚ್. ಜಿ ರತಿದೇವಿ, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬದವರು

For Online Classified Booking

Name Change / Education / Property / Job / Services & many more

Log on to : dhclassifieds.com

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ವ್ಯಾಪಾರ

Business to Business

Business

ಮಹಿಳಾ ಸಂಘ ಸಂಸ್ಥೆಗಳಿಗೆ ರೇಷ್ಮೆ, ಸಿಲ್ಕ್, ಕಾಟನ್, ಎಲ್ಲಾ ತರಹದ ಸೀರೆಗಳು, ದೊರೆಯುತ್ತದೆ. ಆಕರ್ಷಕ ಆದಾಯ ಸಿಗುತ್ತದೆ: 8892501007/ 9606701007

ಇತರೆ

Medical

ಶ್ರೀಶಕ್ತಿ ಹೆಲ್ತ್ ಕೇರ್ ವತಿಯಿಂದ ಎಲೆಕ್ಟ್ರೋ ಮ್ಯಾಗ್ನೆಟಿಕ್ ಥೆರಪಿ ಚಿಕಿತ್ಸೆ. ಶಿಬಿರ ದಿನಾಂಕ 01.01.2024 ರಿಂದ 07.01.2024 ರವರೆಗೆ. ಮಂಡಿ ನೋವು, ಬೆನ್ನು ನೋವು, ಕೀಲು ನೋವು, ವೆರಿಕೋಸ್ ವೇನ್ಸ್, ಮಾನಸಿಕ ಸಮಸ್ಯೆ, ತಲೆ ನೋವು, ಮೈಗ್ರೇನ್, ಭುಜದ ನೋವು, ಲಕ್ವಾ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ ಚಿಕಿತ್ಸೆ ಪಡೆಯಿರಿ. ವಿಳಾಸ: ಶೇಷಾದ್ರಿಪುರಂ ಪೊಲೀಸ್ ಸ್ಟೇಷನ್ ಎದುರು ಶೇಷಾದ್ರಿಪುರಂ, ಬೆಂಗಳೂರು-20. ಮೊಬೈಲ್: 7349494852.

ಪ್ರವಾಸ

Travel

10 ದಿನಗಳ ಗುಜರಾತ್. 8 ದಿನಗಳ ಕಾಶಿಯಾತ್ರೆ. 12 ದಿನಗಳ ಮಧ್ಯಪ್ರದೇಶ. 13 ದಿನಗಳ ಚಾರ್ ಧಾಮ್‌ಯಾತ್ರೆ ಶ್ರೀನಂದಿ ಹಾಲಿಡೇಸ್. 9740228186 9980270467

27.01.2024 12.03.2024 12.04.2024 17.05.2024 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 06.02.2024 05.03.2024 ದುಬೈ,ಅಬುದಾಬಿ 5 ದಿನಗಳು. 15.03.2024 15.04.2024 21.05.2024 ನೇಪಾಳ 9 ದಿನಗಳು. 06.03.2024 12.04.2024 05.05.2024 ಭೂತಾನ್ 8 ದಿನಗಳು . 05.02.2024 25.03.2024 02.04.2024 ಶ್ರೀಲಂಕಾ 6 ದಿನಗಳು. 02.03.2024 03.04.2024 02.06.2024 ಅಸ್ಸಾಂ,ಮೇಘಾಲಯ 9 ದಿನಗಳು. 17.01.2024 27.02.2024 09.03.2024 ಗುಜರಾತ್ 8 ದಿನಗಳು. 10.02.2024 15.03.2024 ರಾಜಸ್ಥಾನ್ 10 ದಿನಗಳು. 15.03.2024 29.03.2024 16.04.2024 ಕಾಶಿ,ಗಯಾ,ಅಯೋಧ್ಯಾ 7 ದಿನಗಳು. 12.04.2024 06.05.2024 05.06.2024 ಕಾಶ್ಮೀರ್ 6 ದಿನಗಳು. 05.04.2024 25.04.2024 21.05.2024 ಶಿಮ್ಲಾ,ಕುಲುಮನಾಲಿ 8 ದಿನಗಳು. 15.02.2024 26.03.2024 ಉಜ್ಜಯಿನಿ,ಓಂಕಾರೇಶ್ವರ 10 ದಿನಗಳು. ಜೈನ್ ಟ್ರಾವೆಲ್ಸ್ ಬೆಂಗಳೂರು.03 9448402248 7022547922

23.1.2024 ಕನ್ಯಾಕುಮಾರಿ, ರಾಮೇಶ್ವರಂ, ಶ್ರೀರಂಗಂ, ನವಗ್ರಹ ಕ್ಷೇತ್ರಗಳು, 11.2.2024 ಗುಜರಾತ್, ಮಧ್ಯಪ್ರದೇಶ್. 11.2.2024 ಭುವನೇಶ್ವರ್, ಪುರಜಗನ್ನಾಥ್, ಕೊಲ್ಕತ್ತಾ. 19.2.2024 ಅಯೋಧ್ಯಾ ಕಾಶಿ,ಗಯಾ, ಪ್ರಯಾಗ್‌ರಾಜ್ ಕರ್ನಾಟಕ ಹರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಹೆಸರು ಬದಲಾವಣೆ

ನಿಮ್ಮ ಹೆಸರು ಬದಲಾವಣೆ ಆಗಿದೆಯೇ?

ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ

www.dhclassifieds.com

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

9886213331 | 9901641752
9845114560 | 9900428036
9731810277 | 080- 45557163/164

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಅಯೋಧ್ಯೆ: ಅರುಣ್ ಕೆತ್ತಿದ ಮೂರ್ತಿ ಆಯ್ಕೆ ಎಂದು 'ಎಕ್ಸ್' ಮಾಡಿರುವ ಬಿಜೆಪಿ ನಾಯಕರು

ಮೈಸೂರಿನ 'ಬಾಲರಾಮ'ನಿಗೆ ಪಟ್ಟ?

• ಎಂ.ಮಹೇಶ

ಮೈಸೂರು: ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಜ.22ರಂದು ನಡೆಯಲಿರುವ ರಾಮಲಲ್ಲಾ ಮೂರ್ತಿ ಪ್ರಾಣ ಪ್ರತಿಷ್ಠಾಪನೆಗೆ ದಿನಗಣನೆ ಶುರುವಾಗಿದ್ದು, ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ನಿರ್ಮಿಸಿರುವ ಮೂರ್ತಿ ಆಯ್ಕೆಯಾಗಿದೆ ಎನ್ನಲಾಗುತ್ತಿದೆ. ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ 'ಎಕ್ಸ್'ನಲ್ಲಿ ಹರ್ಷ ಹಂಚಿಕೊಂಡಿರುವುದು ಹಾಗೂ ಶುಭಾಶಯ ಕೋರಿರುವುದು ಇದಕ್ಕೆ ಪುಷ್ಟಿ ನೀಡಿದೆ.

ಮೂವರು ಶಿಲ್ಪಿಗಳು ಸಿದ್ಧಪಡಿಸಿರುವ ಮೂರ್ತಿಗಳಲ್ಲಿ ಒಂದು ಆಯ್ಕೆಯಾಗಿದೆ. ಆದರೆ, ಯಾವ ಮೂರ್ತಿ ಆಯ್ಕೆಯಾಗಿದೆ ಎಂಬ ವಿಷಯವಾಗಿ ರಾಮಮಂದಿರ ಟ್ರಸ್ಟ್‌ನಿಂದ ಇನ್ನೂ ಅಧಿಕೃತ ಹೇಳಿಕೆ ಹೊರಬಿದ್ದಿಲ್ಲ. ಅರುಣ್ ಸಿದ್ಧಪಡಿಸಿದ ಮೂರ್ತಿಯೇ ಆಯ್ಕೆಯಾಗಿದೆ ಎಂಬ ಸುದ್ದಿ ಹರಡಿದ್ದು ಮೈಸೂರಿನಲ್ಲಿ ಸಂಭ್ರಮ ಮನೆ ಮಾಡಿದೆ.

ಐದು ವರ್ಷದ ಬಾಲಕನ ಪ್ರತಿರೂಪದಂತೆ ಮೂರ್ತಿ ಸಿದ್ಧಪಡಿಸಲು ಮೂವರು ಶಿಲ್ಪಿಗಳಿಗೆ ಸೂಚಿಸಲಾಗಿತ್ತು. ಮೈಸೂರಿನ ಅರುಣ್ ಯೋಗಿರಾಜ್, ಬೆಂಗಳೂರಿನ ಜಿ.ಎಲ್. ಭಟ್ ಮತ್ತು ರಾಜಸ್ಥಾನದ ಸತ್ಯನಾರಾಯಣ ಪಾಂಡೆ ತಮ್ಮ ಕೌಶಲದಲ್ಲಿ ಅರಳಿದ ಮೂರ್ತಿಗಳನ್ನು ಒಪ್ಪಿಸಿದ್ದಾರೆ. ಇದರಲ್ಲಿ ಪ್ರಾಣ ಪ್ರತಿಷ್ಠಾಪನೆಗೆ ಆಯ್ಕೆ ಆಗಿರುವುದು ಯಾವುದೆಂಬುದು ಕುತೂಹಲ ಮೂಡಿಸಿದೆ.

ಮೂರ್ತಿ ನಿರ್ಮಾಣಕ್ಕಾಗಿ ಎಚ್.ಡಿ. ಕೋಟೆ ತಾಲ್ಲೂಕಿನ ಕೃಷ್ಣ ಶಿಲೆಯನ್ನು ಅರುಣ್ ಬಳಸಿದ್ದಾರೆ. ಮೂರ್ತಿಗೆ ಅಂತಿಮ ರೂಪ ನೀಡಲು 6 ತಿಂಗಳು ತೆಗೆದುಕೊಂಡಿದ್ದಾರೆ. ಅದು 8 ಅಡಿ ಎತ್ತರ, ಮೂರೂವರೆ ಅಡಿ ಅಗಲ ಇದೆ. ಪಾದದಿಂದ ಹಣೆಯವರೆಗೆ 51 ಇಂಚು ಎತ್ತರ ಇದ್ದರೆ, ಅಲ್ಲಿಂದಾಚೆಗೆ ಪ್ರಭಾವಳಿಯ ಎತ್ತರ ಸೇರಿದೆ. ಬಿಲ್ಲು ಮತ್ತು ಬಾಣವನ್ನು ಹಿಡಿದಿರುವ ಐದು ವರ್ಷದ ಮಗುವಿನಂತೆ ಕಾಣುವ ಭಗವಾನ್ ರಾಮನ ಮೂರ್ತಿ ಇದಾಗಿದೆ ಎನ್ನುತ್ತಾರೆ ಅವರು.

ಕೇದಾರನಾಥದ ಶಂಕರಾಚಾರ್ಯರ ಪ್ರತಿಮೆ, ಸುಭಾಷ್ ಚಂದ್ರ ಬೋಸರ ಪ್ರತಿಮೆಗಳನ್ನು ಅವರು ಮಾಡಿದ್ದರು. ಇದು ಪ್ರಧಾನಿ ಮಂತ್ರಿ ನರೇಂದ್ರ ಮೋದಿ ಅವರ ಗಮನಕ್ಕೆ ಬಂದಿತ್ತು. ಅವರು ಶಿಲ್ಪಿಯನ್ನು ಭೇಟಿಯಾಗಿ ಅಭಿನಂದನೆಯನ್ನೂ ಸಲ್ಲಿಸಿದ್ದರು.

ಅರುಣ್ ಯೋಗಿರಾಜ್

ಅಯೋಧ್ಯೆಯ ರಾಮಲಲ್ಲಾ ಮೂರ್ತಿ ತಯಾರಿಕೆಗೆ ಪ್ರಸ್ತಾವ ಸಲ್ಲಿಕೆಗೆ ಸಿಕ್ಕ ಅವಕಾಶವನ್ನು ಅರುಣ್ ಬಳಸಿಕೊಂಡಿದ್ದರು. ಅವರು ನೀಡಿದ್ದ ವಿವರಣೆ ಸಮಿತಿಗೆ ಇಷ್ಟವಾಗಿತ್ತು.

'5 ವರ್ಷದ ಬಾಲಕನ ಶರೀರ ರಚನೆ, ದೇಹ ಸ್ವರೂಪ ಹಾಗೂ ರಾಮಚಂದ್ರನ ವರ್ಚಸ್ಸು ಹೊಂದಿದ ಮುಖವನ್ನು ಮನದುಂಬಿಕೊಂಡು ಕೆತ್ತನೆ ಶುರು ಮಾಡಿದ್ದೆ' ಎಂದು ಅವರು ತಿಳಿಸಿದ್ದಾರೆ.

ಪ್ರಾಣಪ್ರತಿಷ್ಠೆ ಕಾರ್ಯಕ್ರಮಕ್ಕೆ ಆಹ್ವಾನ ಪಡೆದ 2000 ಗಣ್ಯರ ಪೈಕಿ ಅರುಣ್ ಒಬ್ಬರಾಗಿದ್ದಾರೆ. ಅವರ ತಂದೆ ಯೋಗಿರಾಜ್ ಕೂಡ ಶಿಲ್ಪಿ, ಅಜ್ಜ ಬಸವಣ್ಣ ಶಿಲ್ಪಿ. ತಲೆಮಾರುಗಳಿಂದ ಶಿಲ್ಪ ಕೆತ್ತನೆ ಕಾರ್ಯದಲ್ಲಿ ಈ ಕುಟುಂಬ ತೊಡಗಿದೆ.

ಉತ್ತರಾಖಂಡದ ಕೇದಾರನಾಥದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಅನಾವರಣಗೊಳಿಸಿದ ಆದಿ ಶಂಕರಾಚಾರ್ಯ ಪ್ರತಿಮೆ ಕೆತ್ತಿದ ನಂತರ ಅವರಿಗೆ ದೊಡ್ಡ ಹೆಸರು ದೊರೆಯಿತು.

ಮೈಸೂರಿನ ಬ್ರಹ್ಮರ್ಷಿ ಕಶ್ಯಪ ಶಿಲ್ಪಕಲಾ ನಿಕೇತನದ ಅರುಣ್, 14 ವರ್ಷಗಳಿಂದ ಶಿಲ್ಪ ಕೆತ್ತನೆ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಅವರು ಶಿಲ್ಪ ಕಲಾಕೃತಿಯ 5ನೇ ತಲೆಮಾರಿನವರು. ಅಪ್ಪ ಯೋಗಿರಾಜ್ ಕೊಡುತ್ತಿದ್ದ ಉಳಿಪೆಟ್ಟು ಬಾಲ್ಯದ ಅರುಣ್ ಅವರನ್ನು ಈ ವೃತ್ತಿಯತ್ತ ಆಕರ್ಷಿಸಿತು.

ಅಂಬೇಡ್ಕರ್, ರಾಮಕೃಷ್ಣ ಪರಮಹಂಸ, ವಿಶ್ವೇಶ್ವರಯ್ಯ, ಜಯಚಾಮರಾಜ ಒಡೆಯರ್, ಶಿವಕುಮಾರ ಸ್ವಾಮೀಜಿ, ಹನುಮಂತ ಸೇರಿದಂತೆ ಹಲವು ಪ್ರತಿಮೆ ನಿರ್ಮಿಸಿದ್ದಾರೆ.

ಓದಿದ್ದು ಎಂಬಿಎ. ಆ ವಿದ್ಯಾರ್ಹತೆ ಆಧಾರದ ಮೇಲೆ ಖಾಸಗಿ ಕಂಪನಿಯಲ್ಲಿ ಕೆಲಸವೂ ಸಿಕ್ಕಿತು. ಆದರೆ, ಶಿಲ್ಪ ಕೆತ್ತನೆಯ ಸೆಳೆತಕ್ಕೆ ಮಾರು ಹೋದರು. ಕಲ್ಲಿಗೆ ಮೂರ್ತರೂಪ ಕೊಡುತ್ತಾ ಬದುಕು 'ಕಟ್ಟಿ'ಕೊಂಡರು.

ಅಗ್ರಹಾರದ ಗನ್‌ಹೌಸ್ ಪಕ್ಕದಲ್ಲಿ ಅರುಣ್ ಅವರ ಮನೆಯ ಆವರಣದಲ್ಲಿರುವ 'ಕಾರ್ಯಾಗಾರ'ದಿಂದ ಸದಾ ಸದ್ದು ಬರುತ್ತಲೇ ಇರುತ್ತದೆ. 38 ವರ್ಷದ ಅರುಣ್ ಕಲಾಕೃತಿ ಕ್ಲೇ ಮಾಡೆಲಿಂಗ್, ಚಿತ್ರಕಲೆಯಲ್ಲೂ ನಿಪುಣರು. ವಾಲಿಬಾಲ್ ಕ್ರೀಡೆಯಲ್ಲೂ ಮಿಂಚಿದ್ದಾರೆ. ಹಲವು ಪ್ರಶಸ್ತಿಗಳು ಅವರ ಮುಡಿಗೇರಿವೆ.

'ಶ್ರೀರಾಮ-ಹನುಮಾನ ಬಾಂಧವ್ಯಕ್ಕೆ ಕರುನಾಡ ನಂಟಿದೆ. ಇದೀಗ ರಾಮನೂರಿನ ಗುಡಿಯನ್ನು ಮೈಸೂರಿನ ರಾಮಲಲ್ಲಾನು ಬೆಳಗುವನು' ಎಂದು ವಿಜಯೇಂದ್ರ 'ಎಕ್ಸ್' ಮಾಡಿದ್ದಾರೆ.

'ಕರ್ನಾಟಕದ ಹೆಮ್ಮೆಯ ಶಿಲ್ಪಿ ಮೈಸೂರಿನ ಅರುಣ್ ಯೋಗಿರಾಜ್ ಅವರ ಕೆತ್ತನೆಯ ಶ್ರೀರಾಮನ ಮೂರ್ತಿ ಅಯೋಧ್ಯೆಯ ರಾಮ ಮಂದಿರದಲ್ಲಿ ಪ್ರತಿಷ್ಠಾಪನೆಯಾಗಲು ಆಯ್ಕೆಯಾಗಿದ್ದು, ಬಳಸಲಾದ ಕಲ್ಲು ಸಹ ನಮ್ಮ ಕರ್ನಾಟಕದ ಎಚ್.ಡಿ.ಕೋಟೆಯದ್ದು ಎಂಬುದು ಮತ್ತೊಂದು ವಿಶೇಷ' ಎಂದು ಆರ್. ಅಶೋಕ ಸಂತಸ ಹಂಚಿಕೊಂಡಿದ್ದಾರೆ.

ಪ್ರತಿಕ್ರಿಯೆಗೆ ಅರುಣ್ ದೂರವಾಣಿ ಕರೆ ಸ್ವೀಕರಿಸಲಿಲ್ಲ.

ಕುಟುಂಬದಲ್ಲಿ ಸಂಭ್ರಮ

'ಅರುಣ್ ಸಿದ್ಧಪಡಿಸಿದ ಮೂರ್ತಿ ಆಯ್ಕೆಯಾಗಿದೆ' ಎಂಬ ಸುದ್ದಿ ಹರಡಿದ್ದರಿಂದ ಇಲ್ಲಿನ ಅವರ ಪೋಷಕರು ಹಾಗೂ ಕುಟುಂಬದವರಲ್ಲಿ ಸಂತಸ-ಸಂಭ್ರಮ ತಂದಿದೆ.

ತಾಯಿ ಸರಸ್ವತಿ, ಪತ್ನಿ ವಿಜೇತಾ ಎಂ.ರಾವ್, ಮಗಳು ಸಾನ್ವಿ, ಸಹೋದರ ಸೂರ್ಯಪ್ರಕಾಶ್, ಸಹೋದರಿ ಚೇತನಾ, ಸೋದರ ಮಾವ ಸುನೀಲ್ ಅವರನ್ನು ಬಂಧುಗಳು ಅಭಿನಂದಿಸಿದರು.

'ಆಯ್ಕೆಯಾಗಿರುವ ಬಗ್ಗೆ ಪತಿ ಈವರೆಗೆ ನಮಗೆ ಖಚಿತಪಡಿಸಿಲ್ಲ' ಎಂದು ವಿಜೇತಾ ಹೇಳಿದರು. 'ಬಿಜೆಪಿ ಪ್ರಮುಖರು ಇಷ್ಟಾಗಿ ಸುದ್ದಿ ಹೊರಬಿದ್ದಿರುವುದರಿಂದ ಎಂದು ತಿಳಿಸಲಾಗುತ್ತದೆ ಎಂದು ಹೇಳಿದ್ದಾರೆ' ಎಂದರು.

'ಶಿಲ್ಪಕಲೆಯಲ್ಲಿ ಅವರ ಭಕ್ತಿ ಮತ್ತು ಬದ್ಧತೆ ಅಪಾರ. ಈ ಕೆಲಸವನ್ನು ಅವರು ಭಕ್ತಿ ಮತ್ತು ನಿಷ್ಠೆಯಿಂದ ಮಾಡುತ್ತಾರೆ. ಸಿಗುತ್ತಿರುವ ಮನ್ನಣೆ ಮತ್ತು ಸಾಧನೆಗಳು ದೇವರ ಕೊಡುಗೆ' ಎಂದು ವಿಜೇತಾ ಪ್ರತಿಕ್ರಿಯಿಸಿದರು.

ನವದೆಹಲಿಯಲ್ಲಿ ಸ್ಥಾಪಿಸಲು ನಿರ್ಧರಿಸಲಾದ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ ಸಿದ್ಧಪಡಿಸುವುದಕ್ಕಾಗಿ ಅರುಣ್ ಅವರಿಗೆ ಕೇಂದ್ರ ಸರ್ಕಾರದಿಂದ ಕಾರ್ಯಾದೇಶ ಸಿಕ್ಕಿದೆ ಎಂದು ತಿಳಿದುಬಂದಿದೆ. ಅಂಬೇಡ್ಕರ್ ಅವರ 133ನೇ ಜನ್ಮದಿನದ ಅಂಗವಾಗಿ ಏ.14ರಂದು ಪ್ರತಿಮೆ ಅನಾವರಣಕ್ಕೆ ಯೋಜಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಪ್ರತಿಷ್ಠಾಪನೆಯ ದಿನವೇ ಗೊತ್ತಾಗಲಿದೆ'

'ನನ್ನ ಕೆಲಸ ನಾನು ಮಾಡಿದ್ದೇನೆ. ಮೂರ್ತಿಯು ಪ್ರತಿಷ್ಠಾಪನೆಗೆ ಆಯ್ಕೆಯಾಗಿದೆಯೇ ಇಲ್ಲವೇ ಎನ್ನುವುದು ಜ.22ರಂದೇ ಗೊತ್ತಾಗಲಿದೆ, ಎಲ್ಲವೂ ದೇವರ ಕೃಪೆ ಎಂದು ಮಗ ಹೇಳಿದ್ದಾನೆ' ಎಂದು ತಾಯಿ ಸರಸ್ವತಿ ಪ್ರತಿಕ್ರಿಯಿಸಿದರು.

'ರಾಜ್ಯಕ್ಕೆ ಹೆಮ್ಮೆ ಪಡುವಂತೆ ಮಾಡಬೇಕು ಎಂದು ಚಿಕ್ಕಂದಿನಿಂದಲೂ ಹೇಳುತ್ತಿದ್ದೆ. ತಂದೆಯೇ ಅವನ ಗುರು. ಮಗನ ಸಾಧನೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿಯೂ ಮೆಚ್ಚುಗೆ ಸೂಚಿಸಿದ್ದರು' ಎಂದರು.

ರಾಮಮಂದಿರ ಅಲಂಕಾರಕ್ಕೆ ಭೋಪಾಲ್‌ನ ಹೂವು

ಭೋಪಾಲ್: ರಾಮಮಂದಿರದ ಆವರಣವನ್ನು ಅಲಂಕರಿಸಲು ಮಧ್ಯಪ್ರದೇಶದ ಭೋಪಾಲ್‌ನ ನರ್ಸರಿಯೊಂದರ ಬೋಗನ್ ವಿಲ್ಲಾ ಹೂಗಳನ್ನು ಬಳಸಲಾಗುತ್ತದೆ.

'ರಾಮಮಂದಿರದ ಅಲಂಕಾರಕ್ಕೆ ಹೂಗಳನ್ನು ಕಳುಹಿಸುವಂತೆ ನಮಗೆ ಬೇಡಿಕೆ ಬಂದಿದ್ದು, ಈಗಾಗಲೇ 20 ಸಾವಿರ ಹೂವಿನ ಗಿಡಗಳನ್ನು ಅಯೋಧ್ಯೆಗೆ ಕಳುಹಿಸಲಾಗಿದೆ' ಎಂದು ಭೋಪಾಲ್‌ನ ನಿರ್ಗ ನರ್ಸರಿಯ ಮಾಲೀಕ ರಾಮಕುಮಾರ್ ರಾಥೋಡ್ ಸೋಮವಾರ ತಿಳಿಸಿದರು.

'ಐದರಿಂದ ಆರು ಬಗೆಯ ಹೂಗಳಿಗೆ ರಾಮ ಜನ್ಮಭೂಮಿ ಟ್ರಸ್ಟ್‌ನಿಂದ ಬೇಡಿಕೆ ಬಂದಿದೆ. ಬಿಳಿ, ಕಿತ್ತಳೆ, ಕೆಂಪು ಮತ್ತು ಹಳದಿ ಬಣ್ಣದ ಬೋಗನ್ ವಿಲ್ಲಾ ಹೂಗಳೂ ಇದರಲ್ಲಿ ಸೇರಿವೆ. ಈ ಜಾತಿಯ ಹೂಗಳು ಎಲ್ಲ ಋತುಗಳಲ್ಲೂ ಅರಳುತ್ತವೆ. ಗಿಡಗಳಿಗೆ ಕಡಿಮೆ ನೀರು ಸಾಕು. ಮಾತ್ರವಲ್ಲ, ನಿರ್ವಹಣೆಯೂ ಸುಲಭ' ಎಂದರು.

ರಾಮಮಂದಿರದ ಆವರಣ ಮತ್ತು ಸುತ್ತಲೂ ಇರುವ ದಾರಿಯ ಇಕ್ಕೆಲಗಳಲ್ಲಿ ಹೂ ಗಿಡಗಳನ್ನು ನೆಡಲು ರಾಮ ಜನ್ಮಭೂಮಿ ಟ್ರಸ್ಟ್ ಕರೆದಿದ್ದ ಬಿಡ್‌ಅನ್ನು ರಾಥೋಡ್ ಮಾಲೀಕತ್ವದ ನರ್ಸರಿ ತನ್ನದಾಗಿಸಿಕೊಂಡಿತ್ತು.

5 ಕೋಟಿ ಮಂದಿಗೆ 'ಅಕ್ಷತೆ' ಗುರಿ

ಟ್ರಸ್ಟ್‌ನ ಪ್ರಮುಖರಿಂದ ಕಾರ್ಯಕ್ರಮಕ್ಕೆ ಚಾಲನೆ

ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ (ಎಡ) ಅವರು 'ಅಕ್ಷತೆ' ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು –ಪಿಟಿಐ ಚಿತ್ರ

ಅಯೋಧ್ಯೆ (ಪಿಟಿಐ): ರಾಮಮಂದಿರ ಉದ್ಘಾಟನಾ ಸಮಾರಂಭಕ್ಕೆ ಮುನ್ನುಡಿಯಾಗಿ 'ಅಕ್ಷತೆ' ನೀಡುವ ಕಾರ್ಯಕ್ರಮಕ್ಕೆ ಹೊಸ ವರ್ಷದ ಮೊದಲ ದಿನವಾದ ಸೋಮವಾರ ಅಯೋಧ್ಯೆಯಲ್ಲಿ ಚಾಲನೆ ದೊರೆಯಿತು.

ಅಕ್ಕಿ ಕಾಳುಗಳಿಗೆ ಅರಿಸಿನ ಹಾಗೂ ತುಪ್ಪ ಮಿಶ್ರಣ ಮಾಡಿ ತಯಾರಿಸಿರುವ 'ಅಕ್ಷತೆ' ನೀಡುವ ಪ್ರಕ್ರಿಯೆ ದೇಶದಾದ್ಯಂತ ಜನವರಿ 15ರವರೆಗೆ ನಡೆಯಲಿದೆ ಎಂದು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ತಿಳಿಸಿದೆ.

'ಅಕ್ಷತೆ'ಯ ಜತೆಯಲ್ಲೇ ರಾಮ ಮಂದಿರದ ಚಿತ್ರ ಹಾಗೂ ಮಂದಿರ ನಿರ್ಮಾಣಕ್ಕೆ ಸಂಬಂಧಿಸಿದ ಮಾಹಿತಿ ಒಳಗೊಂಡ ಕರಪತ್ರವನ್ನೂ ನೀಡಲಾಗುತ್ತದೆ.

'ದೇಶದಾದ್ಯಂತ ಸುಮಾರು 5 ಲಕ್ಷ ದೇವಾಲಯಗಳ ಸನಿಹದಲ್ಲಿರುವ ಜನರಿಗೆ ರಾಮಮಂದಿರದ ಚಿತ್ರ ಹಾಗೂ ಕರಪತ್ರ ನೀಡಲಾಗುತ್ತದೆ. ಜನವರಿ 15ರ ವೇಳೆಗೆ ಸುಮಾರು 5 ಕೋಟಿ ಮಂದಿಗೆ ಅಕ್ಷತೆ ತಲುಪಿಸುವ ಗುರಿ ಇಟ್ಟುಕೊಳ್ಳಲಾಗಿದೆ' ಎಂದು ಟ್ರಸ್ಟ್‌ನ ಅಧಿಕಾರಿಯೊಬ್ಬರು ತಿಳಿಸಿದರು.

'ಅಕ್ಷತೆ ನೀಡುವ ಸಮಯದಲ್ಲಿ ಜನರು ತಮ್ಮ ಸಮೀಪದ ದೇವಾಲಯ-ಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಬೇಕು. ಆ ಮೂಲಕ, ಅಯೋಧ್ಯೆಯಲ್ಲಿ ಮನೆಮಾಡಿರುವ ಸಂಭ್ರಮದ ವಾತಾವರಣವನ್ನು ತಮ್ಮ ಊರುಗಳಲ್ಲೂ ಉಂಟುಮಾಡಬೇಕು' ಎಂದು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಮನವಿ ಮಾಡಿದರು.

ವಿಎಚ್‌ಪಿ ಮತ್ತು ಆರ್‌ಎಸ್‌ಎಸ್ ಹಾಗೂ ಅವುಗಳ ಸಹ ಸಂಘಟನೆಗಳ ಜತೆ ಗುರುತಿಸಿಕೊಂಡವರು ಅಕ್ಷತೆ ನೀಡುವ ಕೆಲಸ ಮಾಡಲಿದ್ದಾರೆ ಎಂದು ಮೂಲಗಳು ಹೇಳಿವೆ.

ಅಯೋಧ್ಯೆಯಲ್ಲಿ 'ಅಕ್ಷತೆ' ನೀಡುವ ಕಾರ್ಯಕ್ರಮಕ್ಕೆ ವಾಲ್ಮೀಕಿ ಕಾಲೊನಿ-ಯಲ್ಲಿರುವ ದೇವಾಲಯದಲ್ಲಿ ಚಾಲನೆ ನೀಡಲಾಯಿತು. ಈ ವೇಳೆ ಭಕ್ತರು 'ಜೈ ಶ್ರೀರಾಮ್' ಘೋಷಣೆ ಮೊಳಗಿಸಿದರು.

ಮುಖ್ಯಾಂಶಗಳು

- ಅಯೋಧ್ಯೆಯ ವಾಲ್ಮೀಕಿ ಕಾಲೊನಿಯಲ್ಲಿ ಆರಂಭ
- ಜ.15ರ ವರೆಗೂ ಮುಂದುವರಿಯಲಿರುವ ಪ್ರಕ್ರಿಯೆ
- ದೇಶದಾದ್ಯಂತ ದೇವಾಲಯಗಳ ಮೂಲಕ 'ಅಕ್ಷತೆ' ಹಂಚಿಕೆ

'ಅಕ್ಷತೆ ನೀಡುವುದು ಮಕರ ಸಂಕ್ರಾಂತಿಯ ದಿನವಾದ ಜನವರಿ 15ರವರೆಗೂ ಮುಂದುವರಿಯಲಿದೆ. ಸ್ವಯಂಸೇವಕರು ಗ್ರಾಮಗಳು ಮತ್ತು ಪಟ್ಟಣ ಪ್ರದೇಶಗಳ ಮನೆಗಳಿಗೆ ತೆರಳಿ ಅಕ್ಷತೆ ನೀಡಲಿದ್ದಾರೆ' ಎಂದು ರಾಯ್ ತಿಳಿಸಿದರು.

ಜನವರಿ 22ರಂದು ನಡೆಯಲಿರುವ ರಾಮನ ಮೂರ್ತಿ ಪ್ರತಿಷ್ಠಾಪನಾ ಸಮಾರಂಭದಲ್ಲಿ 1 ಲಕ್ಷಕ್ಕೂ ಅಧಿಕ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ದೇಶ ಹಾಗೂ ವಿದೇಶಗಳ 7000 ಅತಿಥಿಗಳು ಭಾಗವಹಿಸಲಿದ್ದಾರೆ.

ಗೋಲ್ಡಿ ಬ್ರಾರ್ ಭಯೋತ್ಪಾದಕ: ಕೇಂದ್ರ ಘೋಷಣೆ

ನವದೆಹಲಿ (ಪಿಟಿಐ): ಕೆನಡಾ ಮೂಲದ ಗ್ಯಾಂಗ್‌ಸ್ಟರ್ ಸತೀಂದರ್‌ಜಿತ್ ಸಿಂಗ್ ಅಲಿಯಾಸ್ ಗೋಲ್ಡಿ ಬ್ರಾರ್‌ನನ್ನು ಭಯೋತ್ಪಾದಕ ಎಂದು ಕೇಂದ್ರ ಸರ್ಕಾರ ಘೋಷಿಸಿದೆ. ಈತ, ಪಂಜಾಬಿ ಗಾಯಕ ಸಿಧು ಮೂಸೆವಾಲಾ ಹತ್ಯೆಯ ಪ್ರಮುಖ ರೂವಾರಿ ಎಂದು ಆರೋಪಿಸಲಾಗಿದೆ.

ಪಾಕ್ ಮೂಲದ ಏಜೆನ್ಸಿಯೊಂದರ ಬೆಂಬಲವಿದ್ದ ಈತನನ್ನು ಭಯೋತ್ಪಾದನಾ ನಿಗ್ರಹ ಕಾಯ್ದೆ ಯುಎಪಿಎ ಅನ್ವಯ ಭಯೋತ್ಪಾದಕ ಎಂದು ಘೋಷಿಸಿದ್ದು, ಕೇಂದ್ರ ಗೃಹ ಸಚಿವಾಲಯ ಈ ಬಗ್ಗೆ ಅಧಿಸೂಚನೆ ಹೊರಡಿಸಿದೆ.

ಹಲವು ಕೊಲೆ ಕೃತ್ಯಗಳಲ್ಲೂ ಭಾಗಿಯಾಗಿದ್ದು, ಮೂಲಭೂತವಾದಿ ಚಿಂತನೆ ಹೊಂದಿದ್ದ. ರಾಷ್ಟ್ರೀಯವಾದಿ ನಾಯಕರಿಗೆ ಕರೆ ಮಾಡಿ ಒತ್ತೆಹಣಕ್ಕೆ ಬೇಡಿಕೆ ಮಂಡಿಸುತ್ತಿದ್ದ. ಅಲ್ಲದೆ, ಕೊಲೆ ಕೃತ್ಯಗಳನ್ನು ನಡೆಸಿರುವುದಾಗಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಳ್ಳುತ್ತಿದ್ದ.

ನಿಷೇಧಿತ ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್ ಸಂಘಟನೆಯ ಕಾರ್ಯಕರ್ತನಾಗಿದ್ದು ಉನ್ನತದರ್ಜೆಯ ಶಸ್ತ್ರಾಸ್ತ್ರಗಳು, ಸ್ಫೋಟಕಗಳನ್ನು ಡ್ರೋನ್ ಬಳಸಿ ಗಡಿಯಾಚೆಗೆ ಕಳ್ಳಸಾಗಣೆ ಮಾಡಿ ಶಾರ್ಪ್ ಶೂಟರ್‌ಗಳಿಗೆ ಒದಗಿಸುತ್ತಿದ್ದ ಆರೋಪಗಳು ಈತನ ಮೇಲಿವೆ.

ಮೂಲತಃ ಪಂಜಾಬ್‌ನ ಶ್ರೀ ಮುಕ್ತಸರ ಸಾಹಿಬ್‌ನವನಾದ ಈತ ಸದ್ಯ ಕೆನಡಾದ ಬ್ರಾಂಪ್ಟನ್‌ನಲ್ಲಿ ನೆಲೆಸಿದ್ದಾನೆ.

ಈತನ ವಿರುದ್ಧ ಜಾಮೀನು ರಹಿತ ವಾರಂಟ್ ಜಾರಿಯಲ್ಲಿದ್ದು, ಆತನ ಪತ್ತೆಗಾಗಿ ಇಂಟರ್‌ಪೋಲ್, ರೆಡ್ ಕಾರ್ನರ್ ನೋಟಿಸ್ ಜಾರಿ ಮಾಡಿದೆ.

ವಕೀಲರಿಗೆ ಸಿಜೆಐ ಕಿವಿಮಾತು

ಡಿ.ವೈ. ಚಂದ್ರಚೂಡ್

ನವದೆಹಲಿ (ಪಿಟಿಐ): ಪ್ರಕರಣಗಳನ್ನು ನಿರ್ದಿಷ್ಟ ನ್ಯಾಯಪೀಠಗಳಿಗೆ ಹಂಚಿಕೆ ಮಾಡುವ ಪ್ರಕ್ರಿಯೆಯು ವಕೀಲರಿಂದ ಪ್ರಭಾವಿತ ಆಗದೆ ಇರುವಂತೆ ನೋಡಿಕೊಂಡರೆ, ಸುಪ್ರೀಂ ಕೋರ್ಟ್‌ಗೆ ತನ್ನ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಹೇಳಿದ್ದಾರೆ.

ಪಿಟಿಐ ಸುದ್ದಿಸಂಸ್ಥೆಗೆ ಸಂದರ್ಶನ ನೀಡಿರುವ ಅವರು, ರಾಜಕೀಯವಾಗಿ ಸೂಕ್ಷ್ಮವಾಗಿರುವ ಕೆಲವು ಪ್ರಕರಣ-ಗಳನ್ನು ಸುಪ್ರೀಂ ಕೋರ್ಟ್‌ನ ಕೆಲವು ನ್ಯಾಯಮೂರ್ತಿಗಳಿಗೆ ಮಾತ್ರ ಹಂಚಿಕೆ ಮಾಡಲಾಗುತ್ತಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ್ದಾರೆ.

'ಸುಪ್ರೀಂ ಕೋರ್ಟ್‌ನ ವಿಶ್ವಾಸಾರ್ಹತೆಯನ್ನು ಕಾಯ್ದುಕೊಳ್ಳಬೇಕು ಎಂದಾದರೆ, ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣಗಳ ಹಂಚಿಕೆಯು ವಕೀಲರಿಂದ ಪ್ರಭಾವಿತವಾಗಿರಬಾರದು. ಈ ವಿಚಾರದಲ್ಲಿ ನಾನು ಬಹಳ ಸ್ಪಷ್ಟವಾದ ನಿಲುವು ಹೊಂದಿದ್ದೇನೆ' ಎಂದು ಅವರು ಹೇಳಿದ್ದಾರೆ.

'ಹಂಚಿಕೆಯು ಸುಪ್ರೀಂ ಕೋರ್ಟ್‌ನಲ್ಲಿ ನಾವು ರೂಪಿಸಿರುವ ವ್ಯವಸ್ಥೆಗೆ ಅನುಗುಣವಾಗಿ ಆಗಬೇಕು. ನಿರ್ಧಾರ ತೆಗೆದುಕೊಳ್ಳುವ ವ್ಯಕ್ತಿಗಳಲ್ಲಿ ನಿಮಗೆ ನಂಬಿಕೆ ಇರಬೇಕು' ಎಂದಿದ್ದಾರೆ. ಪ್ರಮುಖ ಪ್ರಕರಣಗಳನ್ನು ನ್ಯಾಯಮೂರ್ತಿಗಳಿಗೆ ಮರುಹಂಚಿಕೆ ಮಾಡಿರುವ ವಿಧಾನದ ಬಗ್ಗೆ ಹಿರಿಯ ವಕೀಲರಾದ ಪ್ರಶಾಂತ್ ಭೂಷಣ್ ಮತ್ತು ದುಶ್ಯಂತ್ ದವೆ ಅವರು ಈಚೆಗೆ ಪ್ರಶ್ನೆಗಳನ್ನು ಎತ್ತಿದ್ದರು.

'ನನ್ನ ಪ್ರಕರಣವು ಇಂಥದ್ದೇ ನ್ಯಾಯಮೂರ್ತಿಯ ಎದುರು ವಿಚಾರಣೆಗೆ ಬರಬೇಕು ಎಂದು ಯಾವ ವಕೀಲನೂ ಆಗ್ರಹಿಸುವಂತೆ ಇಲ್ಲ' ಎಂದು ಸಿಜೆಐ ಹೇಳಿದ್ದಾರೆ.

'ವೈಯಕ್ತಿಕವಾಗಿ ತೆಗೆದುಕೊಳ್ಳಬಾರದು': ಯಾವುದೇ ಪ್ರಕರಣದಲ್ಲಿ ಬರುವ ತೀರ್ಪನ್ನು ನ್ಯಾಯಮೂರ್ತಿಗಳು ವೈಯಕ್ತಿಕವಾಗಿ ತೆಗೆದುಕೊಳ್ಳಬಾರದು ಎಂದು ಹೇಳಿರುವ ಸಿಜೆಐ, ಸಲಿಂಗ ವಿವಾಹಕ್ಕೆ ಕಾನೂನು ಮಾನ್ಯತೆ ನೀಡಬೇಕು ಎಂಬ ಕೋರಿಕೆ ಇದ್ದ ಅರ್ಜಿಗಳ ವಿಚಾರವಾಗಿ ನೀಡಿದ ತೀರ್ಪಿಗೆ ಸಂಬಂಧಿಸಿದಂತೆ ತಮಗೆ ವಿಷಾದ ಇಲ್ಲ ಎಂದು ಹೇಳಿದ್ದಾರೆ.

ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ದೊರಕಿಸಲು, ಸಲಿಂಗ ಜೋಡಿಗಳು ಬಹಳ ಸುದೀರ್ಘವಾದ ಹೋರಾಟ ನಡೆಸಿದ್ದರು ಎಂಬುದನ್ನು ಒಪ್ಪಿಕೊಂಡಿರುವ ಸಿಜೆಐ, ಆ ಪ್ರಕರಣದಲ್ಲಿ ತೀರ್ಪು ನೀಡಿದ ನಂತರದಲ್ಲಿ ತಾವು ವಿಚಾರವನ್ನು ಅಲ್ಲಿಯೇ ಬಿಟ್ಟಿರುವುದಾಗಿ ಹೇಳಿದ್ದಾರೆ.

ಸಲಿಂಗ ಜೋಡಿಯ ಮದುವೆಗೆ ಕಾನೂನಿನ ಮಾನ್ಯತೆ ನೀಡಲು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ಅಕ್ಟೋಬರ್ 17ರಂದು ನಿರಾಕರಿಸಿತ್ತು. ಸಿಜೆಐ ಅವರು ಆ ನ್ಯಾಯಪೀಠದಲ್ಲಿ ಇದ್ದರು.

'ಪ್ರಕರಣವೊಂದರಲ್ಲಿ ತೀರ್ಪು ನೀಡಿದ ನಂತರದಲ್ಲಿ ನ್ಯಾಯಮೂರ್ತಿಗಳು, ಅದರಿಂದ ಅಂತರ ಕಾಯ್ದುಕೊಳ್ಳುತ್ತಾರೆ. ಪ್ರಕರಣದ ಕೊನೆಯಲ್ಲಿ ಯಾವ ತೀರ್ಮಾನ ಬರುತ್ತದೆ ಎಂಬುದನ್ನು ನ್ಯಾಯಮೂರ್ತಿಗಳು ಎಂದಿಗೂ ವೈಯಕ್ತಿಕವಾಗಿ ತೆಗೆದುಕೊಳ್ಳುವುದಿಲ್ಲ' ಎಂದು ಸಿಜೆಐ ಹೇಳಿದ್ದಾರೆ.

ಅಯೋಧ್ಯೆ: ಏಕಕಂಠದ ತೀರ್ಪು

ನವದೆಹಲಿ (ಪಿಟಿಐ): ಅಯೋಧ್ಯೆಯ ವಿವಾದಿತ ಸ್ಥಳದಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಅವಕಾಶ ಕಲ್ಪಿಸುವ ತೀರ್ಪು ಪ್ರಕಟಿಸಿದ ಸಂವಿಧಾನ ಪೀಠದಲ್ಲಿದ್ದ ಐವರು ನ್ಯಾಯಮೂರ್ತಿಗಳು, ತೀರ್ಪನ್ನು ಯಾರು ಬರೆದಿದ್ದಾರೆ ಎಂಬುದನ್ನು ಬಹಿರಂಗಪಡಿಸಬಾರದು ಎಂದು ಒಕ್ಕೊರಲಿನಿಂದ ತೀರ್ಮಾನಿಸಿದ್ದರು ಎಂದು ಸಿಜೆಐ ಡಿ.ವೈ. ಚಂದ್ರಚೂಡ್ ಹೇಳಿದ್ದಾರೆ.

ನ್ಯಾಯಮೂರ್ತಿ ರಂಜನ್ ಗೊಗೊಯಿ ಅವರು ಸಿಜೆಐ ಆಗಿದ್ದಾಗ ಈ ತೀರ್ಪು ಬಂದಿತ್ತು. ನ್ಯಾಯಮೂರ್ತಿ ಚಂದ್ರಚೂಡ್ ಅವರು ಆ ಸಂವಿಧಾನ ಪೀಠದಲ್ಲಿ ಇದ್ದರು. ತೀರ್ಪು ಪ್ರಕಟಿಸುವ ಮೊದಲು, ನ್ಯಾಯಮೂರ್ತಿಗಳು ಸಮಾಲೋಚನೆ ನಡೆಸಿದ ಸಂದರ್ಭದಲ್ಲಿ, 'ಇದು ನ್ಯಾಯಾಲಯದ ತೀರ್ಪು ಆಗಿರಬೇಕು' ಎಂದು ತೀರ್ಮಾನಿಸಲಾಗಿತ್ತು ಎಂದಿದ್ದಾರೆ.

ಆ ತೀರ್ಪನ್ನು ಬರೆದವರು ಯಾರು ಎಂಬುದನ್ನು ಉಲ್ಲೇಖಿಸಿರಲಿಲ್ಲ. 'ಈ ಪ್ರಕರಣದಲ್ಲಿ ಸಂಘರ್ಷದ ದೀರ್ಘ ಇತಿಹಾಸ, ದೇಶದ ಇತಿಹಾಸವನ್ನು ಆಧರಿಸಿದ ವಿಭಿನ್ನ ದೃಷ್ಟಿಕೋನಗಳು ಇವೆ. ನ್ಯಾಯಾಲಯವು ಏಕಕಂಠದಲ್ಲಿ ತೀರ್ಪು ನೀಡಬೇಕು. ತೀರ್ಪು ನೀಡುವಲ್ಲಿ ನ್ಯಾಯಮೂರ್ತಿಗಳು ಒಟ್ಟಾಗಿದ್ದಾರೆ ಎಂಬ ಸಂದೇಶ ರವಾನಿಸುವುದು ಮಾತ್ರವೇ ಅಲ್ಲದೆ, ತೀರ್ಪಿನಲ್ಲಿ ನೀಡಿರುವ ಕಾರಣಗಳ ವಿಚಾರದಲ್ಲಿಯೂ ಏಕಾಭಿಪ್ರಾಯ ಇತ್ತು ಎಂಬ ಸಂದೇಶವನ್ನು ರವಾನಿಸುವ ಉದ್ದೇಶವಿತ್ತು' ಎಂದು ಅವರು ಹೇಳಿದ್ದಾರೆ.

ಬಿರುಕುಬಿಟ್ಟ ರಸ್ತೆಗಳು • ಸುನಾಮಿ ಎಚ್ಚರಿಕೆ ಹಿಂಪಡೆದ ಆಡಳಿತ

ಜಪಾನ್: ಸರಣಿ ಭೂಕಂಪ, ಆತಂಕ

ಟೋಕಿಯೊ (ಎ.ಪಿ): ಹೊಸ ವರ್ಷದ ಮೊದಲ ದಿನ ಜಪಾನ್‌ನ ಪಶ್ಚಿಮ ಭಾಗದ ಕರಾವಳಿಯಲ್ಲಿ ಸರಣಿ ಭೂಕಂಪ ಸಂಭವಿಸಿದೆ. ಭೂಕಂಪದ ತೀವ್ರತೆ ಒಂದು ಬಾರಿ ರಿಕ್ಟರ್ ಮಾಪನದಲ್ಲಿ 7.6ರಷ್ಟು ದಾಖಲಾಗಿದೆ. ಸಾವು ನೋವಿನ ವಿವರ ಸದ್ಯಕ್ಕೆ ತಿಳಿದುಬಂದಿಲ್ಲ.

ಇಶಿಕಾವಾ ಹಾಗೂ ಹೊನ್ಶು ದ್ವೀಪ ಪ್ರದೇಶ ವ್ಯಾಪ್ತಿಗೆ ಅನ್ವಯಿಸಿ ಆರಂಭದಲ್ಲಿ ಸುನಾಮಿಯ ಗಂಭೀರ ಎಚ್ಚರಿಕೆ ನೀಡಿದ್ದ ಜಪಾನ್ ಆಡಳಿತ, ಬಳಿಕ ಹಿಂಪಡೆಯಿತು. ಬೃಹತ್ ಅಲೆ ಅಪ್ಪಳಿಸುವ ಸಾಧ್ಯತೆ ಇದ್ದು, ಕರಾವಳಿ ಭಾಗದಲ್ಲಿರುವ ಜನರು ಎಚ್ಚರಿಕೆಯಿಂದ ಇರಬೇಕು ಎಂದು ತಿಳಿಸಿದೆ.

ಭೂಕಂಪದಿಂದ ಕೆಲವೆಡೆ ಕಟ್ಟಡಗಳು ಕುಸಿದಿವೆ. ಅದರಡಿ ಜನರು ಸಿಲುಕಿರುವ ಮಾಹಿತಿ ಇಲ್ಲ. ಒಂದೆರಡು ಕಡೆ ಬೆಂಕಿ ಹೊತ್ತಿಕೊಂಡಿದೆ. ಕುಸಿದ ಕಟ್ಟಡಗಳಲ್ಲಿ ಜನರು ಸಿಲುಕಿದ್ದಾರೆಯೇ ಎಂಬುದು ಖಚಿತವಾಗಿಲ್ಲ ಎಂದು ವರದಿಗಳು ತಿಳಿಸಿವೆ.

ಮುಖ್ಯಾಂಶಗಳು

- ಇಶಿಕಾವಾ ಪ್ರದೇಶ ಭೂಕಂಪನದ ಕೇಂದ್ರ ಬಿಂದು
- 16.5 ಅಡಿ ಎತ್ತರಕ್ಕೆ ಅಲೆ ಚಿಮ್ಮುವ ಎಚ್ಚರಿಕೆ
- ಬುಲೆಟ್ ರೈಲು ಸಂಚಾರ, ಹೆಚ್ಚಾರಿ ಸಂಚಾರ ಬಂದ್

ಕರಾವಳಿ ಭಾಗದಲ್ಲಿ ಜನರು ಸುರಕ್ಷಿತ ಸ್ಥಳದತ್ತ ಧಾವಿಸಬೇಕು ಎಂದು ಜಪಾನ್‌ನ ಹವಾಮಾನ ಮುನ್ಸೂಚನೆ ಸಂಸ್ಥೆ ಸಲಹೆ ನೀಡಿದೆ. ರಸ್ತೆಗಳಲ್ಲಿ ಬಿರುಕು ಉಂಟಾಗಿದೆ. ಮುಂದಿನ ಒಂದು ವಾರದ ಮತ್ತೆ ಭೂಕಂಪ ಸಂಭವಿಸುವ ಸಾಧ್ಯತೆ ಇದೆ ಎಂದು ಮುನ್ಸೂಚನೆಯನ್ನು ನೀಡಿದೆ.

ಸರ್ಕಾರದ ವಕ್ತಾರ ಯೊಶಿಮಸಾ ಹಯಾಶಿ ಅವರು, 'ಈ ವಲಯದಲ್ಲಿರುವ ಅಣುಶಕ್ತಿ ಸ್ಥಾವರಗಳಿಗೆ ಏನು ಧಕ್ಕೆಯಾಗಿಲ್ಲ' ಎಂದಿದ್ದಾರೆ. 'ಪ್ರತಿ ನಿಮಿಷವು ಮುಖ್ಯ. ಶೀಘ್ರ ಸುರಕ್ಷಿತ ಸ್ಥಳಗಳತ್ತ ತೆರಳಬೇಕು' ಎಂದು ನಿವಾಸಿಗಳಿಗೆ ಸಲಹೆ ನೀಡಿದರು.

ಇಶಿಕಾವಾ ವಲಯದ ವಾಜಿಮಾದಲ್ಲಿ ಹೊಗೆ ಮೂಡಿದ್ದ ದೃಶ್ಯಗಳನ್ನು ಸರ್ಕಾರಿ ವಾಹಿನಿ ಎನ್‌ಎಚ್‌ಕೆ ವರದಿ ಮಾಡಿದೆ. ನೀಗಾಟಾ, ಇತರೆಡೆ 10 ಅಡಿ ಎತ್ತರದ ಅಲೆ ಅಪ್ಪಳಿಸಬಹುದು ಎಂದು ವರದಿ ತಿಳಿಸಿದೆ. ಮುಂಜಾಗ್ರತೆಯಾಗಿ ಬುಲೆಟ್ ಟ್ರೈನ್‌ಗಳ ಸಂಚಾರ ನಿಲ್ಲಿಸಲಾಗಿದೆ.

ಜಪಾನ್ ಸಾಮಾನ್ಯವಾಗಿ ಭೂಕಂಪನ ಬಾಧಿತ ವಲಯವಾಗಿದೆ. 2011ರ ಮಾರ್ಚ್‌ನಲ್ಲಿ ಭಾರಿ ಭೂಕಂಪನ ಮತ್ತು ಸುನಾಮಿ ಸಂಭವಿಸಿತ್ತು. ಅಣುಶಕ್ತಿ ಸ್ಥಾವರಕ್ಕೂ ಧಕ್ಕೆಯಾಗಿತ್ತು.

ಭಾರತದ ಸಹಾಯವಾಣಿ ಆರಂಭ

ಟೋಕಿಯೊ (ಪಿಟಿಐ): ಜಪಾನ್‌ನಲ್ಲಿರುವ ಭಾರತದ ರಾಯಭಾರಿ ಕಚೇರಿಯು, ಯಾವುದೇ ಸಹಾಯ ಬಯಸುವ ಭಾರತೀಯರಿಗೆ ನೆರವಾಗಲು ತುರ್ತು ಸಹಾಯವಾಣಿ ಸ್ಥಾಪಿಸಿದೆ. ಜಪಾನ್ ಆಡಳಿತವು ಸುನಾಮಿ ಎಚ್ಚರಿಕೆ ನೀಡಿದ ಹಿಂದೆಯೇ ಈ ಕ್ರಮಕೈಗೊಳ್ಳಲಾಗಿದೆ.

ರಾಯಭಾರಿ ಕಚೇರಿಯು ಸರ್ಕಾರದ ಜೊತೆ ನಿರಂತರ ಸಂಪರ್ಕದಲ್ಲಿದೆ. ಜನರು ಸ್ಥಳೀಯ ಆಡಳಿತ ನೀಡುವ ಸೂಚನೆಗಳನ್ನು ಪಾಲಿಸಬೇಕು. ತುರ್ತು ನೆರವು ಅಗತ್ಯವಿದ್ದರೆ ಸಹಾಯವಾಣಿ ಸಂಪರ್ಕಿಸಬೇಕು ಎಂದು ರಾಯಭಾರ ಕಚೇರಿಯು ಹೇಳಿಕೆ ನೀಡಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಆನಂದರಾವ್ ವೃತ್ತ, ಬೆಂಗಳೂರು – 560009
ಸಂ: ಕಾಪಾಅ/ಪಂರಾಇಂವಿ/ಬೆಂಗ್ರಾಂ/ಟೆಂ–05/ತಾಂಶಾ/2023–24 ದಿನಾಂಕ: 01.01.2024
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 05/2023–24 (ಕೆ.ಪಿ.ಪಿ ಪೋರ್ಟಲ್ ಮುಖಾಂತರ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ನ್ನು ನಾಲ್ಕನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದಡಿ ಅನುಮೋದನೆಯಾದ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಇವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 09.01.2024 ಸಂಜೆ 4.30 ಗಂಟೆಯವರೆಗೆ** ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ವಿವರಗಳನ್ನು http://kppp.karnataka.gov.in ವೆಬ್‌ಸೈಟ್ ನಲ್ಲಿ ಪಡೆಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು
DIPR/CP/2794/SPAN/2023-24

ಕರ್ನಾಟಕ ಸರಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ
#128, ಜಿಲ್ಲಾ ಆಡಳಿತ ಭವನ, ನವನಗರ, ಬಾಗಲಕೋಟೆ–587103
ಸಂಖ್ಯೆ:DHS/DSO/CPHC UHC/65/2023-24 Date:29-12-2023
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
ವಿಷಯ: ಎನ್.ಎಫ್.ಡಿ.ಎಸ್ ಕಾರ್ಯಕ್ರಮದಡಿ ಎಲ್ಲಾ ಗ್ರಾಮೀಣ ಮತ್ತು ನಗರ ಆರೋಗ್ಯ ಕೇಂದ್ರಗಳಿಗೆ ಎಲ್ಲಾ ರೋಗ ಪತ್ತೆ ಕಿಟ್‌ಗಳನ್ನು, ರಾಸಾಯನಿಕಗಳನ್ನು ಮತ್ತು ಪರಿಕರಗಳನ್ನು ಸರಬರಾಜು ಮಾಡಲು ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ.
ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ (KTPP) ನಿಯಮಗಳು 1999 / 2000 ರನ್ವಯ ನೋಂದಾಯಿತ ಅರ್ಹ ಸಂಸ್ಥೆಗಳಿಂದ/ಮೂಲ ತಯಾರಕರು/ಅಧೀಕೃತ ಪ್ರತಿನಿಧಿಗಳು/ಅಧೀಕೃತ ವಿತರಕರಿಂದ 2023–24 ನೇ ಸಾಲಿಗೆ ಎಲ್ಲಾ ಗ್ರಾಮೀಣ ಮತ್ತು ನಗರ ಆರೋಗ್ಯ ಕೇಂದ್ರಗಳಿಗೆ ಎಲ್ಲಾ ರೋಗ ಪತ್ತೆ ಕಿಟ್‌ಗಳನ್ನು, ರಾಸಾಯನಿಕಗಳನ್ನು ಮತ್ತು ಪರಿಕರಗಳನ್ನು ಸರಬರಾಜು ಮಾಡಲು ಅಲ್ಪಾವಧಿ ಇ–ಟೆಂಡರ್ ಕರೆದಿದ್ದು (Short Term E-Procurement Tender) ಅರ್ಹ ಟೆಂಡರ್‌ದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in/ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.
ಸಹಿ/–ಉಪಾಧ್ಯಕ್ಷರು
ಜಿಲ್ಲಾ ಆರೋಗ್ಯ ಸಂಘ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು, ಬಾಗಲಕೋಟೆ ಜಿಲ್ಲೆ
DIPR/BGK/RO-NO-261/MCA/2023-24

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ನಂ:ದಾಮಪಾ:ಕಾಅ3:ಇ.ಟೆಂಡರ್:17:2023–24 ದಿನಾಂಕ: 30.12.2023
ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
2023–24ನೇ ಸಾಲಿನ ಸಾಮಾನ್ಯ ನಿಧಿ– 04 ಸಂಖ್ಯೆಯ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಹಾಗೂ 02 ಸಂಖ್ಯೆಯ ಕಾಮಗಾರಿಗಳಿಗೆ ಮರುಟೆಂಡ್‌ಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು(ವಿದ್ಯುತ್/ ನೀರುಸರಬರಾಜು) ರವರು ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು/ ಏಜನ್ಸಿದಾರರು/ಸರಬರಾಜುದಾರರು ಕೆಪಿಪಿಪಿ ಪೋರ್ಟಲ್ ವೆಬ್ ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಕಛೇರಿ ಸಮಯದಲ್ಲಿ ಮಹಾನಗರ ಪಾಲಿಕೆಯ ಕಛೇರಿಯ ವಿದ್ಯುತ್ ಶಾಖೆಗೆ ಭೇಟಿ ನೀಡಿ ಪಡೆಯಬಹುದಾಗಿದೆ. ಮಹಾನಗರ ಪಾಲಿಕೆಯ ಸಹಾಯಕ ದೂರವಾಣಿ ಸಂಖ್ಯೆ: 08192 234444 ರಿಂದ ಮಾಹಿತಿ ಪಡೆಯಬಹುದು. ಸೂಚನೆ : 1) ಈ ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿದ ಅಂದಾಜು ಮೊತ್ತ ಹಾಗೂ ಟೆಂಡರ್‌ಗಿಟ್ಟ ಮೊತ್ತ ದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತವು ಅಂತಿಮವಾಗಿರುತ್ತದೆ. 2) ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಅದಲ್ಲಿ ಆ ದಿನಾಂಕಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.
ಪೂರ್ಣಾವಧಿ ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ: 12.01.2024 ಸಮಯ : 17.00 ಪೂರ್ಣಾವಧಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 16.01.2024 ಸಮಯ : 17.00 ಪೂರ್ಣಾವಧಿ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ: 17.01.2024 ಸಮಯ : 10.00 ನಂತರ ಅಲ್ಪಾವಧಿ ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ: 06.01.2024 ಸಮಯ: 17.00 ಅಲ್ಪಾವಧಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 08.01.2024 ಸಮಯ 17.00 ಅಲ್ಪಾವಧಿ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ: 09.01.2024 ಸಮಯ : 10.00 ನಂತರ
ವಾಸಾಇ/ದಾವಣಗೆರೆ/453/ಕೆಎಸ್‌ಎಂಸಿಎ/2023–24
ಸಹಿ/– ಕಾರ್ಯಪಾಲಕ ಅಭಿಯಂತರರು (ವಿ) ಮಹಾನಗರ ಪಾಲಿಕೆ, ದಾವಣಗೆರೆ

ಪುರಸಭಾ ಕಾರ್ಯಾಲಯ, ಚಿಕ್ಕಬಾಣಾವರ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
Email: itstaff_ulb_ckbanavara@yahoo.com
Website: https://chikkabanavaratown.mrc.gov.in
ಸಂಖ್ಯೆ: ಪು.ಕಾ.ಚಿ./ತಾ.ಶಾ/ಟೆಂಡರ್/ಸಿಆರ್/05/2023–24 ದಿನಾಂಕ: 01.01.2024
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ 2023–24ನೇ ಸಾಲಿನ 15ನೇ ಹಣಕಾಸಿನ ಅನುದಾನ (ಎರಡನೇ ಕರೆ), 2023–24ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ, ಶೇ.24.10, ಶೇ.7.25 (ಎರಡನೇ ಕರೆ) ಹಾಗೂ 2023–24ನೇ ಪುರಸಭಾ ನಿಧಿ ಶೇ. 24.10 ಮತ್ತು ಶೇ.7.25 ಅನುದಾನ (ಎರಡನೇ ಕರೆ) ಹಾಗೂ ಇತರೆ ಅನುದಾನದಲ್ಲಿ ಕಾಮಗಾರಿಗಳಿಗೆ ಟೆಂಡರ್‌ಅನ್ನು ಈ ಕೆಳಸಹಿದಾರರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಕರೆದಿರುವ ಕಾಮಗಾರಿಗಳಿಗೆ ಟೆಂಡರ್‌ನಲ್ಲಿ ಭಾಗವಹಿಸಬಹುದು. **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 17.01.2024, ಸಮಯ : ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳಿಗೆ ಈ ಕಛೇರಿಯ ತಾಂತ್ರಿಕ ಶಾಖೆಯಿಂದ ಮಾಹಿತಿ ಪಡೆಯಬಹುದು.
ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಚಿಕ್ಕಬಾಣಾವರ ಹಾಗೂ ಉಪ ವಿಭಾಗಾಧಿಕಾರಿಗಳು ಬೆಂಗಳೂರು ಉತ್ತರ ಉಪ ವಿಭಾಗ
ಸಹಿ/– ಮುಖ್ಯಾಧಿಕಾರಿ ಪುರಸಭೆ, ಚಿಕ್ಕಬಾಣಾವರ
DIPR/CP/YC/2818/2023-24

RGN No. DSK/RKG/9/82-83 Dt: 29-07-1982 GST No: 29AAAAR0428E1ZT
ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ
ರನ್ನ ನಗರ, ತಿಮ್ಮಾಪೂರ–587122. ತಾ॥ ಮುಧೋಳ ಜಿ॥ ಬಾಗಲಕೋಟ (ಕರ್ನಾಟಕ)
e-mail: rannasugartender@gmail.com
Mob: 9341570141, 8147841817
Ref: RSSKN/Lease/LROT/2023-24/364 Date: 01-01-2024
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಎಫ್ 2020, ಬೆಂಗಳೂರು, ದಿನಾಂಕ:24–11–2023 ರನ್ವಯ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ರನ್ನನಗರ ತಿಮ್ಮಾಪೂರ–587122. ತಾ: ಮುಧೋಳ. ಜಿಲ್ಲಾ: ಬಾಗಲಕೋಟ ಈ ಕಾರ್ಖಾನೆಯನ್ನು LROT (Lease-Rehabilitate-Operate-Transfer) ಅಧಾರದ ಮೇಲೆ 2024–25 ನೇ ಸಾಲಿನ ಕಬ್ಬು ನುರಿಸುವ ಹಂಗಾಮಿನಿಂದ 30 ವರ್ಷಗಳ ಅವಧಿಗೆ ಖಾಸಗಿಯವರಿಗೆ ಗುತ್ತಿಗೆ ನೀಡಲು ಆದೇಶಿಸಲಾಗಿದೆ. ಎರಡು ಲಕೋಟೆಯ ವ್ಯವಸ್ಥೆಯಲ್ಲಿ ಕರ್ನಾಟಕ ಸಾರ್ವಜನಿಕ ಖರೀದಿಸುವ ಇ–ಸಂಗ್ರಹ ಪೋರ್ಟಲ್‌ನಲ್ಲಿ ಆಸಕ್ತಿಯುಳ್ಳ ಟೆಂಡರ್‌ದಾರರನ್ನು ಕೆ.ಟಿ.ಪಿ.ಪಿ ಕಾಯ್ದೆಯ ಪ್ರಕಾರ ಇ–ಟೆಂಡರ್ ಆಹ್ವಾನಿಸಲಾಗಿದೆ.
ಭರ್ತಿ ಮಾಡಿದ ಟೆಂಡರ್ ಅರ್ಜಿಯನ್ನು ಸಲ್ಲಿಸಲು **ಕೊನೆಯ ದಿನಾಂಕ : 31–01–2024 ರ ಬುಧವಾರ ದಂದು ಸಾಯಂಕಾಲ 5–00 ಘಂಟೆಯವರೆಗೆ** ನಿಗದಿಪಡಿಸಲಾಗಿದೆ.
ಪ್ರೀ–ಬಿಡ್ ಸಭೆಯನ್ನು ದಿನಾಂಕ. 17–01–2024 ರ ಬುಧವಾರ ಬೆಳಿಗ್ಗೆ 11–30 ಗಂಟೆಗೆ, ತಾಂತ್ರಿಕ ಬಿಡ್ಡುಗಳಿಗೆ ಸಂಬಂಧಿಸಿದ **ಟೆಂಡರ್‌ನ್ನು ತೆರೆಯುವ ದಿನಾಂಕ : 05–02–2024 ರಂದು ಸೋಮವಾರ ಬೆಳಿಗ್ಗೆ 11–30 ಘಂಟೆಗೆ** ಹಾಗೂ ಹಣಕಾಸು ಬಿಡ್ಡುಗಳಿಗೆ ಸಂಬಂಧಿಸಿದ **ಟೆಂಡರನ್ನು ತೆರೆಯುವ ದಿನಾಂಕ.: 06–02–2024 ರಂದು ಮಂಗಳವಾರ ಬೆಳಿಗ್ಗೆ 11–30 ಗಂಟೆಗೆ,** ಮಾನ್ಯ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಕಛೇರಿ 5ನೇ ಮಹಡಿ, ಸಿಬಿಎಬಿ ಕಾಂಪ್ಲೆಕ್ಸ್, ಕೆ.ಎಚ್.ಬಿ ಬಿಲ್ಡಿಂಗ ಕಾವೇರಿ ಭವನ, ಕೆಂಪೆಗೌಡ ರಸ್ತೆ, ಬೆಂಗಳೂರು ಇವರ ಕಛೇರಿಯಲ್ಲಿ ನಿಗದಿಪಡಿಸಲಾಗಿದೆ.
ಟೆಂಡರ್ ದಾಖಲೆ ವಿವರ ಮತ್ತು ಇತರೆ ಷರತ್ತು ಹಾಗೂ ನಿಬಂಧನೆಗಳನ್ನು ನೋಡಲು ಅಥವಾ ಡೌನ್‌ಲೋಡ ಮಾಡಿಕೊಳ್ಳಲು: https://www.kppp.karnataka.gov.in Tender No: RSSKN/Lease/LROT/2023-24/364 ದಿನಾಂಕ: 01–01–2024 ರನ್ನು ವೀಕ್ಷಿಸಿ. ರಾಜ್ಯ ಸರ್ಕಾರ / ಕಾರ್ಖಾನೆಯ ವಿಶೇಷಾಧಿಕಾರಿಗಳು ಯಾವುದೇ ಕಾರಣ ನೀಡದೇ ಎಲ್ಲಾ ಟೆಂಡರ್‌ಗಳನ್ನು ಸ್ವೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
ಸಹಿ/– (ಮಲ್ಲಿಕಾರ್ಜುನ. ಬಿ. ಪೂಜಾರ) ವ್ಯವಸ್ಥಾಪಕ ನಿರ್ದೇಶಕರು (ಪ್ರ) ರೈತರ ಸಹಕಾರ ಸಕ್ಕರೆ ಕಾರ್ಖಾನೆ ನಿ., ರನ್ನನಗರ–ತಿಮ್ಮಾಪೂರ ತಾ:ಮುಧೋಳ ಹಾಗೂ ಸಹಕಾರ ಸಂಘಗಳ ಉಪನಿಬಂಧಕರು, ಬಾಗಲಕೋಟೆ ಜಿಲ್ಲೆ ಬಾಗಲಕೋಟೆ
ಸಹಿ/– (ಸಂತೋಷ ಕಾಮಗೌಡ) ವಿಶೇಷಾಧಿಕಾರಿಗಳು ರೈತರ ಸಹಕಾರ ಸಕ್ಕರೆ ಕಾರ್ಖಾನೆ ಹಾಗೂ ಹಿರಿಯ ಉಪ ವಿಭಾಗಾಧಿಕಾರಿಗಳು, ಜಮಖಂಡಿ ಉಪವಿಭಾಗ ಜಮಖಂಡಿ.

ನಗರಸಭಾ ಕಾರ್ಯಾಲಯ, ಬಿ.ಎಂ. ರಸ್ತೆ, ಸಂತೇಪೇಟೆ ವೃತ್ತ, ಹಾಸನ.
ದೂ.ಸಂ:08172–268276, 233702 Email:commn_hassan@yahoo.com
ನಂ:ಪೌಆ/ನಸಹಾ/ಎಇಇ(ಪರಿಸರ)/ಪಾರಂಪರಿಕತ್ಯಾಜ್ಯ/ಸಿಆರ್27/2023–24
ದಿನಾಂಕ:30–12–2023
ಟೆಂಡರ್ ಪ್ರಕಟಣೆ
ಸ್ವಚ್ಛ ಭಾರತ್ ಮಿಷನ್ 2.0ನಡಿ ಹಾಸನ ನಗರಸಭಾ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿ ಪ್ರದೇಶದಲ್ಲಿ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯದ ಸಂಸ್ಕರಣೆ ಮತ್ತು ವಿಲೇವಾರಿ ಕಾಮಗಾರಿ ಅನಷ್ಠಾನಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮಗಳು–2000 ರಂತೆ ನೊಂದಾಯಿತ ಆರ್ಹ ಸಿವಿಲ್ ಮೊದಲನೆ ದರ್ಜೆ ಅರ್ಹ ಗುತ್ತಿಗೆದಾರರುಗಳಿಂದ ತ್ರಿ–ಲಕೋಟೆ ಪದ್ಧತಿಯಡಿ ಕೆಡಬ್ಲ್ಯೂ–4 ಮತ್ತು ಕೆಡಬ್ಲ್ಯೂ–6 ಟೆಂಡರ್ ದಾಸ್ತವೇಜು ಮೂಲಕ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಅಹ್ವಾನಿಸಲಾಗಿದೆ. (ವಿವರ ಕೆಳಗಿನಂತಿದೆ) ಕ್ರ.ಸ.1)ಪ್ಯಾಕೇಜ್ ನಂ.1 ಇಂಡೆಂಟ್ ನಂ: E-Proc.No: DMA/2023-24/OW/WORK_INDENT 7488 ಕಾಮಗಾರಿ ವಿವರ: ಹಾಸನ ನಗರಸಭಾ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿ ಪ್ರದೇಶದಲ್ಲಿ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯವನ್ನು ಕೇಂದ್ರ ಪರಿಸರ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಮಾರ್ಗಸೂಚಿ ಪ್ರಕಾರ ವೈಜ್ಞಾನಿಕವಾಗಿ ಸಂಸ್ಕರಿಸಿ, ವಿಲೇವಾರಿ ಮಾಡುವ ಕಾಮಗಾರಿ ಟೆಂಡರ್ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ) (ರೂ ಲಕ್ಷಗಳಲ್ಲಿ): 1012.78 ಆಸಕ್ತ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಇ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳುವುದು. ಗುತ್ತಿಗೆದಾರರು ಟೆಂಡರ್ ದಾಸ್ತಾವೇಜುಗಳನ್ನು ಇ– ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ವಿದ್ಯುನ್ಮಾನ ಸಂಗ್ರಹಣೆ ಮೂಲಕ WWW.KPPP.KARNATAKA.GOV.IN ಪೋರ್ಟಲ್‌ನಲ್ಲಿ ಸಲ್ಲಿಸಬಹುದಾಗಿದೆ. ಇ.ಎಂ.ಡಿ ಮೊತ್ತ ಹಾಗೂ ಟೆಂಡರ್ ಶುಲ್ಕವನ್ನು ವಿದ್ಯುನ್ಮಾನ ಸಂಗ್ರಹಣೆ ಪೋರ್ಟಲ್‌ನಲ್ಲಿ ಪಾವತಿಸುವುದು. ಟೆಂಡರ್‌ನ ವೇಳಪಟ್ಟಿ ಮತ್ತು ಮಾಹಿತಿಗಳ ವಿವರ ಈ ಕೆಳಕಂಡತಿದೆ. ಟೆಂಡರ್‌ನ ವೇಳಾಪಟ್ಟಿಗಳ ವಿವರ ಕೆಳಕಂಡಂತಿದೆ. ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ:13 ತಿಂಗಳು 35 ದಿವಸ ಇ.ಎಂ.ಡಿ ಮೊತ್ತ ರೂ15.00 ಲಕ್ಷ. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ16–01–2024 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ29–01–2024 ಪೂರ್ವಾರ್ಹತೆ ಬಿಡ್ ತೆರೆಯುವ ದಿನಾಂಕ30–01–2024 ತಾಂತ್ರಿಕ ಬಿಡ್ ತೆರೆಯುವ ದಿನಾಂಕ 05–02–2024 ಟೆಂಡರ್ ನಿಬಂದನೆಗಳಲ್ಲಿ ಹಾಗೂ ಟೆಂಡರ್ ಸಲ್ಲಿಸುವ ಅವಧಿಯ ಮುಂದೂಡಿಕೆಯಲ್ಲಿ ಯಾವುದಾದರೂ ಬದಲಾವಣೆಗಳಿದ್ದಲ್ಲಿ, ಇ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪ್ರಚುರಪಡಿಸಲಾಗುವುದು ಮತ್ತು ಈ ಬಗ್ಗೆ ಯಾವುದೇ ಪತ್ರಿಕಾ ಪ್ರಕಟಣೆಯನ್ನು ನೀಡಲಾಗುವುದಿಲ್ಲ.
ಸಹಿ/–ಸಿ ಸತ್ಯಭಾಮ. ಭಾ.ಆ.ಸೇ ಜಿಲ್ಲಾಧಿಕಾರಿ ಹಾಗೂ ಆಡಳಿತಾಧಿಕಾರಿಗಳು, ನಗರಸಭೆ, ಹಾಸನ
ಸಹಿ/–ಪೌರಾಯುಕ್ತರು, ನಗರಸಭೆ, ಹಾಸನ
ವಾಸಾಸಂಇ/ಹಿಸನಿ/ಹಾಸನ/608/ಕೆಎಸ್‌ಎಂಸಿಎ/611/2023–24

ಕೇಪ್‌ಟೌನ್: ಭಾರತ–ದಕ್ಷಿಣ ಆಫ್ರಿಕಾ ಎರಡನೇ ಟೆಸ್ಟ್ ನಾಳೆಯಿಂದ

ವೇಗಿಗಳ ಎದುರಿಸಲು ತಯಾರಿ

ಕೇಪ್‌ಟೌನ್ (ಪಿಟಿಐ): ದಕ್ಷಿಣ ಆಫ್ರಿಕಾದ ವೇಗಿ ನಾಂಡ್ರೆ ಬರ್ಗರ್ ಅವರನ್ನು ಎದುರಿಸುವ ನಿಟ್ಟಿನಲ್ಲಿ ವಿರಾಟ್ ಕೊಹ್ಲಿ ಅವರು ಸೋಮವಾರ 'ನೆಟ್ ಪ್ರ್ಯಾಕ್ಟೀಸ್' ವೇಳೆ ಹೆಚ್ಚಿನ ಗಮನ ಹರಿಸಿದರು. ಇನ್ನೊಂದೆಡೆ ಸತತವಾಗಿ ಶಾರ್ಟ್‌ಬಾಲ್‌ಗಳನ್ನು ಎದುರಿಸುವಲ್ಲಿ ಶ್ರೇಯಸ್ ಅಯ್ಯರ್ ತಡವರಿಸಿದಂತೆ ಕಂಡುಬಂದರು.

ಸೆಂಚುರಿಯನ್‌ನಲ್ಲಿ ನಡೆದ ಮೊದಲ ಕ್ರಿಕೆಟ್ ಟೆಸ್ಟ್ ಗೆದ್ದು ಎರಡು ಟೆಸ್ಟ್‌ಗಳ ಸರಣಿಯಲ್ಲಿ ದಕ್ಷಿಣ ಆಫ್ರಿಕಾ ಮುನ್ನಡೆ ಸಾಧಿಸಿದೆ. ಬುಧವಾರ (ಜನವರಿ 3) ಕೇಪ್‌ಟೌನ್‌ನಲ್ಲಿ ಎರಡನೇ ಟೆಸ್ಟ್ ಆರಂಭವಾಗಲಿದ್ದು, ಭಾರತಕ್ಕೆ ಸರಣಿ ಸೋಲು ತಪ್ಪಿಸುವ ಸವಾಲು ಎದುರಾಗಿದೆ.

ಹೊಸ ವರ್ಷದ ಮೊದಲ ದಿನ ಕೊಹ್ಲಿ ನೆಟ್ಸ್‌ನಲ್ಲಿ ಹೆಚ್ಚಿನ ಸಮಯ ತೆಗೆದುಕೊಂಡರು. ಒಂದು ಗಂಟೆಗೂ ಹೆಚ್ಚಿನ ಅವಧಿ ಕಳೆದ ಅವರು, ಮೊದಲು ಬೌಲರ್‌ಗಳನ್ನು ಎದುರಿಸಿದರು. ನಂತರ 20 ರಿಂದ 25 ನಿಮಿಷ ತೀವ್ರ ಗತಿಯ ಥ್ರೊ ಡೌನ್‌ಗಳನ್ನು ಎದುರಿಸಿದರು.

ಪಿಚ್‌ನಲ್ಲಿ ಎಡಗೈ ವೇಗದ ಬೌಲರ್‌ಗಳನ್ನು ನಿಭಾಯಿಸುವ ಉದ್ದೇಶವಿಟ್ಟುಕೊಂಡೇ ಅವರು ಅಭ್ಯಾಸಕ್ಕೆ ಇಳಿದಂತೆ ಇತ್ತು. ಈ ತಂಡದಲ್ಲಿ ಎಡಗೈ ವೇಗದ ಬೌಲರ್‌ಗಳಿಲ್ಲದ ಕಾರಣ ನೆಟ್ ಬೌಲರ್ ಕರೆಸಿಕೊಂಡು 25 ರಿಂದ 30 ಎಸೆತಗಳನ್ನು ಎದುರಿಸಿದರು. ಜೊತೆಗೆ ಎಂದಿನಂತೆ ಜಸ್ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ರವಿಚಂದ್ರನ್ ಅಶ್ವಿನ್ ಮತ್ತು ಆವೇಶ್ ಖಾನ್ ಅವರ ಬೌಲಿಂಗ್ ಕೂಡ ಎದುರಿಸಿದರು.

ಕೊಹ್ಲಿ ಪದೇ ಪದೇ ಮುಂದಡಿಯಿಟ್ಟು ಆಡಿದರು. ಕೆಲವೊಮ್ಮೆ ಮುಂದೆ ಬಂದು ಎಸೆತಗಳನ್ನು

ಎರಡನೇ ಕ್ರಿಕೆಟ್ ಟೆಸ್ಟ್‌ಗೆ ಪೂರ್ವಭಾವಿಯಾಗಿ ಅಭ್ಯಾಸದಲ್ಲಿ ತೊಡಗಿದ ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ಮಿಡ್‌ವಿಕೆಟ್ ಮೇಲೆ ಬಾರಿಸಿದರು. ಅವರಿಗೆ ಎದುರಾದ ಒಂದೇ ಸಮಸ್ಯೆ ಎಂದರೆ ಕ್ರಿಕೆಟ್ ದಕ್ಷಿಣ ಆಫ್ರಿಕಾ ಒದಗಿಸಿದ ಬೌಲರ್, ಬರ್ಗರ್ ಅವರಿಗಿಂತ 15 ಕ್ಲಿಕ್‌ಗಳಷ್ಟು ಕಡಿಮೆ ವೇಗ ಹೊಂದಿದ್ದು. ಎಡಗೈ ವೇಗದ ಬೌಲರ್ ಬರ್ಗರ್ ಸೆಂಚುರಿಯನ್‌ನಲ್ಲಿ ನಡೆದ ತಮ್ಮ ಪದಾರ್ಪಣೆ ಟೆಸ್ಟ್‌ನಲ್ಲೇ ಭಾರತದ ಬ್ಯಾಟರ್‌ಗಳನ್ನು ಕಾಡಿ ಏಳು ವಿಕೆಟ್‌ಗಳನ್ನು ಕಬಳಿಸಿದ್ದರು.

ನೆಟ್ ಬೌಲರ್‌ನ ವೇಗ ಕಡಿಮೆಯಿದ್ದ ಕಾರಣ ಇನ್‌ಸ್ವಿಂಗ್ 'ಓದಲು' ಕೊಹ್ಲಿಗೆ ಅವಕಾಶ ದೊರೆತು ಅವರು ಮಿಡ್‌ವಿಕೆಟ್ ಮೇಲೆ ಫ್ಲಿಕ್ ಹೊಡೆತವಾಡಿದರು. ಪಂದ್ಯದ ಸಂದರ್ಭದಲ್ಲಿ ಕೊಹ್ಲಿ ಅವರಿಗೆ ಮುಂದೆ ಬಂದು ಆಡುವಷ್ಟು ಅವಕಾಶ ದೊರೆತಿರಲಿಲ್ಲ. ಅಶ್ವಿನ್ ಬೌಲಿಂಗ್‌ನಲ್ಲಿ ಭರ್ಜರಿ ಸಿಕ್ಸರ್ ಎತ್ತಿದ ಅವರು, ಬೂಮ್ರಾ ಅವರನ್ನೂ ಎದುರಿಸಲೂ ಕಷ್ಟಪಡಲಿಲ್ಲ.

ಅಯ್ಯರ್ ಪರದಾಟ: ಅಯ್ಯರ್ ಅವರು ಶಾರ್ಟ್‌ಬಾಲ್‌ಗಳನ್ನು ಎದುರಿಸುವಲ್ಲಿ ಎಡವುತ್ತಿರುವುದು ಸೆಂಚುರಿಯನ್ ಟೆಸ್ಟ್‌ನಲ್ಲಿ ಮತ್ತೊಮ್ಮೆ ಬಯಲಾಗಿತ್ತು. ನೆಟ್ಸ್‌ನಲ್ಲಿ ನುವಾನ್ ಸೇನಾವಿರತ್ನೆ ಅವರನ್ನು ಎದುರಿಸುವಾಗಲೂ ಇದು ಗೋಚರವಾಯಿತು. ಒಂದೂವರೆ ತಿಂಗಳ ಹಿಂದೆ ವಿಶ್ವಕಪ್‌ನಲ್ಲಿ ಕೆಲವು ಅಮೋಘ ಇನಿಂಗ್ಸ್ ಆಡಿದ್ದ ಅವರು ಇಲ್ಲಿ ಪುಟಿದೇಳುತ್ತಿದ್ದ ಚೆಂಡನ್ನು ಸಲೀಸಾಗಿ ಆಡಲು ಆಗಲಿಲ್ಲ. ಒಮ್ಮೆ ಚೆಂಡು ಅವರ ಸೊಂಟದ ಮೇಲಿನ ಭಾಗಕ್ಕೆ ಬಡಿಯಿತು. ಅವರು ಕೆಲಕಾಲ ವಿಶ್ರಾಂತಿ ಪಡೆದು ಅಭ್ಯಾಸ ಮತ್ತೆ ಮುಂದುವರಿಸಿದರು. ಥ್ರೋ ಡೌನ್ ಬೌಲರ್‌ಗಳ ಎದುರೂ ಅವರು ವಿಶ್ವಾಸದಿಂದ ಇದ್ದಂತೆ ಕಾಣಲಿಲ್ಲ.

ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ನೆಟ್ಸ್‌ನಲ್ಲಿ ಬ್ಯಾಟಿಂಗ್ ಅಭ್ಯಾಸ ಮಾತ್ರ ನಡೆಸಿದರು. ಶನಿವಾರ ಅಭ್ಯಾಸ ನಡೆಸುತ್ತಿದ್ದ ವೇಳೆ ಚೆಂಡು ಅವರ ಎಡ ಭುಜಕ್ಕೆ ಬಡಿದಿತ್ತು. ಸೋಮವಾರ ಅವರು ನೋವಿನಿಂದ ಬಳಲಿದಂತೆ ಕಾಣಲಿಲ್ಲ. ಶಾರ್ಟ್‌ಬಾಲ್‌ಗಳನ್ನು ಆತ್ಮ ವಿಶ್ವಾಸದಲ್ಲೇ ಆಡಿದರು.

ಸೋಲಿನ ಸರಪಳಿ ಕಳಚುವತ್ತ ಚಿತ್ತ

ಮಹಿಳಾ ಕ್ರಿಕೆಟ್: ಇಂದು ಆಸ್ಟ್ರೇಲಿಯಾ ವಿರುದ್ಧ ಮೂರನೇ ಏಕದಿನ ಪಂದ್ಯ

ಮುಂಬೈ (ಪಿಟಿಐ): ಆಸ್ಟ್ರೇಲಿಯಾ ಮಹಿಳಾ ತಂಡದ ಎದುರಿನ ಮೊದಲ ಎರಡು ಏಕದಿನ ಪಂದ್ಯಗಳನ್ನು ಸೋತು ಸರಣಿಯನ್ನು ಕಳೆದುಕೊಂಡಿರುವ ಹರ್ಮನ್‌ಪ್ರೀತ್ ಕೌರ್ ಪಡೆ ಮಂಗಳವಾರ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯುವ ಮೂರನೇ ಹಾಗೂ ಅಂತಿಮ ಪಂದ್ಯವನ್ನು ಗೆದ್ದು ಗೌರವ ಉಳಿಸಿಕೊಳ್ಳುವ ಪ್ರಯತ್ನದಲ್ಲಿದೆ.

ಭಾರತ ವನಿತೆಯರು ಈ ಪಂದ್ಯ ಗೆದ್ದರೆ, ಆಸ್ಟ್ರೇಲಿಯಾ ವಿರುದ್ಧ ತವರಿನಲ್ಲಿ ಸತತ ಒಂಬತ್ತು ಏಕದಿನ ಕ್ರಿಕೆಟ್ ಪಂದ್ಯಗಳ ಸೋಲಿನ ಸರಪಳಿಯನ್ನು ಕಡಿದಂತಾಗಲಿದೆ.

ಮೊದಲ ಪಂದ್ಯದಲ್ಲಿ ಆರು ವಿಕೆಟ್‌ಗಳಿಂದ ಸೋತಿದ್ದ ಆತಿಥೇಯರು, ಎರಡನೇ ಪಂದ್ಯದಲ್ಲಿ ಗೆಲುವಿನತ್ತ ಹೆಜ್ಜೆಯಿಟ್ಟಿದ್ದರೂ,


ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಸೋಮವಾರ ಅಭ್ಯಾಸದಲ್ಲಿ ನಿರತವಾಗಿದ್ದ ಭಾರತ ತಂಡದ ಆಟಗಾರ್ತಿಯರು –ಪಿಟಿಐ ಚಿತ್ರ

ಕೊನೆಯ ಹಂತದಲ್ಲಿ ಎಡವಿ ಕೇವಲ ಮೂರು ರನ್‌ಗಳಿಂದ ಪರಾಭವಗೊಂಡಿದ್ದರು. ಈ ಪಂದ್ಯದಲ್ಲಿ ಭಾರತದ ಕಳಪೆ ಫೀಲ್ಡಿಂಗ್‌ಗೆ ಟೀಕೆಗಳು ವ್ಯಕ್ತವಾಗಿದ್ದವು. ಭಾರತದ ಆಟಗಾರ್ತಿಯರು ಅರ್ಧ ಡಜನ್ ಕ್ಯಾಚ್‌ಗಳನ್ನು ಕೈಚೆಲ್ಲಿದ್ದು ದುಬಾರಿಯಾಗಿತ್ತು.

ಎರಡನೇ ಪಂದ್ಯದಲ್ಲಿ ರಿಚಾ ಘೋಷ್ 113 ಎಸೆತಗಳಲ್ಲಿ 96 ರನ್ ಗಳಿಸಿ ಬ್ಯಾಟಿಂಗ್ ವಿಭಾಗದಲ್ಲಿ ಭರವಸೆ ಮೂಡಿಸಿದ್ದಾರೆ. ಮತ್ತೊಂದೆಡೆ ಜೆಮಿಮಾ ರಾಡ್ರಿಗಸ್ ಹಿಂದಿನ ಎರಡು ಪಂದ್ಯಗಳಲ್ಲಿ ಕ್ರಮವಾಗಿ 82 ಮತ್ತು 44 ರನ್ ಗಳಿಸಿ ಸ್ಥಿರ ಪ್ರದರ್ಶನ ನೀಡಿರುವುದು ಆಶಾದಾಯಕ ಬೆಳವಣಿಗೆ. ಆದರೆ, ಉಳಿದ ಬ್ಯಾಟರ್‌ಗಳಿಂದಲೂ ರನ್ ಬರಬೇಕಿದೆ. ವಿಶೇಷವಾಗಿ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ವಿಫಲರಾಗುತ್ತಿರುವುದು ಹಿನ್ನಡೆಯಾಗುತ್ತಿದೆ.

ಹರ್ಮನ್‌ಪ್ರೀತ್ ಅವರು ಮೊದಲೆರಡು ಪಂದ್ಯಗಳಲ್ಲಿ ಕ್ರಮವಾಗಿ 9 ಮತ್ತು 5 ರನ್ ಮಾತ್ರ ಗಳಿಸಿದ್ದರು. ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್ ಪಂದ್ಯದಲ್ಲಿ ಭಾರತ ಜಯಗಳಿಸಿದ್ದರೂ ಹರ್ಮನ್‌ಪ್ರೀತ್ ಆಡಿದ ಒಂದು ಇನಿಂಗ್ಸ್‌ನಲ್ಲಿ ಖಾತೆ ತೆರೆದಿರಲಿಲ್ಲ.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಪೋರ್ಟ್ಸ್ 18

ರೆಫ್ರಿಗಳ ವಿರುದ್ಧ ಚೌಬೆ ಬೇಸರ

ನವದೆಹಲಿ (ಪಿಟಿಐ): ಅಭೂತಪೂರ್ವ ಎಂಬಂತೆ, ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಕಲ್ಯಾಣ್ ಚೌಬೆ ಅವರು ಐಎಸ್‌ಎಲ್ ಮತ್ತು ಐ ಲೀಗ್‌ನಲ್ಲಿ ರೆಫ್ರಿಗಳಿಂದ ತಪ್ಪುಗಳು ಹೆಚ್ಚುತ್ತಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅವರಿಗೆ ತುರ್ತು ಉತ್ತರದಾಯಿತ್ವದ ಅಗತ್ಯವಿದೆ ಎಂದೂ ಹೇಳಿದ್ದಾರೆ.

ರೆಫ್ರಿಯಿಂಗ್ ಗುಣಮಟ್ಟ ಸುಧಾರಿಸುವ ದಾರಿಗಳ ಬಗ್ಗೆ ಚೌಬೆ ಅವರು ಆನ್‌ಲೈನ್ ಮೂಲಕ ಭಾನುವಾರ ನಡೆದ ಸಭೆಯಲ್ಲಿ ಚರ್ಚೆ ನಡೆಸಿದ್ದಾರೆ.

ಐಎಸ್‌ಎಲ್‌ನ ಏಳು ಮತ್ತು ಐ ಲೀಗ್‌ನ ನಾಲ್ಕು ಪಂದ್ಯಗಳಲ್ಲಿ ಆದ ಒಟ್ಟು 24 ವಿವಾದಾತ್ಮಕ ನಿರ್ಣಯಗಳ ದೃಶ್ಯಾವಳಿಯನ್ನು ಸಭೆಯಲ್ಲಿ ಚರ್ಚೆಗಾಗಿ ಪ್ರಸ್ತುತಪಡಿಸಲಾಯಿತು.

ಈ ಬಗ್ಗೆ ವಿವರಣೆಗಳನ್ನು ಆಲಿಸಿದ ಚೌಬೆ, 'ಈ ಋತುವಿನಲ್ಲಿ ರೆಫ್ರಿ ನಿರ್ಧಾರಗಳ ಬಗ್ಗೆ ಕಳವಳಗಳು ಹೆಚ್ಚುತ್ತಿವೆ. ದೂರು– ಪ್ರತಿದೂರುಗಳು ಬರುತ್ತಿವೆ. ಕ್ಲಬ್‌ಗಳು ತಮ್ಮ ದೂರುಗಳಿಗೆ ಪೂರಕವಾಗಿ ವಿಡಿಯೊ ತುಣುಕುಗಳ ಸಾಕ್ಷ್ಯ ಒದಗಿಸುತ್ತಿವೆ' ಎಂದು ಹೇಳಿದರು.

ಅಮಾನತಿಗೆ ಮಾನ್ಯತೆಯಿಲ್ಲ: ಸಂಜಯ್ ಸಿಂಗ್

ಸಂಜಯ್ ಸಿಂಗ್

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ನೂತನ ಆಡಳಿತ ಸಮಿತಿಯನ್ನು ಕ್ರೀಡಾ ಸಚಿವಾಲಯ ಅಮಾನತು ಮಾಡಿ, ತಾತ್ಕಾಲಿಕ ಸಮಿತಿ ನೇಮಕ ಮಾಡಿರುವುದಕ್ಕೆ ಮಾನ್ಯತೆ ನೀಡುವುದಿಲ್ಲ. ಶೀಘ್ರದಲ್ಲೇ ರಾಷ್ಟ್ರೀಯ ಸೀನಿಯರ್ ಕುಸ್ತಿ ಚಾಂಪಿಯನ್‌ಷಿಪ್ ಆಯೋಜಿಸಲಾಗುವುದು ಎಂದು ಅಮಾನತುಗೊಂಡಿರುವ ಆಡಳಿತ ಸಮಿತಿಯ ಅಧ್ಯಕ್ಷ ಸಂಜಯ್ ಸಿಂಗ್ ಸೋಮವಾರ ಹೇಳಿದ್ದಾರೆ.

ಡಬ್ಲ್ಯುಎಫ್‌ಐ ದೈನಂದಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಭಾರತ ಒಲಿಂಪಿಕ್ ಸಂಸ್ಥೆ ನೇಮಿಸಿರುವ ಮೂರು ಸದಸ್ಯರ ಅಡ್‌ಹಾಕ್ ಸಮಿತಿಯು ಜೈಪುರದಲ್ಲಿ ಫೆಬ್ರುವರಿ 2 ರಿಂದ 5ರವರೆಗೆ ರಾಷ್ಟ್ರೀಯ ಸೀನಿಯರ್ ಕುಸ್ತಿ ಚಾಂಪಿಯನ್‌ಷಿಪ್ ನಡೆಸುವುದಾಗಿ ಘೋಷಿಸಿದೆ.

'ನಾವು ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿದ್ದೇವೆ. ಚುನಾವಣಾ ಅಧಿಕಾರಿ ಕಾಗದ ಪತ್ರಗಳಿಗೆ ಸಹಿ ಹಾಕಿದ್ದಾರೆ. ಅವರು ಅದನ್ನು ಹೇಗೆ ನಿರ್ಲಕ್ಷಿಸುತ್ತಾರೆ. ಈ ತಾತ್ಕಾಲಿಕ (ಅಡ್‌ಹಾಕ್) ಸಮಿತಿಗೆ ಮಾನ್ಯತೆ ನೀಡುವುದಿಲ್ಲ. ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್ ಆಯೋಜಿಸಲಾಗುವುದು' ಎಂದು ಸಿಂಗ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಡಬ್ಲ್ಯುಎಫ್‌ಐ ಸುಗಮವಾಗಿ ಕಾರ್ಯನಿರ್ವಹಿಸುತ್ತಿದೆ. ನಾವು ಕೆಲಸ ಮಾಡುತ್ತಿದ್ದೇವೆ. ರಾಜ್ಯ ಸಂಸ್ಥೆಗಳು ತಂಡಗಳನ್ನು ಕಳುಹಿಸದಿದ್ದರೆ ಅವರು (ತಾತ್ಕಾಲಿಕ ಸಮಿತಿ) ಕುಸ್ತಿ ಚಾಂಪಿಯನ್‌ಷಿಪ್ ಅನ್ನು ಹೇಗೆ ಆಯೋಜಿಸುತ್ತಾರೆ. ಶೀಘ್ರದಲ್ಲೇ ನಾವು ಆಯೋಜಿಸುತ್ತೇವೆ ಮತ್ತು ಕಾರ್ಯಕಾರಿ ಸಮಿತಿ ಸಭೆಯನ್ನು ಕರೆಯುತ್ತಿದ್ದೇವೆ. ಸಭೆಯ ನೋಟಿಸ್ ಅನ್ನು ಒಂದು ಅಥವಾ ಎರಡು ದಿನಗಳಲ್ಲಿ ಕಳುಹಿಸಲಾಗುವುದು. ತಾತ್ಕಾಲಿಕ ಸಮಿತಿಗೂ ಮೊದಲು ನಾವು ಚಾಂಪಿಯನ್‌ಷಿಪ್ ಆಯೋಜಿಸುತ್ತೇವೆ' ಎಂದು ಹೇಳಿದರು.

'ನಾವು ಯಾವುದೇ ನಿಯಮ ಉಲ್ಲಂಘಿಸಿಲ್ಲ ಎಂದು ಕ್ರೀಡಾ ಸಚಿವಾಲಯಕ್ಕೆ ವಿವರಣೆ ಕಳುಹಿಸಿದ್ದೇವೆ. ಅವರ ಉತ್ತರಕ್ಕಾಗಿ ಕಾಯುತ್ತಿದ್ದೇವೆ. ಒಂದು ಅಥವಾ ಎರಡು ದಿನ ಕಾಯು ತ್ತೇವೆ. ಅವರು ನಮ್ಮೊಂದಿಗೆ ತೊಡಗಿಸಿ ಕೊಳ್ಳಲು ಬಯಸದಿದ್ದರೆ, ನಾವು ಸಹ ಆಸಕ್ತಿ ತೋರಿಸುವುದಿಲ್ಲ' ಎಂದರು.

ಫೆ.9ರಿಂದ ರಾಷ್ಟ್ರೀಯ ಕುಸ್ತಿ ಶಿಬಿರ

ನವದೆಹಲಿ (ಪಿಟಿಐ): ಪುರುಷರು ಮತ್ತು ಮಹಿಳಾ ಕುಸ್ತಿಪಟುಗಳಿಗೆ ರಾಷ್ಟ್ರೀಯ ಶಿಬಿರಗಳು ಕ್ರಮವಾಗಿ ಸೋನಿಪತ್ ಮತ್ತು ಪಟಿಯಾಲದಲ್ಲಿ ಫೆ. 9 ರಿಂದ ನಡೆಯಲಿವೆ ಎಂದು ಐಒಎ ರಚಿಸಿದ ತಾತ್ಕಾಲಿಕ ಸಮಿತಿ ತಿಳಿಸಿದೆ.

ಏಷ್ಯನ್ ಒಲಿಂಪಿಕ್ಸ್ ಅರ್ಹತಾ ಮತ್ತು ವಿಶ್ವ ಅರ್ಹತಾ ಪಂದ್ಯಾವಳಿಗಳು ಹತ್ತಿರದಲ್ಲಿರುವುದರಿಂದ, ಫೆಬ್ರವರಿ 5 ರಂದು ಜೈಪುರದಲ್ಲಿ ಕುಸ್ತಿ ಚಾಂಪಿಯನ್‌ಷಿಪ್ ಮುಗಿದ ಕೂಡಲೇ ಶಿಬಿರಗಳು ಪ್ರಾರಂಭವಾಗಲಿವೆ.

ವುಶು ಅಸೋಸಿಯೇಷನ್ ಆಫ್ ಇಂಡಿಯಾದ ಮುಖ್ಯಸ್ಥ ಭೂಪೇಂದರ್ ಸಿಂಗ್ ಬಾಜ್ವಾ ನೇತೃತ್ವದ ತಾತ್ಕಾಲಿಕ ಸಮಿತಿಯು ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಎಲ್ಲಾ ನಿರ್ಣಾಯಕ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ.

ರಾಷ್ಟ್ರೀಯ ಸೀನಿಯರ್ ಚಾಂಪಿಯನ್‌ಷಿಪ್ ಮುಕ್ತಾಯದ ನಂತರ, ರಾಷ್ಟ್ರೀಯ ತರಬೇತಿ ಶಿಬಿರ (ಎನ್‌ಸಿಸಿ) ನಡೆಸಲಾಗುವುದು. ಸೀನಿಯರ್ ಫ್ರೀ ಸ್ಟೈಲ್, ಗ್ರಿಕೊ ರೋಮನ್ ಸಾಯ್ ಎನ್‌ಆರ್‌ಸಿ ಸೋನಿಪತ್‌ನಲ್ಲಿ ಮತ್ತು ಮಹಿಳಾ ಶಿಬಿರವು ಪಟಿಯಾಲಾದಲ್ಲಿ ರಾಷ್ಟ್ರೀಯ ಕ್ರೀಡಾ ಪ್ರಾಧಿಕಾರದ ಕೇಂದ್ರದಲ್ಲಿ ನಡೆಯಲಿದೆ ಎಂದು ಬಾಜ್ವಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

2024ರ ಪ್ಯಾರಿಸ್ ಒಲಿಂಪಿಕ್ಸ್‌ವರೆಗೆ ಶಿಬಿರವನ್ನು ವಿಸ್ತರಿಸಲಾಗುವುದು. ಕುಸ್ತಿಪಟುಗಳಿಗೆ ತರಬೇತಿ ಅಥವಾ ಮುಂಬರುವ ಒಲಿಂಪಿಕ್ಸ್ ಅರ್ಹತಾ ಪಂದ್ಯಾವಳಿಗಳಿಗೆ ತರಬೇತಿ ನೀಡುವುದು ಪ್ರಾಥಮಿಕ ಆದ್ಯತೆಯಾಗಿದೆ. ಇವುಗಳಲ್ಲಿ ಏಪ್ರಿಲ್ 19-21 ರಿಂದ ಕಿರ್ಗಿಸ್ತಾನದ ಬಿಷ್ಕೆಕ್‌ನಲ್ಲಿ ನಡೆಯಲಿರುವ 2024ರ ಏಷ್ಯನ್ ಅರ್ಹತಾ ಪಂದ್ಯಾವಳಿ ಮತ್ತು ಮೇ 9-12 ರಿಂದ ಟರ್ಕಿಯ ಇಸ್ತಾಂಬುಲ್‌ನಲ್ಲಿ ನಿಗದಿಯಾಗಿರುವ 2024ರ ವಿಶ್ವ ಅರ್ಹತಾ ಪಂದ್ಯಾವಳಿ ಒಳಗೊಂಡಿವೆ ಎಂದು ಬಾಜ್ವಾ ಹೇಳಿದರು.

ಪ್ರೊ ಕಬಡ್ಡಿ ಲೀಗ್: ಮತ್ತೆ ಮುಗ್ಗರಿಸಿದ ತೆಲುಗು ಟೈಟನ್ಸ್

ಅಗ್ರಸ್ಥಾನಕ್ಕೇರಿದ ಪುಣೇರಿ ಪಲ್ಟನ್

ನೊಯ್ಡಾ: ರೈಡಿಂಗ್ ಮತ್ತು ಟ್ಯಾಕಲ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಪುಣೇರಿ ಪಲ್ಟನ್ ತಂಡವು ಸೋಮವಾರ ನಡೆದ ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ 54–18ರಿಂದ ಸುಲಭ ಜಯ ದಾಖಲಿಸಿ, ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಏರಿತು.

ನೊಯ್ಡಾ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ವಿರಾಮದ ವೇಳೆ 23-10ರಿಂದ ಮುನ್ನಡೆಯಲ್ಲಿದ್ದ ಪುಣೇರಿ ತಂಡವು ಉತ್ತರಾರ್ಧದಲ್ಲೂ ಪ್ರಾಬಲ್ಯ ಮುಂದುವರಿಸಿತು.

ತಂಡವು ರೈಡಿಂಗ್‌ನಿಂದ 23 ಅಂಕ ಗಳಿಸಿದರೆ, ಟ್ಯಾಕಲ್‌ನಿಂದ 20 ಪಾಯಿಂಟ್ಸ್ ಸಂಪಾದಿಸಿತು. ಅಲ್ಲದೆ, ನಾಲ್ಕು ಬಾರಿ ಎದುರಾಳಿ ತಂಡವನ್ನು ಆಲ್‌ಔಟ್ ಮಾಡಿ ಗಮನ ಸೆಳೆಯಿತು.

ಮೋಹಿತ್ ರೈಡಿಂಗ್‌ನಿಂದ 9 ಮತ್ತು ಟ್ಯಾಕಲ್‌ನಿಂದ 4 ಪಾಯಿಂಟ್ಸ್ ಸಂಪಾದಿಸಿ 'ಸೂಪರ್ 10' ಸಾಧನೆ ಮೆರೆದರು. ಅವರಿಗೆ ಅಸ್ಲಾಂ ಇನಾಮದಾರ್ (8) ಸಾಥ್ ನೀಡಿದರು. ಟ್ಯಾಕಲ್‌ನಲ್ಲಿ ಗೌರವ್ ಖಾತ್ರಿ (6), ಮೊಹಮ್ಮದ್ ರೇಜಾ ಶಾಡ್ಲೌಯಿ (5), ಅಭಿನೇಶ್ ನಡರಾಜನ್ (5) ಮಿಂಚಿದರು.

ಹಿಂದಿನ ಪಂದ್ಯಕ್ಕೆ ಅಲಭ್ಯರಾಗಿದ್ದ ಪವನ್ ಸೆಹ್ರಾವತ್, ಟೈಟನ್ಸ್‌ಗೆ ವಾಪಸಾದರೂ ಕೇವಲ ಎರಡು ಅಂಕ ಗಳಿಸಲಷ್ಟೇ ಶಕ್ತವಾದರು.

ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಪುಣೇರಿ ಪಲ್ಟನ್ ಮತ್ತು ತೆಲುಗು ಟೈಟನ್ಸ್ ತಂಡಗಳ ನಡುವೆ ಹಣಾಹಣಿ

ಒಟ್ಟು 8 ಪಂದ್ಯಗಳನ್ನು ಆಡಿರುವ ಪಲ್ಟನ್ ತಂಡವು 7ರಲ್ಲಿ ಗೆದ್ದು, ಒಂದರಲ್ಲಿ ಸೋತು ಒಟ್ಟು 36 ಅಂಕಗಳನ್ನು ಸಂಪಾದಿಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಬಡ್ತಿ ಪಡೆಯಿತು.

ಟೈಟನ್ಸ್ ತಂಡವು ಆಡಿರುವ 9 ಪಂದ್ಯಗಳಲ್ಲಿ ಒಂದರಲ್ಲಿ ಗೆದ್ದು, ಉಳಿದ ಎಂಟರಲ್ಲಿ ಸೋತು 8 ಅಂಕಗಳೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಕೊನೆಯ (12ನೇ) ಸ್ಥಾನದಲ್ಲಿದೆ.

ಪೈರೇಟ್ಸ್ ತಂಡಕ್ಕೆ ಗೆಲುವು: ಮತ್ತೊಂದು ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ತಂಡವು 48–41ರಿಂದ ಯುಪಿ ಯೋಧಾಸ್ ತಂಡವನ್ನು ಮಣಿಸಿತು. ಸಚಿನ್ (15), ಮಂಜೀತ್ (9) ಪೈರೇಟ್ಸ್ ತಂಡದ ಗೆಲುವಿನ ರೂವಾರಿಗಳಾದರು.

ಯೋಧಾಸ್‌ನ ಪ್ರದೀಪ್ ನರ್ವಾಲ್ (21) ಏಕಾಂಗಿ ಹೋರಾಟ ನಡೆಸಿದರೂ 7 ಅಂಕಗಳಿಂದ ತಂಡ ಸೋತಿತು.

ಇಂದಿನ ಪಂದ್ಯ: ಗುಜರಾತ್ ಜೈಂಟ್ಸ್– ದಬಾಂಗ್ ಡೆಲ್ಲಿ (ರಾತ್ರಿ 8)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಕೂಚ್ ಬಿಹಾರ್ ಟ್ರೋಫಿ ; ಹಾರ್ದಿಕ್ ರಾಜ್‌ಗೆ 5 ವಿಕೆಟ್

ಗೆಲುವಿನೊಡನೆ ಸೆಮಿಗೆ ಕರ್ನಾಟಕ

ಹುಬ್ಬಳ್ಳಿ: ನಿರೀಕ್ಷೆಯಂತೆ ಕರ್ನಾಟಕ ತಂಡ, 19 ವರ್ಷದೊಳಗಿನವರ ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮಧ್ಯಪ್ರದೇಶದ ವಿರುದ್ಧ ಸುಲಭ ಜಯ ದಾಖಲಿಸಿತು.

ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ 9 ವಿಕೆಟ್ ಗೆಲುವು ಪಡೆದ ಕರ್ನಾಟಕ ತಂಡ ಸೆಮಿಫೈನಲ್ ಪ್ರವೇಶಿಸಿತು.

ಕರ್ನಾಟಕ ತಂಡ, ಜ.5 ರಿಂದ ಬೆಳಗಾವಿಯಲ್ಲಿ ನಡೆಯಲಿರುವ ಸೆಮಿಫೈನಲ್ ಪಂದ್ಯದಲ್ಲಿ ತಮಿಳುನಾಡು ತಂಡವನ್ನು ಎದುರಿಸಲಿದೆ.

ಭಾನುವಾರ ಮೂರನೇ ದಿನದಾಟ ಮುಗಿದಾಗ ಎರಡನೇ ಇನಿಂಗ್ಸ್‌ನಲ್ಲಿ 7 ವಿಕೆಟ್‌ಗೆ 113 ರನ್ ಗಳಿಸಿದ್ದ ಮಧ್ಯಪ್ರದೇಶ ಅಂತಿಮ ದಿನವಾದ ಸೋಮವಾರ 187 ರನ್‌ಗಳಿಗೆ ಆಲೌಟ್ ಆಯಿತು. ಮೊದಲ ಇನಿಂಗ್ಸ್‌ನಲ್ಲಿ 147 ರನ್‌ಗಳ ಮುನ್ನಡೆ ಗಳಿಸಿದ್ದ ಕರ್ನಾಟಕ ಆ ಮೂಲಕ ಗೆಲುವಿಗೆ 40 ರನ್‌ಗಳ ಅಲ್ಪ ಗುರಿ ಎದುರಿಸಿತು.

ಕರ್ನಾಟಕ 7.1 ಓವರ್‌ಗಳಲ್ಲಿ ಒಂದು ವಿಕೆಟ್ ಕಳೆದುಕೊಂಡು 41 ರನ್ ಗಳಿಸಿ ಗುರಿತಲುಪಿತು. ಪ್ರಖರ್ ಚತುರ್ವೇದಿ 29 ರನ್ ಗಳಿಸಿ ಗೆಲುವನ್ನು ತ್ವರಿತಗೊಳಿಸಿದರು. ಇದಕ್ಕೆ ಮೊದಲು, ಮಧ್ಯಪ್ರದೇಶ ತಂಡದ ಧನಂಜಯ ದೀಕ್ಷಿತ್ ತಾಳ್ಮೆಯಿಂದ ಆಡಿ ಅರ್ಧಶತಕ (54; 92ಎ, 4X8) ಪೂರೈಸಿದರು. ಅವರು ಅನಂತ್ ದುಬೆ ಜತೆ ಎಂಟನೇ ವಿಕೆಟ್‌ಗೆ 37 ರನ್ ಸೇರಿಸಿದ್ದರಿಂದ ಇನಿಂಗ್ಸ್ ಸೋಲು ತಪ್ಪಿಸಲು ಸಾಧ್ಯವಾಯಿತು. ಮಧ್ಯಪ್ರದೇಶದ ಕೊನೆಯ ಮೂರು ವಿಕೆಟ್‌ಗಳು ಎಡಗೈ ಸ್ಪಿನ್ನರ್ ಹಾರ್ದಿಕ್ ರಾಜ್ ಪಾಲಾದವು. ಅವರು 45 ರನ್ ನೀಡಿ 5 ವಿಕೆಟ್ ಕಬಳಿಸಿದರು.

ಸಂಕ್ಷಿಪ್ತ ಸ್ಕೋರು: ಮಧ್ಯಪ್ರದೇಶ ಮೊದಲ ಇನಿಂಗ್ಸ್: 101.1 ಓವರ್‌ಗಳಲ್ಲಿ 269. ಕರ್ನಾಟಕ ಮೊದಲ ಇನಿಂಗ್ಸ್ 129.3 ಓವರ್‌ಗಳಲ್ಲಿ 416. ಮಧ್ಯಪ್ರದೇಶ ಎರಡನೇ ಇನಿಂಗ್ಸ್ 63.4 ಓವರ್‌ಗಳಲ್ಲಿ 187 (ಧನಂಜಯ ದೀಕ್ಷಿತ್ 54, ಸಾರಾಂಶ್ ಸುರಾನ 45, ವಿಷ್ಣು ಭಾರದ್ವಾಜ 25, ಹಾರ್ದಿಕ್ ರಾಜ್ 45ಕ್ಕೆ 5, ಸಮಿತ್ ದ್ರಾವಿಡ್ 24ಕ್ಕೆ3); ಕರ್ನಾಟಕ ಎರಡನೇ ಇನಿಂಗ್ಸ್ 7.1 ಓವರ್‌ಗಳಲ್ಲಿ 1 ವಿಕೆಟ್‌ಗೆ 41 (ಪ್ರಖರ್ ಚತುರ್ವೇದಿ 29, ವಿಷ್ಣು ಭಾರದ್ವಾಜ್ 14ಕ್ಕೆ 1).

ಫಲಿತಾಂಶ: ಕರ್ನಾಟಕಕ್ಕೆ 9 ವಿಕೆಟ್ ಜಯ

ಟಿ20ಯಲ್ಲಿ ಮುಂದುವರಿಯಲು ಆಸ್ಟ್ರೇಲಿಯಾದ ದಿಗ್ಗಜ ಬ್ಯಾಟರ್ ನಿರ್ಧಾರ

ಏಕದಿನ ಕ್ರಿಕೆಟ್‌ಗೂ ವಾರ್ನರ್ ವಿದಾಯ

ಸಿಡ್ನಿ (ಪಿಟಿಐ): ಕೊನೆಯ ಟೆಸ್ಟ್ ಸರಣಿ ಆಡುತ್ತಿರುವ ಆಸ್ಟ್ರೇಲಿಯಾದ ದಿಗ್ಗಜ ಬ್ಯಾಟರ್ ಡೇವಿಡ್ ವಾರ್ನರ್ ಅವರು ಏಕದಿನ ಕ್ರಿಕೆಟ್‌ಗೂ ವಿದಾಯ ಹೇಳಿದ್ದಾರೆ. ಆದರೆ ಟಿ20 ಮಾದರಿಯಲ್ಲಿ ಆಸ್ಟ್ರೇಲಿಯಾ ತಂಡಕ್ಕೆ ಆಡುವುದನ್ನು ಮುಂದುವರಿಸುವುದಾಗಿಯೂ ತಿಳಿಸಿದ್ದಾರೆ.

ಆದರೆ 2025ರ ಚಾಂಪಿಯನ್ಸ್ ಟ್ರೋಫಿಗೆ, ಆಸ್ಟ್ರೇಲಿಯಾ ತಂಡ ಬಯಸಿದಲ್ಲಿ ಆಡಲು ಲಭ್ಯರಿರುವುದಾಗಿಯೂ 37 ವರ್ಷದ ಆರಂಭ ಆಟಗಾರ ತಿಳಿಸಿದ್ದಾರೆ.

ಪಾಕಿಸ್ತಾನ ವಿರುದ್ಧ ಹಾಲಿ ಸರಣಿಯಲ್ಲಿ ಕೊನೆಯ ಟೆಸ್ಟ್ ಪಂದ್ಯ ಸಿಡ್ನಿಯಲ್ಲಿ ಜನವರಿ 3 ರಂದು ಆರಭವಾಗಲಿದ್ದು, ಇದು ವಾರ್ನರ್ ಪಾಲಿಗೆ ವಿದಾಯದ ಟೆಸ್ಟ್ ಪಂದ್ಯ. ನವೆಂಬರ್ 19ರಂದು ಭಾರತ ವಿರುದ್ಧ ವಿಶ್ವಕಪ್ ಫೈನಲ್ ಪಂದ್ಯ ತಮ್ಮ ಪಾಲಿಗೆ ಏಕದಿನ ಮಾದರಿಯ ಕೊನೆಯ ಪಂದ್ಯ ಎಂದು ಅವರು ಪ್ರಕಟಿಸಿದರು.

'ನಾನು ಖಂಡಿತವಾಗಿಯೂ ಏಕದಿನ ಮಾದರಿಯಿಂದಲೂ ನಿವೃತ್ತನಾಗುತ್ತಿದ್ದೇನೆ. ಭಾರತದಲ್ಲಿ ಏಕದಿನ ವಿಶ್ವಕಪ್ ಸಮಯದಲ್ಲಿ ಈ ಬಗ್ಗೆ ನಿರ್ಧಾರ ಕೈಗೊಳ್ಳುವುದಾಗಿ ಹೇಳಿದ್ದೆ. ಇಂದು ನಿರ್ಧಾರಕ್ಕೆ ಬಂದಿದ್ದೇನೆ. ಭಾರತದಲ್ಲೇ ವಿಶ್ವಕಪ್ ಗೆದ್ದಿರುವುದೊಂದು ಅಮೋಘ ಸಾಧನೆ' ಎಂದು ಅವರು ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಭಾವುಕರಾಗಿ ತಿಳಿಸಿದರು.

'ಮುಂದೆ ಚಾಂಪಿಯನ್ಸ್ ಟ್ರೋಫಿ ಇರುವುದರ ಅರಿವಿದೆ. ಇನ್ನೆರಡು ವರ್ಷ ನಾನು ಉತ್ತಮ ಲಯದಲ್ಲಿದ್ದರೆ, ತಂಡಕ್ಕೆ ನನ್ನ ಅಗತ್ಯಬಿದ್ದರೆ ನಾನು ಆಡಲು ಲಭ್ಯನಿದ್ದೇನೆ' ಎಂದು ವಾರ್ನರ್ ತಿಳಿಸಿದರು.

'ಆಸ್ಟ್ರೇಲಿಯಾದ ಕಂಡ ಆಕ್ರಮಣಕಾರಿ ಆಟಗಾರರಲ್ಲಿ ಒಬ್ಬರೆನಿಸಿದ ವಾರ್ನರ್ ಅವಧಿಯಲ್ಲಿ ತಂಡ ಎರಡು ಬಾರಿ ವಿಶ್ವ ಚಾಂಪಿಯನ್ ಆಗಿದೆ. ಅವರು 2023ರ ಟೂರ್ನಿಯಲ್ಲಿ ತಂಡದ ಪರ ಅತಿ ಹೆಚ್ಚಿನ ರನ್ ಗಳಿಸಿದ್ದರು.

ಈ ಎಡಗೈ ಆಟಗಾರ 2009ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಏಕದಿನ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಅಲ್ಲಿಂದ ಈಚೆಗೆ 161 ಏಕದಿನ ಪಂದ್ಯಗಳನ್ನಾಡಿದ್ದಾರೆ. 22 ಶತಕ ಹೊಡೆದಿದ್ದಾರೆ. ರಿಕಿ ಪಾಂಟಿಂಗ್ ಬಿಟ್ಟರೆ ಅತಿ ಹೆಚ್ಚಿನ ಶತಕ ಬಂದಿರುವುದು ವಾರ್ನರ್ ಬ್ಯಾಟಿಂದ. ಆದರೆ ಪಾಂಟಿಂಗ್, ವಾರ್ನರ್‌ಗಿಂತ 205 ಹೆಚ್ಚು ಏಕದಿನ ಪಂದ್ಯ ಆಡಿದ್ದಾರೆ.

ಡೇವಿಡ್ ವಾರ್ನರ್ –ಪಿಟಿಐ ಚಿತ್ರ

ಡೇವಿಡ್ ವಾರ್ನರ್ ಸಾಧನೆ

	ಏಕದಿನ	ಟೆಸ್ಟ್	ಟಿ20
ಪಂದ್ಯ	161	111	99
ಇನ್ನಿಂಗ್ಸ್	159	203	99
ಒಟ್ಟು ರನ್	6,932	8,695	2894
ಗರಿಷ್ಠ	179	335*	100*
ಸರಾಸರಿ	45.30	44.58	32.88
ಶತಕ	22	26	1
ಅರ್ಧಶತಕ	33	36	24

ಅವರು 2024ನೇ ಸಾಲಿಗೆ ಇಂಟರ್ ನ್ಯಾಷನಲ್ ಲೀಗ್ (ಐಎಲ್‌ಟಿ20) ಫ್ರಾಂಚೈಸಿ ದುಬೈ ಕ್ಯಾಪಿಟಲ್ಸ್ ತಂಡದ ನಾಯಕರಾಗಿದ್ದಾರೆ.

'ಐಪಿಎಲ್ ನಾಯಕತ್ವ ಖುಷಿಯ ಕ್ಷಣ'

ಸಿಡ್ನಿ (ಪಿಟಿಐ): ಚೆಂಡು ವಿರೂಪಗಳಿಸಿದ ಹಗರಣಕ್ಕೆ ಸಂಬಂಧಿಸಿ ತಮಗೆ ವಿಧಿಸಿದ ಜೀವಾವಧಿ ನಾಯಕತ್ವ ನಿಷೇಧ ಪ್ರಕರಣವನ್ನು ಬೇರೆ ರೀತಿ ನಿಭಾಯಿಸಬಹುದಿತ್ತು. ಆದರೆ ಅದನ್ನು ಅಲ್ಲಿಗೇ ಮರೆತು ಆಟದತ್ತ ಗಮನಹರಿಸಿದೆ ಎಂದು ಆಸ್ಟ್ರೇಲಿಯಾದ ಆಟಗಾರ ಡೇವಿಡ್ ವಾರ್ನರ್ ಸೋಮವಾರ ತಿಳಿಸಿದರು.

2018ರ ದಕ್ಷಿಣ ಆಫ್ರಿಕಾ ಪ್ರವಾಸದ ಸಂದರ್ಭದಲ್ಲಿ ಕೇಪ್‌ಟೌನ್ ಟೆಸ್ಟ್ ವೇಳೆ ಕ್ಯಾಮರೂನ್ ಬ್ಯಾಂಕ್ರಾಫ್ಟ್ ಅವರ ಪ್ಯಾಂಟ್ ಜೇಬಿನಲ್ಲಿ ಸ್ಯಾಂಡ್‌ಪೇಪರ್ ಪತ್ತೆಯಾಗಿತ್ತು. ಆಸ್ಟ್ರೇಲಿಯಾ ಆಟಗಾರರೂ ಚೆಂಡು ವಿರೂಪಗೊಳಿಸಿದ್ದನ್ನು ಒಪ್ಪಿಕೊಂಡಿದ್ದರು. ಬ್ಯಾಂಕ್ರಾಫ್ಟ್, ಸ್ಟೀವ್ ಸ್ಮಿತ್ ಮತ್ತು ವಾರ್ನರ್ ಶಾಮೀಲಾಗಿದ್ದ ಪ್ರಕರಣದಲ್ಲಿ ಹೆಚ್ಚು ಶಿಕ್ಷೆ ಅನುಭವಿಸಿದ್ದು ವಾರ್ನರ್. ತಮಗೆ ವಿಧಿಸಿದ ಶಿಕ್ಷೆಯ ವಿರುದ್ಧ ಮೇಲ್ಮನವಿ ಸಲ್ಲಿಸಲು ಮುಂದಾದರೂ ಕೊನೆಗಳಿಗೆಯಲ್ಲಿ ಹಿಂದೆ ಸರಿದಿದ್ದರು.

'ಈ ಪ್ರಕರಣವನ್ನು ಭಿನ್ನ ರೀತಿ ನಿಭಾಯಿಸಬಹುದಿತ್ತು ಎಂಬುದು ನನ್ನ ಜೀವನ ಸಾಗಿಬಂದ ಹಾದಿಯತ್ತ ಕಣ್ಣುಹಾಯಿಸಿದಾಗ ಅನಿಸಿತು' ಎಂದರು.

ಐಪಿಎಲ್‌ನಲ್ಲಿ ಅವರು ಸನ್‌ರೈಸರ್ಸ್ ಹೈದರಾಬಾದ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡದ ನೇತೃತ್ವ ವಹಿಸಿದ್ದರು.

'ಐಪಿಎಲ್‌ನಲ್ಲಿ ತಂಡವನ್ನು ಮುನ್ನಡೆಸುವ ಅವಕಾಶ ನನಗೆ ದೊರಕಿತ್ತು. ನಾನು ಖುಷಿಯಿಂದಲೇ ಆ ಪಾತ್ರವನ್ನು ನಿರ್ವಹಿಸಿದೆ' ಎಂದರು.

2014ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಟೆಸ್ಟ್ ಸರಣಿ ಜಯದ ಜೊತೆಗೆ ಆ್ಯಷಸ್ ಸರಣಿ ಗೆಲುವುಗಳು ಸದಾ ನೆನಪಿನಲ್ಲುಳಿಯುವ ಸಂದರ್ಭಗಳು ಎಂದು ವಾರ್ನರ್ ಉಲ್ಲೇಖಿಸಿದರು. ದಕ್ಷಿಣ ಆಫ್ರಿಕಾದ ಮಾಜಿ ವೇಗಿ ಡೇಲ್ ಸ್ಟೀನ್ ತಾವು ವೃತ್ತಿ ಜೀವನದಲ್ಲಿ ಎದುರಿಸಲು ಕಷ್ಟವೆನಿಸಿದ ಬೌಲರ್ ಎಂದರು. ತಂಡದ ಇನ್ನೂ ಕೆಲವು ಆಟಗಾರರ ಸದ್ಯ ಭವಿಷ್ಯದಲ್ಲಿ ನಿವೃತ್ತರಾಗಲಿದ್ದಾರೆ ಎಂದು ಸುಳಿವು ನೀಡಿದರು.

ಆರ್‌ಟಿಪಿ ಸೇರಿದ ಕಿಶೋರ್ ಜೇನಾ, ಮನು

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಜಾವೆಲಿನ್ ಥ್ರೋ ಪಟುಗಳಾದ ಕರ್ನಾಟಕದ ಡಿ.ಪಿ. ಮನು ಮತ್ತು ಒಡಿಶಾದ ಕಿಶೋರ್ ಜೇನಾ ಅಥ್ಲೆಟಿಕ್ಸ್ ಇಂಟೆಗ್ರಿಟಿ ಯುನಿಟ್ (ಎಐಯು)ನ ನೋಂದಾಯಿತ ಪರೀಕ್ಷಾ ಪೂಲ್‌ಗೆ (ಆರ್‌ಟಿಪಿ) ಸೇರ್ಪಡೆಯಾಗಿದ್ದಾರೆ.

ಹಾಲಿ ವಿಶ್ವ ಚಾಂಪಿಯನ್ ಮತ್ತು ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ ನೀರಜ್ ಚೋಪ್ರಾ ಅವರು ಆರ್‌ಟಿಪಿಯಲ್ಲಿ ಸೇರಿಕೊಂಡಿದ್ದರು. ಅವರೊಂದಿಗೆ ಈಗ 2024ರ ಮೊದಲ ತ್ರೈಮಾಸಿಕಕ್ಕೆ ಎಐಯು ಪ್ರಕಟಿಸಿದ ಪಟ್ಟಿಯಲ್ಲಿ ಜೇನಾ, ಮನು ಸೇರ್ಪಡೆಯಾಗಿದ್ದಾರೆ. ಒಟ್ಟಾರೆ ಭಾರತದ ಏಳು ಕ್ರೀಡಾಪಟುಗಳು ಆರ್‌ಟಿಪಿಯಲ್ಲಿ ಸೇರಿಕೊಂಡಂತಾಗಿದೆ.

3000 ಮೀ ಸ್ಟೀಪಲ್‌ಚೇಸರ್ ಅವಿನಾಶ್ ಸಾಬ್ಳೆ, ಮಹಿಳಾ ಜಾವೆಲಿನ್ ಥ್ರೋಪಟು ಅನ್ನು ರಾಣಿ ಮತ್ತು ಲಾಂಗ್ ಜಂಪ್ ಸ್ಪರ್ಧಿಗಳಾದ ಮುರಳಿ ಶ್ರೀಶಂಕರ್ ಮತ್ತು ಜಸ್ವಿನ್ ಆಲ್ಡ್ರಿನ್ ಈ ಪಟ್ಟಿಯಲ್ಲಿರುವ ಇತರ ಭಾರತೀಯರು.

ಟಿಆರ್‌ಪಿಯಲ್ಲಿ ಸೇರಿಕೊಂಡ ಕ್ರೀಡಾಪಟುಗಳು ಪ್ರತಿ ತ್ರೈಮಾಸಿಕ ಅವಧಿಯಲ್ಲಿ ತಮ್ಮ ಮನೆಯ ವಿಳಾಸ, ಇಮೇಲ್ ವಿಳಾಸ, ದೂರವಾಣಿ ಸಂಖ್ಯೆ, ತರಬೇತಿ ಸ್ಥಳ, ಸ್ಪರ್ಧೆಯ ವೇಳಾಪಟ್ಟಿ, ಸ್ಥಳಗಳ ಮಾಹಿತಿ ಸಲ್ಲಿಸಬೇಕಾಗುತ್ತದೆ.

ಕ್ರೀಡಾಪಟುಗಳು ನಿತ್ಯವೂ 60 ನಿಮಿಷ ಸಮಯದ ಸ್ಲಾಟ್ ಒದಗಿಸಬೇಕು. ಅವರು ಸಲ್ಲಿಸಿದ ಮಾಹಿತಿಯಂತೆ ಸ್ಲಾಟ್‌ನಲ್ಲಿ ಇರಲು ವಿಫಲವಾದರೆ 'ಮಿಸ್ಸಿಂಗ್ ಟೆಸ್ಟ್' ಎಂದು ನಮೂದು ಮಾಡಲಾಗುತ್ತದೆ. ವರ್ಷದ ಅವಧಿಯಲ್ಲಿ 3 ಬಾರಿ ತಪ್ಪಿಸಿಕೊಂಡಲ್ಲಿ, ಉದ್ದೀಪನ ಮದ್ದು ತಡೆ ನಿಯಮ ಉಲ್ಲಂಘನೆಯಾಗುತ್ತದೆ. ಅಂಥವರನ್ನು 2 ವರ್ಷ ಅಮಾನತುಗೊಳಿಸಬಹುದಾಗಿದೆ.

ನೊಬೆಲ್ ಪ್ರಶಸ್ತಿ ಪುರಸ್ಕೃತ ಯೂನುಸ್‌ಗೆ ಸಜೆ

ಮೊಹಮ್ಮದ್ ಯೂನುಸ್

ಢಾಕಾ (ಎಎಫ್‌ಪಿ): ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಮೊಹಮ್ಮದ್ ಯೂನುಸ್ ಅವರನ್ನು ಕಾರ್ಮಿಕ ಕಾಯ್ದೆ ಉಲ್ಲಂಘಿಸಿದ್ದ ಪ್ರಕರಣದಲ್ಲಿ ಸ್ಥಳೀಯ ನ್ಯಾಯಾಲಯ ದೋಷಿ ಎಂದು ತೀರ್ಪು ನೀಡಿದೆ. 'ಇದು, ರಾಜಕೀಯ ದ್ವೇಷದ ಕ್ರಮ' ಎಂದು ಅವರ ಬೆಂಬಲಿಗರು ಪ್ರತಿಕ್ರಿಯಿಸಿದ್ದಾರೆ.

ಸಣ್ಣ ಬ್ಯಾಂಕಿಂಗ್ ಚಟುವಟಿಕೆಯಿಂದಾಗಿ ಅಸಂಖ್ಯಾತ ಜನರನ್ನು ಬಡತನ ರೇಖೆಯಿಂದ ಹೊರತಂದ ಹಿರಿಮೆ 83 ವರ್ಷದ ಯೂನುಸ್ ಅವರಿಗಿದೆ.

ಅವರು ಸ್ಥಾಪಿಸಿದ್ದ ಗ್ರಾಮೀಣ ಟೆಲಿಕಾಂ ಸಂಸ್ಥೆಯಲ್ಲಿ ಕಾರ್ಮಿಕ ಕಲ್ಯಾಣ ನಿಧಿಯನ್ನು ಸ್ಥಾಪಿಸದೇ ಕಾಯ್ದೆಯನ್ನು ಉಲ್ಲಂಘಿಸಲಾಗಿದೆ ಎನ್ನುವ ಆರೋಪವಿದ್ದು, ಈ ಪ್ರಕರಣದಲ್ಲಿ ಯೂನುಸ್ ಮತ್ತು ಅವರ ಮೂವರು ಸಹೋದ್ಯೋಗಿಗಳು ಆರೋಪಿಗಳಾಗಿದ್ದರು.

ವಿಚಾರಣೆ ನಡೆಸಿದ ಸ್ಥಳೀಯ ಕಾರ್ಮಿಕ ನ್ಯಾಯಾಲಯ ಅಪರಾಧ ಸಾಬೀತಾಗಿದ್ದರಿಂದ ನಾಲ್ವರಿಗೂ ಆರು ತಿಂಗಳು ಸಾದಾ ಸಜೆ ವಿಧಿಸಿತು ಎಂದು ವಕೀಲರು ತಿಳಿಸಿದರು. ಕೆಲ ಹೊತ್ತಿನಲ್ಲಿಯೇ ಎಲ್ಲರಿಗೂ ಜಾಮೀನು ದೊರೆತಿದೆ.

'ನಮಗೆ ನ್ಯಾಯ ದೊರೆತಿಲ್ಲ. ಇದು, ಅನಿರೀಕ್ಷಿತ ಆದೇಶ' ಎಂದು ಯೂನುಸ್ ಪರ ವಕೀಲರು ಪ್ರತಿಕ್ರಿಯಿಸಿದರು. ಕಾರ್ಮಿಕ ಕಾಯ್ದೆ ಉಲ್ಲಂಘನೆ ಕುರಿತಂತೆ ಯೂನುಸ್ ಅವರ ವಿರುದ್ಧ 100ಕ್ಕೂ ಹೆಚ್ಚು ಪ್ರಕರಣಗಳಿವೆ.

ಯೂನುಸ್ ಪರ ವಕೀಲ ಖಾಜಾ ತನ್ವೀರ್ ಅವರು, 'ಈ ಎಲ್ಲ ಪ್ರಕರಣಗಳ ಉದ್ದೇಶ ಜಗತ್ತಿನ ಎದುರು ಯೂನುಸ್ ಅವರನ್ನು ಅವಮಾನಿಸುವುದು ಮತ್ತು ಕಿರುಕುಳ ನೀಡುವುದಷ್ಟೇ' ಎಂದು ಪ್ರತಿಕ್ರಿಯಿಸಿದರು.

ಪ್ರಧಾನಿ ಶೇಖ್ ಹಸೀನಾ ಜತೆ ಯೂನುಸ್ ಅವರು ವೈಷಮ್ಯ ಹೊಂದಿದ್ದಾರೆ. ಒಂದು ಕಾಲದಲ್ಲಿ ತಮ್ಮ ರಾಜಕೀಯ ಪ್ರತಿಸ್ಪರ್ಧಿ ಎಂದೇ ಗುರುತಿಸಲಾಗಿದ್ದ, 2006ನೇ ಸಾಲಿನ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಯೂನುಸ್ ವಿರುದ್ಧ ಪ್ರಧಾನಿ ಹಸೀನಾ ಹಲವು ಬಾರಿ ನೇರವಾಗಿ ವಾಗ್ದಾಳಿ ನಡೆಸಿದ್ದರು. 'ಯೂನುಸ್ ಬಡವರ ರಕ್ತ ಹೀರಿದ್ದಾರೆ' ಎಂದು ಪ್ರಧಾನಿ ತೀವ್ರವಾಗಿ ಟೀಕಿಸಿದ್ದರು.

ಅಪಘಾತ ನಡೆಸಿ ಪರಾರಿಯಾದ ಪ್ರಕರಣಗಳು

ಕಠಿಣ ಕಾನೂನು: ಹಲವೆಡೆ ಪ್ರತಿಭಟನೆ

ಮುಂಬೈ/ಭೋಪಾಲ್/ರಾಯಪುರ (ಪಿಟಿಐ): 'ಅಪಘಾತ ನಡೆಸಿ ಪರಾರಿ'ಯಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಾರಿಯಾಗಲಿರುವ ಹೊಸ ಕಾನೂನು ವಿರೋಧಿಸಿ ಮಹಾರಾಷ್ಟ್ರ, ಮಧ್ಯ ಪ್ರದೇಶ, ಛತ್ತೀಸಗಡ, ಗುಜರಾತ್ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ವಾಣಿಜ್ಯ ವಾಹನ, ಟ್ರಕ್, ಟ್ಯಾಂಕರ್‌ಗಳ ಚಾಲಕರು ಸೋಮವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನಕಾರರು ಮುಂಬೈ, ನಾಸಿಕ್, ಭೋಪಾಲ್, ರಾಯಪುರ ಸೇರಿದಂತೆ ಹಲವು ನಗರಗಳಲ್ಲಿ ರಸ್ತೆ ಬಂದ್ ನಡೆಸಿದರು.

ಮುಂಬೈನಲ್ಲಿ ಮುಂಬೈ–ಬೆಂಗಳೂರು ಹೆದ್ದಾರಿ ತಡೆದು ಪ್ರತಿಭಟನೆ ನಡೆಸುತ್ತಿದ್ದ ಚಾಲಕರನ್ನು ಚದುರಿಸಲು ಮುಂದಾದ ಪೊಲೀಸ್ ಸಿಬ್ಬಂದಿ ಮೇಲೆ ಚಾಲಕರು ಹಲ್ಲೆ ನಡೆಸಿದ್ದಾರೆ. ಕೆಲ ಚಾಲಕರು ಕಲ್ಲು ಮತ್ತು ಬೆತ್ತಗಳೊಂದಿಗೆ ದಾಳಿ ನಡೆಸಿದ್ದಾರೆ. ಈ ಕೃತ್ಯದಲ್ಲಿ ಭಾಗಿಯಾಗಿದ್ದ ಆರು ಮಂದಿಯನ್ನು ಗುರುತಿಸಲಾಗಿದ್ದು, ಒಟ್ಟು 40 ಚಾಲಕರನ್ನು ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಭೋಪಾಲ್‌ನಲ್ಲಿ ಬಸ್, ಟ್ಯಾಕ್ಸಿ ಚಾಲಕರು ಸೋಮವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಛತ್ತೀಸಗಡದ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಚಾಲಕರು ಪ್ರತಿಭಟನೆ ನಡೆಸಿದರು.

ಸುಮಾರು 12 ಸಾವಿರ ಖಾಸಗಿ ಬಸ್‌ಗಳ ಚಾಲಕರು ಸೇರಿದಂತೆ ರಾಜ್ಯದಲ್ಲಿ ಒಟ್ಟಾರೆ 1 ಲಕ್ಷ ಚಾಲಕರು ಕೆಲಸ ಸ್ಥಗಿತಗೊಳಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು ಎಂದು ಛತ್ತೀಸಗಡ ರಾಜ್ಯ ವಾಹನ ಚಾಲಕರ ಸಂಘದ ಸಂಚಾಲಕ ಜಿತೇಂದ್ರ ಶುಕ್ಲಾ ತಿಳಿಸಿದ್ದಾರೆ.

ಭೋಪಾಲದ ಲಾಲ್‌ಘಾಟಿಯಲ್ಲಿ ಪ್ರತಿಭಟಿಸುತ್ತಿದ್ದ ಚಾಲಕರು ನಗರ ಸಾರಿಗೆ ಸಂಸ್ಥೆ ಬಸ್‌ಗಳು ಮತ್ತು ವಾಹನಗಳ ಸಂಚಾರಕ್ಕೆ ಅಡ್ಡಿಯುಂಟು ಮಾಡಿದರು.

'ಅಪಘಾತ ನಡೆಸಿ ಪರಾರಿ'ಗೆ ಸಂಬಂಧಿಸಿದ ಹೊಸ ಕಾನೂನಿನಲ್ಲಿ ಆರೋಪಿಗೆ 10 ವರ್ಷಗಳ ಜೈಲು ಶಿಕ್ಷೆ ಮತ್ತು ₹ 7 ಲಕ್ಷ ದಂಡ ವಿಧಿಸುವ ಪ್ರಸ್ತಾಪವಿದೆ.

ಪುರಿ: ವಸ್ತ್ರಸಂಹಿತೆ ಕಡ್ಡಾಯ

ಪುರಿ (ಪಿಟಿಐ): ಇಲ್ಲಿನ ಜಗನ್ನಾಥ ದೇವಾಲಯದ ಆಡಳಿತ ಮಂಡಳಿಯು ಭಕ್ತರಿಗೆ ಸೋಮವಾರದಿಂದ ವಸ್ತ್ರ ಸಂಹಿತೆಯನ್ನು ಕಡ್ಡಾಯಗೊಳಿಸಿದೆ.

ಅಲ್ಲದೇ, ದೇವಾಲಯದ ಆವರಣದಲ್ಲಿ ಪಾನ್, ಗುಟ್ಕಾ ಜಗಿಯುವುದು ಮತ್ತು ಪ್ಲಾಸ್ಟಿಕ್ ಹಾಗೂ ಪಾಲಿಥಿನ್ ವಸ್ತುಗಳನ್ನು ಬಳಕೆ ಮಾಡುವುದನ್ನು ಮಂಡಳಿ ಸಂಪೂರ್ಣವಾಗಿ ನಿಷೇಧಿಸಿದೆ. ನಿಯಮ ಉಲ್ಲಂಘಿಸಿದವರಿಗೆ ದಂಡ ವಿಧಿಸಲಾಗುವುದು ಎಂದು ಅದು ಹೇಳಿದೆ.

'ದೇವಸ್ಥಾನಕ್ಕೆ ಆಗಮಿಸುವ ಭಕ್ತರು ಸಭ್ಯ ಉಡುಪನ್ನು ಧರಿಸಿರಬೇಕು. ಹಾಫ್‌ಪ್ಯಾಂಟ್, ಶಾರ್ಟ್‌ಗಳು, ಸ್ಕರ್ಟ್ಸ್ ಮತ್ತು ತೋಳಿಲ್ಲದ ಉಡುಪು ಧರಿಸಿದವರನ್ನು ದೇವಸ್ಥಾನದ ಒಳಗೆ ಬಿಡುವುದಿಲ್ಲ. ಹೊಸ ವರ್ಷದ ಅಂಗವಾಗಿ ದೇವರ ದರ್ಶನಕ್ಕಾಗಿ ಸೋಮವಾರ ದೇಗುಲಕ್ಕೆ ಬಂದ ಪುರುಷ ಭಕ್ತರು ಧೋತಿ ಮತ್ತು ಟವೆಲ್ ಅನ್ನು ಧರಿಸಿದ್ದರೆ, ಮಹಿಳಾ ಭಕ್ತರು ಸೀರೆ ಮತ್ತು ಸಲ್ವಾರ್ ಕಮೀಜ್ ಧರಿಸಿದ್ದರು' ಎಂದು ಆಡಳಿತ ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದರು.

ವರ್ಷದ ಮೊದಲ ದಿನ ಅಪಾರ ಸಂಖ್ಯೆಯ ಭಕ್ತರು ದರ್ಶನ ಪಡೆದರು.

8 ವರ್ಷಗಳ ಬಳಿಕ ರಾಷ್ಟ್ರೀಯ ಕೂಟಕ್ಕೆ ದೀಪಾ ಕರ್ಮಾಕರ್

ದೀಪಾ

ಭುವನೇಶ್ವರ (ಪಿಟಿಐ): ಒಲಿಂಪಿಯನ್ ದೀಪಾ ಕರ್ಮಾಕರ್ ಅವರು ಎಂಟು ವರ್ಷಗಳ ದೀರ್ಘ ಕಾಲದ ನಂತರ ಸೀನಿಯರ್ ರಾಷ್ಟ್ರೀಯ ಜಿಮ್ನಾಸ್ಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲಿದ್ದಾರೆ. 3 ದಿನಗಳ ಈ ಚಾಂಪಿಯನ್‌ಷಿಪ್ ಮಂಗಳವಾರದಿಂದ ಇಲ್ಲಿನ ಕಳಿಂಗ ಕ್ರೀಡಾಂಗಣದಲ್ಲಿ ನಡೆಯಲಿದೆ.

ಮತ್ತೋರ್ವ ಒಲಿಂಪಿಯನ್ ಪ್ರಣತಿ ನಾಯಕ್, ರಾಷ್ಟ್ರೀಯ ಜಿಮ್ನಾಸ್ಟ್‌ಗಳಾದ ಯೋಗೇಶ್ವರ್ ಸಿಂಗ್, ರಾಕೇಶ್ ಪಾತ್ರ, ತಪನ್ ಮೊಹಾಂತಿ, ಸೈಫ್ ತಂಬೋಲಿ, ಗೌರವ್ ಕುಮಾರ್ ಮತ್ತಿತರರು ಈ ಕೂಟದಲ್ಲಿ ಭಾಗವಹಿಸುವರು.

'ಜೂನಿಯರ್ ಅಥ್ಲೀಟುಗಳು, ಅನುಭವಿಗಳ ವಿರುದ್ಧ ಪೈಪೋಟಿ ನಡೆಸುವುದನ್ನು ನೋಡಲು ಇಲ್ಲಿಗೆ ಬಂದೆ' ಎಂದು ದೀಪಾ ಅವರ ಕೋಚ್ ವಿಶ್ವೇಶ್ವರ ನಂದಿ ತಿಳಿಸಿದರು.

ದೇಶದಾದ್ಯಂತ 300 ಸ್ಪರ್ಧಿಗಳು ಭಾಗವಹಿಸುವ ನಿರೀಕ್ಷೆಯಿದೆ.

ಕಿಪ್ಲಗ್ಯಾಟ್ ಹತ್ಯೆ: ಇಬ್ಬರ ಬಂಧನ

ನೈರೋಬಿ (ಎಎಫ್‌ಪಿ): ಯುಗಾಂಡಾದ ಅಥ್ಲೀಟ್ ಬೆಂಜಮಿನ್ ಕಿಪ್ಲಗ್ಯಾಟ್ ಅವರ ಹತ್ಯೆಗೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಸೋಮವಾರ ಬಂಧಿಸಲಾಗಿದೆ ಎಂದು ಕೆನ್ಯಾ ಪೊಲೀಸರು ತಿಳಿಸಿದ್ದಾರೆ.

'ರಿಫ್ಟ್ ವ್ಯಾಲಿ ನಗರದ ಹೊರವಲಯದಲ್ಲಿ 30 ವರ್ಷದ ಇಬ್ಬರನ್ನು ಬಂಧಿಸಲಾಗಿದೆ. ತನಿಖೆ ಪ್ರಗತಿಯಲ್ಲಿದ್ದು, ಆರೋಪಿಗಳನ್ನು ಮಂಗಳವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು' ಎಂದು ಸ್ಥಳೀಯ ಪೊಲೀಸ್ ಕಮಾಂಡರ್ ಸ್ಟೀಫನ್ ಓಕಲ್ ಮಾಹಿತಿ ನೀಡಿದ್ದಾರೆ.

ಕೆನ್ಯಾ ಸಂಜಾತರಾದ 34 ವರ್ಷದ ಕಿಪ್ಲಗ್ಯಾಟ್ 3,000 ಮೀಟರ್ ಸ್ಟೀಪಲ್ ಚೇಸ್ ಸ್ಪರ್ಧೆಯಲ್ಲಿ ಒಲಿಂಪಿಕ್ಸ್, ವಿಶ್ವ ಚಾಂಪಿಯನ್‌ಷಿಪ್ ಸೇರಿದಂತೆ ಹಲವು ಕೂಟಗಳಲ್ಲಿ ಯುಗಾಂಡವನ್ನುಪ್ರತಿನಿಧಿಸಿದ್ದಾರೆ.ಅವರಮೃತದೇಹಶನಿವಾರಕಾರಿನಲ್ಲಿಪತ್ತೆಯಾಗಿದೆ. ಅವರ ಕತ್ತಿನಲ್ಲಿ ಇರಿತದ ಗಾಯ ಕಂಡುಬಂದಿತ್ತು.